ಅಪರಂಜಿ

ಏಪ್ರಿಲ್ '95

ಯುಗಾದಿ ಸಂಚಿಕೆ



ಅಪರಂಜಿ

ಸಂಪುಟ- 12 ಏಪ್ರಿಲ್ 1995 ಸಂಚಿಕೆ- 7

ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಚಂದಾ ವಿವರ:
ಬಿಡಿ ಪ್ರತಿ:
2ರೂ. 50 ಪೈ.

ವಾರ್ಷಿಕ ಚಂದಾ:
25ರೂ.

ಆಜೀವ ಚಂದಾ:
250ರೂ.

ಯುಗಾದಿ ವಿಶೇಷಾಂಕ:
10ರೂ.

ವಿಳಾಸ:
ಅಪರಂಜಿ ಕಾರ್ಯಾಲಯ
36, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು - 560 003

ಕೆಲಸದ ವೇಳೆ:
ಬೆಳಗ್ಗೆ 8 ರಿಂದ
10 ಗಂಟೆಯವರೆಗೆ

ಯುಗಾದಿ ಸಂಚಿಕೆ

ಇಂದು ಶ್ರೀಯುವ ನಾಮ ಸಂವತ್ಸರಾರಂಭ. ಈ ಶುಭ ದಿನದಂದು ಅಪರಂಜಿಯ ಎಲ್ಲ ಲೇಖಕರಿಗೆ, ಓದುಗರಿಗೆ, ಜಾಹಿರಾತು ನೀಡಿದವರಿಗೆ, ಹಿತೈಷಿಗಳಿಗೆ ಭಗವಂತನು ಸಕಲ ಸನ್ಮಂಗಳಗಳನ್ನು ಕರುಣಿಸಲೆಂದು ಅಪರಂಜಿ ತಲೆಬಾಗಿ ಪ್ರಾರ್ಥಿಸುತ್ತಾಳೆ. ನಮ್ಮ ಓದುಗರಿಗೆ ಸದಾಕಾಲ, ನವನೂತನ, ರಸಭರಿತ, ಕೌತುಕಮಯ ವಿನೋದ ಸಾಹಿತ್ಯವನ್ನು ಒದಗಿಸುವ ಪ್ರಯೋಗವನ್ನು ಅಪರಂಜಿ ನಿರಂತರವಾಗಿ ನಡೆಸಿದ್ದಾಳೆ. ''ಹಾಸ್ಯ ಕೇವಲ ಜೀವನ ದೃಷ್ಟಿಯಲ್ಲಿರ ಬೇಕೇ ಹೊರತು, ಉದ್ದೇಶ ಪೂರ್ವಕವಾಗಿ ಇರಲೇ ಬಾರದು. ಲೇಖಕನ ವ್ಯಕ್ತಿತ್ವದ ಹಾಗೂ ಪ್ರಜ್ಞೆಯ ಎಲ್ಲಾ ಅಂಶಗಳೂ ಸಾಹಿತ್ಯದಲ್ಲಿ ಹೊರ ಹೊಮ್ಮಬೇಕು. ಜೋಕ್ ಸಹಾ'' ಎಂದು ಹಿಂದೊಮ್ಮೆ ತೇಜಸ್ವಿಯವರು ನೀಡಿದ ಹಿತ ನುಡಿ, ಈ ಪ್ರಯೋಗಶೀಲತೆಗೆ ಸ್ಫೂರ್ತಿ. ಸಮಕಾಲೀನ ಲೇಖಕರಲ್ಲಿ ಅತ್ಯಂತ ಸ್ಪಾಂಟೇನಿಯಸ್ ಆಗಿ ಹಾಸ್ಯ ಹೊಮ್ಮಿಸಬಲ್ಲ ತೇಜಸ್ವಿಯವರೊಂದಿಗೆ ನಡೆಸಿದ ಸಂದರ್ಶನದ ವರದಿ ಈ ಸಂಚಿಕೆಯಲ್ಲಿದೆ. ಚಿಂತಾಮಣಿ ಕೊಡ್ಲಿಕೆರೆಯವರು, ತಮ್ಮ ಮೇಘ ಸಂದೇಶದಲ್ಲಿ, ಅತ್ಯಂತ ನವಿರಾದ ಭಾವನೆಗಳಿಗೆ ಚೈತನ್ಯ ಕೊಟ್ಟಿದ್ದಾರೆ. ಅಂತೆಯೇ, ಮಿಕ್ಕ ಅನೇಕ ಲೇಖಕರು, ರಸ ಸೃಷ್ಟಿಗೆ, ಕಾಲ್ಪನಿಕ ಸನ್ನಿವೇಶಗಳ ಮೊರೆ ಹೋಗದೆ, ತಮ್ಮ ಜೀವನಾನುಭವವನ್ನೇ ಮೂಲ ಸರಕನ್ನಾಗಿ ಬಳಸಿರುವುದು ಶುಭ ಸೂಚನೆ ಎಂದು ಅಪರಂಜಿಯ ಭಾವನೆ.

ಈ ದಿನಗಳಲ್ಲಿ ಒಳ್ಳೆಯ ಪ್ರತಿಭಾವಂತ ವ್ಯಂಗ್ಯ ಚಿತ್ರಕಾರರ

ಕೊರತೆ ಇರುವುದು ಎಲ್ಲರಿಗೂ ತಿಳಿದ ವಿಷಯ. ವರ್ಷಕ್ಕೊಮ್ಮೆಯಾದರೂ, ನಮ್ಮ ಓದುಗರು ಹಲವು ಉತ್ತಮ ವ್ಯಂಗ್ಯ ಚಿತ್ರಗಳನ್ನು ನೋಡುವಂತಾಗಲಿ ಎಂಬ ಉದ್ದೇಶದಿಂದ ಆರ್.ಕೆ. ಲಕ್ಷ್ಮಣ್‌ರವರ ಹಲವು ವ್ಯಂಗ್ಯ ಚಿತ್ರಗಳು, ಹಾಗೂ ಅಮೆರಿಕದ ನ್ಯೂಯಾರ್ಕರ್ ಪತ್ರಿಕೆಯಿಂದ ಆಯ್ದ ಹಲವು ವ್ಯಂಗ್ಯ ಚಿತ್ರಗಳನ್ನು ಕನ್ನಡ ಶೀರ್ಷಿಕೆಗಳೊಂದಿಗೆ ನೀಡಿದೆ. ಹಾಗೆಯೇ ದಿನಪತ್ರಿಕೆಗಳಲ್ಲಿ ದಿನವಹಿ ಕಂಡು ಬರುವ ರಾಜಕಾರಣಿಗಳ ನೀರಸ ಚಿತ್ರಗಳನ್ನು ರಸಭರಿತವನ್ನಾಗಿ ಮಾಡುವ ಯತ್ನವನ್ನೂ ಈ ಸಂಚಿಕೆಯಲ್ಲಿ ಕಾಣಬಹುದು.

ತನ್ನ ಬಳಿಗೆ ಬಂದ ಸಮಸ್ತವನ್ನೂ ನುಂಗಿ, ಯಾವ ರೀತಿಯಲ್ಲೂ ಪ್ರತಿಕ್ರಿಯೆ ತೋರದ, ಕಪ್ಪು ಅಂತರಾಳಗಳು (Black holes), ವಿಶ್ವದ ನಿಗೂಢ ಮೂಲೆಗಳಲ್ಲಿ ಕಂಡು ಬರುತ್ತವಂತೆ.

ನಮ್ಮ ಅಪರಂಜಿಯ ಓದುಗರು, ಈ ಬ್ಲಾಕ್ ಹೋಲ್‌ನ ವಂಶಜರು ಎಂದು ಈಗ ಮನವರಿಕೆಯಾಗಿದೆ. ಯಾವುದೇ ಪ್ರಯೋಗ ಮಾಡಲಿ, ಅದರ ಬಗ್ಗೆ ಪ್ರತಿಕ್ರಿಯಿಸುವುದು ಅಸಭ್ಯ ವರ್ತನೆ ಎಂದು ನಮ್ಮ ಓದುಗರು ತಿಳಿದಿರುವಂತಿದೆ. ಹಾಗೆ ತಿಳಿಯಬೇಡಿ ಎಂದು ಅಪರಂಜಿ ನಮ್ರತೆಯಿಂದ ಬಿನ್ನವಿಸಿಕೊಳ್ಳುತ್ತಾಳೆ.

ಈ ಸಂಚಿಕೆ ಸಕಾಲದಲ್ಲಿ ಅಚ್ಚುಕಟ್ಟಾಗಿ ಹೊರ ಬರುತ್ತಿರುವುದಕ್ಕೆ ಅನೇಕ ಸಹೃದಯರು ಕಾರಣ. ಮುಖ್ಯವಾಗಿ, ಜಾಹಿರಾತಿನ ಹೊಣೆ ಹೊತ್ತ ಶ್ರೀ ಎ. ಆರ್. ರಾಜಗೋಪಾಲ್, ಡಿ.ಟಿ.ಪಿ. ಕೆಲಸವನ್ನು ಹೊಣೆಗಾರಿಕೆಯಿಂದ ನಿರ್ವಹಿಸಿದ, ಒಮೇಗಾ ಲೇಸರ್ ಟೆಕ್‌ನ ರವಿ ಹಾಗೂ ಆಚಾರ್ಯ, ಮುದ್ರಣ ಭಾರವನ್ನು ಸಂತೋಷದಿಂದ ಭರಿಸಿರುವ ರವಿ ಗ್ರಾಫಿಕ್ಸ್‌ನ ವಿ. ಆರ್. ನಾಥ್ ಹಾಗೂ ಭಾಸ್ಕರ್ ಇವರೆಲ್ಲರಿಗೂ ಅಪರಂಜಿ ಆಭಾರಿ.

ಎಂ. ಶಿವಕುಮಾರ್

ಮುದ್ರಣ: ಇಂಪ್ರೆಷನ್ಸ್, ರಾಜಾಜಿನಗರ, ಬೆಂಗಳೂರು
ಫೋನ್: 3355536
ಡಿ.ಟಿ.ಪಿ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27
ಫೋನ್: 2225633

ಈ ಸಂಚಿಕೆಯಲ್ಲಿ

ಅಪರಂಜಿ
(ತಿಳಿ ನಗೆಯ ಕಾರಂಜಿ)

ಸಂಪುಟ- 12 ಏಪ್ರಿಲ್- 1995 ಸಂಚಿಕೆ-7

ಸೈಷಾ ಭಾರ್ಗವೀ ವಾರುಣೀ ವಿದ್ಯಾ ಪರಮೇವ್ಯೋಮನ್ ಪ್ರತಿಷ್ಠಿತಾ - ತೈತ್ತಿರೀಯ

ಭರತ ಖಂಡವು ಒಡೆದು ಹೋಳಾಗಿ ಭಾರತವು ಸ್ವತಂತ್ರ ರಾಷ್ಟ್ರವೆಂದು ಘೋಷಿತವಾದುದು ಅನೇಕ ದೇಶಭಕ್ತರ ಆತ್ಮಾರ್ಪಣೆ, ತ್ಯಾಗ, ಸಂಕಲ್ಪಗಳಿಂದಲ್ಲವೇ? ಅವರಲ್ಲಿ ಪ್ರಮುಖರಲ್ಲೊಬ್ಬರಾಗಿ, ರಾಷ್ಟ್ರಪಿತರೆಂದು ಖ್ಯಾತನಾಮರಾದ ಮಹಾತ್ಮಾಗಾಂಧೀಜಿಯವರು ಸ್ವಾತಂತ್ರ್ಯ ಸಮರದಲ್ಲಿ ಪ್ರಮುಖವಾಗಿ ಪ್ರಯೋಗಿಸಿದ ಅಸ್ತ್ರವು ಸತ್ಯಾಗ್ರಹ. ಸತ್ಯಕ್ಕಾಗಿ ಆಗ್ರಹ. ಕಾಲವು ಇಪ್ಪತ್ತನೆಯ ಶತಮಾನವನ್ನು ಕಾಲಲ್ಲಿ ತುಳಿದು ರಿವರ್ಸ್ ಕಿಕ್ ಮಾಡುತ್ತಿರುವ ಈಗ ಭಾರತದಲ್ಲಿ ಆಗ್ರಹ [Pressure] ಮುಖ್ಯವಾಗಿದೆ. ಸತ್ಯ?

ಗಾಂಧೀಜಿ ಹೇಳಿದರು! ಸತ್ಯ, ಅಹಿಂಸೆಗಳು ಒಂದೇ ನ್ಯಾಣದ ಎರಡು ಮುಖಗಳು ಎಂದು. ಸತ್ಯಕ್ಕೆ? ಹಾಕಿದ ಮೇಲೆ ಅಹಿಂಸೆ!!!

ಬ್ರಿಟಿಷರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಭಾರತಕ್ಕೆ ಬಂದುದು ವ್ಯಾಪಾರಕ್ಕಾಗಿ. ಮಾಡಿದ್ದು ಏನನ್ನು?

ಸ್ವಾತಂತ್ರ್ಯ ಪ್ರಾಪ್ತವಾಗಿ ಸುಮಾರು ಐವತ್ತು (ಸ್ವಲ್ಪ ಕಮ್ಮಿಯೇ) ವರ್ಷಗಳ ನಂತರ ಅಂತರರಾಷ್ಟ್ರೀಯ ವಾಣಿಜ್ಯ ವ್ಯವಸ್ಥೆಗೆ ಅನುಸಾರವಾಗಿ(?) ಬಹು ರಾಷ್ಟ್ರೀಯ ಕಂಪನಿಗಳು ಪದಾರ್ಪಣ ಮಾಡಲೆಂದು ಕೆಂಪು ರತ್ನ ಗಂಬಳಿಯನ್ನು ನಮ್ಮ ದೇಶವೇ ಹಾಸುತ್ತಿದೆ.

ಎಲ್ಲಿಯ ಸ್ವದೇಶೀ? ಎಲ್ಲಿಯ ಸ್ವರಾಜ್ಯ? ಎಲ್ಲಿಯ ರಾಮರಾಜ್ಯ? ಎಲ್ಲಿಯ ಸ್ವಾವಲಂಬನೆ? ಎಲ್ಲಿಯ ಏನು?

ಭೃಗುವು ತಂದೆ ವರುಣನಿಂದರಿತ ಆನಂದವೇ ಬ್ರಹ್ಮವೆಂಬ ವಿದ್ಯೆ ಪರಬ್ರಹ್ಮದಲ್ಲೇ ಪ್ರತಿಷ್ಠಿತವಾಗಿದೆ ಎಂದು ಉಪನಿಷತ್ತು ಹೇಳುತ್ತದೆ.

ಸತ್ಯ, ಅಹಿಂಸೆ, ಸ್ವಾವಲಂಬನೆ, ಸುರಾಜ್ಯ, ಸ್ವದೇಶಿಗಳು, ಭೌತಾಕಾಶದಲ್ಲಿರುವ ಗಾಳಿಯ ಪಾಲಾದವೇ ಎಂದು ಅಪರಂಜಿ ನಗುತ್ತಾಳೆ. ನೂತನ ಸಂವತ್ಸರದ ನಗೆ ಶುಭಾಶಯಗಳು.

ಅಪರಂಜಿ ಕಿಡಿ

ಪ್ರಕಾಶ್

ನಮ್ಮ ರಾಜಕೀಯದ ಹಿರಿಯರು ಯುಗಾದಿ ನಂತರ ಗಾದಿಯ ಕಾಳಜಿ ಮಾತ್ರ ಮರೆಯಲಿ!!

★★

ರಾಜ್ಯಪಾಲರ ಹೆಲಿಕಾಪ್ಟರ್ ಚಾಲಕನ ಭೋಜನಕ್ಕೆ 50,000 ರೂ. ಖರ್ಚು

-ಸುದ್ದಿ

ವಿದೇಶಿ ವಿಜೃಂಭಣೆ ಆಗಲೇ ಆರಂಭ??

★★

ಶಿಕ್ಷಕರ ಮನೆಗೆ ನುಗ್ಗಿ ನಗ-ನಾಣ್ಯ ಲೂಟಿ

-ಪತ್ರಿಕೆ

ಪಾಪ, ಅಲ್ಲಿ ಅವು ಹೇಗೆ ಸಿಕ್ಕಿದವು?

★★

ಮೃಗಾಲಯದಿಂದ ಹೆಬ್ಬಾವು ನಾ ಪತ್ತೆ

- ಸುದ್ದಿ

ಅಲ್ಲಿನ ಆಹಾರದಿಂದ ಬೇಸತ್ತಿರಬೇಕು!

★★

ನ್ಯಾಯಾಲಯದಲ್ಲಿ ಅಧಿಕಾರಿ ಮೇಲೆ ವಕೀಲರ ಹಲ್ಲೆ

- ಸುದ್ದಿ

ವಕೀಲರು ಕಾನೂನನ್ನು ತಮ್ಮ ಕೈಗೇ ತೆಗೆದುಕೊಂಡಂತಿದೆ!!

★★

ಸರ್ವೋದಯ ಟ್ರಸ್ಟ್; ಗಾಂಧೀಜಿ ನೈತಿಯ ಮೌಲ್ಯಗಳನ್ನು ಉದ್ಧರಿಸಲು ಸ್ಥಾಪನೆ

- ಪತ್ರಿಕೆ

ಭಗೀರಥ ಯತ್ನ ಅಂದರೆ ಇದೇ!!

★★

ಶಬರಿಮಲೈ ಪೂಜಾರಿ ಅಮಾನತು

- ಸುದ್ದಿ

ಸುದ್ದಿ ಕೇಳಿ ಭಗವಂತ ಚಕಿತನಾದನಂತೆ!

ಮುಖ್ಯಮಂತ್ರಿಗಳಿಂದ ದಿನದಲ್ಲಿ ನಾಲ್ಕು ಸಮಾರಂಭಗಳ ಭೇಟಿ

- ಪತ್ರಿಕೆ

ಮಧ್ಯೆ ವಿಧಾನ ಸೌಧಕ್ಕೂ ಭೇಟಿ?!

★★

ತಾಜ್‌ಮಹಲ್ ರಕ್ಷಣೆಗೆ ಹತ್ತು ಅಂಶದ ಕಾರ್ಯಕ್ರಮ

- ಸುದ್ದಿ

ಶಹಜಹಾನ್ ಪ್ರಸನ್ನನಾದನಂತೆ!


★★

ಸರಕಾರಿ ಆಸ್ಪತ್ರೆಗೆ ಸಿಹಿನೀರು

- ಮುಳಬಾಗಲು ಸುದ್ದಿ

ಕಹಿ ಔಷಧಿ ಸುಲಭವಾಗಿ ನುಂಗಬಹುದು!

★★



''ಡಯಾಬಿಟೀಸ್ ಇಲ್ಲ ಅಂತ ಇವರಿಗೆ ಹೇಳಿದ್ದೆ ತಪ್ಪಾಯ್ತು''

ಸಂತೆಯಲ್ಲೊಂದು ಮನೆ

ಬಾಗೂರು ಚಂದ್ರು

ಚುನಾವಣೆಗೆ ಸಂಬಂಧ ಇರುವವರು ಶೇಷನ್‌ಗೆ ಹೆದರುವಷ್ಟೇ ದೆಹಲಿಯಿಂದ ಸಮಾಚಾರ ಓದುತ್ತಿದ್ದವರು ಹಿಂದಿನ ಚೀಫ್ ಜಸ್ಟಿಸ್ ವೆಂಕಟಾಚಲಯ್ಯನವರಿಗೆ ಹೆದರುತ್ತಿದ್ದರಂತೆ - ಸುಪ್ರಿಂ ಕೋರ್ಟಿನಲ್ಲಿ ನಾಳೆ ಮಧ್ಯಾಹ್ನ ಹಾಜರಾಗು ಎಂದು ಸಮನ್ಸ್ ಕಳುಹಿಸಬಹುದು ಎಂದಲ್ಲ. ಅವರ ಹೆಸರೇ ಇವರುಗಳಿಗೆ ಟಂಗ್‌ಟ್ವಿಸ್ಟರ್. ನ್ಯಾಷನಲ್ ನೆಟವರ್ಕ್‌ನಲ್ಲಿ ಈ ಹೆಸರು ಹೇಳುವಾಗ ತಡವರಿಸುವುದನ್ನು ಇಡೀ ಭಾರತದ ಜನತೆ ನೋಡುತ್ತದಲ್ಲ ಎನ್ನುವುದೇ ಇವರ ಹೆದರಿಕೆಗೆ ಕಾರಣ.

ಪಾಪ ಭಾಬಿ, ಡಾಲಿ, ಪಿಂಕಿ, ಬಡ್ಡಿ, ಚಿಂಟುಗಳ ಅಪ್ಪ ಅಮ್ಮಂದಿರಿಗೆ ನಾಗರಾಜನನ್ನು ನಾಗ್‌ರಾಜ್ ಮಾಡುವ ಭಾಷಾಜ್ಞಾನದವರಿಗೆ ವೆಂಕಟಾಚಲಯ್ಯ ಪದವನ್ನು ಉಚ್ಚರಿಸು ಎಂದು ಹೇಳುವುದು ಯಾವ ನ್ಯಾಯ? ಇಟಾಲಿಯನ್, ರಷ್ಯನ್, ಟಿಂಬಕ್ಟೂವಿಯನ್ ಹೆಸರುಗಳನ್ನು ಸರಿಯಾಗೆ ಹೇಳಲಿಲ್ಲ ಎಂದು ಆಕ್ಷೇಪಿಸುವ ಮೀಡಿಯಾ ಕ್ರಿಟಿಕ್ಸ್ ಇರಬಹುದು. ಭಾರತದ ಹೆಸರುಗಳನ್ನು ಸರಿಯಾಗಿ ತಿಳಿದಿರಬೇಕು ಎಂದು ಅವರು ಯಾವತ್ತಾದರೂ ಹೇಳಿದ್ದಾರೆಯೆ? ಸುದ್ದಿ ವಾಚಕರು ಕಡೆಗೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರು ವೆಂಕಟಾಚಲಯ್ಯ ಅಲ್ಲ ವೆಂಕಟ್ - ಚಲ್ಲಯ್ಯ ಎನ್ನುವ ಸರ್ವಾನುಮತದ ನಿರ್ಣಯ ತೆಗೆದುಕೊಳ್ಳುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಂಡರು.

ಇಂತಹುದೇ ಸಮಸ್ಯೆ ನಾನು ಹೈಸ್ಕೂಲಿನಲ್ಲಿದ್ದಾಗ ಎದುರಿಸಬೇಕಾಯಿತು. ಕನ್ನಡ ಮೇಸ್ಟರು ಪದ್ಯಗಳನ್ನು ವಿದ್ಯಾರ್ಥಿಗಳಿಂದಲೇ ಓದಿಸುವ ಪರಿಪಾಠ ಇಟ್ಟುಕೊಂಡಿದ್ದರು. ಆಗ ಅಕ್ಕಮಹಾದೇವಿಯ ವಚನದ 'ಮೃಗಂಗಳಿಗಂಜಿದೊಡೆಂತಯ್ಯ' ಪದ ಪುಂಜವನ್ನು ನನಗೆ ಎಷ್ಟು ಪ್ರಯತ್ನಪಟ್ಟರೂ ಸರಿಯಾಗಿ ಓದಲಾಗಲಿಲ್ಲ. ಹತ್ತು ವರ್ಷ ಕನ್ನಡ ಕಲಿತಿದಿಯಾ ಇಷ್ಟು ಓದಕ್ಕೆ ಬರುವುದಿಲ್ಲವೆ ಎನ್ನುವ ಕಟಕಿಯಿಂದಾದ ಅವಮಾನ ನಮ್ಮ ಕ್ಲಾಸಿನ ಬೇರೆ ಹುಡುಗರಿಗೂ ಇದನ್ನು ಓದಲು ಆಗಲಿಲ್ಲ ಎನ್ನುವುದರಿಂದ ಕೊಂಚ ಕಡಿಮೆಯಾಗಿತ್ತು. ನಮ್ಮ ಕ್ಲಾಸಿನಲ್ಲಿದ್ದವರಲ್ಲಿ ರಿಜಿಸ್ಟರ್‌ನಲ್ಲಿ ರಾಘವೇಂದ್ರ ಪಾಂಡುರಂಗ ಬಾಲಾಚಾರ್ಯ ನಮಗೆ ಆಚಾರಿಯಾಗಿದ್ದವನು ಮಾತ್ರ ತಡವರಿಸದೆ ಈ ಪದ್ಯ ಓದಿದ. ಆಮೇಲೆ ಗೊತ್ತಾಯಿತು 'ತರುಮೂಲನಿಪತಿತಾನಿತಂಡುಲಕಣನಾದಾಯಾದಯ' ಅಂತಹ ಮೂರು ಮೂರು ಪಂಕ್ತಿಯ ತುಂಬಾ ಒಂದೇ ಪದಗಳಿರುವ ಬಾಣಭಟ್ಟನ 'ಕಾದಂಬರಿ'ಯನ್ನು ಸಂಸ್ಕೃತದಲ್ಲಿ ಅವರಪ್ಪ ಇವನಿಗೆ ಹೇಳಿಕೊಟ್ಟಿದ್ದರಂತೆ.

ಈ ಅನುಭವದಿಂದಾಗಿ ಅಕ್ಕನ ಈ ವಚನದ ಮೇಲೆ ನನಗೆ ವಿಶೇಷ ಪ್ರೀತಿ. ಬೆಟ್ಟದ ಮೇಲೆ ಮನೆಯನ್ನು ಮಾಡಿ ಮೃಗಗಳಿಗೆ ಹೆದರಿದರೆ, ಸಮುದ್ರ ತಡದಲ್ಲಿದ್ದು ನೊರೆತೆರೆಗಳಿಗೆ ನಾಚಿದರೆ, ಸಂತೆಯಲ್ಲಿ ವಾಸ ಮಾಡುತ್ತ ಶಬ್ದಕ್ಕೆ ಬೇಜಾರು ಮಾಡಿಕೊಂಡರೆ ಹೇಗೆ, ಇವುಗಳು ನಿನ್ನ ಸ್ವಯಂಕೃತ ಅಪರಾಧಗಳಲ್ಲವೇ ಎನ್ನುವ ಪ್ರಶ್ನೆ ತುಂಬಾ ಮಾರ್ಮಿಕ ಎಂದು ನಾನು ತಿಳಿದಿದ್ದೆ. ನಾನು ಎಂದಾದರೂ ಮನೆ ಕಟ್ಟಿದರೆ - ಸಂತೆ, ಬೆಟ್ಟ, ಸಮುದ್ರದ ದಡದಿಂದ ದೂರದ

ಜಾಗದಲ್ಲಿಯೇ ಎಂದೂ ಆಗ ನಿರ್ಧರಿಸಿದ್ದೆ.

ಆದರೆ ದಕ್ಷಿಣದಿಂದ ಉತ್ತರಕ್ಕೆ ವರ್ಗವಾಗಿ ಬಂದಾಗ ಶಬ್ದ, ಎತ್ತರ, ನೊರೆತೆರೆಗಳ ತ್ರಿ- ಇನ್ - ಒನ್ ಮನೆಯೇ ನನಗೆ ಸಿಗುತ್ತದೆ ಎಂದು ನನಗೆ ತಿಳಿದಿರಲಿಲ್ಲ. ನಾನು ಅಲ್ಲಿಯವರೆಗೂ ಇದ್ದ ಮನೆಗಳು ನೆಲದ ಹಂತದಲ್ಲೇ ಉಳಿದಿದ್ದವು. ಕವಿಗಳು ಹೇಳುವಂತೆ 'ಮಣ್ಣಿನ ವಾಸನೆ'ಯನ್ನು ಉಳಿಸಿಕೊಂಡಿದ್ದ, ಜೋರು ಗಾಳಿ ಬೀಸಿದಾಗ ಒಂದು ಹತ್ತು ಹಿಡಿ ಮಣ್ಣು ಮನೆಯ ಒಳಗೆ ಬರುವಂತಹ ಮನೆಗಳಲ್ಲೇ ನಾನಿದ್ದುದು. ಐದನೆಯ ಹಂತ, ಆರನೆಯ ಬ್ಲಾಕ್, 28ನೇ ಮೈನ್, 26ನೇ ಕ್ರಾಸ್ ಎನ್ನುವ ವಿವರಣೆ ಜೊತೆಗೆ ಹೆಚ್ಚು ಅಂದರೆ ಫಸ್ಟ್‌ಫ್ಲೋರ್ ಎನ್ನುವ ಬ್ರಾಕೆಟ್‌ಗಳನ್ನು ಸೂಚಿಸುವ ಮನೆಗಳಿದ್ದ ಆ ಊರಿನಿಂದ ದೆಹಲಿಗೆ ಬಂದಾಗ ಹನ್ನೊಂದು ಅಂತಸ್ತಿರುವ ಕಟ್ಟಡದ ಏಳನೆಯ ಮಹಡಿಯಲ್ಲಿ ನಾಲ್ಕನೆಯ ಮನೆಯಲ್ಲಿ ನೀನು ಇರಬಹುದು ಎನ್ನುವ ಅಪ್ಪಣೆ ಸಿಕ್ಕಿತು.

ಇಂತಹ ಮನೆ ನನಗೆ ಅಲಾಟ್ ಆಗಿದೆ ಎನ್ನುವ ಸುದ್ದಿಯು ಹಲವರನ್ನು ನನ್ನ ಬಳಿ ಕಳುಹಿಸಿತು. ಯಾವ ಮಿನಿಸ್ಟರ್‌ಗೆ ಹೇಳಿದ್ದಿರಿ ಅವರಿಗೇ ಹೇಳಿ ನನಗೂ ಒಂದು ಅಲಾಟ್ ಮಾಡಿಸುತ್ತೀರಾ? ಎಸ್ಟೇಟ್ ಆಫೀಸ್‌ನವರಿಗೆ ಎಷ್ಟು ಕೊಟ್ಟಿರಿ. ಈಗಿನ ರೇಟ್ ಇಪ್ಪತ್ತರಿಂದ ಮೂವತ್ತಕ್ಕೆ ಹೋಗಿದೆಯಂತೆ ನಿಜವೇ ಎನ್ನುವ ಎನ್‌ಕ್ವನರಿ ಜೊತೆಗೆ ಅದನ್ನು ಸಬ್‌ಲೆಟ್ ಮಾಡುತ್ತೀರಾ? ನಮ್ಮವರೇ ಇದಾರೆ ಎರಡು ಸಾವಿರ ಕೊಡುತ್ತಾರೆ ಎನ್ನುವ ವ್ಯವಹಾರ ಚತುರರೂ ಹುಡುಕಿಕೊಂಡು ಬಂದಿದ್ದರು. ಇಪ್ಪತ್ತೈದು ವರ್ಷದ ಚಾಕರಿಯಿಂದ ಬಂದ ಸೇವಾ ಹಿರಿತನದಿಂದ ಈ ಮನೆ ಸಿಕ್ಕಿದೆ ಎಂದು ತಿಳಿದಿದ್ದರೂ ನಾನು ತುಂಬಾ ಅದೃಷ್ಟಶಾಲಿಯೇನೋ ಎನ್ನುವ ಅನುಮಾನವೂ ಬಂದಿತು. ಇನ್ನೂ ನೋಡಿಲ್ಲದ ಮನೆಯ ಬಗೆಗೆ ಹೆಮ್ಮೆಯೂ ಮೂಡಿತು.

ಮಹಾದೇವಿಯಕ್ಕನ ಆ ಕಾಲದಲ್ಲಿ ಮೃಗಗಳಿಗೆ ಜನ ಅಂಜ ಬೇಕಾಗಿತ್ತಂತೆ. ಹುಲಿ ತಿಂದು ಬಿಟ್ಟಿರುವ ಮಾಂಸದ ಮೇಲೆ ವಿಷ ಹಾಕುವ, ಟೆಲಿಸ್ಕೋಪಿಕ್ ಲೆನ್ಸ್ ಜೊತೆಗಿನ ಎಲಿಫೆಂಟ್ ಗನ್‌ನಲ್ಲಿ ಗುರಿ ಹೊಡೆಯುವ ಅತಿ ಬುದ್ಧಿ ಮನುಷ್ಯನಿಗಿರಲಿಲ್ಲ. ಆಗ ಶಕ್ತಿಯನ್ನು ಶಕ್ತಿಯಿಂದಲೇ ಎದುರಿಸಬೇಕಾಗಿತ್ತು. ಈಗ ಯಾವ ಬೆಟ್ಟದ ಮೇಲೆ ಮನೆ ಮಾಡಿಕೊಂಡರೂ ಮೃಗಗಳ ಭೀತಿಯಿಲ್ಲ. ಹೊಟ್ಟೆ ತುಂಬಿದ ಮೃಗಗಳು ಬೇರೆಯವರ ತಂಟೆಗಂತೂ ಬರುವುದಿಲ್ಲ. ಅಪರೂಪಕ್ಕೊಮ್ಮೆ ಅವಸರದಲ್ಲಿ ಹೊರಟಿದ್ದ ಆನೆ ಮನೆಯ ಮೇಲೆ ಕಾಲು ಇಟ್ಟುಕೊಂಡು ಹೋಗುವ ಷಾರ್ಟ್‌ಕಟ್ ಕಂಡುಕೊಳ್ಳಬಹುದು ನಿಜ. ಆದರೆ ದೆಹಲಿಯಲ್ಲಿ ಬೆಟ್ಟವಿಲ್ಲ. ನನ್ನ ಮನೆಯ ಹತ್ತಿಪ್ಪತ್ತು ಕಿಲೋಮೀಟರ್ ಫಾಸಲೆಯಲ್ಲಿ ತುಂಡಾಡಿದ ದನಗಳಲ್ಲದೇ ಇನ್ನು ಯಾವ ಮೃಗಗಳೂ ಇಲ್ಲ. ಇಲ್ಲಿ ಮನೆ ತಲುಪಲು ಇರುವ ಒಂದೇ ಕಷ್ಟ ಏಳು ಮಹಡಿಯ ಎತ್ತರ.

ಮೇಲಕ್ಕೆ ಹೋಗಲು ಲಿಫ್ಟ್‌ಗಳಿವೆ ನಿಜ. ಆದರೆ ದೇಶದಲ್ಲಿ ಎಲ್ಲೂ ಕಾಣದ ಸಾಮರಸ್ಯ ಈ ಲಿಫ್ಟ್‌ಗಳಲ್ಲಿವೆ. ಒಂದು ಲಿಫ್ಟ್ ಕೆಟ್ಟರೆ ಇರಲಿ ಎಂದು ಇನ್ನೊಂದು ಲಿಫ್ಟ್ ಇಟ್ಟಿದ್ದಾರೆ. ಆದರೆ ಮೊದಲನೆಯದು ಕೆಟ್ಟ ಹತ್ತೇ ನಿಮಿಷದಲ್ಲಿ ಎರಡನೆಯದೂ ಕೆಡುತ್ತದೆ. ಅವಳಿ ಮಕ್ಕಳಿಗೆ ಹೀಗೆ ಆಗುತ್ತದೆ ಎಂದು ಎಲ್ಲೋ ಓದಿದ್ದೆ. ಹೈದರಾಬಾದಿನಲ್ಲಿ ಬೆಳೆಯುತ್ತಿರುವ ಅವಳಿ, ಲಕ್ನೋದಲ್ಲಿ ಬೆಳೆಯುತ್ತಿರುವ ಜವಳಿ ಎರಡಕ್ಕೂ ಒಂದೇ ದಿನ ಥಡಾರ, ಒಂದೇ ದಿನ ಕೆಮ್ಮು, ಒಂದೇ ದಿನ ಮಾತನಾಡುವುದು ಬಂದಿತ್ತಂತೆ. ಅಕ್ಕ ಪಕ್ಕದಲ್ಲೇ ಇರುವ ಈ ಲಿಫ್ಟ್‌ಗಳಿಗೂ ಇದೇ ತರಹ

ಕಾಮನ್ ಜೀನ್ ಇರಬೇಕು.

ಇದರಿಂದಾಗಿ ವಾರಕ್ಕೆ ಮೂರು ದಿನ 'ಲಿಫ್ಟ್ ಅಂಡರ್ ರಿಪೇರ್' ಫಲಕ. ಇನ್ನೂ ಎರಡು ದಿನವಾದರೂ ನಾನು ಹತ್ತ ಬೇಕಾದಾಗ ಪವರ್ ಷಟ್ ಡೌನ್. ಬಿಸಿಲಿನಲ್ಲಿ ದೂರದಿಂದ ದಣಿದು ಬಂದಾಗ ಅದನ್ನ ಹತ್ತು ಕೆ.ಜಿ ಅನ್ನದ ಅಕ್ಕಿ, ಎರಡು ಕೆ.ಜಿ. ಇಡಲಿ ಅಕ್ಕಿ, ಒಂದು ಕೆ.ಜಿ ಪಲಾವ್ ಬಾಸ್‌ಮತಿ, ಮೂರು ಕೆ.ಜಿ. ತೊಗರಿಬೇಳೆ, ಒಂದು ಕೆ.ಜಿ. ಉಪ್ಪು, ಇನ್ನೊಂದು ಕೆ.ಜಿ ಡಿಟರ್ಜಂಟ್ ಮತ್ತೊಂದು ಕೆ.ಜಿ ಕ್ಲೀನಿಂಗ್ ಪೌಡರ್ ಅಂಗಡಿಯಿಂದ ಹೊತ್ತುಕೊಂಡು ಬರುವುದರ ಜೊತೆಗೆ ಏಳು ಅಂತಸ್ತಿನ ನೂರಾನಲ್ವತ್ತು ಮೆಟ್ಟಲುಗಳನ್ನು ಏರುವುದು ಸುಲಭದ ಕೆಲಸವಲ್ಲ. ಬೆಟ್ಟದ ಮೇಲೆ ಮನೆಯ ಮಾಡಿ ಮೆಟ್ಟಲು ಹತ್ತಲಂಜಿದೊಡೆಂತಯ್ಯ ಎನ್ನುವ ನುಡಿಯನ್ನು ಪ್ರತಿ ಅಂತಸ್ತು ಹತ್ತಿದ ನಂತರ ನಿಂತು ಹತ್ತು ಬಾರಿ ಹೇಳಿಕೊಳ್ಳುವ ಅಭ್ಯಾಸ ಮಾಡಿಕೊಂಡಿದ್ದೇನೆ.

ಲಿಫ್ಟ್ ಯಾವಾಗಲೂ ಕೆಟ್ಟಿರುತ್ತೇ ಅಂತ ತಿಳಿಬೇಕಾಗಿಲ್ಲ. ಸರಿಯಾಗೇ ಇದ್ದು ನಾವು ಅದರಲ್ಲಿ ತೂರಿಕೊಂಡ ನಂತರ ಕೆಡಬಹುದು. ಮನೆಗೆ ಬಂದ ದಿನವೇ, ಆ ಕಟ್ಟಡದಲ್ಲಿದ್ದ ಅನುಭವಿಗಳು ನೀವೊಬ್ಬರೆ ಲಿಫ್ಟ್‌ನಲ್ಲಿದ್ದು ಅದು ಮಧ್ಯೆ ಎಲ್ಲಾದರೂ ಕೆಟ್ಟು ನಿಂತುಕೊಂಡರೆ, ಅದರ ಬಾಗಿಲಿಗೆ ಟಪಟಪ ಎಂದು ಹೊಡೆಯುತ್ತಾ ಬಚಾವ್ ಬಚಾವ್ ಎಂದು ಕೂಗಿಕೊಳ್ಳಿ, ಯಾರಾದರೂ ಹೋಗಿ ಲಿಫ್ಟ್ ಆಪರೇಟರ್ ಕರೆದುಕೊಂಡು ಬಂದು ನಿಮ್ಮನ್ನು ಬಿಡಿಸುತ್ತಾರೆ ಎಂದು ಸಲಹೆ ಕೊಟ್ಟರು. ಆದರೆ ಆಲಿಬಾಬನ ಕತೆಯಲ್ಲಿ ಗುಹೆಯಿಂದ ಹೊರಗೆ ಬರಲು ಬಾಗಿಲು ತೆಗೆಯೇ ಸೇಸಮ್ಮ ಎಂದು ಹೇಳುವುದನ್ನು ಆ ಗಳಿಗೆಯಲ್ಲಿ ಮರೆತಹಾಗೆ - ಈ ಬಚಾವ್ ಬಚಾವ್ ನನಗೂ ಮರೆತರೆ ಎನ್ನುವ ಹೆದರಿಕೆಯಿಂದ ಒಬ್ಬನೇ ಲಿಫ್ಟ್‌ನಲ್ಲಿ ಹೋಗುವುದನ್ನು ಆದಷ್ಟು ತಪ್ಪಿಸಿಕೊಳ್ಳುತ್ತೇನೆ. ಹೊನ್ನೂರು ಚೆನ್ನವೋ, ನವಿಲೂರು ಚೆನ್ನವೋ ಎನ್ನುವ ಪ್ರಶ್ನೆ ಕವಿಗೆ ಕಷ್ಟವಾದಂತೆ ಏಳು ಮಹಡಿ ಹತ್ತಿ ಬೆವರು ಸುರಿಸುವುದು ಕಡಿಮೆ ಕಷ್ಟವೋ. ಆ ಲಿಫ್ಟ್‌ನಲ್ಲಿ ಸಿಕ್ಕಿಕೊಂಡು ಅರ್ಧಗಂಟೆ ಪ್ರಾಣ ಕೈಯಲ್ಲಿ ಹಿಡಿದುಕೊಂಡಿರುವುದು ಕಡಿಮೆ ಕಷ್ಟವೋ - ಇನ್ನೂ ಉತ್ತರ ಕಂಡುಕೊಳ್ಳಲಾಗಿಲ್ಲ.

ಎಲ್ಲಾ ನಗರಗಳೂ ಸಂತೆಯೇ ಆಗಿರುವುದರಿಂದ ಪಟ್ಟಣದಲ್ಲಿ ಮನೆ ಮಾಡುವುದು ಸಂತೆಯಲ್ಲಿ ಮನೆ ಮಾಡಿದಂತಲ್ಲವೇ ಎಂದು ಕೇಳಬಹುದು. ಆದರೆ ನನ್ನ ಬೆಟ್ಟದ ಮೇಲಿನ ಮನೆ ಅತಿ ವಾಹನ ಸಂಚಾರದ ರಸ್ತೆಗೆ ಚಾಚಿಕೊಂಡಿದೆ. ಎಲ್ಲಾ ನಗರಗಳಲ್ಲೂ ಬಸ್, ಲಾರಿ, ಆಟೋ, ಮೋಟಾರ್‌ಸೈಕಲ್‌ಗಳ ಶಬ್ದವಿದ್ದರೆ, ನನ್ನ ಮನೆಯ ರಸ್ತೆಗೆ ಒಂದು ವಿಶಿಷ್ಟ ವಾಹನವೂ ಓಡಾಡುತ್ತದೆ - ಒಂದು ನಿಮಿಷಕ್ಕೆ ಕನಿಷ್ಠ ಮೂರು ಬಾರಿ. ಎರಡನೆಯ ಮಹಾ ಯುದ್ಧದ ಪಳೆಯುಳಿಕೆ ಅತಿ ಶಕ್ತಿಶಾಲಿ ಮೋಟಾರ್ ಸೈಕಲ್‌ಗೆ ಅಳವಡಿಸಿದ 'ಫಟ್ ಫಟ್' ಎನ್ನುವ ಈ ವಾಹನದ ಡೆಸಿಬಲ್ ಶಕ್ತಿಯನ್ನು ಪರೀಕ್ಷಕನು ಪ್ರಯತ್ನಿಸಿದ ಯಂತ್ರವೇ ಮುರಿಯಿತಂತೆ. ಈ ಆರ್ಭಟವನ್ನು ಕೇಳಿಯೇ ತಿಳಿಯಬೇಕು. ಎಂಟಿವಿ ಚಾನಲ್ ಫುಲ್ ವಾಲ್ಯೂಮಿನಲ್ಲಿ ಹತ್ತಿರದಲ್ಲೇ ಕೇಳುತ್ತಿದ್ದಾಗಲೂ 200 ಮೀಟರ್ ದೂರದಿಂದಲೇ ಫಟಫಟಿಯ ಶಬ್ದ ಕೇಳಬಹುದು ಎಂದರೆ ಈ ಬಗೆಗೆ ಒಂದು ಅಂದಾಜು ಬರಬಹುದು.

ಸಂತೆಯ ಶಬ್ದಕ್ಕೆ ಸೇರಿಕೊಂಡೇ ಬಂದಿದೆ ನೊರೆತೆರೆ. ಆರ್ಭಟಿಸಿಕೊಂಡು ಹೋಗುವ

ವಾಹನಗಳು ಶಬ್ದವನ್ನು ಮಾತ್ರ ಬಿಟ್ಟು ಹೋಗುವುದಿಲ್ಲ. ಹೊಗೆಯ ತರಂಗಗಳನ್ನು ಎಬ್ಬಿಸಿಯೇ ಹೋಗುತ್ತದೆ. ದೆಹಲಿಯಲ್ಲಿ ಚಳಿಗಾಲದಲ್ಲಿ ಬೆಳಿಗ್ಗೆ ಸಂಜೆ ಮಂಜು ಮುಸುಕಿರುತ್ತದೆ. ಫಾಗ್‌ನಿಂದಾಗಿ ವಿಮಾನ ಸಂಚಾರದಲ್ಲಿ ವಿಳಂಬ ಎನ್ನುವ ಸುದ್ದಿಯೂ ಬರುತ್ತದೆ. ನಮ್ಮ ಮನೆಯಲ್ಲಿ ವಾಹನದ ಹೊಗೆಯಿಂದಾಗಿ ಯಾವಾಗಲೂ ಹೊಗೆಯತೆರೆ. ಕೈಯಲ್ಲಿ ಮುಟ್ಟಲು ಸಾಧ್ಯವೋ ಎನ್ನಿಸುವ ಸ್ಮಾಗ್. ಕೈಯಲ್ಲೂ ಮುಟ್ಟಲಾಗದಿದ್ದರೂ ಮೂಗನ್ನಂತೂ ತಲಪೇ ತಲಪುತ್ತದೆ. ಕೆಮ್ಮಿನ ಜೊತೆಗೆ ಕಣ್ಣಿನಲ್ಲಿ ನೀರನ್ನು ತರಿಸುತ್ತದೆ.

ಅಕ್ಕಮಹಾದೇವಿ ವಚನ ಈಗ ಸ್ವಲ್ಪ ಬದಲಾಯಿಸಿಕೊಳ್ಳಬೇಕು ಎಂದು ಕಾಣುತ್ತದೆ. ಬೆಟ್ಟದ ಮೇಲೆ ಮೃಗಗಳಿರುವ ಕಾಡಿನಲ್ಲಿರುವ ಮನೆ, ಸಮುದ್ರದ ತಡಿಯ ಓಜೋನ್‌ನಿಂದ ಹೊಸ ಹುರುಪು ಕೊಡುವ ಮನೆ, ವಾರಕ್ಕೊಂದೇ ದಿನ, ಅದೂ ಎರಡು ಮೂರು ಗಂಟೆಯ ಸಂತೆಯ ಹತ್ತಿರದ ಮನೆ ಸಿಕ್ಕರೆ 'ಹರುಷದಲ್ಲೋಲಾಡುವೆನಯ್ಯ' ಎಂದು ಈಗ ಹಾಡಿಕೊಳ್ಳಬೇಕು ಎನ್ನಿಸುತ್ತದೆ.

★★

ಬೇಡಿ!

ಹೆಣ್ಣುಗಳೇ
ಪ್ರಯತ್ನ ಮಾಡಿ
ನೀವಾಗಲು
ಕಿರಣ್ ಬೇಡಿ
ಆದರೆ
ಆಗಬೇಡಿ
ಪೂಜಾ ಬೇಡಿ!

ಗೀತಾ ಶಾಸ್ತ್ರಿ

ಸಾಹಿತ್ಯ ಕೃಷಿ

ಅಂ. ಶರಣ

'ಹಾಸ್ಯ ಎಲ್ಲೆಲ್ಲೂ ಇದೆ. ಅದನ್ನು ಕಾಣುವ, ಹುಡುಕುವ ಕಣ್ಣಿರಬೇಕು ಅಷ್ಟೆ' ಅಂದ ವಿಶ್ವ

''ನಮ್ಮ ಕೃಷಿ ವಿಜ್ಞಾನದಲ್ಲೂ ಹಾಸ್ಯವಿದೆ'' ನಾನಂದೆ.

''ಅದೇನೋಪ್ಪ, ಇದ್ದೀತೇನೋ, ಆದರೆ ನೀನು ಕೃಷಿ ವಿಜ್ಞಾನದಲ್ಲೂ ಅಂತ್ಹೇಳೋದ್ನ ನೋಡಿದ್ರೆ ನಿನಗೇ ಸಂಶಯವಿರುವಂತಿದೆ?'' ಛೇಡಿಸಿದ.

ಕೃಷಿ, ವಿಜ್ಞಾನ ಎರಡೂ ಗಂಭೀರ ವಿಷಯಗಳು. 'ಅನ್ನ ದೇವರ ಮುಂದೆ ಇನ್ನು ದೇವರು ಉಂಟೇ?'

ಅನ್ನ ದೇವರನ್ನೇ ಸೃಷ್ಟಿಸುವ ಕೃಷಿ ವಿಜ್ಞಾನದಲ್ಲಿ ಹಾಸ್ಯ! ಅದ್ಹೇಗೆ ಸಾಧ್ಯ? ಕೋಟಿ ವಿದ್ಯೆಗಿಂತ ಮಿಗಿಲಾದ ಮೇಟಿ ವಿದ್ಯೆ ತಮಾಷೆ ಹೇಗಾದೀತು? ಅನ್ನುವ ಅನುಮಾನ ನಿಮಗೂ ಬಂದಿರಬಹುದು. ವಿಜ್ಞಾನ ಗಹನ ವಿಷಯ. ಅದರಲ್ಲಿ ಗಹಗಹಿಸಲು ಏನಿದ್ದೀತು ಅನ್ನೋದು ಸಾಮಾನ್ಯವಾದ ಸಂಶಯ. ಆದರೆ ವಿಜ್ಞಾನಿಗಳು ತಮ್ಮ ವಿಚಿತ್ರ ಸ್ವಭಾವ, ವರ್ತನೆಗಳಿಂದ ಹಾಸ್ಯಕ್ಕೆ ಹೇಗೆ ಗುರಿಯಾಗಿದ್ದಾರೆಯೋ ಹಾಗೆಯೇ ಕೃಷಿ (ಕುರ್ಸಿ) ವಿಜ್ಞಾನಿಗಳೂ ನಗೆಗೀಡಾದ ಸಂದರ್ಭಗಳು ಸಾಕಷ್ಟಿವೆ.

ಈ ವಿಜ್ಞಾನಿಗಳಲ್ಲಿ Sophisticated ಆದ ಕೆಲವರು ಹೊಲಗಳಲ್ಲಿ ಬೆಳೆಗಳ ಅಧ್ಯಯನದ ತೊಂದರೆ ತಗೊಳ್ಳುವುದಿಲ್ಲ. ಲ್ಯಾಬ್‌ನಲ್ಲೇ ಕುಳಿತು ತಮ್ಮ ದೂರದೃಷ್ಟಿ ಹಾಗೂ ಕಲ್ಪನಾಶಕ್ತಿಯಿಂದ ಸಂಶೋಧನಾ ಮಾಹಿತಿಯನ್ನುತ್ಪಾದಿಸುವ ಇವರೇ ಕುರ್ಸಿ ವಿಜ್ಞಾನಿಗಳು. ಬಿಸಿಲಲ್ಲಿ ಬೇಯುವುದು ಅನವಶ್ಯಕವೆನ್ನುವ ಇವರು ಬೇಯಿಸಿದ ಮಾಹಿತಿ (cooked data) ಯ ಕೊಡುಗೆಯಿಂದ ಕುರ್ಸಿ ಸಂಶೋಧನೆಯನ್ನು ಶ್ರೀಮಂತಗೊಳಿಸಿದ್ದಾರೆ.

ಇನ್ನೂ ಕೆಲವರು ಶ್ರಮಜೀವಿ ಸಂಶೋಧಕರು. ಈ rustic researchers ಹೆಚ್ಚು ಸಮಯವನ್ನು ಹೊಲಗಳಲ್ಲೇ ಕಳೆದು ತಾವು ಕಲಿತದ್ದನ್ನು ಇತರರಿಗೆ ತಿಳಿಯಪಡಿಸಲು ತಿಣುಕುತ್ತಾರೆ. ಇಂಗ್ಲೀಷ್ ಭಾಷೆ ಇವರಿಗೆ ತೊಡಕು. ಹೆಚ್ಚು ವಾಸಿ ಹಾಸ್ಯದ ನೆಲೆಯಿರುವುದು ಇಲ್ಲೇ.

ಧಾರವಾಡದ ಕೃಷಿ ಕಾಲೇಜಿನಲ್ಲಿ ನನಗೆ ಮೇಷ್ಟ್ರಾಗಿದ್ದ ಕೆಲವು ಸಂಶೋಧಕರು ತಮ್ಮ ವಿಚಿತ್ರ ಇಂಗ್ಲೀಷ್ ಭಾಷೆಗೆ ಹೆಸರಾಗಿದ್ದರು. ಹಾಂ! ಭಾಷೆಯೆಂದ್ರೆ ನೆನಪಾಯ್ತು ನೋಡಿ. ಧಾರವಾಡದ, ಮತ್ತು ಬೆಂಗಳೂರಿನ ಹುಡುಗರ (ಆಗ ನಮ್ಮ ಕಾಲೇಜಲ್ಲಿ 'ಹೆಣ್ಣು ಹುಡುಗಿ' ಯರೇ ಇರಲಿಲ್ಲ ಎಲ್ಲ 'ಗಂಡು ಹುಡುಗರೇ.) ಮಧ್ಯೆ ನಡೀತಿದ್ದ ವಾದ 'ಏನ್ರೀ, ಕುಲಕರ್ಣಿ ಮೆಟ್ಟಲು ಇಳಿಯಾಕ ಹತ್ತೀರೇನು? ಇಳೀರಿ ಅಥವಾ ಹತ್ತರಿ, ಎರಡೂ ಒಮ್ಮೆಲೇ ಯಾಕಿ ಮಾಡ್ತೀರಿ ಅಂತ ಹನುಮಯ್ಯ ಛೇಡಿಸಿದರೆ ''ಸುಮ್ನಿಕ್ರಿಪಾ ನಾವೂ ನೋಡೇವಿ. ಅದSS ಲಾರಿ ಹರಿದು ಇಬ್ಬರ ಮರಣ ಅಂತ ಬರೀತಾರಲ್ಲ ಪ್ರಜಾವಾಣ್ಯಾಗ. ಬಟ್ಟೆSS, ಕಾಗದ ಹರಿತಾವ್ರಪಾ, ಲಾರಿ ಹರಿಯೂದಂದ್ರೇನು? ಕುಲಕರ್ಣಿ ಪ್ರಶ್ನಿಸುತ್ತಿದ್ದ.

ಇನ್ನು ಮೇಷ್ಟ್ರ ಭಾಷೆಗೆ ಬರೋಣ. ಬೆಳೆ ವಿಜ್ಞಾನದ ವಿಷಯ ಕಲಿಸಲು ಬಂದ ಮೇಷ್ಟ್ರನ್ನು

ಮೊದಲ ಕ್ಲಾಸಿನಲ್ಲಿ ಅವರ ಪರಿಚಯಕ್ಕಾಗಿ ಕೇಳಿದೆವು. ""Introduction? What introduction? I ..... joined Raichur, transferred Dharwad, taking class" ಅಂದದ್ದನ್ನು ಕೇಳಿ ಅಲ್ಪಸ್ವಲ್ಪ ಆಂಗ್ಲ ಜ್ಞಾನವಿದ್ದ ನಾವು ಇದ್ಯಾವದೋ ವಿಶೇಷ ಇಂಗ್ಲಿಷ್ ಇರಬೇಕು ಅಂದ್ಕೊಂಡಿದ್ದಿ. ನಂತರ ಬೇಸಾಯದಲ್ಲಿ ಮಳೆಯೆಷ್ಟು ಮುಖ್ಯ ಅಂತ ವಿವರಿಸಲು "Rain, rain, rain, farmer here ಅಂತ ನೆಲದೆಡೆ ಕೈತೋರಿಸಿ No rain, farmer there ಅಂತ ಆ ಆಕಾಶದೆಡೆಗೆ ಕೈ ಮಾಡಿದರು. ಮಳೆ ಇರದಿದ್ರೆ, ರೈತ ಪರಲೋಕ ವಾಸಿಯಾಗ್ತಾನೆ ಅನ್ನೋದನ್ನ ಎಷ್ಟೊಂದು ಪ್ರಭಾವಶಾಲಿಯಾಗಿ ಹೇಳಿದರಲ್ಲ ಅನ್ನಿಸಿತು. ಕ್ಲಾಸು ಶುರುವಾಗುವುದಕ್ಕೆ ಮುಂಚೆ ಹೊರಗೆ ಕಾರಿಡಾರಿನಲ್ಲಿ ನಿಂತ ವಿದ್ಯಾರ್ಥಿಗಳನ್ನು ಅವರು ಕ್ಲಾಸೊಳಕ್ಕೆ ಕರೆದಿದ್ದು ""All the outstanding students in come" ನಾನು ಮೆಟ್ಟಲು ಇಳೀತಿದ್ದೆ ಅನ್ನೋದು ಅವರ ಭಾಷೆಯಲ್ಲಿ ""I was go downing the steps and he was upcoming" ನೆನ್ನೆ ಮಾತಾಡಿದ್ದು "Yesterday speaked' ಒಂದು ವಾರದ ಹಿಂದೆ ಮಾತಾಡಿದ್ದು "last week spoked' ಕ್ಲಾಸ್ ಟೆಸ್ಟ್ ಯಾವಾಗ ಸರ್ ಅಂದರೆ ನಾಲ್ಕು ದಿನಗಳ ನಂತರ ಅನ್ನೋದಕ್ಕೆ "tomorrow, tomorrow, tomorrow tomorrow we will have test'.

ಒಮ್ಮೆ ಜೋಳದ ಬೆಳೆಯ ಬಗ್ಗೆ ಪಾಠ ಮಾಡ್ತ ಬೆಳೆಗೆ ನೀರುಣಿಸಲು irrigation pipe ವಿವರಿಸಿದರು. "Pipe, you know pipe, round, round, round, round nothing inside'. ಜೋಳದ ತೆನೆ ಕಟಾವು ಮಾಡುವದನ್ನು ಹೇಳಿದ್ದು "Cut the earheads (ತೆನೆ) with a sickle, separate grains, put in a gunny bag and cut it' ಅಣ್ಣಪ್ಪನಿಗೆ ಬಂತು ಅನುಮಾನ ಕೇಳೇ ಬಿಟ್ಟ ""Sir, we have to cut the gunny bag ಆ?'' ""No, no, not that cut ಕಟ್ ಇಟ್ I say ಕಟ್ಕೋದ್ರಿ, ದಾರದಿಂದ ಚೀಲದ ಬಾಯಿ ಕಟ್ಟೋದು ವಿವರಿಸಿದ್ದರು. ಕ್ಲಾಸಿನಲ್ಲಿ ಹಿಂದಿನ ಬೆಂಚಿನ ಕಾಯಂ ಗಿರಾಕಿ ದೇವರಾಜ್ ಈ ಮೇಷ್ಟನ್ನು ರೇಗಿಸಲು ಬಂದಿನ ಯಿಯಾಂವ್ ಅಂದದ್ದೇ ಇವರಿಗೆ ಕೋಪ ನೆತ್ತಿಗೇರಿ "Who is that I say. Let me stand' ಅಂತ ಗುಡುಗಿದ್ದರು.

ಕ್ಲಾಸ್ ಟೆಸ್ಟ್ ಮುಂದಕ್ಕೆ ಹಾಕಲು ನಾವು ಮಾಮೂಲಾಗಿ ಒಡ್ಡುತ್ತಿದ್ದ ಕಾರಣ 'ರಾತ್ರಿ ಹಾಸ್ಟೆಲ್‌ನಲ್ಲಿ ಕರೆಂಟ್ ಇರಲಿಲ್ಲ. ಓದಲಿಕ್ಕಾಗಲಿಲ್ಲ ಅನ್ನುವುದು. ಅದನ್ನೇ ಇವರಿಗೂ ಹೇಳಿದೆವು. "Don't lie I seen whole hostel was burning yeaterday night' ಅಂದಿದ್ರು.

ಇನ್ನೊಬ್ಬ ಮೇಷ್ಟ್ರಿಗೆ ಕನ್ನಡದ ಪಕ್ಕ ತರ್ಜುಮೆಯ ಗೀಳು. ನಿಮ್ಮ ಹಣೆಬರಹವನ್ನು ಯಾರೂ ಕೆಡಿಸೋಕ್ಕಾಗೋಲ್ಲ ಅನ್ನೋದನ್ನು Nobody can rape your forehead writing ಅಂದರೆ, '"Telling you anything is like going on washing tamrind in a flowing river' ಅಂತ್ಹೇಳೀ ನಿಮಗೇನ್ ಹೇಳಿದ್ರೂ, ಹೊಳೇಲಿ ಹುಣಸೇ ಹಣ್ಣು ತೊಳದ್ಹಾಗೆ ಅನ್ನೋದನ್ನ ಅರ್ಥ ಮಾಡಿಸ್ತಿದ್ರು, ಪರೀಕ್ಷೇಲಿ "Don't go on writing like donkey urinating long long long ಅಂತ ಎಚ್ಚರಿಸ್ತಿದ್ರು.

ಇವರ ಭಾಷಾ ಪರಿಣತಿ ನಮ್ಮ ಕಲ್ಪನೆಗೆ ಸ್ಫೂರ್ತಿಯಾಗಿತ್ತು. ಇವರು ಶಾಲೆಯಲ್ಲಿದ್ದಾಗ ಇಂಗ್ಲೀಷ್ ಮೇಷ್ಟ್ರ ಸವಾಲನ್ನು ಸ್ವೀಕರಿಸಿ ' ಈ ಕೆಲಸ ಆಗೋದಿಲ್ಲ, ಆದರೆ ಆಗೇ ಆಗುತ್ತೆ, ಆಗೇ ಆಗುತ್ತೆ' ಅನ್ನೋದನ್ನ 'ದಿಸ್ ವರ್ಕ್ ವಿಲ್‌ನಾಟ್ ಬಿ ಡನ್, ಇಫ್ ಡನ್ ಡನ್‌ಡನಾಡನ್, ಡನ್‌ಡನಾಡನ್' ಎಂದು ಭಾಷಾಂತರಿಸಿದ್ರಂತೆ ಎಂದು ಅರವಿಂದ ಹೇಳಿದರೆ 'ಅದಿರ್‍ಲ್ಹೋಯವಾ ಆ ಹುಡುಗಿ ಕೆಳಗೆ ನಿಂತಾಗ' ಅನ್ನೂದನ್ನ ಇವು ಮಿಸ್ ಅಂಡರ್ ಸ್ಟ್ಯಾಂಡಿಂಗ್ ಅಂತ ತರ್ಜುಮೆ ಮಾಡಿದ್ರು ಅಂತ ರಾಠೋಡ ಸೇರಿಸುತ್ತಿದ್ದ.

ಮಿಸ್ ಅಂಡರ್‌ಸ್ಟ್ಯಾಂಡಿಂಗ್ ಅಂದ್ರೆ ನೆನಪಾಯ್ತು, ಬೆಂಗಳೂರು ಕ್ಯಾಂಪಸ್‌ನ ಕೃಷಿ ಕಾಲೇಜಿನ ಜೋಕ್, ಬೆಳೆ ವಿಜ್ಞಾನದ ಲೆಕ್ಚರರ್ ಹೊಸ ಸ್ಕೂಟರ್ ಕೊಂಡಿದ್ದರು. "Sir where is your scooter?ವಿದ್ಯಾರ್ಥಿಯೊಬ್ಬ ಕೇಳಿದ. "It is there I say it is understanding the tree'ಹೆಮ್ಮೆಯ ಉತ್ತರ! ಮದುವೆಯ ಹೊಸತರಲ್ಲಿ ' ಏನ್‌ಸಾರ್ ಹನಿಮೂನ್‌ಗೆ ಹೋಗಲಿಲ್ವ?' ಪ್ರಶ್ನೆಗೆ "What to do I say, the weather is continuously raining ಅನ್ನುವ ವಿವರಣೆ ಬಂತು.

ಹೊಸದಾಗಿ ಸುಣ್ಣ ಬಳಿಸಿದ್ದ ಕ್ಲಾಸ್‌ರೂಮ್‌ನೊಳಕ್ಕೆ ಬರುತ್ತ "Why close windows? open all windows, let the climate come in" ಎಂದು ಆಜ್ಞಾಪಿಸಿ ""Yes, now the room is lighter than before" ಅಂತ ಉದ್ಗರಿಸಿದ್ದರಂತೆ. ಇವರ ಈ ಜೋಕ್‌ಗಳು ಅಂತರ ಕ್ಯಾಂಪಸ್ ವಿನಿಮಯವಾಗ್ತಿದ್ದು.

ನಮಗೆ ಫಿಸಿಕ್ಸ್ ಕಲಿಸುತ್ತಿದ್ದ ಜೋಷಿ ಮಾಸ್ತರರು (ಅವರಿಗೆ ಅದು "ಫಿಜಿಕ್ಸ್") ಅತೀ frank. ಕ್ಯಾಂಪಸ್‌ನಲ್ಲಿ ಎದುರಿಗೆ ಸಿಕ್ಕಾಗ ನಮಸ್ಕಾರ ಸಾರ್ ಅಂದ್ರೆ ಅವರು ಕೇಳ್ತಿದ್ದಿದ್ದು "ನಿಮ್ದು ಯಾವದರ‍ರ ಎಕ್ಸಾಮ್ ಮಿಸ್ ಆಗ್ಯಾದೇನು? ಇಲ್ರಿ ಸರ‍ರ "ಮತ್ತ‍ರ ಯಾಕ ನಮಸ್ಕಾರ ಮಾಡಿದ್ರಿ?" ನನಗೊತ್ತದ ನೀವೆಲ್ಲ ಸುಮ್ ಸುಮ್ನೆ ನಮಸ್ಕಾರ ಮಾಡವ್ರಲ್ಲ ಅಂತ. ಏನ್ ಹೇಳೋದು?

ಒಮ್ಮೆ ಹಾಸ್ಟೆಲ್ ದಿನಾಚರಣೆಯ ಅಂಗವಾಗಿ ನಡೆಸಿದ ಫಿಶ್ ಪಾಂಡ್ (Fish Pond) ನಲ್ಲಿ ವಿದ್ಯಾರ್ಥಿಯೊಬ್ಬ ನಗೆಚಾಟಿಕೆಗೆಂದು ಮಾಡಿದ ನಾಮಕರಣದಿಂದ ಹೊಗೆ ಉಂಟಾಗಿತ್ತು. ಅವನು ಮಾಡಿದ್ದಿಷ್ಟೇ ಮೂವರು ಲೆಕ್ಚರರುಗಳನ್ನಾಯ್ದುಕೊಂಡು, ಅವರಲ್ಲಿ ಸಣ್ಣಕಿದ್ದವರನ್ನು Napolean bone apart, ಪೆದ್ದು, ಪೆದ್ದಾಗಿದ್ದವರನ್ನು Napolean brain apart ಹಾಗೂ ಇವೆರಡೂ ಗುಣವಿದ್ದ ಮೂರನೆಯವರನ್ನು Napolean both apart ಅಂತ ಹೆಸರಿಸಿದ್ದ. ಬೋನ್, ಹಾಗೂ ಬ್ರೇನ್‌ನವರು ಈ ತಮಾಷೆಯನ್ನು sportive ಆಗಿ ತಗೊಂಡಿದ್ದರು. ಆದರೆ ಮೂರನೆಯವರು I will show you what is both apart' ಅಂದವರೇ ಆ ಬಾರಿ ತಮ್ಮ ಕೋರ್ಸ್‌ಗೆ register ಮಾಡಿಸಿದ್ದ ವಿದ್ಯಾರ್ಥಿಗಳಲ್ಲಿ ಹತ್ತು ಜನರನ್ನು ಫೇಲ್ ಮಾಡಿದ್ದರು!

ನಮ್ಮ ನಾಲ್ಕು ವರ್ಷಗಳ ಕೋರ್ಸ್‌ನಲ್ಲಿ ಕೊನೆಯ ವರ್ಷ ಅಖಿಲ ಭಾರತೀಯ ಶೈಕ್ಷಣಿಕ ಪ್ರವಾಸವಿರುತ್ತಿತ್ತು. ನಮಗಿಂತ Senior batch ನಲ್ಲಿದ್ದ ಮಂಜಣ್ಣ ತನಗೆ ಹಿಂದಿ ಚೆನ್ನಾಗಿ ಬರುತ್ತದೆಂದು ಹೇಳಿಕೊಂಡು ಹಿಂದಿಯ ಗಂಧವೇ ಇಲ್ಲದ ನಾಲ್ಕಾರು ಸ್ನೇಹಿತರ ಹಿಂದಿಗೆ

ಮುಖಂಡನಾಗಿದ್ದ. ದೆಹಲಿಯಲ್ಲಿ ಇವನ ಹಿಂದಿಯನ್ನು ನಂಬಿ ಇವನ ಹಿಂದೆ ಆರು ಜನ ಸ್ನೇಹಿತರೂ ಹೊರಟರು. ಕರೋಲ್ ಬಾಗ್‌ನಲ್ಲಿ ಬ್ಯಾಗ್ ಖರೀದಿಸಲು, ಬ್ಯಾಗ್‌ನವನನ್ನು ಮಂಜಣ್ಣ ಕೇಳಿದ ''ಕಿತ್ತೇ ಪೈಸೆ?''

''ಸಾಬ್ ಪಚ್ಚೀಸ್ ರುಪಯಾ (ಇಪ್ಪತ್ತೈದು ರೂಪಾಯಿ)

'' ಪಚ್ಚೀಸ್‌ಕಯಿಕೋ ಜೀ ಪಚಾಸ್ ರುಪಯಾ ದೇತಾ, ದೇತೋ ದೋ ನಯಿತೋ ನ್ಹೈ'' ಅಂದ ಮಂಜಣ್ಣ

ಈ ಚೌಕಾಶಿ ಅರ್ಥವಾಗದ ಹಿಂಡು ಕೇಳಿತ್ತು ಎಷ್ಟಂತೆ ಮಂಜಣ್ಣ?

''ಏ ಅವ್ನು ಐವತ್ಹೇಳ್ದ ಕಣ್ರಲೇ ನಾನು ಇಪ್ಪತ್ತೈದಕ್ಕೊಡು ಅಂದ್ರೆ, ಬೇಕೂಫ್ ನನ್ಮಕ್ಳು ನಗ್ತಾ ಅದಾರ್ರೆ. ಇಲ್ಲಿ ಬ್ಯಾಡ. ಇನ್ನೊಂದ್ಕಡೆ ನೋಡಾನ'' ಅಂ ಆ ಅಲ್ಲಿಂದ ಕಂಬಿ ಕಿತ್ತನಂತೆ, ಈ ಪಚ್ಚೀಸ್, ಪಚಸ್‌ನ Confusion ನಲ್ಲಿ.

ನಂತರ ಹಿಂಡು ಚಹಾ ಕುಡಿಯಲು ರಸ್ತೆ ಬದಿಯ ಢಾಬಾಗೆ ನುಗ್ಗಿತು. ಚಾಯ್ ಕುಡಿದ ಮಂಜಣ್ಣ ಕೇಳಿದ 'ಬಿಲ್ ಕಿತ್ತಾ ಹುವಾ?'

'ಚಾರ್ ರುಪಯೇ ಪಚ್ಹತ್ತರ್ ಪೈಸೇ ಸಾಬ್'

'' ಎಷ್ಟಂತೆ ಮಂಜಣ್ಣ?'' ಹಿಂಡು ಒಕ್ಕೊರಲಿನಿಂದ ಕೇಳಿತು.

''ಏಯ್, ಹತ್ರೂಪಾಯಿ ಕೊಡ್ರಲೇ, ಅದೇಟಾಗೇತೋ ತಗಂಡ್ ಚಿಲ್ರೆ ವಾಪಸ್ ಕೊಡ್ತಾನೆ'' ಸಮಸ್ಯೆ ಬಗೆಹರಿಸಿದ್ದ ಭಾಷಾಜ್ಞಾನಿ.

All India study tour ನಿಂದ ಹಿಂದಿರುಗಿದ Senior batch ಇವನ್ನೆಲ್ಲಾ narrate ಮಾಡ್ರದ್ರೆ ನಾವು ಆ situationನ್ನು ಕಲ್ಪಿಸಿಕೊಂಡು ನಕ್ಕಿದ್ದೇ ನಕ್ಕಿದ್ದು.

ಮುಂದೆ M.Sc ಗೆಂದು ಕೊಯಮತ್ತೂರಿನ ತಮಿಳ್ನಾಡು ಕೃಷಿ ವಿಶ್ವವಿದ್ಯಾಲಯ ಸೇರಿದೆ. ಅಲ್ಲಿ ಟ್ರೇಗಳಲ್ಲಿ ಊಟ ಮಾಡೋದನ್ನ ಮೊದಲಬಾರಿ ನೋಡಿದ್ದು. ಅಲ್ಲಿನ ಅನ್ನಪ್ರಿಯರು, ಮುಂದಿನ ಟ್ರೇಯಲ್ಲಿ ರಾಶಿ, ರಾಶಿ ಅನ್ನ ಪೇರಿಸಿಕೊಂಡು ಅದರ ನೆತ್ತಿಯ ಮೇಲೆ ಸಾಂಬಾರು, ಕುಳಂಬು, ರಸಂ, ಮಜ್ಜಿಗೆ ಸುರಿದು ಗುಳುಂ, ಗುಳುಂ ಮಾಡ್ತಿದ್ದುದು ನೋಡೋಕೆ ತಮಾಷೆಯಾಗಿರ್‍ತಿತ್ತು. ಅದರಲ್ಲಿ ಚಾಂಪಿಯನ್ ಊಟಗಾರರಿದ್ದರು. ಅವರು ಊಟಕ್ಕೆ ಕುಳಿತು ಮುಂದಿನ ಟ್ರೇಯಲ್ಲಿ ಅನ್ನ ರಾಶಿ ಹಾಕಿಕೊಂಡರೆ ಎದುರಿಗೆ ಕುಳಿತವರು 'ಯಾರದು ರಾಶಿಯ ಹಿಂದೆ ಕೂತಿರೋದು' ಅಂತ ಕೇಳ್ತಿದ್ರು.

ಅವರಲ್ಲಿ ವಿಶೇಷ ಭೋಜನ ಪ್ರಿಯ ಮಣಿಯ ಬಗ್ಗೆ ಒಂದು ಜೋಕ್. Post Graduate ಮೆಸ್ ಸದಸ್ಯರೆಲ್ಲ, ಹತ್ತಿರದ ಮರುದ ಮಲೈ (ಮುರುಗನ್ ದೇವಸ್ಥಾನ)ಗೆ ಪಿಕ್ನಿಕ್ ಹೋಗಿದ್ರಂತೆ. ಬೆಟ್ಟದ ಮೇಲೆ ಮಧ್ಯಾಹ್ನದ ಊಟದ ಕಾರ್ಯಕ್ರಮವಿತ್ತು. ಎಲ್ಲರೂ ತಮ್ಮ, ತಮ್ಮ lunch packet ಕೈಲಿ ಹಿಡಿದಿದ್ರು. ಮಣಿಯ ಕೈಲೂ ಒಂದು lunch packet. ಇತರರ ಪ್ಯಾಕೆಟ್‌ನಷ್ಟೇ ಗಾತ್ರದ್ದು. ಸ್ನೇಹಿತನೊಬ್ಬನಿಗೆ ಆಶ್ಚರ್ಯ. ಅವನು ಕೇಳಿಯೇ ಬಿಟ್ಟ. 'ಏನು ಮಣಿ ಇಷ್ಟೇ ಪ್ಯಾಕೆಟ್ ನೀನೂ ತಂದಿದ್ದೀ. ನಿನಗೆ ಸಾಕಾಗುತ್ತಾ?' ಅದಕ್ಕೆ ಮಣಿ ಹೇಳಿದ್ದು '' ಊಹೂಂ, ಇದು ಉಪ್ಪಿನಕಾಯಿ, ನನ್ನ ಊಟ ಹಿಂದೆ ಆಟೋದಲ್ಲಿ ಬರ್‍ತಾ ಇದೆ.''



“ನಿಮ್ ಕೂದಲಿನ ತರಹಾನೇ ನನಗೂ ಕೂದಲು ಬೆಳೀಬೇಕಾದೆ, ಏನ್ಮಾಡ್ಬೇಕು ಸೋನಿಯಾಜೀ?”

ಇಂದ್ರಿಯಾತೀತ ಅನುಭವ

ಕೇಫ

ನಮ್ಮ ವಿರಾಟ ಭವನದ ರೂಮ್ ನಂಬರ್ ಟೆನ್. 10 ಮಲ್ಹಾರಿ ರಾಯರ ಕುಟುಂಬದವರ ಇಂಗ್ಲೆಂಡ್ ಸಂಬಂಧದ ಕುರುಹು - ರೂಮ್ ನಂಬರ್ ಟೆನ್ ತನ್ನ ಕಾಲ ತುದಿಯ ಮೇಲೆ ನಿಂತಿತ್ತು. ಅಂದರೆ ಆತುರದಿಂದ ಕಾದಿತ್ತು. ಮೂರು ವಾರಗಳ ನಂತರ ತಮ್ಮ ಉತ್ತರ ಭಾರತ ಪ್ರವಾಸದಿಂದ ವಾಪಸಾಗಿ ಅಂದು ಮಲ್ಹಾರಿರಾಯರು ವಿರಾಟ ಭವನಕ್ಕೆ ಬರು .... ದಯ ಮಾಡಿಸುವವರಿದ್ದರು. ಚರ್ಚೆ ವಾದ ವಿವಾದಗಳು ನಡೆಯುತ್ತಿದ್ದವು.

''ನಾವು ಕಣ್ಣಾರೆ ನೋಡಿದ ಹೊರತು ಯಾರ ಮಾತನ್ನು ನಂಬ್ಲೇ ಬಾರ್ದುರೀ -'' ಅಂದರು ಚೌ ಚೌ

''ಏನ್ರೀ ಹಂಗಾರೆ? ಮಲ್ಹಾರಿ ರಾಯ್ರು ಅಂತ ಹೇಳಿಕೊಂಡು ಇನ್ಯಾರಾದ್ರೂ ಬಂದಾರು ಅಂತಿರೇನು ನೀವು?'' ಬಾಳೇಕಾಯಿ ಬಜೆ ಕೇಳಿದರು.

''ನಿಮ್ಮ ತಲಿ ಕಣ್ರೀ - ಅವರು ಮುಂದೆ ಏನು ಹೇಳ್ತಾರೆ ಅದನಾದ್ರೂ ಕೇಳಿ! ಹಾಳು ಬಾಳೇಕಾಯಿ ಬಜೆ ತಿಂದೂ ತಿಂದೂ ನಿಮ್ಮ ತಲೀಲಿ ಅದೇ ತುಂಬಿದೆ'' ಅಂತ ಮೂದಲಿಸಿದರು. ಓಂ ಪುಡಿ.

ಓಂ ಅವರಿಗೂ ಬಾ.ಬ. ಅವರಿಗೂ ಇದು ದಿನ ನಿತ್ಯದ ಸಂವಾದ.

'ಬಿಡ್ರಿ - ಬ್ರೇ ನಾಗೆ ಓಂ ಪುಡಿ ತುಂಬಿಕೊಳ್ಳೋಕ್ಕಿಂತಲೂ ಬಾಳೇಕಾಯಿ ಬಜೆ ತುಂಬಿದರೆ ಮೇಲ್ರಿ! ಅವರೇನಾ ಹೇಳ್ಳಿ - ಏನ್ನಡೀತಂತ?' ಅಂದರು ಬಾ.ಬ.

''ನಾ ಹೇಳಿದ್ದು ಯಾಕಂದ್ರೆ ನಿನ್ನೆ ನಂಪಕ್ಕದ ಮನೇಗೆ ಒಬ್ಬಾತ ಒಬ್ಬಾಕಿ - ಗಂಡ ಹೆಂಡ್ತೀನೋ ಏನೋ ಸುಡುಗಾಡು - ಇಬ್ರೂ ಬಂದು. ಫಾರಿನ್‌ಸೋಪು - ಹೊಸ ಇಂಟರ್ ಡೂಸು - ಮೂರು ಡಜನ್ ಸೋಪಿಗೆ ಐವತ್ತು ರೂಪಾಯಿ ಅಂದು ಪಕ್ಕದ ಮನೆಯಾಕೆ - ಚೀಪಾಗೆ ಸಿಗ್ತೂಂತ ನೂರೈವತ್ತು ರೂಪಾಯಿ ರೊಕ್ಕ ಕೊಟ್ಟು ಒಂಭತ್ತು ಡಜನ್ ಅಂದ್ರೆ ಮೂರು ಡಜನ್ ಪ್ಯಾಕೆಟ್‌ನ ಮೂರು ಲೋಡ್ ಖರೀದಿಸಿದರ್ರಿ. ಆಮೇಲೆ ಪ್ಯಾಕೆಟ್ ಬಿಚ್ಚಿ ನೋಡ್ತಾರೆ - ಒಂದೊಂದು ಪ್ಯಾಕೆಟ್‌ನಲ್ಲೂ ಮೂರೇ ಸೋಪು. ಸೋಪಿನ ಹೆಸರು 'ಡಜನ್' ಅಂತ! ಒಟ್ಟು ಒಂಭತ್ತೇ ಸೋಪು. ಇದೇನು ನಗೋ ಮಾತಲ್ರೀ ..... ''

ಓಂ ಪುಡಿ ಒಂದು ರೀತಿ ವ್ಯಂಗ್ಯವಾಗಿ ನಕ್ಕಿದ್ದರು. ಅವರಿಗೂ ಚೌ ಚೌ ಅವರಿಗೂ ಮಾತು ಶುರು ಆಗುವ ಹೊತ್ತಿಗೆ - ಹೊರಗಡೆಯಿಂದ ಮಲ್ಹಾರಿರಾಯರ ರೋಸ್‌ವುಡ್ ಚಲಕಾಷ್ಟದ ತಾಳ ಬದ್ಧವಾದ ಶಬ್ದ ರೂಮನ್ನು ಹೊಕ್ಕಿತು.

''ರಾಯರು ಬಂದರು'' ಎನ್ನುತ್ತಾ ರೂಮೇ ಎದ್ದು ನಿಂತಿತು. ನಮಸ್ಕಾರಗಳು - ಉಭಯಕುಶಲೋಪರಿಗಳು ಮುಗಿದವು.

''ಪರುಶು - ತಕೋ, ಈ ಡಬ್ಬಿಯಲ್ಲಿ ಫೇಡಾ ಇವೆ. ಮಿತ್ರರಿಗೆ ಅವರವರ ತಿಂಡಿ ಜೊತೆಗೆ ಒಂದೊಂದು ಹಂಚು'' ಎನ್ನುತ್ತಾ ವಿರಾಟ ಭವನದ ರೂಮ್ ನಂ ಟೆನ್ - ಪರಿಚಾರಕ ಪರುಶು ಹತ್ತಿರ ಒಂದು ಪ್ಯಾಕೆಟ್ ಕೊಟ್ಟರು.

''ಓಹೋ ಹರಿದ್ವಾರದಿಂದ ಸೀ ಪೇಡಾ ತಂದಿದ್ದಾರೆ ರಾಯರು!'' ಬಾಳೇಕಾಯಿ ಬಜೆ ಕಿರ್ಲಿದರು.

ಇದಕ್ಕೆ ಓಂಪುಡಿ ಪ್ರತಿಕ್ರಿಯೆ ತೋರಿಸುವುದಕ್ಕೆ ಮೊದಲೇ ರಾಯರು ''ನಾನು ಹರಿದ್ವಾರಕ್ಕೆ ಹೋಗಿದ್ದದ್ದು ನಿಜ. ಆದರೆ ಈ ಫೇಡ ಮಧುರಾದ ಮಥುರಾನಾಥನ ಪ್ರಸಾದ'' ಅಂತ ವಿವರಿಸಿದರು.

'' ಉತ್ತರದ ಕಡೆ ಗುಡಿಗಳೇ ಮೇಲುರೀ. ನಮ್ಮ ಗುಡಿಗಳಲ್ಲೇಕೆ ಈ ರೀತಿ ಫೇಡ ಕೊಡವಲ್ಲರು?'' ಮದ್ದೂರು ವಡೆ ಪ್ರಶ್ನಿಸಿದರು.

'' ಉತ್ತರದಕಡೆ - ನಮ್ಮ ದಕ್ಷಿಣದ ಗುಡಿಗಳಲ್ಲಿರುವ ಹಾಗೆ - ಹಣ್ಣು ತೆಂಗಿನಕಾಯಿ ನೇವೇದ್ಯವಿಲ್ಲ. ನಾವೇ ಫೇಡ - ಲಡ್ಡು - ಅಥವಾ ಕಲ್ಲುಸಕ್ಕರೆ - ಅವಲಕ್ಕಿ - ನಮಗೆ ಇಷ್ಟವಾದದ್ದು - ನಮ್ಮ ಕೈಲಾದಷ್ಟು ಕೊಟ್ಟರೆ ಅದನ್ನು ದೇವರಿಗೆ ನೈವೇದ್ಯ ಮಾಡಿ ನಮಗೆ ವಾಪ್ಸು ಕೊಡುತ್ತಾರೆ. ಹಾಗಾಗಿ ಅಲ್ಲಿಯ ದೇವಸ್ಥಾನಗಳು ನಿಜಕ್ಕೂ ಶುಭ್ರವಾಗಿರುತ್ತವೆ ಅಂತ ಹೇಳಬಹುದು. ಇರಲಿ - ನಾನು ಮೂರು ವಾರ ಕಾಲ ಇರಲಿಲ್ಲ. ಏನು ವಿಶೇಷ?'' ಅಂತ ಇಡೀ ಸಭೆಯನ್ನು ಪ್ರಶ್ನಿಸಿದರು.

ಪರುಶು- ರಾಯರ ಮುಂದೆ ಖಾರದ ಗೋಡಂಬಿ ಸ್ಟ್ರಾಂಗ್ ಕಾಫಿ ತಂದಿಟ್ಟ.

''ಹೊಸಾ - ಡಿಕಾಕ್ಷನ್- ಸ್ಟ್ರಾಂಗ್ ಮತ್ತು ಹಾಟ್'' ಅಂದ.

ರಾಯರು ತಮ್ಮ ಹುಬ್ಬುಗಳಿಂದಲೇ ಸಂತಸ ತೋರಿಸಿ

''ನಿನಗೂ ಪ್ರಸಾದ ಸಿಕ್ಕಿತು ತಾನೇ ಪರುಶು?'' ಕೇಳಿದರು.

''ಸಿಕ್ಕಿತು ರಾಯರೇ'' ಅಂದ.

''ರಾಯರು ಬಂದಾಯ್ತು ಇವತ್ತು. ನಮ್ಮ ಸಮಸ್ಯೇನ ಅವರಲ್ಲಿ ಹೇಳಬಹುದಲ್ಲಾ'' ಚೌ ಚೌ ಅಂದರು.

''ಏನು ಸಮಸ್ಯೆ?'' ರಾಯರ ಪ್ರಶ್ನೆ

ಓಂ ಪುಡಿ - ಬಾಳೇಕಾಯಿ ಬಜೆ, ಮದ್ದೂರು ವಡೆ, ಚೌ ಚೌ ತೈರೊಡೆ ಬೂಂದಿ - ಆಂಬೊಂಡೆ ಅರ್ಧ ಛಾ - ಎಲ್ಲರೂ ಸೇರಿ ಆ ದಿನದ ಚರ್ಚೆ ವಿಷಯವನ್ನು ಮಲ್ಹಾರಿರಾಯರಿಗೆ ತಿಳಿಸಿದರು.

''ತುಂಬಾ ಘನವಾದ ವಿಷಯ. ನಿಜ ಹೇಳಬೇಕೆಂದರೆ ನಾನೂ ನಿಮಗೆ ಒಂದು ಅತೀ ನೂತನ ವಿಷಯ ಹೇಳಬೇಕೆಂದಿದ್ದೆ. ಒಬ್ಬ ಮನುಷ್ಯ - ಅಂದರೆ ಮಾನವ ಪ್ರಾಣಿ - ತಾನು ಕಾಲವಾದ ನಂತರ ತನ್ನ ಸ್ನೇಹಿತನನ್ನು ಹುಡುಕಿಕೊಂಡು ಬಂದಿದ್ದನೆಂದು ಹೇಳಿದರೆ ನಂಬುತ್ತೀರಾ?''

ರಾಯರ ಪ್ರಶ್ನೆ ರೂಮ್ ನಂಬರ್ ಹತ್ತರ ತಲೆಯೊಳಗೆ ಪ್ರವೇಶಿಸಲು ಕೆಲವು ಕ್ಷಣಗಳು ಬೇಕಾದವು. ಪ್ರಾಯಶಃ ರಾಯರು ಹ್ಯಾಲಿಯನ್ನೂ ಅವನ ಧೂಮಕೇತುವನ್ನೂ ಒಟ್ಟಿಗೆ ರೂಮಿಗೆ ಕರೆದುಕೊಂಡು ಬಂದಿದ್ದರೂ ರಾಯರ ಮಿತ್ರರು ಅಷ್ಟು ಅವಾಕ್ಕಾಗುತ್ತಿರಲಿಲ್ಲ. ಕಡೆಗೆ ಬಾಳೇಕಾಯಿ ಬಜೆ - ಮೌನವನ್ನ ಮುರಿಯ ಬೇಕಾಯ್ತು.

''ನನ್ನ ಕನಸಿನಲ್ಲಿ ಐದಾರು ಬಾರಿ ಪ್ರಾಣ ದೇವರು ಬಂದಿದಾನ್ರೀ - ನಿಜಕ್ಕೂ!

ನೀವೇನ್ಹೇಳ್ತೀರಿ?'' ಅಂದರು.

''ಬಂದು ನಿಮ್ಮ ಬಾಯಲ್ಲಿ ಬಾಳೇಕಾಯಿ ಬಜೆ ತುರುಕಿ ಹೋಗ್ತಿದ್ದ ಪ್ರತಿಬಾರಿಯೂ - ಹೌದಲ್ಲೋ ತೆಪ್ಪಗೆ ಕೂಡ್ರಿ - ರಾಯರ ಅನುಭವ ಕೇಳೋಣ'' ಅಂದರು ಓಂ ಪುಡಿ.

''ದೆಹಲಿಯಲ್ಲಿ ನನ್ನ ಸೋದರಳಿಯ ಇದ್ದಾನೆ. ಅವನ ಸ್ನೇಹಿತನಿಗಾದ ಅನಭವ ತುಂಬಾ ವಿಚಿತ್ರ''

ಮಲ್ಹಾರಿರಾಯರ ಮಾತು ಎಲ್ಲರ ಕುತೂಹಲವನ್ನು ಕೆರಳಿಸಿತು. ಅವರ ಅಪಾರ ಬಂಧು ವರ್ಗ - ಎಲ್ಲರ ಕಣ್ಣ ಮುಂದೆ ಕುಣಿದಾಡಿತು.

''ಸೋದರಳಿಯ - ಅಂದರೆ - '' ಚೌ ಚೌ ಶುರು ಮಾಡಿದರು.

''ಶಾಂತಾರಾಮ'' ಬಾ. ಬ. ಸೂಚಿಸಿದರು

''ಶಾಂತಾರಾಮ - ನನ್ನ ಅಣ್ಣನ ಮಗ''

''ಚಿದಂಬರ ರಾವೇ?'' ಮದ್ದೂರು ವಡೆ ಪ್ರಶ್ನಿಸಿದರು

''ಚಿದಂಬರ - ನನ್ನ ಸಹೋದರ''

''ಹಾ - ಏಕಾಂಬರ'' ಓಂ ಪುಡಿ

''ನನ್ನ ಭಾವ ಮೈದುನನ ಮಗ''

''ಹಾಗಾದರೆ - ಕೋದಂಡ'' ಖಾರಾ ಬೂಂದಿ

''ನನ್ನ ದೊಡ್ಡ ಮೈದುನ''

''ದಯಾನಂದನಿರಬೇಕು - '' ತೈರೊಡೆ ಬೂಂದಿ

''ದಯಾನಂದ ನನ್ನಾಕೆಯ ಸೋದರಮಾವ ಬಾಂಬೆ ಪಟ್ಟಾಭಿ ರಾಮರಾಯರ ಅಳಿಯ .....''

''ರಾಯರೇ ನನಗೀಗ ನೆನಪಿಗೆ ಬಂತು - ನಿಮ್ಮ ಸೋದರಳಿಯ ಗುಣಶೇಖರ ಹೌದಲ್ಲೋ?'' ಗೆದ್ದವರಂತೆ ಅಂದರು ಬಾಳೇಕಾಯಿ ಬಜೆ

''ನಿಮ್ಮ ತಲಿ ಕಣ್ರೀ -'' ಓಂ ಪುಡಿ ಶುರು ಮಾಡಿದ್ದರು.

''ಗುಣಶೇಖರ - ನನ್ನ ತಮ್ಮ ಚಿದಂಬರನ ಮೈದುನನ ಸ್ನೇಹಿತ - ಅದಿರಲಿ - ನೀವೆಲ್ಲರೂ ನನ್ನ ಕುಟುಂಬ ಮತ್ತು ಸಂಬಂಧೀಕರ ಬಗ್ಗೆ ಇಷ್ಟು ಮುತುವರ್ಜಿ ವಹಿಸಿಕೊಂಡಿರುವುದು ತುಂಬಾ ಮೆಚ್ಚತಕ್ಕದು. ನನ್ನಲ್ಲಿ ನಿಮಗೆಷ್ಟು ಅಭಿಮಾನವಿದೆ ಅಂತ ವೇದ್ಯವಾಗುತ್ತದೆ. ನಾನು ಹೇಳಿದ್ದು - ನನ್ನ ಸೋದರಳಿಯ - ಅಶ್ವಿನಿ ಕುಮಾರನ ಸ್ನೇಹಿತ ಹರ್ಷನ ಬಗ್ಗೆ ..''

ಪರುಶು ಅಷ್ಟರಲ್ಲಿ ಎಲ್ಲರಿಗೂ ಎರಡನೇ ಸುತ್ತು ತಿಂಡಿ, ಕಾಫಿ ಯಾ ಚಹಾ - ಸರಬರಾಜು ಮಾಡಿ ಮಲ್ಹಾರಿ ರಾಯರ ಹಿಂದೆ ಕೈಕಟ್ಟಿಕೊಂಡು ನಿಂತ.

ನನ್ನ ಸೋದರಳಿಯ ಅಶ್ವಿನಿ ಕುಮಾರ (ಮಲ್ಹಾರಿರಾಯರು ಶುರು ಮಾಡಿದರು) ಮತ್ತು ಹರ್ಷ ಒಂದೇ ಕಂಪೆನಿಯಲ್ಲಿ ಕೆಲ್ಸ ಮಾಡುತ್ತಿದ್ದಾರೆ. ಹರ್ಷನನ್ನು ನಾನು ಬಲ್ಲೆ. ಬಿ. ಎ. ಡಿಗ್ರಿ ಪಡೆದಿದ್ದಾನೆ. ಡಿಗ್ರಿ ಪಟ್ಟಕ್ಕೆ - ಸೈಕಾಲಜಿ - ಅಂದರೆ ಮನಶ್ಶಾಸ್ತ್ರ ಆಯ್ಕೆ ಮಾಡಿಕೊಂಡಿದ್ದ. ಅನೇಕ ಬಾರಿ ನನ್ನೊಂದಿಗೆ ಕನಸುಗಳ ಬಗ್ಗೆ ಭೂತ ದೆವ್ವಗಳ ಬಗ್ಗೆ ಮಾತನಾಡಿದ್ದ. ನಾನು ಫ್ರಾಯ್ಡನ ಎಲ್ಲಾ ಪುಸ್ತಕಗಳನ್ನೂ ಓದಿದ್ದೆನಾದ್ದರಿಂದ ಹರ್ಷನೊಂದಿಗೆ ಮಾತನಾಡಲು ನನಗೆ ತುಂಬಾ

ಸಂತೋಷವಾಗುತ್ತಿತ್ತು.

ಕಳೆದ ವರ್ಷ ಮಾರ್ಚಿ ಮೂವತ್ತೊಂದನೇ ತಾರೀಖು ಹರ್ಷನಿಗೆ ಚೆನ್ನಾಗಿ ನೆನಪಿನಲ್ಲಿರುವ ದಿನ. ಕಾರಣ ಅದು ಅವನ ತಿಂಗಳ ಸಂಬಳದ ದಿನ. ತನ್ನ ಪಿ. ಎಫ್ ಹಾಗೂ ಕ್ಯಾಂಟೀನ್ ಖರ್ಚು ಜಾತಾ ಅವನಲ್ಲಿ ಒಂದು ಸಾವಿರದ ಏಳುನೂರು ಮುವತ್ತು ರೂಪಾಯಿ ನಲವತ್ತು ಪೈಸೆಗಳನ್ನು ತನ್ನ ಪ್ಯಾಂಟ್ ಜೇಬಿನಲ್ಲಿಟ್ಟುಕೊಂಡು ಬಾಕಿ ಸಾವಿರದ ಏಳುನೂರ ಇಪ್ಪತ್ತೈದು ರೂಪಾಯಿಗಳನ್ನು ತನ್ನ ಕೋಟಿನ ಒಳ ಜೇಬಿನಲ್ಲಿಟ್ಟು ಕೊಂಡಿದ್ದ. ಇವೆಲ್ಲಾ ಚೆನ್ನಾಗಿ ಅವನಿಗೆ ಜ್ಞಾಪಕ - ಏಕೆಂದರೆ ಇತರೇ ಜೇಬುಗಳು ಖಾಲಿ ಇದ್ದವು. ಹರ್ಷ ತನ್ನ ಕಂಪೆನಿಯಿಂದ ವಾಪ್ಸು ಮನೆಗೆ ಬರುವಾಗ ತನ್ನ ಇನ್ನೊಬ್ಬ ಸ್ನೇಹಿತ ಸೀಗೇ ಹಳ್ಳಿ ನರಸಿಂಪನ ರೂಮು ಹೊಕ್ಕ. ನರಸಿಂಹನನ್ನು ನಾನು ಬಲ್ಲೆ. ನಮ್ಮ ಅಶ್ವಿನಿ ಜೊತೆ ಒಮ್ಮೆ ಅವನ ಆರ್ಕೆಸ್ಟ್ರಾಕ್ಕೆ ಹೋಗಿದ್ದೆ. ಎಸ್. ಎಸ್. ಎಲ್. ಸೀ ಲಿ ಏಳು ಬಾರಿ ಫೆಯಿಲ್ ಆಗಿ ಕಡೆಗೆ ಝುನಕ್ ಝುನಕ್ ಆರ್ಕೆಸ್ಟ್ರಾಲಿ ಟ್ರಯಾಂಗಲ್ ಬಾರಿಸುವ ವಾದ್ಯಗಾರನಾಗಿದ್ದ.

ಹರ್ಷನನ್ನು ಕಂಡವನೇ ನರಸಿಂಹ ತುಂಬಾ ಆದರದಿಂದ ಸ್ವಾಗತಿಸಿದ, ಇಬ್ಬರೂ ಹರ್ಷನ ಖರ್ಚಿನಲ್ಲಿ ಸನ್‌ವ್ಯೂ ಕೆಫೇಲಿ ತಿಂಡಿ ಕಾಫಿ ಸೇವಿಸಿದೆವು.

''ಹರ್ಷ - ನಿನ್ನೆ ರಾತ್ರಿ ಶಂಭೂನ ನೊಡಿದ್ದೆ''

ಕಾಫಿ ಕುಡಿದು - ಬೇರರ್ ತಂದ ಬಿಲ್ ಮೇಲೆ ಹರ್ಷ ದುಡ್ಡಿಟ್ಟ ತಕ್ಷಣ ಅವನ ಕಿವಿಗಳಿಗೆ ಈ ಮಾತು ಕೇಳಿಸಿತು.

''ನರಸಿಂಹ - ಏನಂದೆ?''

''ನಿನ್ನೆ ರಾತ್ರಿ ಶಂಭೂನ ನೋಡಿದ್ದೆ'' ಅಂದ ನರಸಿಂಹ. ಹರ್ಷ ಸ್ತಂಭೀಭೂತನಾದ. ಶಂಭು ಹರ್ಷ ಮತ್ತು ನರಸಿಂಹ ಮೂವರೂ ಆತ್ಮೀಯ ಗೆಳೆಯರು. ಕ್ರೀಡಾ ಸಹಪಾಟಿಗಳು. ಹಿಂದಿನ ವರ್ಷ ಶಂಭು ಸ್ಕೂಟರ್ ಅಪಘಾತದಲ್ಲಿ ಸತ್ತಿದ್ದ. ನರಸಿಂಹನ ಮಾತು ಕೇಳಿ ಹರ್ಷ ಒಂದು ಬಾರಿ ಅವನ ಹಣೆಮುಟ್ಟಿ ನೋಡಿ ಅವನಿಗೆ ಜ್ವರ ಬಂದಿಲ್ಲವೆಂದು ಖಚಿತ ಮಾಡಿಕೊಂಡ.

''ನರಸಿಂಹ - ಶಂಭೂನ ನಿಜವಾಗಿ ನೋಡಿದೆಯಾ?'' ಎಂದು ಹರ್ಷ ದಿಗ್ಭ್ರಮೆಯಿಂದ ಕೇಳಿದ

''ಸತ್ಯವಾಗಿ ನಿನ್ನೆ ರಾತ್ರಿ ನನ್ನ ರೂಮಿನಲ್ಲಿ ನನ್ನ ಟೇಬಲ್ ಬಳಿ ಕೂತಿದ್ದ''.

''ಟೇಬಲ್ ಬಳಿ ಅಂದರೆ ಮೇಲೋ ಕೆಳಗೋ ಪಕ್ಕದಲ್ಲೋ'' ಹರ್ಷ ಪತ್ತೇದಾರ ಪುರುಷೋತ್ತಮನ ರೀತಿಯಲ್ಲಿ ಕೇಳಿದ.

''ಮೊದಲು ಟೇಬಲ್ ಪಕ್ಕದಲ್ಲಿದ್ದ. ಆಮೇಲೆ ಟೇಬಲ್ ಏರಿದ ಹಾಗಾಯ್ತು''

''ಅಂದರೆ''

''ನನಗೆ ಭಯವಾಗಿ ಕಣ್ಣು ಮುಚ್ಚಿದೆ''

''ಛೇ ಫಿರಕಿ! ಎಂತಹ ಅವಕಾಶ ಕಳೆದುಕೊಂಡೆ? ಆಮೇಲೆನಾಯ್ತು ಹೇಳು!''

''ನರಸಿಂಹ - ಅಂತ ಕರೆದ ಹಾಗಾಯು''

''ಶಂಭು ಮಾತನಾಡಿದನೆ?''

''ಹೌದು ಅವನ ಕಣ್ಣಲ್ಲಿ ನೀರು ಸುರಿಯುತ್ತಿತ್ತು. ನಾನೂ ಅತ್ತ ಹಾಗೆ ಜ್ಞಾಪಕ''

ಹರ್ಷನಿಗೆ ಕುತೂಹಲ ತಡೆಯಲಾಗಲಿಲ್ಲ.

''ಮತ್ತೇನಾಯ್ತು ಹೇಳು ನರಸಿಂಹ?''

''ನರಸಿಂಹ - ನನಗೆ ಐವತ್ತು ರೂಪಾಯಿ ಬೇಕು ಕೊಡ್ತೀಯಾ?'' ಅಂತ ಕೇಳಿದ ಹಾಗಾಯ್ತು.

''ಕೊಟ್ಯೋ ಇಲ್ವೋ!''

''ಹರ್ಷ - ನನ್ಹತ್ರ ಇದ್ದಿದ್ದರೆ ಐವತ್ತೇನು - ಐನೂರು ರೂಪಾಯಿ ಕೇಳಿದ್ದರೂ ಕೊಟ್ತರಲಿಲ್ಲವೆ?''

ನರಸಿಂಹನ ಮಾತು ಕೇಳಿ ಹರ್ಷನ ಕುತೂಹಲ ಕೆರಳಿತು. ತಾನೊಬ್ಬ ಸೈಕಾಲಜಿಸ್ಟ್ ಆಗಿದ್ದಿದ್ದರಿಂದ - ನರಸಿಂಹನ ಅನುಭವದಲ್ಲಿ ಆಸಕ್ತಿ ಮೂಡಿತು. ಯಾವುದೋ ಶಕ್ತಿಯಿಂದ ನರಸಿಂಹ ಜಗತ್ತಿಗೂ ಬಾಹ್ಯ ಜಗತ್ತಿಗೂ ಸಂಪರ್ಕ ಮಾಡಿಕೊಂಡಿದ್ದಾನೆಂದು ಅವನಿಗೆ ಸ್ಪಷ್ಟವಾಯ್ತು.

''ನರಸಿಂಹ - ಈಗ ನನ್ನಲ್ಲಿ ಹಣವಿದೆ. ಐವತ್ತು ರೂಪಾಯಿ ಕೊಡಬಲ್ಲೆ. ಆದರೆ ಶಂಭುವಿಗೆ ಹೇಗೆ ಸಲ್ಲಿಸುತ್ತೀ? ಅಂದ ಹಾಗೆ - ಅವನು ಹೇಗಿದ್ದ?

ಅವನು ನಿನ್ನನ್ನು ಮುಟ್ಟಿದನೆ?''

''ಹರ್ಷ ನೀನು ಸೈಕಾಲಜೀನೋ ಪ್ಸೆಕಾಲಜೀನೋ ಓದಿದೋನು. ನನಗೇನೂ ಗೊತ್ತಾಗಲಿಲ್ಲ. ಶಂಭು ಒಂದು ರೀತಿ ನೆಗೆಟಿವ್‌ನಲ್ಲಿದ್ದ ಹಾಗಿದ್ದ. ನನ್ನಲ್ಲಿ ಹಣವಿದ್ದಿದ್ದರೆ ಟೇಬಲ್ ಮೇಲೆ ಐವತ್ತು ರೂಪಾಯಿಟ್ಟು ಬಿಡುತ್ತಿದ್ದೆ''

ನರಸಿಂಹನ ಮಾತು ಕೇಳಿ ಹರ್ಷನಿಗೆ ಕನಿಕರ ಹುಟ್ಟಿತು. ತನ್ನ ಕೋಟಿನ ಒಳಭಾಗದಿಂದ ಹಣ ತೆಗೆದು ಐವತ್ತು ರೂಪಾಯಿಗಳನ್ನು ಎಣಿಸಿ ನರಸಿಂಹನ ಕೈಲಿಟ್ಟ.

''ನರಸಿಂಹ - ಶಂಭುವಿಗೆ ಬಾಹ್ಯ ಜಗತ್ತಿನಲ್ಲಿ ಏನೋ ತೊಂದರೆಯಾಗಿರಬೇಕು. ನಮ್ಮಿಬ್ಬರನ್ನು ಬಿಟ್ಟರೆ ಅವನಿಗೆ ಬೇರೆ ಯಾರಿದ್ದರು? ನೀನು ಈ ರಾತ್ರಿ ಈ ಹಣವನ್ನು ಟೇಬಲ್ ಮೇಲಿಟ್ಟು ಮಲಗು. ಪೂರ್ತಿ ಕತ್ತಲಿರಲಿ. ರಾತ್ರಿ ಏನು ನಡೆಯಿತು ಅಂತ ನಾಳೆ ನನಗೆ ತಿಳಿಸು.

ನರಸಿಂಹ ಒಪ್ಪಿ ಹರ್ಷನಿಂದ ಹಣ ಪಡೆದು ಅವನನ್ನು ಬೀಳ್ಕೊಟ್ಟ.

ಆ ರಾತ್ರಿ ಹರ್ಷನಿಗೆ ನಿದ್ರೆ ಹತ್ತಲಿಲ್ಲ. ಶಂಭು - ನರಸಿಂಹನನ್ನೇಕೆ ಭೇಟಿ ಮಾಡಿದ? ನನ್ನಾದರೂ ಭೇಟಿ ಮಾಡಬಾರದಿತ್ತೆ! ಎಂದು ಕೊಂಡ. ಮರುದಿನ ತನ್ನ ಕಂಪೆನಿ ಕೆಲಸಗಳನ್ನು ಹಾಗೂ ಹೀಗೂ ಮುಗಿಸಿ ಹರ್ಷ ಸಂಜೆ ನರಸಿಂಹನ ರೂಮು ಹೊಕ್ಕ.

''ಏನು ಸಮಾಚಾರ ನರಸಿಂಹ?'' ಆತುರದಿಂದ ಕೇಳಿದ

''ನನಗೊಂದು ಅರ್ಥವಾಗೊಲ್ಲ ಹರ್ಷ''

''ಶಂಭು ಬಂದಿದ್ದನೆ?''

'' ಒಂದು ಬಾರಿ ಟೇಬಲ್ ಅಲುಗಾಡಿದ ಶಬ್ದವಾಯ್ತು. ತಕ್ಷಣ ಎದ್ದು ಲೈಟ್ ಹಾಕಿದೆ. ಶಂಭು ಇರಲಿಲ್ಲ. ನಾನಿಟ್ಟಿದ್ದ ಹಣವೂ ಇರಲಿಲ್ಲ.

''ನರಸಿಂಹ - ನೀನೊಬ್ಬ ಪೆದ್ದ ಕಣೋ! ಅದು ನಿಜವಾಗಿ ಶಂಭು ಕೆಲಸವೇ. ನೀನು ಅವಸರದಲ್ಲಿ ದೀಪ ಆನ್ ಮಾಡಬಾರದಿತ್ತು. ಈ ಬಾರಿ ಅವನು ಎಥೀರಿಯಲ್ ಆಗಿ

ಬಂದಿದ್ದಾನೆ ಅಷ್ಟೆ''

ನರಸಿಂಹ ನಿಬ್ಬೆರಗಾಗಿ ಹರ್ಷನ ಮುಖವನ್ನೇ ನೋಡುತ್ತ ನಿಂತ. ಅವನಿಂದ ಮಾತೇ ಹೊರಡಲಿಲ್ಲ.

''ನರಸಿಂಹ - ಯಾರ ಅದೃಷ್ಟವೋ ಈಗ ನಾವು ಅಂದರೆ ಮುಖ್ಯವಾಗಿ ನೀನು ಅನಿರೀಕ್ಷಿತವಾಗಿ ಬಾಹ್ಯ ಜಗತ್ತಿನೊಂದಿಗೆ ಸಂಪರ್ಕ ಸಂಪಾದಿಸಿದ್ದಿ. ಹೆದರಬೇಡ. ಇನ್ನು ಮುಂದೆ ನಿನಗೆ ನಾಲ್ಕು ಕಣ್ಣು ನಾಲ್ಕು ಕಿವಿಗಳಿರಲಿ. ಪುನಃ ಶಂಭುವಿನ ಭೇಟಿಯಾದರೆ ತಕ್ಷಣ ತಿಳಿಸು''

ಹರ್ಷನ ಖರ್ಚಿನಲ್ಲಿ ತಿಂಡಿ ಕಾಫಿ ಸೇವನೆಯ ನಂತರ ಭೇಟಿ ಮುಕ್ತಾಯವಾಯ್ತು. ಮುಂದೆ ಮೂರು ದಿನಗಳು - ಕೇವಲ ನರಸಿಂಹ ಹರ್ಷರ ಭೇಟಿ ಮಾಮೂಲು ತಿಂಡಿ ಕಾಫಿ ಹರ್ಷನದೇ ಖರ್ಚು ಇವುಗಳಲ್ಲೇ ಮುಗಿದವು. ನಾಲ್ಕನೇ ಅಥವಾ ಐದನೇ ದಿನವಿದ್ದರೂ ಆದೀತು - ಸಂಜೆ ಹರ್ಷನಿಗೆ ನರಸಿಂಹನಿಂದ ಒಂದು ವಿಶೇಷ ವರದಿ ಸಿಕ್ಕಿತು.

''ನಿನ್ನೆ ರಾತ್ರಿ ಶಂಭುವನ್ನು ನೋಡಿದೆ. ನನ್ನನ್ನು ಮುಟ್ಟಿದ'' ಅಂದ ನರಸಿಂಹ.

ಹರ್ಷನಿಂದ ಮಾತು ಹೊರಡಲಿಲ್ಲ. ಅವಾಕ್ಕಾಗಿ ಸ್ನೇಹಿತನನ್ನೇ ನೋಡುತ್ತ ನಿಂತ.

''ಶಂಭು ನನ್ನ ತಲೆ ಸವರಿದ''

ಹರ್ಷ ಎಚ್ಚೆತ್ತ.

''ಮಾತನಾಡಿದನೇ?''

''ಶಂಭು ಮಾತಾಡಲಿಲ್ಲ. ನನ್ನ ತಲೆ ಸವರುತ್ತಾ ಅಳುತ್ತಿದ್ದ. ನಾನೂ ಅಳುತ್ತಿದ್ದೆ. ರಾತ್ರಿ ಹೇಗೆ ಕಳೆಯಿತೋ ಗೊತ್ತಿಲ್ಲ. ಬೆಳಗಾಗುವ ಹೊತ್ತಿಗೆ ಶಂಭು ಇರಲಿಲ್ಲ. ನನಗ್ಯಾವಾಗಲೋ ಜಂಪು ಹತ್ತಿರಬೇಕು. ನಾನು ಎಚ್ಚರಗೊಂಡಾಗ ನನ್ನ ತಲೆ ಕೆಳಗೆ ಈ ಚೀಟಿ ಇತ್ತು''

ನರಸಿಂಹ - ಹರ್ಷನ ಕೈಗೆ ಒಂದು ಕಾಗದದ ತುಂಡು ಕೊಟ್ಟ. ಅದನ್ನು ನೋಡಿ ಹರ್ಷ ಅವಾಕ್ಕಾದ. ಕಪ್ಪು ಬಣ್ಣದ ಕಾಗದ. ಅದರ ಮೇಲೆ ಹಳದಿ ಬಣ್ಣದ ಅಕ್ಷರಗಳು! ಹರ್ಷ ಓದಿದ - ಐವತ್ತು - 50 ಅಂತ ಅಕ್ಷರ ಮತ್ತು ಅಂಕೆಯಲ್ಲಿ ಬರೆದಿತ್ತು.

''ನರಸಿಂಹ ಈಗ ಸರಿಯಾಗಿ - ಸ್ವಲ್ಪ ಕಷ್ಟಪಟ್ಟು ನೆನಪು ಮಾಡಿಕೊ ಶಂಭು ಯಾವ ರೂಪದಲ್ಲಿ ಬಂದಿದ್ದ?

''ಹರ್ಷ ನಾನು ನಿನ್ನಷ್ಟು ಓದಿದವನಲ್ಲ. ನಾನೂ ಓದಿ ನಿನ್ನಂತೆ ಸೈಕಾಲಜಿ ಬಿ. ಎ. ಪಾಸು ಮಾಡಬಾರದಿತ್ತೇ? ಅಂತ ತುಂಬಾ ನೊಂದುಕೊಳ್ಳುತ್ತಿದ್ದೇನೆ ಶಂಭು ಇದ್ದೂ ಇಲ್ಲದ ಹಾಗಿದ್ದ. ಅವನ ಮುಖದ ಮೇಲೆ ಗಡ್ಡವಿತ್ತು. ಪ್ರಾಯಶಃ ಅವನು ಸತ್ತ ಮೇಲೆ ಸಲ್ಫ್ ಷೇವ್ ಮಾಡಿಕೊಂಡೇ ಇರಲಿಲ್ಲ.''

ನರಸಿಂಹನ ಮುಗ್ಧತೆಗೆ ಹರ್ಷ ಮರುಕಪಟ್ಟ.

''ನರಸಿಂಹ - ಶಂಭು ಏನೋ ತೊಂದರೆಯಲ್ಲಿದ್ದಾನೆ. ಸಧ್ಯ ನನ್ನ ಸಂಬಳದ ಹಣ ಇನ್ನೂ ಖರ್ಚಾಗಿಲ್ಲ. ತಕೋ ಈ ಐವತ್ತು ರೂಪಾಯಿ - ಪುನಃ ಟೇಬಲ್ ಮೇಲಿಡು ಟೇಬಲ್‌ನ ರೂಮಿನ ಮಧ್ಯದಲ್ಲಿ ಕಿಟಕಿಯಿಂದ ದೂರವಿಡು. ನಾಳೆ ನನಗೆ ಹೇಳು''

ಐದು ದಿನಗಳು ಕಳೆದವು. ಪ್ರತಿ ಸಂಜೆ ಹರ್ಷ ಆಕ್ಸಫರ್ಡ್ ಲೈಬ್ರರಿಗೆ ಹೋಗಿ ಸೈಕಾಲಜಿ ಡ್ರೀಮ್ಸ್ ಇ. ಎಸ್. ಪಿ. ಫ್ರಾಯ್ಡ್ ಇಂತಹ ಪುಸ್ತಕಗಳನ್ನೆಲ್ಲಾ ತಿರುವಿ ಹಾಕಿ - ನರಸಿಂಹ - ಶಂಭು

ಇವರುಗಳ ಮಧ್ಯೆ ಏರ್ಪಟ್ಟಿದ್ದ ಅಪೂರ್ವ ಸಂಪರ್ಕ, ಅದರ ಕಾರಣ, ಪರಿಣಾಮ, ಇವುಗಳ ಬಗ್ಗೆ ವಿಶೇಷ ಮಾಹಿತಿಗಾಗಿ ಹುಡುಕಿದ. ಆರನೆಯ ದಿನ ಹರ್ಷ ತುಂಬಾ ಹರ್ಷ ಚಿತ್ತನಾಗಿ ಎದ್ದಿದ್ದ. ತನ್ನ ಐದು ದಿನಗಳ ಅಧ್ಯಯನದಿಂದ ಇಂದ್ರಿಯಾತೀತ ಅನುಭವದ ಬಗ್ಗೆ ಸಾಕಷ್ಟು ಜ್ಞಾನ ಸಂಪಾದಿಸಿದ್ದ. ಆದಿನ ಸಂಜೆ ನರಸಿಂಹನನ್ನು ಭೇಟಿ ಮಾಡಬೇಕೆಂದು ನಿರ್ಧರಿಸಿದ. ಹರ್ಷನ ಮನಸ್ಸಿನಲ್ಲಿ ನರಸಿಂಹ ಮಾನವ ಸಹಜವಾದ ಸಂಕೋಚದಿಂದ ತಾನೇ ಬಂದು ಭೇಟಿ ಮಾಡಿರಲಾರ ಎಂದುಕೊಂಡ. ಕೆಲ್ಸ ಮುಗಿಸಿ - ಹರ್ಷ ಇನ್ನೇನು ಹೊರಡಬೇಕು ನರಸಿಂಹ ಹರ್ಷದ ಮುಂದೆ ಪ್ರತ್ಯಕ್ಷನಾದ.

''ಹರ್ಷ - ನನಗೂ ಶಂಭುವಿಗೂ ನೇರ ವ್ಯವಹಾರ ಶುರುವಾಯ್ತು'' ಎನ್ನುತ್ತಾ ನರಸಿಂಹ ಒಂದು ಪ್ಲಾಸ್ಟಿಕ್ ಚೀಲದಿಂದ ಒಂದು ಕಾಗದ ಮತ್ತು ಒಂದು ಪೊಟ್ಟಣ ಹೊರತೆಗೆದು ಹರ್ಷನ ಟೇಬಲ್ ಮೇಲಿಟ್ಟ.

''ಷಹಭಾಸ್ ನರಸಿಂಹ - ಏನಿದು?''

''ನೀನೇ ತೆರೆದು ನೋಡು'' ಅಂದ ನರಸಿಂಹ.

ಹರ್ಷ ಕಾಗದ ಬಿಚ್ಚಿದ. ಕಪ್ಪು ಕಾಗದ ಅದರಲ್ಲಿ ಹಳದಿ ಬಣ್ಣದ ಬರಹ. ಹರ್ಷ ಪೊಟ್ಟಣ ಬಿಚ್ಚಿದ. ಅದರಲ್ಲಿ ತ್ರಿಕೋಣಕಾರದ ಪೇಡಗಳು.

ನರಸಿಂಹ ಒಂದು ಪೇಡ ತೆಗೆದು ಹರ್ಷನ ಬಾಯಿಗೆ ತುರುಕಿದ.

''ಓ - ಸ್ವೀಟ್! ಕೇಸರಿ ಪಚ್ಚಕರ್ಪೂರ ಘಮಲು ಏನಿದು?'' ಹರ್ಷ ಆಶ್ಚರ್ಯ ಚಕಿತನಾಗಿ ಕೇಳಿದ.

''ಪ್ರಾಯಶಃ..... ಹರ್ಷ ..... ನನಗನ್ನಿಸುತ್ತೆ ಇವು ಬಾಹ್ಯ ಲೋಕದ ದೇವರ ಪ್ರಸಾದ. ನಿನ್ನೆ ರಾತ್ರಿ - ನನ್ನ ತಲೆಯ ಹತ್ತಿರ ಪ್ರಾಯಶಃ ಶಂಭು ಬಂದು ಇಟ್ಟಿರಬೇಕು. ಕಾಗದ ನೋಡು - ಅದೇ ಬಣ್ಣ....''

''ನರಸಿಂಹ ಸಂಶಯವೇ ಇಲ್ಲ. ಈ ಪ್ರಪಂಚದಲ್ಲಿ ಈ ರೀತಿ ತ್ರಿಕೋಣಾಕಾರದಲ್ಲಿ ಪೇಡ ಮಾಡಿವವರ್‍ಯಾರು? ಕಾಗದದಲ್ಲೇನಿದೆ ನೋಡಿದೆಯಾ?''

''ನೋಡಿದೆ ಹರ್ಷ - ನನಗೇನೂ ಅರ್ಥವಾಗಲಿಲ್ಲ. ....''

ಹರ್ಷ ಕಾಗದವನ್ನು ಸರಿಯಾಗಿ ಹರಡಿ ಸೂಕ್ಷ್ಮವಾಗಿ ಪರಿಶೀಲಿಸಿದ. ಒಂದು ಕಡೆ ಅಂಕಿಯಲ್ಲಿ 500 (ಐನೂರು) ಎರಡು ಬರೆದಿತ್ತು. ಕಾಗದದ ಮಧ್ಯದಲ್ಲಿ ಮೂರು ವಿಗ್ರಹಗಳು ಮನುಷ್ಯಾಕಾರದವು - ಇದ್ದವು. ಆ ಸಂಜೆ ನರಸಿಂಹನ ರೂಮಿನವರಿಗೂ ಇಬ್ಬರೂ ನಡೆದು ಬಂದು ಸನ್‌ವ್ಯೂಲಿ ತಿಂಡಿ ಕಾಫಿ - ಹರ್ಷನ ಖರ್ಚಿನಲ್ಲಿ ಸೇರಿಸಿ ಅಗಲಿದರು.

''ನರಸಿಂಹ ನಾನು ಈ ಕಾಗದದ ಸಂದೇಶವನ್ನು ಆಳವಾಗಿ ಯೋಚಿಸಿ ಹೇಳುತ್ತೇನೆ. ಅವನಿಂದ ಮತ್ತೆ ಬರುವ ಸಂದೇಶಗಳನ್ನು ನನ್ನಲ್ಲಿ ತೆಗೆದುಕೊಂಡು ಬಾ''. ಅಂತ ಹೇಳಿದ್ದ - ಹರ್ಷ.

ಎರಡು ದಿನಗಳ ನಂತರ ನರಸಿಂಹ ಶಂಭುವಿನ ಮತ್ತೊಂದು ಅದೇ ಕಪ್ಪು ಕಾಗದ ಹಳದಿ ಬರಹ ಸಂದೇಶ ತಂದ. ಅದರಲ್ಲಿ ಒಂದು ಸಾವಿರ - ಐನೂರು - ಮುನ್ನೂರು - ನೂರೈವತ್ತು - (1000 - 500 - 300 - 150) ಅಂಕಿಗಳಲ್ಲಿ ಬರೆದು - ಐನೂರನ್ನು ಬಿಟ್ಟು ಮಿಕ್ಕ ಅಂಕಿಗಳನ್ನು

ಹೊಡೆದು ಹಾಕಿ ಪುನಃ ಮೂರು ಮನುಷ್ಯರ ಚಿತ್ರಗಳನ್ನೂ - ಒಂದು ಏರೋಪ್ಲೇನ್ ಚಿತ್ರವನ್ನೂ ಬರೆದಿತ್ತು.

''ನರಸಿಂಹಾ! ''ಹರ್ಷ ಕೂಗಿಕೊಂಡ.

ಪ್ರಾಯಶಃ ನೀವು ಆರ್ಕಿಮಿಡೀಸ್ ಹೆಸರನ್ನು ಕೇಳಿರಬಹುದು. ನಮ್ಮ ಭಾಸ್ಕರಾಚಾರ್ಯರ ತರಹ ಗ್ರೀಸ್ ದೇಶದ ಮಹಾ ಮೇಧಾವಿ. ಒಮ್ಮೆ ಅವನಿಗೆ ಆ ರಾಜ್ಯದ ರಾಜನು ಕೊಟ್ಟ ಸಮಸ್ಯೆಗೆ ಪರಿಹಾರ ಅವನ ಮನಸ್ಸಿಗೆ ಹೊಳೆದ ತಕ್ಷಣ ಯೂರೆಕಾ! ಅಂತ ಕಿರುಚುತ್ತ ಸ್ನಾನದಲ್ಲಿದ್ದವನು ಹಾಗೇ ಬೆತ್ತಲೆಯಾಗೇ ಅರಮನೆಗೆ ಓಡಿದ್ದನಂತೆ.

ಸಧ್ಯ ಹರ್ಷ - ಆರ್ಕಿಮಿಡೀಸ್ ತರಹ ಉದ್ಗಾರ ತೆಗೆದರೂ ಬೆತ್ತಲೆಯಾಗಿರಲಿಲ್ಲ.

''ಏನು ಹರ್ಷ?''

''ಈ ರಾತ್ರಿ ನಾನು ನಿನ್ನೊಡನೆ ರೂಮಿನಲ್ಲಿ ಕಳೆಯುತ್ತೇನೆ'' ನರಸಿಂಹ ತುಸ ಚಿಂತಾಕ್ರಾಂತನಾದ.

'' ಆಗಬಹುದು - ಆದರೆ - ಶಂಭು ಇದುವರಿಗೂ ನನ್ನೊಂದಿಗೆ ಬೆಳೆಸಿರುವ ಸಂಪರ್ಕವನ್ನೂ ಬಿಟ್ಟು ಬಿಟ್ಟರೆ?''

ಹರ್ಷ ಮೆಲುಕು ಹಾಕಿದ.

''ನೀನು ಹೇಳುವುದೂ ನಿಜ. ಆದರೆ - ಶಂಭುವಿನೊಂದಿಗೆ ನೇರ ಮಾತುಕತೆ ಅಥವಾ ಯಾವ ರೀತಿಯಾದರೂ ವ್ಯವಹಾರವಿಲ್ಲದೆ ಅವನ ಈ ಸಂದೇಶದ ಅರ್ಥ ಬಿಡಿಸುವುದು ಹೇಗೆ?''

ಪುನಃ ಇಬ್ಬರೂ ಚಿಂತ್ರಾಕ್ರಾಂತರಾದರು.

ನರಸಿಂಹ ಮೊದಲು ಎಚ್ಚೆತ್ತ.

''ಹರ್ಷ - ನೀನು ನನ್ನ ಒಂದು ರೀತಿ ಪೆದ್ದು ಮಾತುಗಳಿಗೆ ನಗದಿದ್ದರೆ ನನ್ನ ಮನಸ್ಸಿಗೆ ಹೊಳೆಯುತ್ತಿರುವುದನ್ನು ನಿನಗೆ ಹೇಳುತ್ತೇನೆ.'' ಅಂದ

''ಹೇಳು ನರಸಿಂಹ ಖಂಡಿತ ನಗೊಲ್ಲ. ಪ್ರಾಯಶಃ ನನ್ನದು ಸರಿಯಾದ ವಿಶ್ಲೇಷಣೆ ಆಗಿರಬಹುದು.''

ಶಂಭು ಈಗ ತಾನಿರುವ ಜಗತ್ತಿನಲ್ಲಿ ಒಂದು ದೊಡ್ಡ ವ್ಯವಹಾರದಲ್ಲಿ ಈಡಾಗಿದ್ದಾನೆ. ಅದಕ್ಕೆ ಅವನಿಗೆ ಹಣ ಸಹಾಯ ಬೇಕಾಗಿದೆ - ಎಷ್ಟು?

''ಐನೂರು!''

''ಇರಬೇಕು ಹರ್ಷ - ಆದರೆ ಸಾವಿರ - ಮುನ್ನೂರು ನೂರೈವತ್ತು - ಹೊಡೆದು ಹಾಕಿರುವುದು ಏಕೆ? ಐದುನೂರು ರೂಪಾಯಿನಲ್ಲಿ ಏನು ವ್ಯವಹಾರ?''

''ನರಸಿಂಹ - ಬಾಹ್ಯ ಜಗತ್ತಿನ ವ್ಯವಹಾರ ನಮ್ಮ ಈ ಮಾನವ ಜಗತ್ತಿಗಿಂತಲೂ ಭಿನ್ನ. ಇಲ್ಲಿಯ ಐದು - ಹತ್ತು - ಅಲ್ಲಿ ಲಕ್ಷ ಕೋಟಿಗಳಾಗಿರಬಹುದು.''

''ಬ್ರಹ್ಮನ ದಿನವಿದ್ದ ಹಾಗೆ''

''ಬಿಲ್‌ಖಿಲ್ ನರಸಿಂಹ - ಸಾವಿರ ಬೇಕಾಗಿಲ್ಲ - ಮುನ್ನೂರು ನೂರೈವತ್ತು ಸಾಲದು - ಐನೂರಾದರೆ ಸರಿ - ಎಂದಿರಬೇಕು''.

''ಮತ್ತೆ ಈ ಮೂವರ ಚಿತ್ರ, ಏರೋಪ್ಲೇನು''

''ನೀನೇ ಹೇಳಿದ ಹಾಗೆ - ಶಂಭು ಬಾಹ್ಯ ಜಗತ್ತಿನಲ್ಲಿ ದೊಡ್ಡ ವ್ಯವಹಾರದಲ್ಲಿ ಕೈಹಾಕಿದ್ದಾನೆ''

ಮೂವರು ಪಾಲುದಾರರು

''ಯಾರ್‍ಯಾರು!''

''ನರಸಿಂಹ! ಶಂಭು ಸೂಚಿಸಿರೋ ಮೂರು ಪಾಲುದಾರರು - ಶಂಭು- ನರಸಿಂಹ .....''

''ನೀನು - ಹರ್ಷ!''

''ಷಹಭಾಸ್ ನರಸಿಂಹ! ನಾವು ಗೆದ್ದೆವು - ಇನ್ನು ಅವನ ಸಂದೇಶ ಸಂಪೂರ್ಣ ಅರ್ಥವಾಯ್ತು. ಶಂಭು ಬಾಹ್ಯ ಜಗತ್ತಿಗೂ ಮಾನವ ಜಗತ್ತಿಗೂ ಅಂತರ್‌ಜಿಗತ್ ವಾಹನ ತಯಾರಿಕೆಯಲ್ಲಿ ಆಸಕ್ತನಾಗಿದ್ದಾನೆ. ಮೂರು ಜನರ ಕಂಪೆನಿ ....''

''ಐನೂರು .....''

''ಕೋಟಿ - ಶತಕೋಟಿಗಳ ಬಂಡವಾಳ - ನರಸಿಂಹ''

''ಏನು ಹರ್ಷ?''

''ಅಲ್ಲಿನ ವ್ಯವಹಾರ ರೂಪಾಯಿಗಳಲ್ಲಿರಲಾರದು...''

''ನೋ! ಭೋಜ - ವಿಕ್ರಮಾದಿತ್ಯರ ಕಾಲದಲ್ಲಿದ್ದ ಹಾಗೆ ವರಹಗಳಿರಬೇಕು.....''

''ಭೇಷ್ ನರಸಿಂಹ! ನಾವಿಬ್ಬರೂ ಸೇರಿ - ನಮ್ಮನ್ನಗಲಿರುವ ಶಂಭುವಿನ ಈಗಿನ ಜೀವನ ರಹಸ್ಯವನ್ನು ಭೇದಿಸಿ ಬಿಟ್ಟಿದ್ದೇವೆ. ಶಹಭಾಸ್'' ಅಂತ ಹರ್ಷ ನರಸಿಂಹನನ್ನು ತಬ್ಬಿಕೊಂಡ.

.... ಇಷ್ಟು ಹೇಳಿ ಮಲ್ಹಾರಿರಾಯರು ತಮ್ಮ ಕೈಗಡಿಯಾರ ನೋಡಿಕೊಂಡರು.

''ಕ್ಷಮ್ಸಿ - ನನ್ನ ಸೋದರಳಿಯನ ಸ್ನೇಹಿತನ ಪ್ರಸಂಗವನ್ನು ಹೇಳುತ್ತಾ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಮನೆಯಲ್ಲಿ ನನ್ನ ಮೊಮ್ಮಗಳು ಕಾದಿದ್ದಾಳೆ - ನಾನವಳಿಗೆ ಜರಾಸಿಕ್ ಪಾರ್ಕ್ ಕಥೆ ಹೇಳ್ತೇನೆ ಅಂತ ಮಾತು ಕೊಟ್ಟು ಬಂದಿದ್ದೆ.'' ಎನ್ನುತ್ತಾ ತಮ್ಮ ಕಾಲುಗಳಿಂದ ಪಂಪ್‌ಷೋಗಳನ್ನು ತಡಕಾಡಿದರು.

ರೂಮ್ ನಂಬರ್ ಹತ್ತಕ್ಕೆ ಪ್ರಪಂಚವೇ ಕಳಚಿಬಿದ್ದ ಹಾಗಾಯ್ತು. ಮಲ್ಹಾರಿರಾಯರು ತಮ್ಮ ಶ್ರೋತೃಗಳನ್ನು ಎಂದೂ ಈ ರೀತಿ ತ್ರಿಶಂಕು ಸ್ಥಿತಿಯಲ್ಲಿ ಬಿಟ್ಟವರಲ್ಲ. ಓಂಪುಡಿ - ಸನ್ನಿವೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು.

''ರಾಯರೇ - ದಯವಿಟ್ಟು ನಿಲ್ಲಿಸಬೇಡಿ. ಹರ್ಷ''

ನರಸಿಂಹರ ಬಾಹ್ಯ ಜಗತ್ತಿನ ಅನುಭವ ಪೂರ್ತಿ ಹೇಳಿಬಿಡಿ .... ಪರುಶು .....ರಾಯರಿಗೆ ಸ್ಟ್ರಾಂಗ್‌ಕಾಫಿ - ನಮಗೆಲ್ಲಾ ನಮ್ಮ ನಮ್ಮ ಕಾಫಿ ಚಹಾ - ತಂದು ಬಿಡು .....'' ಅಂದರು.

ಮಲ್ಹಾರಿರಾಯರು ಹಸನ್ಮುಖರಾಗಿ ಒಪ್ಪಿ ಮುಂದುವರಿಸಿದರು.

''ಹರ್ಷ ಮತ್ತು ನರಸಿಂಹ ಸನ್‌ವ್ಯೂ ಹೋಟೇಲಿಂದ ಹೊರಬಂದು .....''

''ಅಂದರೆ - ಹರ್ಷನ ಕಂಪೆನಿಯಿಂದ ಇಬ್ಬರೂ ನೇರವಾಗಿ ಸನ್‌ವ್ಯೂಗೆ ಹೋದರು ಅನ್ನಿ .....'' ಚೌಚೌ ಕೇಳಿದರು.

''ಹೌದು - ಅಲ್ಲಿ ತಿಂಡಿ ಕಾಫಿ ಸೇವಿಸಿ - ಒಬ್ಬರನ್ನೊಬ್ಬರು ಬೀಳ್ಕೊಟ್ಟು - ನರಸಿಂಹ ತನ್ನ ರೂಮಿಗೆ - ಹರ್ಷ - ನೇರವಾಗಿ ನನ್ನ ಸೋದರಳಿಯ ಅಶ್ವಿನಿ ಕುಮಾರನ ಮನೆಗೆ ಸೇರಿದರು.

ಹರ್ಷ ತನ್ನಲ್ಲಿ ಉಳಿದಿದ್ದ ಹಣದ ಜೊತೆಗೆ ಅಶ್ವಿನಿ ಕುಮಾರನಿಂದ ಸ್ವಲ್ಪ ಸಾಲ ಪಡೆದು ಪುನಃ ತುರ್ತಾಗಿ ನರಸಿಂಹನ ರೂಮು ಸೇರಿ ಅವನ ಕೈಲಿ ಐನೂರು ರೂಪಾಯಿಗಳನ್ನು ಕೊಟ್ಟು ಬಿಟ್ಟ. ಮರುದಿನವೇ ಬ್ಯಾಂಕ್‌ನಿಂದ ಹಣ ಪಡೆದು ಅಶ್ವಿನಿಗೆ ವಾಪಸ್ ಕೊಟ್ಟುಬಿಟ್ಟ. ಒಂದುವಾರ ತನ್ನ ಕಂಪೆನಿಯಿಂದ ಹರ್ಷ ರಜೆಯನ್ನೂ ಪಡೆದ''

ಮಲ್ಹಾರಿರಾಯರು ನಿಧಾನವಾಗಿ ಸ್ಟ್ರಾಂಗ್ ಕಾಫಿ ಹೀರುತ್ತ ಕುಳಿತರು.

'' ಆಮೇಲೆ?'' ಮೂರು ಧ್ವನಿಗಳಿಂದ ಪ್ರಶ್ನೆ.

''ಮೂರುದಿನಗಳು ಏನೂ ನಡೆಯಲಿಲ್ಲ. ಹರ್ಷ ನರಸಿಂಹನ ಸಂದೇಶಕ್ಕಾಗಿ ತನ್ನ ಮನೆಯಲ್ಲೇ ಕಾಯುತ್ತ ಕೂತ. ನರಸಿಂಹ - ಶಂಭುವಿನ ಬೃಹತ್ ವ್ಯವಹಾರದಲ್ಲಿ ಆತುರ ಕೂಡದು ಅಂತ ಅವನ ಅಭಿಪ್ರಾಯವಾಗಿತ್ತು. ನಾಲ್ಕನೇ ದಿನ - ನರಸಿಂಹನ ರೂಮಿನತ್ತ ಹೊರಟ. ಅಲ್ಲಿ ಅವನಿಗೆ ಒಂದು ದೊಡ್ಡ ಕುತೂಹಲ ಸ್ಥಿತಿ ಕಾದಿತ್ತು''

ರಾಯರು ಸ್ಟ್ರಾಂಗ್ ಕಾಫಿ ಸವಿಯುತ್ತಲೇ ಕೂತರು. ''ಎಂತಹ ಕುತೂಹಲ?!'' ಇದು ಕೊರಳೂಗಳ ಪ್ರಶ್ನೆ

''ನರಸಿಂಹನ ರೂಮಿನ ಬಾಗಿಲು ಮುಚ್ಚಿತ್ತು. ಬೀಗ ಹಾಕಿದ್ದರೂ - ಭದ್ರಪಡಿಸಿರಲಿಲ್ಲ. ಕೇವಲ ತಗುಲಿಸಿತ್ತು. ಹರ್ಷ ಬೀಗವನ್ನು ತೆಗೆದು ಬಾಗಿಲನ್ನು ತಳ್ಳಿ ರೂಮಿನೊಳಗೆ ಹೊಕ್ಕ ಸ್ನೇಹಿತ - ಅಲ್ಲೇ ಕಾಫಿಗಾಗಿ ಹೋಗಿರಬಹುದು ಅಂತ ಊಹಿಸಿ - ಕಾದು ಕುಳಿತ. ನರಸಿಂಹ ಬರಲಿಲ್ಲ. ಟೇಬಲ್ ಇತ್ತು. ಹಾಸಿಗೆ ಇತ್ತು. ಖಾಲಿ ಮತ್ತೇನೂ ಇರಲಿಲ್ಲ. ತಾನು ಕೊಟ್ಟಿದ್ದ ಐನೂರು ಇರಲಿಲ್ಲ. ನರಸಿಂಹ ಬರಲೇ ಇಲ್ಲ. ಮರುದಿನವೂ ಬರಲಿಲ್ಲ. ಇದುವರಿವಿಗೂ ಬಂದೇ ಇಲ್ಲ.''

''ನರಸಿಂಹ ಏನಾದ?'' ಎಲ್ಲಾ ಕೊರಳುಗಳ ಪ್ರಶ್ನೆ.

''ಹರ್ಷ ಪುನಃ ಲೈಬ್ರೆರಿಗಳಿಗೆ ಹೋಗಿ ಅದೇ ಪುಸ್ತಕಗಳ ಎರಡು ಐಸ್‌ಲೆಂಡನದವಂತೆ - ಅವುಗಳ ಸಹಾಯದಿಂದ ಇಂದ್ರಿಯಾತೀತ ಅನುಭವ ಮತ್ತು ಬಾಹ್ಯ ಜಗತ್ತಿನ ಸಂಪರ್ಕ ಎಂಬ ವಿಷಯದ ಮೇಲೆ ನೂರ ಎಪ್ಪತ್ತಾರು ಪುಟಗಳ ಪ್ರಬಂಧ ಬರೆದು ರಷ್ಯ ಜರ್ಮನಿ ಹಾಗೂ ಐಸ್‌ಲೆಂಡ್ ವಿಜ್ಞಾನಿಗಳಿಗೆ ಕಳ್ಸಿದ್ದಾನೆ. ಅವರುಗಳಿಂದ ಅಭಿಪ್ರಾಯ ದೊರೆಯುವರಿಗೆ ಹರ್ಷ ಏನೂ ಹೇಳಲಾರನಾಗಿದ್ದಾನೆ''

''ನರಸಿಂಹ ವಾಸಿಸುತ್ತಿದ್ದ ರೂಮಿನ ಗತಿ?''

''ಮೂರು ದಿನಗಳ ಮೇಲೆ ಅದಕ್ಕೆ ಬೇರೆ ಗಾಡ್ರೆಜ್ ಬೀಗ ಬಿದ್ದಿತ್ತು. ಪ್ರಾಯಶಃ ರೂಮಿನ ಮಾಲೀಕ ತನ್ನ ವಶಕ್ಕೆ ತೆಗೆದುಕೊಂಡಿರಬೇಕು. ಒಂದು ಮಾತು ನಿಜ ತನ್ನ ಪ್ರಬಂಧದ ಬಗ್ಗೆ ವಿಜ್ಞಾನಿಗಳಿಂದ ಸರಿಯಾದ ವಿಶ್ಲೇಷಣೆ ಬಂದ ತಕ್ಷಣ ಹರ್ಷ ನರಸಿಂಹ ಶಂಭುಗಳನ್ನೂ ಸಂಪರ್ಕಿಸುತ್ತಾನೆ. ಅವರೇ ಮೊದಲು ಇವನನ್ನು ಭೇಟಿಯಾಗದಿದ್ದರೆ ಖಂಡಿತ ನನ್ನ ಸೋದರಳಿಯ ಅಶ್ವಿನಿ ಕುಮಾರನಿಗೆ ಹರ್ಷ ಎಲ್ಲಾ ವಿಷಯವನ್ನೂ ತಿಳಿಸಿಯೇ ತಿಳಿಸುತ್ತಾನೆ. ಅವನಿಂದ ನನಗೆ ನನ್ನಿಂದ ನಿಮಗೆ ತಿಳಿಯುತ್ತೆ. ಅದುವರಿವಿಗೂ ಕಾಯೋಣ''

ಮಲ್ಹಾರಿರಾಯರು ಎದ್ದರು.


'' ಇವತ್ತು ಇನ್‌ಸ್ಟೀನ್ ಕೊಲಂಬೋಲಿ ಲೆಕ್ಚರ್ ಕೊಡುತ್ತಿದ್ದ. ಹಾಗೇ ಮಲ್ಹಾರಿರಾಯರು

ನಮ್ಮ ರೂಮಿನಲ್ಲಿ ಮಾತನಾಡಿ ಬಿಟ್ರು'' ಅಂದರು ಓಂಪುಡಿ - ಎಲ್ಲರ ಪರವಾಗಿ.

''ತುಂಬಾ ದೊಡ್ಡ ಮಾತಾಡಿಬಿಟ್ರಿ- ಐನ್‌ಸ್ಟೀನ್ ಇದ್ದದ್ದು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಲ್ಲಿ ಎಲ್ಲರಿಗೂ ನಮಸ್ಕಾರ''

''ನನಗಾಗ್ಲೇ ಗೊತ್ತಿತ್ರೀ ..... '' ಅಂತ ಬಾಳೇಕಾಯಿ ಬಜೆ ಶುರು ಮಾಡುವ ಹೊತ್ತಿಗೆ ಮಲ್ಹಾರಿರಾಯರು ಹೊರಟಿದ್ದರು. ಎಲ್ಲರೂ ಅವರ ಹಿಂದೆ ಹೊರಟರು.

(ವೋಡ್‌ಹೌಸ್, ಮುಲ್ಲಿನರರ ಆತ್ಮಗಳಿಗೆ ಶಾಂತಿ ಇರಲಿ)



ಕನ್ನಡ ಗೊ ನೊ ಮೊಂದಾಯ್

ಲೀಲಾ ಮಿರ್ಲೆ

''ಕನ್ನಡವನ್ನು ಕಲಿಯಿರಿ, ಕನ್ನಡವೇ ಸರ್ಕಾರದ ಭಾಷೆ, ಕನ್ನಡವೇ ನಮ್ಮ ಉಸಿರು'' ಎಂದೆಲ್ಲಾ ಕರ್ನಾಟಕಾಂಬೆಯ ಸೇವೆಗೆ ಸೊಂಟಕಟ್ಟಿ ನಿಂತ ಕನ್ನಡದ ಭಕ್ತರು ಕೂಗಿದಾಗಲೆಲ್ಲಾ ನನಗೆ ತಲೆಸುತ್ತು ಬರುತ್ತದೆ. ಕಾರಣ, ನಾನೂ ಆ ಮಹತಾಯಿ ಕನ್ನಡಮ್ಮನ ಸೇವೆಯಲ್ಲಿ ನಿರತಳಾದವಳು. ನಾನು ಕನ್ನಡದ ಅಧ್ಯಾಪಕಿ. ಹಾಗಾಗಿ ಕನ್ನಡೇತರರಿಗೆ ಕನ್ನಡ ಕಲಿಸುವ ಮಹತ್ ಕಾರ್ಯದ ಕಿರುಕುಳಗಳನ್ನು ಹಗಲಿರಳು ಅನುಭವಿಸುತ್ತಿರುವವಳು ನಾನು.

'ಕನ್ನಡ ಕಲಿಯಿರಿ' ಎಂದು ಸುಮ್ಮನೆ ಕೂಗಾಡುವುದರ ಬದಲು, ಶಾಲೆಯ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲೇ ಕನ್ನಡವನ್ನು ಕಲಿಸಿಬಿಟ್ಟರೆ ಕಾರ್ಯ ನಿರಾಯಾಸವಾಗುತ್ತದೆ. ಇದು ಒಳ್ಳೆಯ ಉಪಾಯವೆಂದು ನಂಬಿದ ನಾನು ಶಾಲೆಯ ಮಕ್ಕಳಿಗ ಬಲು ಹುಮ್ಮಸ್ಸಿನಿಂದ ಕನ್ನಡವನ್ನು ಕಲಿಸಲು ಪ್ರಾರಂಭಿಸಿದೆ. ಸ್ವರ, ವ್ಯಂಜನ, ಕಾಗುಣಿತಗಳನ್ನು ಸುಲಭವಾಗೇ ಕಲಿತವು ಮಕ್ಕಳು. ಓದಲು ಶುರು ಮಾಡಿದಾಗ, ನನಗೆ ಶುರುವಾಯಿತು ಬೇನೆ. ಈ ಪಠ್ಯ ಪುಸ್ತಕದವರೂ ಹಾಗೆಯೆ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುವುದೇ ಅವರ ಗುರಿ. ಸ್ವಾರಸ್ಯಕರವಾದ ವಿಷಯಗಳನ್ನು ಸರಳವಾಗಿ ಬರೆಯಬಾರದೇ? ಕನ್ನಡದ ಗಂಧವೇ ಇಲ್ಲದ ಈ ಪಟ್ಟಣದ ಮಕ್ಕಳಿಗೆ ನೂರೆಂಟು ಸಮಸ್ಯೆಗಳು.

ಪಾಠದಲ್ಲಿ ''ಅಣ್ಣ ತಮ್ಮಂದಿರು ಕೆಲಸ ಮಾಡ ತೊಡಗಿದರು'' ಎಂದಿದ್ದರೆ, ''What is ತೊಡಗಿ Miss" ಎಂದು ಒಬ್ಬ ಹುಡುಗನ ಪ್ರಶ್ನೆ. '' ...... ದೇಶದ ಸಂಪತ್ತು ಜನಾಂಗದ ಅಭಿವೃದ್ಧಿಗೆ ವಿನಿಯೋಗವಾಗಬಲ್ಲದು. ಕೈಗೊಂಡ ಯೋಜನೆಗಳು ಗುರಿ ಮುಟ್ಟಬಲ್ಲವು'' ಇಂತಹ ವಾಕ್ಯಗಳನ್ನು ಕನ್ನಡದಲ್ಲಿ 'ಹೋಗು, ಬಾ' ಎಂದೂ ಹೇಳಲು ಬಾರದ ಈ ಪಿಳ್ಳೆಗಳು ಅರಗಿಸಕೊಳ್ಳಬಲ್ಲವೇ?

ಈ ಪಠ್ಯ ಪುಸ್ತಕಗಳ ಪದ ಸಂಪತ್ತಿ, ಭಾಷಾ ಪ್ರೌಢಿಮೆಗಳಲ್ಲಿ ಸಿಕ್ಕು ಬೆಂದು ಬಳಲಿದ್ದ ಮಕ್ಕಳು, ಕನ್ನಡ ಪಿರಿಯಡ್ ಬಂತು ಎಂದರೆ ಮುಗಿಯಿತು. ಎಲ್ಲವೂ ನೀರು ಕುಡಿಯುವ, ಅಥವ ಟಾಯ್‌ಲೆಟ್‌ಗೆ ಹೋಗುವ ನೆವ ಹೇಳಿ ಓಡಿ ಹೋಗುತ್ತಿದ್ದವು. ನಂತರ ಸಪ್ಪೆ ಮುಖ ಹಾಕಿಕೊಂಡು ಹಿಂತಿರುಗುತ್ತಿದ್ದವು.

ಈ ಸಂಕಟವನ್ನು ಪರಿಹರಿಸಲು ಸತತವಾಗಿ ಯೋಚನೆ ಮಾಡುತ್ತಿದ್ದ ನನ್ನ ಮೆದುಳಿಗೆ ಧಿಡೀರನೆ ಒಂದು ಆಲೋಚನೆ ಹೊಳೆಯಿತು. ಮಕ್ಕಳು ಮಾತೃಭಾಷೆಯನ್ನು ಹೇಗೆ ಕಲಿಯುತ್ತವೆ? ಮೊದಲು ಮಾತನಾಡುವುದನ್ನು ಕಲಿಯುತ್ತವೆ. ನಂತರ ಆ ಭಾಷೆಯಲ್ಲಿ ಓದು, ಬರಹ ಸುಲಭವಾಗುತ್ತದೆ. ಸರಿ ಒಳ್ಳೆಯ ಉಪಾಯ ಹೊಳೆಯಿತು. ಕ್ಲಾಸಿನಲ್ಲಿ ಮೊದಲು ಮಾತನಾಡುವುದನ್ನು ಕಲಿಸಿ ಬಿಟ್ಟರೆ, ನಂತರ ಓದು, ಬರಹ ಎಲ್ಲಾ ಸುಲಭವಾಗಿ ಬಿಡುತ್ತದೆ ಎಂದು ನಿರ್ಧರಿಸಿದೆ.

ಸರಿ, ಮುಂದಿನ ಪಿರಿಯಡ್ಡಿನಿಂದ ಮಾತನಾಡುವುದನ್ನು ಕಲಿಸಲು ಶುರು ಮಾಡಿದೆ.

ತರಗತಿಯಲ್ಲಿ ಮುಕ್ಕಾಲು ಪಾಲು ಹುಡುಗರೆಲ್ಲಾ ಕನ್ನಡೇತರರ ಮಕ್ಕಳೇ. ಹಾಗಾಗಿ ಅವರಿಗೆ ಶುದ್ಧವಾಗಿ ಕನ್ನಡದ ಇನ್‌ಪುಟ್ ಇಲ್ಲ. ಸಣ್ಣ ಸಣ್ಣ ವಾಕ್ಯಗಳ ಪ್ರಯೋಗವನ್ನು ಹೇಳಿ ಕೊಟ್ಟೆ. 'ನಾನು ಟೀಚರ್', ನೀನು ಗೋಪಾಲ್' 'ಅದು ಪೆನ್‌ಸಿಲ್' 'ನನಗೆ ಮಿಠಾಯಿ ಇಷ್ಟ' ' ಇದು ನಮ್ಮ ಶಾಲೆ' ಇತ್ಯಾದಿ ವಾಕ್ಯಗಳನ್ನು ಪದೇ ಪದೇ ಮಕ್ಕಳ ಕೈಲಿ ಹೇಳಿಸಿದೆ. ಸಾಕಷ್ಟು 'ಡ್ರಿಲ್' ಆಗಿದೆ ಎಂದು ಖಚಿತವಾದ ಮೇಲೆ, 'ಸ್ಮಿತಾ, I am a girl' translate ಮಾಡಮ್ಮ ಎಂದೆ. ''ನನಗೆ ಒಂದು ಹುಡುಗಿ'' ಎಂದಳು ಸ್ಮಿತಾ. ಅವಳನ್ನು ತಿದ್ದಿದ ಮೇಲೆ ಸುರೇಶನನ್ನು This is my dog' ಎಂಬ ವಾಕ್ಯವನ್ನು ಅನುವಾದಿಸಲು ಹೇಳಿದೆ. '' ಇದು ನಂದು ನಾಯಿ' ಎಂದ ಸುರೇಶ. I want water' ಎಂಬ ವಾಕ್ಯಕ್ಕೆ ಬಂದ ಅನುವಾದ ''ನನಗೆ ನೀರು ಬೇಕಾ'' ಅನುವಾದಗಳನ್ನು ಕೇಳಿ ಸುಸ್ತಾದೆ. ಆದರೂ ಹಟ ಬಿಡದೆ ತಿದ್ದಿ ತಿದ್ದಿ 'ನಾನು, ನನ್ನ, ನನಗೆ, ನಂದು' ಇವುಗಳ ಸರಿಯಾದ ಪ್ರಯೋಗಗಳನ್ನು ಕಲಿಸಿದೆ.

ವಿಭಕ್ತಿಗಳ ಹಾವಳಿಯಂತೂ ಹೇಳ ತೀರದು. '' ಇದು ರಾಮನ ಮನೆ'', 'ಸೀತೆಯ ಪುಸ್ತಕ' 'ಗೌರಿಯ ತಾಯಿ', 'ಹಾವಿನ ಪೊರೆ' ಎಂದೆಲ್ಲಾ ಉದಾಹರಣೆಗಳೊಂದಿಗೆ ಸಾಕಷ್ಟು ವಾಕ್ಯಗಳನ್ನು ರಚಿಸಿದ ಮೇಲೆ, ಮಕ್ಕಳ ಅನುವಾದಗಳು ಹೀಗಿದ್ದವು. 'ಗೋವಿಂದದ ನಾಯಿ', 'ನನ್ನ ಶಾಲೆನ ಬಸ್ಸು', 'ಹಸುದ ಕರು' ಇತ್ಯಾದಿ. ಸತತ practice ನಂತರ ಈ ಫಲಿತಾಂಶ. ಮುಕ್ಕಾಲು ಪಾಲು ಈ ಮಕ್ಕಳು ಶುದ್ಧ ಪೆದ್ದರಿರಬೇಕು. ಅದಕ್ಕೆ ತಲೆಗೆ ಏನೂ ಹತ್ತುತ್ತಿಲ್ಲ ಅಂತ ಕಾಣುತ್ತೆ ಎನ್ನಿಸಿತು. ನನ್ನ ಸಂಶಯವನ್ನು ಬಗೆಹರಿಸಲು ಈ ಕ್ಲಾಸಿನ ಇತರ ವಿಷಯಗಳ ಅಧ್ಯಾಪಕಿಯರನ್ನು ಮಕ್ಕಳ ಬಗ್ಗೆ ಕೇಳಿದೆ. ತುಂಬ ಬುದ್ಧಿವಂತ ಮಕ್ಕಳು ಎಂದು ಎಲ್ಲರೂ ಕೊಂಡಾಡಿದರು. ಗಣಿತ ಹಾಗು ಇಂಗ್ಲಿಷ್‌ನಲ್ಲಿ ಹೆಚ್ಚೂ ಕಮ್ಮಿ ಎಲ್ಲರೂ 70% ಮೇಲೆ Score ಮಾಡುತ್ತಿದ್ದಾರೆ ಎಂದೂ ಹೇಳಿದರು.

ಅಂದ ಮೇಲೆ ಐಬು ನನ್ನದೇ ಇರಬೇಕು. ನನಗೆ ಹೇಳಿ ಕೊಡಲು ಬರುವುದಿಲ್ಲವೋ ಏನೊ ಎಂದು ಗುಮಾನಿ ಬಂತು. ನಾನಾ ಭಾಷೆಗಳ ಪಂಡಿತರ ಬಳಿ ಹೋಗಿ ಸಲಹೆ ಕೇಳಿದೆ. ಒಂದು ಭಾಷೆಯನ್ನು ಮಾತನಾಡಲು ಕಲಿಯಬೇಕಾದರೆ, ಅದನ್ನು ಆಡುತ್ತಲೇ ಕಲಿಯಬೇಕು. ಅಥವಾ ತುಂಬ ಆಸಕ್ತಿ ಇದ್ದಲ್ಲಿ ಓದಿ, ಅನುವಾದಿಸಿ, ತುಂಬ ಶ್ರಮ ಪಟ್ಟಲ್ಲಿ ಸಾಧ್ಯ ಎಂದೆಲ್ಲಾ ಹೇಳಿದರು.

ಈ ವೇಳೆಗೆ ಇನ್ನೊಂದು ಐಡಿಯ ಹೊಳೆಯಿತು. ನನಗೆ ಪೂರ್ತಿ ಹೊಸದಾಗಿರುವ ಒಂದು ಭಾಷೆಯನ್ನು ನಾನು ಕಲಿಯಬೇಕು. ಆಗ ಹೇಳಿ ಕೊಡುವ ರೀತಿ ತಿಳಿಯುತ್ತದೆ. ಕಲಿಯುವವರಿಗೆ ಇದಿರಾಗುವ ತೊಂದರೆಗಳೂ ಗೊತ್ತಾಗುತ್ತದೆ ಎಂದೆನಿಸಿತು. ಐಡಿಯ ಬಂದದ್ದೇ ತಡ ""Spoken Japanese"ನ್ನು ಕಲಿಸುವ ಕೋರ್ಸ್ ಒಂದಕ್ಕೆ ಸೇರಿದೆ. ಬಹು ಸರಳವಾದ ಭಾಷೆ ಅದು.

ಜಪಾನಿಯರು ಅವರ ಭಾಷೆಯಲ್ಲೇ ಅಧ್ಯಯನ ಮಾಡಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಮುಂದಿದ್ದಾರೆ. ನಾವು ಕನ್ನಡಿಗರು ಕರ್ನಾಟಕದಲ್ಲೇ ಕೊಳೆಯುತ್ತಿದ್ದೇವೆ. ಅದು ಭಾಷೆಯ ಕೈವಾಡ ಎಂದು ಸ್ಪಷ್ಟವಾಯಿತು.

ಜಪಾನಿ ಭಾಷೆಯನ್ನು ಸೃಷ್ಟಿಸಿದವರು ತುಂಬ ಮುಂದಾಲೋಚನೆಯಿಂದ ಭಾಷೆಯ

ಉದ್ದೇಶ ವ್ಯವಹರಿಸುವುದನ್ನು ಅರಿತು, ಜನರು ಅದನ್ನು ಸುಲಭವಾಗಿ ಕಲಿಯಲೆಂದು, ವ್ಯಾಕರಣವನ್ನು ಹದಬಸ್ತಿನಲ್ಲಿಟ್ಟರು. ಕನ್ನಡವನ್ನು ಸೃಷ್ಟಿಸಿದವರ ಇಂಗಿತ ಬೇರೆಯೇ ಇರಬೇಕು. ಅದನ್ನು ಕೇವಲ ಕೆಲವರೇ ಕಲಿಯಲಿ ಎಂಬ ಉದ್ದೇಶದಿಂದ, ಕಠಿಣವಾದ ನಿಯಮಗಳನ್ನೊಳಗೊಂಡ ವ್ಯಾಕರಣವನ್ನು ಅನುಸರಿಸಿದ್ದಾರೆ. ಅಂತೂ ಎರಡೂ ಭಾಷೆಗಳ ಸೃಷ್ಟಿಕರ್ತರ ಧ್ಯೇಯ ಕೈಗೂಡಿದೆ ಅನ್ನಿ.

ಜಪಾನಿ ಭಾಷೆಯಲ್ಲಿ ಕ್ರಿಯಾಪದಗಳನ್ನು ಬಳಸುವುದೆಂದರೆ ಕಲ್ಲುಸಕ್ಕರೆ ಮೆದ್ದಂತೆ.! ನಾನು ತಿನ್ನುತ್ತೇನೆ, ನೀನು ತಿನ್ನುತ್ತಿಯೆ, ಅವನು ತಿನ್ನುತ್ತಾನೆ, ಅವಳು ತಿನ್ನುತ್ತಾಳೆ, ಅವರು ತಿನ್ನುತ್ತಾರೆ, ಅದು ತಿನ್ನುತ್ತದೆ ಈ ಎಲ್ಲಕ್ಕೂ ಜಪಾನಿ ಭಾಷೆಯಲ್ಲಿ ಒಂದೆ ಒಂದು ಪದ 'ತಬೆಮಸ್'. ಸಂದರ್ಭಕ್ಕನುಸಾರವಾಗಿ ನಾನು, ನೀವು ಎನ್ನುವುದು ತಿಳಿಯತ್ತದೆ.

ಕನ್ನಡ ಷಷ್ಠಿ ವಿಭಕ್ತಿಯ ಹಾವಳಿಯಂತೂ ಹೇಳ ತೀರದು. ಕಲಿಯುವವರಿಗೆ ಅದೊಂದು ಕೆಟ್ಟ ಕನಸೇ ಸರಿ. ಆದರೆ ಜಪಾನಿ ಭಾಷೆಯಲ್ಲಿ, ನಾನು ಪದಕ್ಕೆ ಕೇವಲ ಒಂದು 'ನೊ' ಸೇರಿಸಿದರೆ ಮುಗಿಯುತು ಕೆಲಸ. ಉದಾಹರಣೆಗೆ - ಶಾಲೆಯ ಎನ್ನುವುದಕ್ಕೆ ಗಕ್ಕೊ ನೊ, ಕನ್ನಡ ಭಾಷೆಯ ಅನ್ನುವುದಕ್ಕೆ ಕನ್ನಡ ಗೊ ನೊ, ಮರದ ಎನ್ನಬೇಕಾದರೆ ಕೀ ನೊ, ಹೂವಿನ ಎನ್ನಲು ಹನ ನೊ ಹೀಗೆ ನೂರೆಂಟು ಪ್ರತ್ಯಯಗಳ ಬದಲು ಒಂದೇ ನೊ ಇಂದ ಕೆಲಸ ಮುಗಿಯುತ್ತದೆ. ಹೀಗೆ ಸರಳ ವ್ಯಾಕರಣದಿಂದ ಭಾಷೆಯನ್ನು ಸುಲಭವಾಗಿ ಕಲಿಯಬಹುದು.

ಕಬ್ಬಿಣದ ಕಡಲೆಯಂತಿರುವ ನಮ್ಮ ಭಾಷೆಯನ್ನು ರಿಪೇರಿ ಮಾಡಿ, ಸರಳವನ್ನಾಗಿ ಮಾಡಿದ ಹೊರತು, ಅದನ್ನು ಕನ್ನಡೇತರರು ಕಲಿಯಲು ಹೇಗೆ ಸಾಧ್ಯ ಮಾರಾಯರೇ! ಕನ್ನಡ ಮಡಿಯಾಗಿ ವಿಧಾನ ಸೌಧದ ಮೂಲೆಯಲ್ಲೇ ಕುಳಿತಿರಬೇಕಷ್ಟೆ!

ಇದಕ್ಕೆ ಸಿದ್ಧೌಷದವೂ ಇದೆ. 'ಕನ್ನಡ ಕಸ್ತೂರಿ', 'ಕನ್ನಡವನ್ನು ಕಲಿಯಿರಿ, ಕನ್ನಡದಲ್ಲೇ ವ್ಯವಹರಿಸಿ! ಎಂದೆಲ್ಲಾ ಬಿ.ಟಿ. ಎಸ್ ಬಸ್‌ಗಳ ಹಿಂದೆ ಬರೆಯುವ ಬದಲು, ಈ ಕನ್ನಡದ ಕುವರರು ಮಾಡಬೇಕಾದ ಕೆಲಸ ಒಂದೇ ಒಂದು. ಅವರು ಕನ್ನಡೇತರನೊಬ್ಬನಿಗೆ, ಕೇವಲ ಒಬ್ಬನಿಗೆ, ಕನ್ನಡ ಮಾತಾಡುವುದನ್ನು ಕಲಿಸಲಿ. ಆಗ ಅವರಿಗೆ ಅದರ ಹಿಂದಿರುವ ಬೃಹತ್ ಸಮಸ್ಯೆಗಳ ಅರಿವಾಗುತ್ತದೆ. ಅವರೆಲ್ಲರೂ ತಮ್ಮ ಭಾಷಾ - ಪ್ರೇಮವನ್ನು ಬದಿಗಿಟ್ಟು ಬೇರೆ ಯಾವುದಾದರೂ ಸುಲಭವಾದ ಭಾಷೆಯನ್ನು ರಾಜ್ಯ ಭಾಷೆಯನ್ನಾಗಿ ಮಾಡಲು ಮನಸ್ಸು ಮಾಡಲೂಬಹುದು! ನನಗೇನೋ ಜಪಾನೀ ಭಾಷೆಯನ್ನೆ ನಮ್ಮ ರಾಜ್ಯ ಭಾಷೆ ಮಾಡಿದರೆ ನಾವು ಚೆನ್ನಾಗಿ ಮುಂದುವರಿಯಬಹುದು ಅನ್ನಿಸುತ್ತೆ. ಹಾಗೆ ಮಾಡುವುದರಿಂದ ನಮ್ಮ ಹಣಕಾಸಿನ ಮೊಂದಾಯ್ (ಸಮಸ್ಯೆ) ಗಳೂ ಸಹಜವಾಗಿಯೇ ಪರಿಹಾರವಾಗಬಹುದು.

ಯೋಚಿಸಿ! ನೆರೆ ರಾಜ್ಯಗಳೆಲ್ಲಾ ಹಿಂದಿ ಮರಾಠಿ ಅಂತಾ ಹೊಡೆದಾಡುತ್ತಾ ಇರುವಾಗ, ನಾವು ಮಿಕ್ಕವರ ಬೆನ್ನ ಮೇಲೆ ಲೀಪ್ ಫ್ರಾಗ್ ಮಾಡಿ ಮುಂದೆ ಓಡಿ ಬಿಡಬಹುದು ಅಲ್ವೆ ಬರ್‍ಲಾ, ಸಯೋನರ (ಸಯೋನಾರಾ ಅಲ್ಲ).



"ಇದೊಂದ್ಸಲ ಚಂದ್ರನ್ನ ನೋಡಿಬಿಡಿ ಅಂದ್ರೆ"

ನೆಗಡಿ

ಅ. ರಾ. ಮಿತ್ರ

ಆ : ಬಾ ಭೂಮಣ್ಣ. ಏನು ನಿನಗೂ ತುಂಬಾ ನೆಗಡಿ ಇರೋಹಾಗಿದೆ. ನನಗೂ ನೆಗಡಿ ರಂಗ ನಿನಗೂ ನೆಗಡಿ ನನಗೂ ನಿನಗೂ ಇಬ್ಬರಿಗೂನು ನೆಗಡಿ ನೆಗಡೀ.

ಭೂ : ಅಯ್ಯೋ ನನ್ನ ನೆಗಡೀಗೆ ಏನು ಹೇಳ್ಲಪ್ಪ. ನನ್ನ ಮೂಗೇ ಅಲ್ವೆ ನೆಗಡಿಗೆ ತವರು ಮನೆ. ನನ್ನ ಮೂಗಿಗೆ ಸೋನೆ ಹಿಡಿಯದ ದಿನವೇ ಇಲ್ಲ.

ಆ : ನೆಗಡಿ ಬಂದ್ರೆ ಕಷ್ಟ ನೋಡು.

ಭೂ : ಕಷ್ಟಾಂತ ಕೇಳು. ಒಡಕು ಮಡಕೆ ಹಾಗೆ ಸೋರ್‍ತಾನೇ ಇರುತ್ತೆ. ಅದಕ್ಕಿಂತ ಈ ಸೀನು ಬರುತ್ತೆ ನೋಡು. ಅದು ತಡಕೊಳ್ಳೋಕೇ ಆಗೋಲ್ಲ. ಡೈನಮೈಟ್ ಕಣಯ್ಯಾ ಡೈನಮೈಟು. ಹೆಂಗೆ ಸಿಡಿಯತ್ವೆ ಗೊತ್ತಾ? ನನ್ನನ್ನ ಏನಾದ್ರೂ ಯುದ್ಧ ಭೂಮೀಗೆ ಕಳಿಸಿದ್ರೆ ನನ್ನ ಸೀನುಗಳ ಸ್ಫೋಟ ನೋಡಿ ಶತ್ರುಗಳು ಓಡಿ ಹೋಗೋದು ಖಂಡಿತ.

ಆ : ಅಂದ್ರೆ ಈ ಸೀನುಗಳು ಕೂಡ ಒಂದು Scene ಕ್ರಿಯೇಟ್ ಮಾಡ್ತವ ಅನ್ನು.

ಭೂ : ಒಂದೇ ಎರಡೆ? ಭಟ್ ಅವರದ್ದು ಒಂದು ಕವಿತೆ ಓದಿಲ್ವೆ?

ನಶ್ಯದ ಪುಡಿಯನು ಮೂಗಿಗೆ ಏರಿಸಿ
ಸೀನಿದ ನೆರೆಮನೆ ಶ್ಯಾಂಭಟ್ಟ
ಎಚ್ಚರ ತಪ್ಪಿತು ದೂರದ ಮುದುಕಿಗೆ
ಅದುರಿತು ಮನೆ ನೆಲ ಅಟ್ಟ

ದುಂಡಿರಾಜ್ ಅವರ ಒಂದು ಪಾತ್ರಾನೂ ಹೀಗೇ ಸೀನಿ ಸೀನಿ ಗೋಳಾಡಲ್ವೆ. ಪಾಪ ಮದುವೆ ದಿನ ಹೆಂಡತಿ ಲಕ್ಷಣವಾಗಿ ಹಾಲಿನ ಪಾತ್ರೆ ಹಿಡಕೊಂಡು ಬಂದವಳು ಇವನು ಸೀನಿದ ರಭಸಕ್ಕೆ ಮಂಚದ ಕೆಳಕ್ಕೆ ಬಿದ್ದಳಂತೆ. ಎದ್ದು ತವರು ಮನೆಗೆ ಹೋದವಳು ಗಂಡನ ಮನೆ ಕಡೆ ತಲೆ ಹಾಕಿ ಕೂಡ ಮಲಗಲಿಲ್ಲವಂತೆ. ಈ ಆಕ್ಷಿ ಆಽಽಕ್ಷಿಗಳ ಹಿಂಸೆಯಿಂದ ಕೊನೆಗೆ ಆತ ಆತ್ಮಹತ್ಯೆ ಮಾಡ್ಕೊಳೋಕೆ ಹೋಗ್ತಾನೆ. ಇನ್ನೇನು ಹಗ್ಗನ ಕುತ್ತಿಗೆಗೆ ಏರಿಸಬೇಕು ಅಂತ ಹೊರಟಾಗ ಆಽಽಕ್ಷಿ ಬಂದು ಹಗ್ಗಾನೆ ತುಂಡಾಯ್ತಂತೆ! ಮತ್ತ ನೆಗಡಿ ಅಂದ್ರ ಅಂಥ ಬಡಾ ರೋಗ ಏನಲ್ಲ ಅಂತಾರಲ್ಲಪ್ಪ ಮಂದಿ?

ಭೂ : ಮಂದಿ ಹೇಳ್ತಾರೇಂತ ನಂಬಬೇಡ. ಅದೊಂದು ಭಯಂಕರ ರೋಗ. ಯಾಕೆ ಅಂದ್ರೆ, ನಮಗೆ ಹಿಂಸೆ ಕೊಡೋಕೆ ಅದು ಹುಟ್ಟಿಕೊಂಡಿರೋದು.

ಆ : ಹಿಂಸಿ ಹೆಂಗಪ್ಪ?

ಭೂ : ನೋಡು ಜ್ವರ ಛಳಿ ಬರ್ಲಿ. ನಿನ್ನ ಹೆಂಡತಿ ಮಕ್ಕಳು ಎಲ್ಲ ಗಾಬರಿಯಾಗ್ತಾರೆ.

ಉಪಚಾರ ಮಾಡ್ತಾರೆ. ಮೈಕೈ ನೋವು ಅನ್ನು ಮಸಾಜ್ ಮಾಡ್ತಾರೆ. ಆಫೀಸಲ್ಲಿ ರಜಾನೂ ಸಿಗತ್ತೆ. ನೆಗಡಿ ಅನ್ನು ಎಲ್ಲ ನಗ್ತಾರೆ. ನೀನು ಮೂರು ಮೂರು ಕರ್ಚೀಪು ನೆನಸ್ತಾ ಇದ್ರೂ ಯಾರಿಗೂ ಕನಿಕರ ಇರೋಲ್ಲ. ತೀ ನಂ. ಶ್ರೀ ಕಂಠಯ್ಯನವರು ಪಾಪ ನೆಗಡಿ ಹತ್ತಿ ಸೀನ್ತಾ ಇದ್ರೆ ಅವರ ಮಕ್ಕಳು ಸುತ್ತ ನಿಂತು ಒಂದು ಎರಡು ಮೂರು ಹತ್ತು ಅಂತ ಎಣ ಇಸಿಕೊಂಡು ಕುಣೀತಾ ಇದ್ರಂತೆ. ಹೀಗೆ ನಮ್ಮ ನೆಗಡಿ ಸೀನುಗಳಿಗೆ ಮೂರು ಕಾಸಿನ ಬೆಲೇನೂ ಇಲ್ಲವಲ್ಲ ಅಂತ ನನಗೆ ಸಂಕಟ ಅಷ್ಟೆ. ಹೋಗಲಿ ಡಾಕ್ಟರ್ ಹತ್ರ ಹೋದರೆ ಅವರು ಹೇಳ್ತಾರೆ. ನೆಗಡಿ ಸಾರ್ ನೆಗಡಿಗೆ ಔಷಧ ತಗೊಂಡ್ರೆ ಒಂದು ವಾರದಲ್ಲಿ ಗುಣ ಆಗುತ್ತೆ. ಹಾಗೇ ಬಿಟ್ರೆ ಏಳು ದಿನದಲ್ಲಿ ಗುಣ ಆಗುತ್ತೆ ಅಂತ ತಮಾಷಿ ಮಾಡ್ತಾರೆ. ಅಥವಾ ಯೋಗಿಗಳ ಹಾಗೆ 'ಮೂಗಿರೋ ತನಕ ನೆಗಡಿ ತಪ್ಪಿದ್ದಲ್ಲ' ಅಂತ ತಮಗೆ ಮೂಗೇ ಇಲ್ಲದವರ ಹಾಗೆ ಆಡ್ತಾರೆ.

ಆ : ಮತ್ತ ನಾಸೀ ಪುಡಿ ಮೂಗಿನ ರಂಧ್ರಕ್ಕೆ ಏರಿತಂದ್ರ, ನೆಗಡಿ ಓಡಿ ಹೋಗ್ತದ ಅಂತಾರಲ್ಲ.

ಭೂ : ಈಗ ನೆಶ್ಯ ಹಾಕೊರೆ ಸಿಗೋಲ್ಲವಲ್ಲ. ನಂಗೋ ನೆಗಡಿ ಹತ್ತಿದಾಗ ಶಬ್ದಗಳೇ ಸರಿಯಾಗಿ ಬರೋಲ್ಲ. 'ನ'ಕಾರ ವಂತೂ ಬಿಲ್‌ಕುಲ್ ಬರೋಲ್ಲ. ನನ್ನ ಮಕ್ಕಳನ್ನು ಕೂಗೋಕಾಗಲ್ಲ. ಒಬ್ಬಳ ಹೆಸರು ಬಿಂದು ಅಂತ ಇನ್ನೊಬ್ಬಳು ಸಿಂಧು. ಬಿದ್ದು ಸಿದ್ಧು ಅಂತ ಕೂಗ್ತೀನಿಂತ ಅವರು ಆಡಕೋತಾರೆ. ಒಂದ್ ಸಲ ಒಬ್ಬ ನೆಶ್ಯ ಹಾಕೋನ್ನೇ ಹುಡುಕಿಕೊಂಡು ಹೋಗಿ ''ನೆಗಡಿ ಆಗಿದೆ. ದೆಶ್ಯ ಕೊಡೋ'' ಅಂತ ಕೇಳಿದೆ ಆ ಪ್ರಾಣೀಗೆ ನನಗಿಂತ ಭಯಂಕರ ನೆಗಡಿ

''ದಗ್ಗೇ ಇಲ್ಲ, ದಿಗ್ಗಲ್ಲಿ ಕೊಡ್ಲಿ'' ಅಂದ.

ಆ : ಅಂದ್ರ ನೆಗಡಿ ಅಂದ್ರ ಉಪಯೋಗಕ್ಕೆ ಬಾರದ, ಮಾನ ಕಳೀಲಾಕೇ ಹುಟ್ಟಿರೋಂಥ ರೋಗ ಅಂತ ನಿನ್ನ ಭಾವನಾ ಅನ್ನು.

ಭೂ : ಉಪಯೋಗಕ್ಕೆ ಬರೋಲ್ಲ ಅಂತ ನಾನೇನು ಹೇಳಿಲ್ಲ. ಎಲ್ರೂ ಆಡಕೋತಾರಲ್ಲ ಅನ್ನೋದನ್ನ ಹೇಳಿದೆ ಅಷ್ಟೆ. ನಿಮ್ಮ ಸೀಮೆ ಕಡೆ

'ಬೆಳ್ಳಿ ಛಡಿ ನೆಲಕ್ಕೆ ಹೊಡಿ'

ಅಂತ ಒಂದು ಗಾದೆ ಇದೆ ಗೊತ್ತ. ಅಂದರೆ ನೆಗಡಿ ಆದಾಗ ಮೂಗು ಕಟ್ಟಿಕೊಂಡಾಗ ಆ ಮೂಗನ್ನ ಬಡಿದು ಬೆಳ್ಳಿ 'ಛಡಿ' ಅಂದ್ರೆ ಬಿಳೀ ಕೋಲನ್ನ ನೆಲಕ್ಕೆ ಎಸೆ ಅಂತ ಅರ್ಥ. ಅಂದ್ರೆ ಹೀಗೆ ಮೂಗು ವಾದನ ದಂಡವೂ ಆಗುತ್ತೆ. ಈ ದಂಡನ ನೀವು ಆಗಾಗ ಬಳಸ್ತಾ ಇದ್ರೆ ಯಾರೂ ನಿಮ್ಮ ಹತ್ರ ಸುಳಿಯೋದಿಲ್ಲ. ಯಾರಾದ್ರೂ ಚಂದಾ ಕೇಳೋಕೆ ಸಲಹೆ ಕೇಳೋಕೆ ಬಂದಾಗ ನೀವು ಲಕ್ಷಣವಾಗಿ ಒಂಟಿ ಸೀನು ಭಯಂಕರವಾಗಿ ಸೀನಿಬಿಟ್ಟು ಅವರನ್ನ ದೂರ ಹಾಕಬಹುದು. ಹೀಗೆ ಇನ್ನೂ ಬೇಕಾದಷ್ಟು ಉಪಯೋಗಗಳೂ ಮೂಗಿಂದ ಆಗಿವೆ.

ಆ : ಉಪಯೋಗ? ನೆಗಡಿಯಿಂದ...... ಹೆಂಗಪ್ಪ?

ಭೂ : ಮೊದಲೇ ಗೊರಕೆ ಆಸಾಮಿ ನಾನು. ನೆಗಡಿ ಆದಾಗ ನನ್ನ ಗೊರಕೆಗೆ ಎಂಥ ಗಾನ ವೈಭವ, ಶಬ್ದ ವೈಭವ ಬರುತ್ತೆ ಗೊತ್ತ? ನನಗೋ ಉಳಿದವರಂತೆ ಅಲ್ಲ. ವರ್ಷಕ್ಕೆ ಎರಡೇ ಸಲ ಬರೋದು ನೆಗಡಿ. ಒಂದೊಂದು ಸಲ ಬಂದಾಗ್ಲೂ ಆರಾರು ತಿಂಗಳು ಇರುತ್ತೆ ಅಷ್ಟೆ. ನಮ್ಮ ಮನೆ ಪಕ್ಕದ ಮನೆಯೋರು ನನ್ನ ಸಂಗೀತಾಭ್ಯಾಸವನ್ನು ಮೆಚ್ಚುವ ಸಹನೆ ಇಲ್ಲ ಅವರಿಗೆ. ಪಾಪ ಗಂಡ ಹೆಂಡತಿ ಅನ್ಯೋನ್ಯವಾಗಿದ್ದೋರು ಬರ‍್ತಾ ಬರ‍್ತಾ ರಾತ್ರಿಯೆಲ್ಲ ನಿದ್ದೆ ಇಲ್ಲದೆ ಶಬ್ದ ಮಾಲಿನ್ಯದಿಂದ ಬಳಲಿ ಜ್ವರ, ತಲೆನೋವು, ಅಸಹನೆ ಅಂಟಿಸಿಕೊಂಡು ಎರಡೇ ವರ್ಷದಲ್ಲಿ ಮನೇನ ನನಗೇ ಮಾರಿ ಬೇರೆ ವಿಸ್ತರಣಕ್ಕೆ ಹೊರಟು ಹೋದ್ರಲ್ಲ. ನೆಗಡಿಯಿಂದ ಮನೆ Cheap ಆಗಿ ಸಿಕ್ಕೋ ಹಾಗೆ ಆಯ್ತೋ ಇಲ್ಲವೋ?

ಆ : ನೀನು ಇಷ್ಟು ಗೊರಕಿ ಹೊಡೀತಿ ಅಂದ ಮ್ಯಾಲ ಕಳ್ಳರು ನುಗ್ಗಿದರ ಏನ ಮಾಡ್ತಿ.

ಭೂ : ನೆಗಡಿ ಇದ್ದಾಗ ನನ್ನದು Sound Sleep ಉ ನಿಜ. Sound Sleep ಅಂದ್ರೆ ಗೊತ್ತಲ್ಲ. ನಮಗೆ ನಿದ್ದೆ ಬೇರೆಯೊರಿಗೆ Sound ಉ. ಆದರೆ ಕಳ್ಳರು ನಮ್ಮ ಮನೇ ತನಕ ಬಂದು ಹಾಗೇ ಹೋಗಿದಾರಂತೆ. ಒಳಗೆ ಯಾವುದೋ ಹ್ಯಾಂಡ್ ಲೂಮ್ ಫ್ಯಾಕ್ಟರೀಲಿ ನೈಟ್ ಷಿಫ್ಟ್ ಕೆಲಸ ನಡೀತಿದೆ ಅಂತ ತಿಳ್ಕೊಂಡರಂತೆ ಶಬ್ದ ಕೇಳಿ. ಎದುರು ಮನೆಯವರು ಈ ವಿಷಯ ಹೇಳಿದ್ದು ಗೊತ್ತ?

ಆ : ಮತ್ತ ನಿಮಗೆ ನೆಗಡಿ ಭಯಂಕರ ಗೊರಿಕಿ. ನಿಮ್ಮ ಮನೆಯವರಿಗೆ ಏನೂ ತ್ರಾಸ ಆಗೋದುಲ್ಲೇನು?

ಭೂ : ಏನಿಲ್ಲ. ನಮ್ಮ ಮನೆಯವರಿಗೆಲ್ಲ ಈ ಸಮೂಹ ವಾದ್ಯದ ತರಪೇತಿಯನ್ನು ಕೊಟ್ಟು ಬಿಟ್ಟಿದೀನಿ. ಒಂದೊಂದು ಸಲ ನಾನು ಸುಮ್ಮನಾದಾಗಲೂ ಅವರು ಜೋಡಿ ವಾಲಗ, ತಬಲ ಹಾರ್ಮೋನಿಯಂ ಎಲ್ಲ ವಾದ್ಯಗಳನ್ನೂ ನುಡಿಸೋ 'ನಾಸಿಕ ಶಕ್ತಿ' ಹೊಂದಿದಾರಾದ್ರಿಂದ ನಮ್ಮ ಕುಟುಂಬದಲ್ಲಿ ಸಾಮರಸ್ಯ ಇದೆ. " Rock'n roll, classical flok tunes' ಎಲ್ಲಾ ಇರೋದ್ರಿಂದ ವೈವಿಧ್ಯಪೂರ್ಣವಾಗೂ ಇರತ್ತೆ. ಅಲ್ಲದೆ ನಮ್ಮ ಮನೆಗೆ ಬಂದ ಅತಿಥಿಗಳು ಕೂಡ ಯಾವತ್ತೂ ಎರಡನೇ ದಿನ ನಮ್ಮಲ್ಲಿ ಠಿಕಾಣಿ ಹೂಡೋಲ್ಲ. ಇರಿ ಅಂತ ನಾವೇ ಬಲವಂತ ಮಾಡಿದ್ರೂ ಕೂಡ ತಪ್ಪಿಸಿಕೊಂಡು ಹೋಗ್ತಾರೆ. ಅವರಿವರು ಯಾಕೆ? ಅಕ್ಕ ಪಕ್ಕದ ಮನೆಯವರೇ ಹೂ ಬತ್ತಿ ಮಾಡಿ ಕಿವೀಲಿ ಇಟ್ಕೊಂಡು ರಾತ್ರಿಯೆಲ್ಲ ನಮ್ಮ ವಾದ್ಯಗೋಷ್ಠಿಗೆ ಗೌರವ ತೋರುಸ್ತಾರೆ. ನಾನು ಬಯಲಲ್ಲಿ ಸೀನಿದ್ದಕ್ಕೆ ಕೆಳಗಡೆ ಮನೇಲಿ ಯಜಮಾನರು ಬೆಚ್ಚಿ ಅವರ ಕನ್ನಡಕಾನೇ ಬಿದ್ದು ಒಡೆದು ಹೋಯ್ತಂತೆ. ಅದಕ್ಕೆ ಅವರು ಸೀನೋವಾಗ ಇದನ್ನು ಇಟ್ಕೊಳಿ ಅಂತ ಸೊಗಸಾದ ಒಂದು ಟರ್ಕಿ ಟವೆಲ್ ತಂದು ಕೊಟ್ಟಿದಾರೆ ಗೊತ್ತ? ನಾನು ಬೀದೀಲಿ ಹೋಗ್ತಾ ಇದ್ರೆ ಎಲ್ಲಿ ಸೀನಿ ಬಿಡ್ತೀನೋ ಅಂದ ಹೆದರಿ ಎಲ್ಲಾ ಮನೆಯವರೂ ಬಾಗಿಲು ಬಡಕೆಕೊಂಡು ಕಿವೀಗೆ ಶಾಲು ಸುತ್ತಿಕೊಂಡು ಕಿಟಕಿಯಿಂದ ನನಗೆ ಗೌರವ ಪೆರೇಡ್ ಸಲ್ಲಿಸ್ತಾರೆ ಗೊತ್ತ?

ಆ : ಅಂದ್ರ. ನೆಗಡಿ ಸೀನುಗಳು ಕೂಡ ನಿಮಗೆ ಸಹಾಯಕಾರಿ ಅನ್ನು.

ಭೂ : ಮತ್ತೆ, ನಾನು ಮೂಗು ಬಡಕೋತ ಅಂಗಡಿಗೆ ಹೋದರೆ, ಸಿನಿಮಾ ಕ್ಯೂನಲ್ಲಿ ಸೇರಿದ್ರೆ, ರೇಷನ್ ಅಂಗಡಿಗೆ ಹೋದರೆ ಎಲ್ಲಾರೂ ನನಗೇ ಮೊದಲು ದಾರಿ ಬಿಟ್ಟು ಗೌರವದಿಂದ ನೀವು ಹೋಗಿ ಅಂತ ಕೈಸನ್ನೆ ಮಾಡ್ತಾರೆ ಗೊತ್ತ? ಅಲ್ಲದೆ ನೆಗಡಿ ಒಬ್ಬರಿಂದ ಇನ್ನೊಬ್ಬರಿಗೆ ಸುಲಭವಾಗಿ ಹರಡಬಹುದಾದ ರೋಗಾಣುಗಳನ್ನು ಹೊಂದಿರುವುದರಿಂದ ನಾನೂ ಪರೋಪಕಾರದ ಬುದ್ಧಿಯಿಂದ ಜನರ ಮಧ್ಯೆ ಬೆರೀತೀನಿ. ನಮ್ಮಲ್ಲಿರೋ ಸಂಪತ್ತನ್ನು ಎಲ್ಲರಿಗೂ ಹಂಚಬಹುದಾದ ಇಂಥ ಅಪೂರ್ವ ಅವಕಾಶಗಳನ್ನು ನಾನು ಕಳಕೊಳೋದೆ ಇಲ್ಲ. ಫ್ಲೂ ಮತ್ತು ನೆಗಡಿ ಅವಳಿ ಸಂತಾನಗಳಲ್ಲವೆ. ಫ್ಲೂ ಬಂದೋರು ಸಂಕ್ರಾಂತಿಯಲ್ಲಿ ಎಳ್ಳು ಬೀರುವವರ ಹಾಗೆ ಎಲ್ಲರಿಗೂ ಹರಡುಲ್ಲವೆ? ಅದನ್ನೇ

ಫ್ಲೂವನು ಮಾರುತ ಫ್ಲೂವಾಡಗಿತ್ತಿ ಹಾಡುತ ಬರುತಿಹಳು ಅಂತ ಭೂ ಬಾಣದ ರಾಮಚಂದ್ರರಾಯರು ಮೆಚ್ಚಿ ಹಾಡಲಿಲ್ಲವೆ. ಅಂಥ ಭಯಂಕರ ಫ್ಲೂನಷ್ಟು ಹಿಂಸೆ ಕೊಡದ ಸೋರು ಮೂಗಿನ ಮಹಿಮೆಯನ್ನು ಎಲ್ಲಕಡೆ ಹರಡಿದರೆ ತಪ್ಪೇನು?

ಆ : ಮತ್ತ ಮೂಗು ಅಂದ್ರ ಒಡಕು ಮಡಿಕೇ ಅಂತ ಹೇಳಿದವ. ಈಗ ಅದರಿಂದ ಉಪಯೋಗಗಳೂ ಅವ ಅನ್ಲಿಕ್ ಹತ್ತೀಯಲ್ಲ.

ಭೂ : ನೋಡಪ್ಪ, ನಿಮ್ಮ ನೆತ್ತಿ ತಂಪಾಗಿರಲಿ ಅಂತ ಎಲ್ಲಾ ಹೇಳ್ತಾರೆ. ನಾನು ಮೂಗು ತಂಪಾಗಿರಲಿ ಅಂತ ಹಾರೈಸೋ ಮನುಷ್ಯ. ಮೂಗು ಇದೇ ಮುಖಾನೇ ಹತೋಟೀಲಿ ಇಟ್ಕೊಳುತ್ತೆ ಗೊತ್ತ. ನೆಗಡಿಯಿಂದ ತಂಪಾದ ಮೂಗು, ಸೀನುಗಳನ್ನು ಕಳಿಸಲು 'ತೆರೆದ ಬಾಗಿಲು ನಾನು' ಅಂತ ಕೂಗುವ ಬಾಯಿ, ಸೀನಿಗೆ ಸಹಕರಿಸಿ ಮುಚ್ಚುವ ಕಣ್ಣು

ಆ : ಅಂದ್ರ?

ಭೂ : ಅಂದ್ರೆ. ನೀನು ಸೀನೋವಾಗ ಕಣ್ಣು ಬಿಟ್ಕೊಂಡಿರೋಕೇ ಸಾಧ್ಯವಿಲ್ಲ ಗೊತ್ತ. ಕಣ್ಣು ಮುಚ್ಚಿರಲೇ ಬೇಕು. ಇಂಗ್ಲಿಷನಲ್ಲಿ ಒಂದು ಗಾದೇನೆ ಇದೆ. ''ನಿಮಗೆ ಅಸಾಧ್ಯವಾದದ್ದು ಯಾವ್ದೂ ಇಲ್ಲ ಅಂತೀರಾ? ಹಾಗಾದರೆ ಸೀನುವಾಗ ಕಣ್ಣುಮುಚ್ಚದೆ ಇರಲು ಸಾಧ್ಯವೇ ಇಲ್ಲ''.

ಆ : ಸಾಕು ಬಂದ್ ಮಾಡಲೇ ನಿನ್ನ ಬಾಯಿ. ನಿನ್ನ ಮಾತು ಕೇಳ್ತಾ ಕೇಳ್ತಾ ನನಗೂ ನೆಗಡಿ ಬಂದರ ಭಲೋ ಅನ್ನಿಸ್ಲಿಕ್ ಹತ್ತಿದೆ.

ಭೂ : ನಿಲ್ಲಿಸ್ತೀನಪ್ಪ. ನೆಗಡಿ ಪುರಾಣ ಅಂದ್ರೆ ವಿಠಲ ಭಟ್ಟರ ಪುರಾಣ ಇದ್ದ ಹಾಗೆ. ವಿಠಲ ಭಟ್ಟರ ಪುರಾಣ ಬಿಟ್ಟಲ್ಲಿಗೇ ಮುಕ್ತಾಯ ಅಂತ ಗಾದೆ ಕೇಳಿದೀಯಲ್ಲ. ನೆಗಡಿಯಿಂದ ಇನ್ನೂ ನೂರಾರು ಪ್ರಯೋಜನ ಇದೆ. ನೀನು ಈಗಾಗ್ಲೇ ಆಕಳಿಸ್ತಾ ಇರೋದ್ರಿಂದ ಒಂದು ಕೊನೇದು ಹೇಳಿ ಮುಗಿಸಿ ಬಿಡ್ತೀನಿ.

ಆ : (ಆಕಳಿಸುತ್ತಾ) ಅದು ಏನ ಒದರು ಲಗು

ಆದೆಂದರೆ ವಾಸನಾ ಬಲ ಕಳಕೊಳ್ಳೋದು. ನೆಗಡಿ ತೀವ್ರವಾಗಿರೋರು ಯೋಗಿಗಳು ಹೇಳೋ ಹಾಗೆ ಎಲ್ಲ ಬಗೆಯ ವಾಸನಾ ಬಲವನ್ನೂ ಕಳಕೊಂಡಿರ್ತಾರೆ. ದುರ್ಗಂಧಮಯವಾದ ಈ ನಗರ ಜೀವನದಲ್ಲಿ ನೆಗಡಿಯವರಿಗೆ ಈ ದುರ್ವಾಸನೆಯ ಭಾನಗಡಿಯೇ ಇಲ್ಲ. ಮೊನ್ನೆ ಮಲ್ಪೆ ಸಮುದ್ರ ತೀರಕ್ಕೆ ಹೋಗಿದ್ದಾಗ ನನ್ನ ಜತೆಯವರೆಲ್ಲ ಮೀನಿನ ವಾಸನೆಗೆ ಮೂಗು ಮುಚ್ಚಿಕೊಂಡರೆ ನಾನು ನೆಗಡಿ ವ್ರತದ ಮಹಿಮೆಯಿಂದ ವಾಸನಾತೀತನಾಗಿ ಮೂಗನ್ನು ಮೇಲೆತ್ತಿಕೊಂಡು ಓಡಾಡುತ್ತಿದ್ದೆ. ಬೆಂಗಳೂರಿನಲ್ಲಿ ಬೀದಿ ಬೀದಿಯಲ್ಲಿ ವಿಜೃಂಭಿಸುವ ತುಂಬಿದ ಕಸದ ತೊಟ್ಟಿಗಳ ವಾಸನೆಯಾಗಲಿ, ಚರಂಡಿ ಕಾಲುವೆಗಳ ದುರ್ಗಂಧವಾಗಲಿ ನನ್ನ ಮೇಲೆ ಧಾಳಿ ಮಾಡಲಾಗದೆ ಮೂಗು ಮುಚ್ಚಿಕೊಂಡು ಬಿದ್ದಿರುತ್ತವೆ. ಸಾಹಿತ್ಯದಲ್ಲಿ ಮಣ್ಣಿನ ವಾಸನೆ ಇರಬೇಕು ಅಂತ ಹೇಳಿದ ಸಾಹಿತಿಗಳೆಲ್ಲ ಟಾರ್ ರೋಡಿನಲ್ಲಿದ್ದ ನಗರವಾಸದ ನೆಗಡಿ ಪೀಡಿತರಲ್ಲವೆ. ಯಾವ ದುರ್ಗಂಧ ಕೂಡ ನಮ್ಮ ಮೂಗಿನ ಕೋಟೆಯನ್ನು ದಾಟಿ ಒಳನುಗ್ಗಲಾರದು ಅನ್ನೋ ಧೈರ್ಯ ನನಗಿದೆ.

ಆದ್ದರಿಂದ ನೆಗಡಿಗೆ ಜಯವಾಗಲಿ ದುರ್ವಾಸನಾ ನಿರ್ಮೂಲನಾಚಾರ್ಯ ನಾಸಿಕಕ್ಕೆ ಜಯವಾಗಲಿ. ನಾಸಿಕ ಘೋಷ ಪಡು ನೆಗಡಿಗೆ ಜಯವಾಗಲಿ.



''ಸ್ಕೂಲಿಗೇನು ದಿನಾ ಇರತ್ತೆ, ಒನ್‌ಡೇ ಕ್ರಿಕೆಟ್ ಒಂದೇ ದಿನಾ ಅಂತ ಅಳ್ತಾನೆ''

ಗಿಡ್ಡ ಹೆಂಡತಿ ಲೇಸೆ?

ಭುವನೇಶ್ವರಿ ಹೆಗಡೆ

ಗಿಡ್ಡ ಹೆಂಡತಿ ಲೇಸು ಎಂದು ಸಾರಿದ ಸರ್ವಜ್ಞನಿಗೆ ಮದುವೆ ಆಗಿತ್ತೆ? ಅವನ ಮತ್ತು ಅವನ ಹೆಂಡತಿಯ ಉದ್ದ ಎಷ್ಟಿತ್ತು? ಎಂಬುದರ ಕುರಿತು ಏನೇನೂ ಸಂಶೋಧನೆಯಾದಂತಿಲ್ಲ. ಗಿಡ್ಡ ಹೆಂಡತಿಯ ಲೇಸುಗಳು ಯಾವ್ಯಾವುವೆಂದು ಸರ್ವಜ್ಞ ಪಟ್ಟಿ ಮಾಡಿಟ್ಟಿಲ್ಲ. ... ಎಂದು ನಮ್ಮೂರ ಜನಪದ ವಿದ್ವಾಂಸ ತಿಪ್ಪಣ್ಣನವರು ಭಾವೀ ಡಾಕ್ಟರೇಟುಗಳಿಗೆ ಇತ್ತೀಚೆಗೆ ಕರೆಯಿತ್ತರು.

'ಸರ್ವಜ್ಞನ ದೃಷ್ಟಿಯಲ್ಲಿ ಹೆಂಡಂದಿರ ಎತ್ತರ - ಒಂದು ಜಿಜ್ಞಾಸೆ' ಎಂಬ ಸೆಮಿನಾರೊಂದನ್ನು ಉದ್ಘಾಟಿಸಿದಾಗ ಅವರಾಡಿದ ಮಾತಿದು. ಸೆಮಿನಾರಿನುದ್ದಕ್ಕೂ ಗಂಡ ಹೆಂಡತಿಯರ ಎತ್ತರ ಭೇದದ ಕುರಿತು ಚರ್ಚೆಯೋ ಚರ್ಚೆ ನಡೆದು ಪ್ರತಿಯೊಂದು ಶಬ್ದಕ್ಕೂ ವಾಚ್ಯಾರ್ಥ ಗೂಢಾರ್ಥ, ಜೀನಿಯಸ್ಸುಗಳು ಮಾತ್ರ ಕಂಡು ಹಿಡಿಯಬಹುದಾದ ವಿಪರೀತ ಅರ್ಥ .... ಎಂದೆಲ್ಲ ಅನರ್ಥಗಳು ಘಟಿಸುತ್ತಲೇ ಇದ್ದವು.

ಹೆಂಡತಿಯಾದವಳು ಭೌತಿಕವಾಗಿಯೂ ಭೌದ್ಧಿಕವಾಗಿಯೂ ಗಂಡನಿಗಿಂತ ಎತ್ತರಕ್ಕಿರಬಾರದು. ಅವನಿಗಿಂತ ಗಿಡ್ಡವಿದ್ದು ಸದಾ ಅವನ ನೆರಳನ್ನೇ ಅನುಸರಿಸಿಕೊಂಡಿರಬೇಕು ಎಂಬುದೇ ಸರ್ವಜ್ಞನ ಒಳ ಇಂಗಿತವಾದ್ದರಿಂದ ಆತನಿಗೆ 'ಪುರುಷ ಪಕ್ಷಪಾತಿ' ಎಂದೂ ಆರೋಪಿಸಲಾಯ್ತು.

ಆದರೆ ಜೀವನದ ಕುರಿತು ಸಾಕಷ್ಟು ವಿನೋದದ ದೃಷ್ಟಿಕೋನ ಹೊಂದಿದ್ದ ಸರ್ವಜ್ಞ ಸೊಗಸುಗಾರನಾಗಿ ಜೀವನವನ್ನು ಅನುಭವಿಸಬೇಕೆಂಬ ಮನೋಧರ್ಮದವನಾಗಿದ್ದ ಎಂಬುದು ಸೆಮಿನಾರಿನ ಪ್ರೇಕ್ಷಕ ಸಮೂಹದಲ್ಲಿ ಕುಳಿತಿದ್ದ ನನ್ನ ಅಭಿಪ್ರಾಯವಾಗಿತ್ತು. ಸ್ವರ್ಗಕ್ಕೆ ಕಿಚ್ಚು ಹಚ್ಚಿ ಸುಖಪಡುವುದಾಗಲಿ, ಪಾಯಸದ ಸುರುಕನ್ನು ಸುರಿಯುತ್ತ ಸುಖಿಸುವದಾಗಲಿ ಗೊಡ್ಡು ವಿರಕ್ತರ ಬಾಯಿಂದ ಬರುವ ಮಾತಲ್ಲ. ಅದಕ್ಕೇ ಆತ ಲಿಲ್ಲಿಪುಟ್ಟಿಯೊಬ್ಬಳು ಮನೆಯೊಳಗೆ ಪುಟ ಪುಟ ಪುಟಾ ಓಡಾಡಿಕೊಂಡಿದ್ದರೆ ಅಷ್ಟಿಷ್ಟು ನಗೆಯಾಡಲು ಅವಕಾಶವಾಗಿ ಸಾಂಸಾರಿಕ ಬೇಸರಕ್ಕೆ ಪರಿಹಾರ ದೊರಕೀತು ಎಂದಾಶಿಸಿರಬಾರದೇಕೆ? ಸಮಾಜಶಾಸ್ತ್ರಜ್ಞರಿಗಿಲ್ಲದ ವಿನೋದ ದೃಷ್ಟಿ ಕವಿಗಳಿಗಿರಬಾರದೆಂದಿಲ್ಲ ಅಲ್ಲವೆ?

ನಮ್ಮ ಪಕ್ಕದ ಮನೆ ನಾಣಿ ಸರ್ವಜ್ಞನ ಬೋಧನೆಯನ್ನು ಪಾಲಿಸಿ ಗಿಡ್ಡ ಹೆಂಡತಿಯೇ ಲೇಸೆಂದು ವಾದಿಸಿ ನಾಲ್ಕಡಿ ಮೂರಿಂಚು ಉದ್ದದ ಮಂಗಳೆಯನ್ನು ಮದುವೆಯಾದ. ಮದುವೆಗೆ ಹೋದವರಿಗೆಲ್ಲ ವಧುವರರ 'ಎತ್ತರಾಂತರ' ನೋಡಿಯೇ ಮನರಂಜನೆ ಆದಂತಾಗಿ ಧಾರೆಯೆರೆಯುವಾಗ ಸಹ ಒಂದಾದರೂ ಅಳುಮೂತಿ ಸೊರಸೊರ ಮಾಡಲಿಲ್ಲ. ಬದಲು ಆರಡಿಯ ನಾರಾಯಣ ಮೂರಡಿಯ ಮಂಗಳೆಯಿಂದ ಬಗ್ಗಿ ಮಾಲಾರ್ಪಣೆ ಮಾಡಿಸಿಕೊಂಡಾಗ ಪ್ರೇಕ್ಷಕ ಸಮೂಹ ಚಪ್ಪಾಳೆಯಿಕ್ಕಿತ್ತು.

ಮದುವೆ ಮುಗಿಸಿ ಮದುಮಕ್ಕಳು ಸಿವಿಲ್ ಡ್ರೆಸ್ಸಿನಲ್ಲಿ ಹೊರಬಿದ್ದಾಗಲೇ ಎಲ್ಲೋ ಒಂದು ಪಿಸುಕಾಮೆಂಟು ಕೇಳಿ ಬಂತು. 'ಚೆನ್ನಿದಾಂಡು ಕಣ್ರೋ'' ಎಂದು. ತೆಳ್ಳಗೆ ಕಡ್ಡಿಯಂತಿದ್ದ ಆರಡಿ ನಾರಾಯಣನಿಗೂ ದಪ್ಪಗೆ ಗುಂಡಗಿದ್ದ ಮೂರಡಿ ಮಂಗಳೆಗೂ ಅದಕ್ಕಿಂತ ಸೂಕ್ತ ಹೋಲಿಕೆ


ಬೇರೆ ಇರಲು ಸಾಧ್ಯವೇ ಇರಲಿಲ್ಲ. ಅನಂತರವೂ ಅಷ್ಟೆ. ಅವರಿಬ್ಬರ ಸಾಂಸಾರಿಕ ಸಂಭಾಷಣೆಯ ನೋಟವೇ ಒಂದು ಹಬ್ಬ. ಮಂಗಳೆ ಗಂಡನ ಬಳಿ ಏನಾದರೂ ಪ್ರಶ್ನಿಸುವಾಗ ಆಗಸಕ್ಕೆ ಮೊಗವೆತ್ತಿದಂತೆ ಮಾಡಿ ಕೇಳುವದೂ ಅದಕ್ಕೆ ಆತ ಕೆಳಗೆ ಪ್ರಪಾತ ನೋಡುವ ಭಂಗಿಯಲ್ಲಿ ಉತ್ತರಿಸುವದೂ ನಡೆದಿತ್ತು.

ಇಡೀ ಮನೆಯ ಸಮಸ್ತ ಚರಾಚರ ವಸ್ತುಗಳೂ ಮಂಗಳೆಯ ಕೈಯೆಟುಕಿಗೆ ಸಿಗುತ್ತಿರಲಿಲ್ಲವಾದ್ದರಿಂದ ಅವಳಿಗೆ ಸೂಕ್ತವಾದ ಒಂದು ಡಿಸೈನಿನ ಸ್ಟೂಲು ಮಾಡಿಸಿ ತಂದಂದಿನಿಂದ ಆ ಸ್ಟೂಲು ಕಾಲು ಕಾಲಿಗೆ ಸಿಗತೊಡಗಿತು. ನಾರಾಯಣ ಆಫೀಸಿನಿಂದ ಬಂದು ಬಾಗಿಲ ಗಂಟೆ ಒತ್ತಿದಾಕ್ಷಣ ಮೊದಲು ಒಳಗಿಂದ ಪುಟು ಪುಟು ಓಡಿ ಬರುವ ಸದ್ದು ಕೇಳಿಸುವದು. ಆಮೇಲೆ ಸ್ವಲ್ಪ ಹೊತ್ತು ನಿಶ್ಯಬ್ಧ. (ಬಾಗಿಲ ಕೆಳಗೆ ನಿಂತು ಬೋಲ್ಟು ಸಿಗದ್ದಕ್ಕಾಗಿ ಮಂಗಳೆಯ ಮೂಕ ರೋದನ) ಮತ್ತೆ ಹೆಜ್ಜೆ ಸಪ್ಪಳ (ಸ್ಟೂಲಿಗಾಗಿ ಹುಡುಕಾಟ) ಸ್ಟೂಲು ತಂದು ಕುಕ್ಕಿದ ಸಪ್ಪಳ. ಸ್ಟೂಲೇರಿ ನಿಂತು ಬೋಲ್ಟು ತೆಗೆದು ಗಂಡನನ್ನು ಒಳಕ್ಕೆ ಸೇರಿಸಿಕೊಳ್ಳುವ ಪರಿಯಲ್ಲೇ ನಾರಾಯಣನ ಆಫೀಸಿನ ತಲೆನೋವು ಮಾಯವಾಗುತ್ತವೆ. ಬಟ್ಟೆ ಒಣಗಿಸಲು ತೆಗೆಯಲು, ಪಾತ್ರೆ ಇಡಲು ತೆಗೆಯಲು, ಡಬ್ಬ ಮೇಲಿಟ್ಟು, ಕೆಳಗಿಟ್ಟು ಕುಕ್ಕರ್ ಹತ್ತಿಸಿ ಇಳಿಸಿ. ಮಂಗಳೆಯ ದೇಹ ಯಾವುದೇ ಕಾರ್ಯದಲ್ಲಿ ತೊಡಗಿರಲು ಕಾಲಡಿಗೊಂದು ಸ್ಟೂಲು ಮಾತ್ರ ಇದ್ದೇ ಇರುತ್ತದೆ. ಅದನ್ನೇ ಸದಾ ಕಾಲ ನೋಡಿ ನೋಡಿ ನಾರಾಯಣನ ಸುಪ್ತ ಚಿತ್ತದಲ್ಲಿ ಅಚ್ಚೊತ್ತಿದ ಹೆಂಡತಿಯ ಪೂರ್ಣ ಪ್ರಮಾಣದ ಚಿತ್ರ ಸ್ಟೂಲು ಸಹಿತವಾದ ಮಂಗಳೆಯದೇ ಆಗಿ ಹೋಗಿದೆ.

ಮಂಟಪದಲ್ಲಿ ಬಗ್ಗಿ ಹಾರ ಹಾಕಿಸಿಕೊಂಡ ನಾಣಿಗೆ ಈಗ ಮನೆಯಲ್ಲಿ ಬಗ್ಗಿ ನಡೆಯುವದೇ ಆಗಿದೆ. ಮಂಗಳೆ ಮೊಳೆ ಹೊಡೆದು ತೂಗಾಡಿಸಿದ ಕನ್ನಡಿಯಲ್ಲಿ ಮುಖ ನೋಡಿಕೊಳ್ಳಲು, ಕ್ಯಾಲೆಂಡರ್‌ನಲ್ಲಿ ರಜಾ ವಿವರ ನೋಡಲು ಹೀಗೆ ಮಂಗಳೆ ಸ್ಟೂಲು ಏರಿದ ಹಾಗೆ ಇವನೂ ಕತ್ತು ಬೆನ್ನ ಬಗ್ಗಿಸಿ ದಿನದ ಅನೇಕ ಕೆಲಸ ಮಾಡುತ್ತಾನೆ.

ಮೊನ್ನೆ ಯಾರೋ ಸ್ನೇಹಿತರು ನಾರಾಯಣನ ಬಳಿ ಗಿಡ್ಡ ಹೆಂಡತಿ ಲೇಸೆ? ಎಂದು ಕೇಳಿದಾಗ ನಾಣಿ ಮೊದಲು ಸ್ಟೂಲು ನೋಡಿ ನಿಟ್ಟುಸಿರಿಟ್ಟು ನಂತರ ಸೂರು ನೋಡಿದನಂತೆ.

★★★



''ಘಟ ಯಾಕೋ ನೆನಪು ಬರುತ್ತೆ ನಿನ್ಗೆ''

ಸಭಾಪತಿಯ ಫಜೀತಿ

ಎಚ್. ದುಂಡಿರಾಜ್

ಸಭಾಪತಿ ಅಂದರೆ ಸಭೆಯ ಅಧ್ಯಕ್ಷಸ್ಥಾನ ಅಂತ ನಿಮಗೆಲ್ಲ ತಿಳಿದಿರಬಹುದು ಅಂತ ತಿಳಿದಿದ್ದೇನೆ. ಒಂದು ವೇಳೆ ಯಾರಿಗಾದರೂ ತಿಳಿಯದೆ ಇದ್ದಿದ್ದರೆ ಈಗಲಾದರೂ ತಿಳಿಯುತ್ತದೆ. ಈ ಲೇಖನಕ್ಕೆ ಈಗಿರುವ ತಲೆಬರಹದ ಬದಲು ''ಅಧ್ಯಕ್ಷ ಗಿರಿಯ ಕಿರಿಕಿರಿ'' ಎಂಬ ಹಣೆಬರಹ ನೀಡಬೇಕೆಂದಿದ್ದೆ. ಅಧ್ಯಕ್ಷಗಿರಿ ಎಂದಾಕ್ಷಣ ನಮ್ಮ ಮಾಜಿ ರಾಷ್ಟ್ರಾಧ್ಯಕ್ಷರು ಎಂದು ತಿಳಿದು ಲೇಖನವನ್ನು ಪೂರ್ತಿ ಓದದೆ ಇದು ರಾಷ್ಟ್ರಾಧ್ಯಕ್ಷರನ್ನು ಅವಮಾನಿಸುವ ಬರಹ ಅಂತ ಯಾರಾದರೂ ಆಕ್ಷೇಪಿಸಬಹುದೆಂದು ಕೊನೆಗಳಿಗೆಯಲ್ಲಿ ತಲೆಬರಹ ಬದಲಾಯಿಸಿದೆ.

ಹಾಸ್ಯ ಲೇಖನದಲ್ಲಿ ಸಾಮಾನ್ಯವಾಗಿ ಉತ್ಪ್ರೇಕ್ಷೆ ಇರುತ್ತದೆ. ಅದರಲ್ಲೂ ಕವಿಯೊಬ್ಬ ಹಾಸ್ಯ ಲೇಖನ ಬರೆದರ ಉತ್ಪ್ರೇಕ್ಷೆಯ ಜತೆಗೆ ಕಲ್ಪನಾ ವಿಲಾಸವೂ ಸೇರಿ ವಾಸ್ತವ ಸಂಗತಿಯ ಪ್ರಮಾಣ ತೀರಾ ಕಮ್ಮಿಯಾಗಬಹುದು. ಲೇಖಕ ತನ್ನ ಅನುಭವಕ್ಕೆ ದಕ್ಕಿದ್ದನ್ನು ಮಾತ್ರ ಬರೆಯಬೇಕು ಅಂತ ಡಾ। ಶಿವರಾಮ ಕಾರಂತರು ಆಗಾಗ ಹೇಳುತ್ತಾರೆ. ಅವರ ಮನೆಯಿಂದ ಕೇವಲ ಹತ್ತು ಕಿ.ಮೀ ಹತ್ತಿರದಲ್ಲಿರುವ ನಾನಾದರೂ ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಲ್ಲವೇ? ಆದ್ದರಿಂದ ವಿಚಾರಗೋಷ್ಠಿಯೊಂದರಲ್ಲಿ ಸಭಾಪತಿಯ ಸ್ಥಾನದಲ್ಲಿ ಕುಳಿತಿದ್ದಾಗ ನಾನು ಪಟ್ಟ ಪಾಡನ್ನು ನನಗೆ ಹೊಳೆದ ವಿಚಾರಗಳನ್ನು ಯಾವುದೇ ಉತ್ಪ್ರೇಕ್ಷೆಯಿಲ್ಲದೆ ನಿಮ್ಮ ಮುಂದೆ ಮಂಡಿಸುತ್ತೇನೆ. ಅಂದು ಸಭಾಪತಿಯ ಸ್ಥಾನ ನನಗೆ ಸಿಕ್ಕಿದ್ದು ತೀರಾ ಆಕಸ್ಮಿಕ. ಬೆಂಗಳೂರಿಂದ ಬರಬೇಕಾಗಿದ್ದ ಹಿರಿಯ ಸಾಹಿತಿಗಳೊಬ್ಬರು ಕೊನೆಗಳಿಗೆಯಲ್ಲಿ ಕೈಕೊಟ್ಟದ್ದರಿಂದ ಆ ಸ್ಥಾನದಲ್ಲಿ ನಾನು ಕೂರಬೇಕಾಯಿತು. ನಿಜವಾಗಿ ಉಳಿದ ಮೂವರು ಉಪನ್ಯಾಸಕರ ಜತೆ ನಾಲ್ಕನೆಯವನಾಗಿ ನಾನು ಕುಳಿತಿದ್ದೆ. ಕುಳಿತ ಮೇಲೆ ಅವರಲ್ಲಿ ನಾನು ಸಭಾಪತಿ ಎಂದು ನನ್ನನ್ನು ಕೇಳುವ ಗೋಜಿಗೂ ಹೋಗದೆ ಕಾರ್ಯಕ್ರಮ ನಿರ್ವಾಹಕರು ಘೋಷಿಸಿಬಿಟ್ಟರು.

ಮೊದಲೆ ತಿಳಿಸಿದ್ದರೆ ನಾನು ಖಂಡಿತಾ ಒಪ್ಪಿಕೊಳ್ಳುತ್ತಿರಲಿಲ್ಲ. ಉಪನ್ಯಾಸಕರಲ್ಲಿ ನನಗಿಂತ ಹಿರಿಯರು ಇದ್ದದ್ದರಿಂದ ಆ ಕಾರಣ ನೀಡಿ ನಿರಾಕರಿಸುತ್ತಿದ್ದೆ. ಏಕೆಂದರೆ ಸಭಾಧ್ಯಕ್ಷತೆ ಎಂಬುದು ಯಾವುದೊ ನಿಗಮ ಅಥವಾ ಅಕಾಡೆಮಿಯ ಅಧ್ಯಕ್ಷತೆಯಂಥ ಆಕರ್ಷಕ ಹುದ್ದೆ ಅಲ್ಲ ಎಂಬುದನ್ನು ನಾಲ್ಕಾರು ಸಲ ಕವಿಗೋಷ್ಠಿಯ ಅಧ್ಯಕ್ಷನಾಗಿ ನಾನು ಕಂಡು ಕೊಂಡಿದ್ದೆ.

ಸಭಾಪತಿ ಅಥವಾ ಗೋಷ್ಠಿಪತಿಗೆ ಸಿಗುವ ಗೌರವ ಆಮಂತ್ರಣ ಪತ್ರದಲ್ಲಿ ಮಾತ್ರ. ಅಲ್ಲಿ ಆತನ ಹೆಸರನ್ನು ಎಲ್ಲರಿಗಿಂತ ಮೇಲೆ ದಪ್ಪ ಅಕ್ಷರದಲ್ಲಿ ಅಥವಾ ಬೇರೆ ಬಣ್ಣದಲ್ಲಿ ಎದ್ದು ಕಾಣುವಂತೆ ಮುದ್ರಿಸಿರುತ್ತಾರೆ. ಸಭೆ ಆರಂಭವಾದ ನಂತರ ಅವನನ್ನು ಕೇಳುವವರೇ ಇಲ್ಲ. ಭಾಷಣಕಾರರ ಹೆಸರು ಕರೆಯುವುದು, ಸಮಯ ಮೀರಿದರೆ ಸೂಚನೆ ಕೊಡುವುದು ಮುಂತಾದವುಗಳನ್ನು ಕಾರ್ಯಕ್ರಮ ನಿರ್ವಾಹಕನೆಂಬ ಅನಧಿಕೃತ ಅಧ್ಯಕ್ಷನೇ ಮಾಡುತ್ತಾನಾದ್ದರಿಂದ ಕೊನೆಯಲ್ಲಿ ಅಧ್ಯಕ್ಷೀಯ ಭಾಷಣ ಮಾಡುವುದಷ್ಟೆ ಸಭಾಪತಿಯ ಕೆಲಸ. ಹಾಗಂತ ತನ್ನ ಸರದಿ ಬರುವ ತನಕ ವೇದಿಕೆಯಲ್ಲಿರುವ ಸಭಾಪತಿ ಎಂಬ ಈ ಪ್ರಾಣಿ

ಸಭಾಂಗಣದಲ್ಲಿ ಕುಳಿತ ಪ್ರೇಕ್ಷಕರಂತೆ ಸಣ್ಣ ನಿದ್ದೆ ತೆಗೆಯಲು ಆಗುವುದಿಲ್ಲ. ಅಷ್ಟೇಕೆ ಆಕಳಿಸಲೂ ಅವಕಾಶ ಸಿಗುವುದಿಲ್ಲ. ಉಪನ್ಯಾಸಕರು ಭಾಷಣದ ನಡುವೆ ಆಗಾಗ ಈತನ ಮುಖ ನೋಡುತ್ತಾರೆ. ಛಾಯಾಗ್ರಾಹಕರು, ವಿಡಿಯೋ ಗ್ರಾಹಕರು ಯಾವಾಗ ತಮ್ಮ ಕೆಮರಾ ಇವನತ್ತ ತಿರುಗಿಸುತ್ತಾರೆ ಅಂತ ಹೇಳಲು ಬರುವುದಿಲ್ಲ. ಹೀಗಾಗಿ ಉಪನ್ಯಾಸಕರ ಭಾಷಣ ಅದೆಷ್ಟು ಭೀಕರವಾಗಿದ್ದರೂ ಅದನ್ನು ಕೇಳುವವರಂತೆ, ನೋಟ್ಸ್ ಮಾಡಿಕೊಳ್ಳುವವನಂತೆ ನಟಿಸುತ್ತಾ ಕೂರಬೇಕಾದ್ದು ಅನಿವಾರ್ಯ.

ಕೊನೆಗೆ ಅಧ್ಯಕ್ಷನ ಸರದಿ ಬರುವಾಗ ಕಾರ್ಯನಿರ್ವಾಹಕನೆಂಬ ಸರ್ವಾಧಿಕಾರಿ "ಈಗಾಗಲೇ ಸಮಯ ಮೀರಿದೆ" ಎಂದು ಮಗದೊಮ್ಮೆ ಹೇಳಿ ಅಧ್ಯಕ್ಷರು ಸಂಕ್ಷಿಪ್ತವಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸುತ್ತಾರೆ ಅನ್ನುತ್ತಾನೆ. ಹೀಗಾಗಿ ಸಭಾಪತಿ ಅಂದರೆ ಕೊನೆಯಲ್ಲಿ ಮಾತನಾಡುವವ ಮಾತ್ರವಲ್ಲ; ಕೊನೆಯಲ್ಲಿ ಚುಟುಕಾಗಿ ಮಾತನಾಡುವವ ಎನ್ನುವುದೆ ಆ ಪದದ ವ್ಯಾವಹಾರಿಕ ಅರ್ಥ. ಚುಟುಕಾಗಿಯಾದರೂ ಮಾತನಾಡಬಹುದು. ಆದರೆ ಅದನ್ನು ಕೇಳುವವರು ಇರಬೇಡವೇ? ಕವಿಗೋಷ್ಠಿಯೊಂದರಲ್ಲಿ ನಾನು ಅಧ್ಯಕ್ಷನಾಗಿದ್ದಾಗಿನ ಪ್ರಸಂಗ ನೆನಪಾಗುತ್ತದೆ. ಗೋಷ್ಠಿಯಲ್ಲಿ ನಾನೂ ಸೇರಿದಂತೆ ಹನ್ನೊಂದು ಮಂದಿ ಇದ್ದೆವು. ಮೊದಲ ಕವಿ ಕವನ ಓದಿದ ತಕ್ಷಣ ಇಬ್ಬರು ಎದ್ದು ಹೋದರು. ಎರಡನೆ ಕವಿ ಓದಿದ ನಂತರ ನಾಲ್ಕು ಜನ. ಹೀಗೆ ಯಾವುದೋ ಗಣಿತದ ಸೂತ್ರಕ್ಕೆ ಒಳಪಟ್ಟವರಂತೆ ಜನ ಎದ್ದು ಹೋಗುತ್ತಿದ್ದರು. ಬೇಸರದ ಸಂಗತಿ ಅಂದರೆ ನನ್ನ ಭಾಷಣ ಶುರುವಾಗುವಾಗ ಕವನ ಓದಿದ ಕವಿಗಳೂ ಕಣ್ಮರೆಯಾಗಿ, ಕಾರ್ಯಕ್ರಮ ನಿರ್ವಾಹಕ ಮತ್ತು ಸಂಘಟಕರೂ ಮಾತ್ರ ಉಳಿದಿದ್ದರು. ಈ ಪ್ರಸಂಗದಿಂದ ನಾನು ಗೋಷ್ಠಿಯ ಅಧ್ಯಕ್ಷನಾಗಲು ಒಪ್ಪಬಾರದು ಮತ್ತು ಒಪ್ಪಿಕೊಳ್ಳುವುದು ಅನಿವಾರ್ಯವೆಂದಾದರೆ ಮಡದಿ ಮಕ್ಕಳನ್ನು ತಪ್ಪದೆ ಕರೆದುಕೊಂಡು ಹೋಗಬೇಕು ಎಂಬ ಪಾಠ ಕಲಿತೆ.

ನಾನು ಅನಿರೀಕ್ಷಿತವಾಗಿ ಸಭಾಪತಿಯಾಗಿ ಕುಳಿತಿದ್ದ ಆ ಗೋಷ್ಠಿಯಲ್ಲೂ ಯಥಾಪ್ರಕಾರ ಮೊದಲು ಮಾತನಾಡಿದ ಮೂವರು ಉಪನ್ಯಾಸಕರು 'ವಾಚಾಮಗೋಚರ'ವಾಗಿ ಅಂದರೆ "ವಾಚು - ಅಗೋಚರ" ಅಥವಾ ವಾಚು ತಮಗೆ ಕಾಣಿಸದು ಎಂಬಂತೆ ಸಮಯದ ಪರಿವೆಯೇ ಇಲ್ಲದೆ ಕೊರೆದರು. ಮಾತ್ರವಲ್ಲ ನಾನು ಹೇಳಬೇಕು ಅಂದಿಕೊಂಡಿದ್ದೆಲ್ಲ ಹೇಳಿ ನಾನು ಕಕ್ಕಾಬಿಕ್ಕಿಯಾಗುವಂತೆ ಮಾಡಿದರು. ಸಾಕಷ್ಟು ಜನ ಎದ್ದು ಹೋಗಿದ್ದರು.

ನನ್ನನ್ನು ಅಧ್ಯಕ್ಷ ಭಾಷಣಕ್ಕೆ ಆಹ್ವಾನಿಸುವಾಗ ಕಾರ್ಯಕ್ರಮ ನಿರ್ವಾಹಕ ತುಂಬಾ ಜಾಣ್ಮೆಯಿಂದ ಹೀಗೆ ಹೇಳಿದ - "ಶ್ರೀಯುತರು ಚುಟುಕು ಬರೆಯುವುದರಲ್ಲಿ ನಿಷ್ಣಾತರು. ಆದ್ದರಿಂದ ಸಹಜವಾಗಿ ಇವರ ಭಾಷಣವು ಚುಟುಕಾಗಿರುತ್ತದೆ ಎಂದು ಆಶಿಸಬಹುದು."

ಪಾಪ! ಅವನಿಗೆ "ಬರೆಯೊದು ಮಾತ್ರ ಚುಟುಕ, ಕೊರೆಯೋಕೆ ನಿಂತ್ರೆ ಕಟುಕ" ಎಂಬ ನನ್ನ ಬಗೆಗಿನ ಕಟುಸತ್ಯ ಗೊತ್ತಿರಲಿಲ್ಲ.

ಭಾಷಣಕ್ಕೆ ಬೇರೆ ವಿಷಯವಿಲ್ಲವಾದ್ದರಿಂದ ಅನಿರೀಕ್ಷಿತವಾಗಿ ಸಿಕ್ಕ ಸಭಾಪತಿಯ ಸ್ಥಾನದ ಬಗ್ಗೆ ಕೊರೆಯಲು ಆರಂಭಿಸಿದೆ. ಸಭಾಪತಿಯ ಫಜೀತಿಯನ್ನು ವಿವರಿಸಲು ಒಂದು ಆಶು ಚುಟುಕ ರಚಿಸಿ ಹೇಳಿದೆ.

ಸಭಾಧ್ಯಕ್ಷನಿಗೆ ಕೊನೆಗೆ
ಆಗುವುದೇ ಹೀಗೆ
ಮೊದಲು ಮಾತನಾಡಿದ
ಮಹಾನುಭಾವರು
ಉಳಿಸಿರುವುದಿಲ್ಲ ಏನನ್ನೂ
ಹೇಳಲು ವಿಷಯವನ್ನು
ಹೇಳಲು ಸಮಯವನ್ನು
ಮತ್ತು ಕೇಳಲು ಜನರನ್ನು!

ಒಳಗಿದ್ದ ಜನರು ನಕ್ಕರು. ಚಪ್ಪಾಳೆ ತಟ್ಟಿದರು. ಹೊರಗೆ ಹೋದವರು ಗುಂಪು ಗುಂಪಾಗಿ ಒಳಬರಲು ಪ್ರಾರಂಭಿಸಿದರು. ಕೆಲವೇ ಕ್ಷಣಗಳ ಸಭಾಂಗಣ ಮತ್ತೆ ತುಂಬ ತೊಡಗಿತು. ನನ್ನ ಕವಿತೆ ಇಷ್ಟು ಶಕ್ತಿಯುತ ಅಂತ ನನಗೆ ಗೊತ್ತೇ ಇರಲಿಲ್ಲ. ಹೊಸ ಸ್ಫೂರ್ತಿಯಿಂದ ಗೋಷ್ಠಿಯ ವಿಷಯವನ್ನು ಮರೆತು ನನಗೆ ಕಂಠಪಾಠವಾಗಿದ್ದ ನನ್ನ ಹಳೆಯ ಚುಟುಕಗಳನ್ನೆಲ್ಲ ಹೇಳ ತೊಡಗಿದೆ.

ಅಷ್ಟರಲ್ಲಿ ಕಾರ್ಯಕ್ರಮ ನಿರ್ವಾಹಕನಿಂದ '' ಊಟಕ್ಕೆ ತಡವಾಗುತ್ತಿದೆ ಬೇಗ ಮುಗಿಸಿ'' ಎಂಬ ಚೀಟಿ ಬಂತು. ಹೊರಗೆ ಹೋದ ಜನರು ಒಳಗೆ ಬಂದದ್ದರ ನಿಜವಾದ ಕಾರಣ ಅರ್ಥವಾಗಿ ಭಾಷಣ ಮುಗಿಸಿದೆ. ಸಮಯ ರಾತ್ರಿ ಹತ್ತಾಗಿತ್ತು. ಊಟ ಮುಗಿಸಿ ಮನೆಗೆ ಹೊರಟಾಗ ಕೊನೆಯ ಬಸ್ಸು ಹೋಗಿಯಾಗಿತ್ತು. ಸಭಾಪತಿಗೆ ಲಾರಿಯೇ ಗತಿ ಅಂದುಕೊಂಡು ಲಾರಿ ಹಿಡಿದು ಮನೆ ಸೇರಿದೆ. ಊಟ ಮಾಡದೆ ನನಗಾಗಿ ಕಾಯುತ್ತಿದ್ದ ಪ್ರಿಯ ಪತ್ನಿ ನನ್ನ ಊಟವಾಗಿದೆ ಎಂದು ಕೇಳಿ ಕೆಂಡವಾದಳು. ನಾನು ರೊಟ್ಟಿಯಾದೆ. ಸಭಾಪತಿಯಾದ್ದರಿಂದ ತಡವಾಯಿತು ಅಂತ ವಿವರಿಸಲು ಪ್ರಯತ್ನಿಸಿದೆ. ಆಕೆಗೆ ಸಮಾಧಾನ ಆಗಲಿಲ್ಲ. ''ಸಭಾಪತಿ ಏನಿದ್ದರೂ ಸಭೆಯಲ್ಲಿ. ಮನೆಯಲ್ಲಿ ನೀವು ನನ್ನ ಪತಿ. ಉಳಿದ ಅನ್ನವನ್ನು ನಾಳೆ ಚಿತ್ರಾನ್ನ ಮಾಡಿಕೊಂಡು ತಿನ್ನಲೇ ಬೇಕು'' ಎಂದು ಗುಡುಗಿದಳು.

★★

ಹೆಣ್ಣು!

ಹಿಂದಿನವರ
ದೃಷ್ಟಿಯಲ್ಲಿ
ಹೆಣ್ಣೆಂದರೆ ಪೂಜ್ಯ ವಸ್ತು
ಇಂದಿನವರ
ದೃಷ್ಟಿಯಲ್ಲಿ
'ಚೀಸ್ ಬಡೀಹೈ ಮಸ್ತ್ ಮಸ್ತು'!

ಗೀತಾ ಶಾಸ್ತ್ರಿ

ಶುಭಾಶಯಗಳೊಂದಿಗೆ

ಹೆಗ್ಡೆ ಇಂಡಸ್ಟ್ರೀಸ್

174/c, ಮೊದಲನೇ ಮೈನ್ ರಸ್ತೆ, ವಿದ್ಯಾರಣ್ಯ ನಗರ
ಮಾಗಡಿ ಮುಖ್ಯ ರಸ್ತೆ, ಬೆಂಗಳೂರು - 560 023

ದೂರವಾಣಿ: 3350315

"ಷೇವಿಂಗ್ ಬ್ಲೇಡ್ ಡೀಲರ್ಸ್ ಕಾನ್ಫರೆನ್ಸಿಗೆ ನಮ್ಮನ್ನ ಕರೀಬೇಡಿ ಅಂತ ಇನ್ನಿಲ್ಲದ ಹಾಗೆ ಹೇಳ್ದೆ...."



ಶುಭಾಶಯಗಳೊಂದಿಗೆ

ಸ್ವಾತಿ ಅಸೋಸಿಯೇಟ್ಸ್

ಪ್ಲಾಟ್ ನಂ. M-8 , 7ನೇ ಕ್ರಾಸ್ ಪೀಣ್ಯ ಕೈಗಾರಿಕಾ ಕ್ಷೇತ್ರ
ಬೆಂಗಳೂರು - 560 058
ಫ್ಯಾಕ್ಸ್: (91-080) 839 6032

ವಿತರಕರು: ಮೋಟಾರೋಲಾ ರೇಡಿಯೋ ಪೇಜಿಂಗ್
ಕಾಮೆಕ್ಸ್ ವಿಡಿಯೋ ಸೆಕ್ಯೂರಿಟಿ ಸಿಸ್ಟಮ್ಸ್

ಮುಖಾಮುಖಿ

ಶಿವು

''ನಮ್ಮ ಸರ್ಕಾರದ ಕಾರ್ಯವೈಖರಿ ನೋಡ್ರಿ. ಒಬ್ಬ ಚಮಚಾ ಕೆಲ್ಸ ಬೇಕು ಅಂತ ಬಂದ್ರೆ, ನಿನಗೆ ಬೇಕಾದ್ದು ಸಂಪಾದಿಸ್ಕೋ ಅಂತ ಹೇಳಿ ಅವನಿಗೊಂದು ಕಾನೂನು, ಒಂದು ಕುರ್ಚಿ ಕೊಟ್ಬಿಡ್ತಾರೆ. ಅವ್ನು ಕುರ್ಚಿ ಮೇಲೆ ಕೂತು, ಅಮಾಯಕ ಜನತೆ ಮುಂದೆ ಆ ಕಾನೂನನ್ನು ಝಳಪಿಸಿ, ನೀವು ಕಾನೂನಿನಿಂದ ಪಾರಾಗಬೇಕಾದ್ರೆ ಒಬ್ಬೊಬ್ರು ನೂರು ರೂಪಾಯಿ ಕೊಡಿ. ನಾನು ನಿಮ್ಮನ್ನ ಪಾರು ಮಾಡ್ತೀನಿ ಅಂತ ಬಹಳ ಔದಾರ್ಯದಿಂದ ಹೇಳ್ತಾ ಹೋಗ್ತಾನೆ. ಜನ, ಹೇಗಾದ್ರೂ ಪಾರು ಮಾಡಪ್ಪ ಅಂತ ದುಡ್ಡು ಕೊಟ್ರೆ ಅವರಿಗೆ ಸೀಲ್ ಹಾಕಿದ ಕಾಗದದ ಚೂರು ಸಿಗುತ್ತೆ. ಆ ಕಾಗದ ಹಿಡ್ಕೊಂಡು ನಮ್ಮ ಜನ ಆನಂದದಿಂದ ಓಡಾಡ್ತಿರ್ತಾರೆ. ಮೊನ್ನೆ ಒಂದು ವಿಷ್ಯ ನಡೀತು. ಹ್ಯಾಂಡ್ ಪೋಸ್ಟ್ ಹತ್ರ, 'ಚಾರ್ಮಾಡಿ ರಸ್ತೆ ಒಂದು ಕಡೆ ಕುಸಿದಿದೆ. ಲಾರಿ ಟ್ರಾಫಿಕ್ ಬಂದ್' ಅಂತ ಒಂದು ಬೋರ್ಡ್ ಹಾಕಿದ್ರು, ರಸ್ತೆ ಇಲಾಖೆ ಯೋರು. ಒಬ್ಬ ಆಸಾಮಿ ಆ ಬೋರ್ಡ್ ಕೆಳಗೇ ಒಂದು ಕುರ್ಚಿ ಹಾಕ್ಕೊಂಡು ಕೂತು, ಬರೋ ಲಾರಿಗಳ ಹತ್ರ ಎಲ್ಲಾ ದುಡ್ಡು ಕಿತ್ತು ಆ ಲಾರಿಗಳನ್ನ ಮುಂದಕ್ಕೆ ಬಿಡ್ತಿದ್ದೆ. ಅವನು ಫ್ರೀಲಾನ್ಸರ್ ಅಂತ ಪೋಲೀಸ್ನೋರು ಕಂಡು ಹಿಡಿಯೋ ಹೊತ್ಗೆ, ಅವನು ಬೇಕಾದಷ್ಟು ದುಡ್ಡು ಮಾಡಿಕೊಂಡು ಓಡಿ ಹೋಗಿದ್ದ. ಸೆಲ್ಫ್ ಎಂಪ್ಲಾಯಮೆಂಟ್ ಥ್ರೂ ಲಾ ಅಂದ್ರೆ ಇದೇ ನೋಡಿ'' ಅಂತ ತೇಜಸ್ವಿ ನಗುತ್ತಾ ಹೇಳಿದರು.

ತೇಜಸ್ವಿಯವರ ಮನೆಯ ವಿಶಾಲವಾದ ಹಜಾರದಲ್ಲಿ ನಾವೆಲ್ಲಾ ಕುಳಿತಿದ್ದೆವು. ಮಂಗಳೂರು ಹೆಂಚಿನ ಜಾರು ಮಾಡು ಬಹು ಎತ್ತರದಲ್ಲಿದ್ದುದರಿಂದ, ಒಳಗೆ ತಂಪಾಗಿತ್ತು. ನನ್ನ ಮುಂದಿನ ಹಾಗೂ ಎಡ ಪಕ್ಕದ ಗೋಡೆಗಳಲ್ಲಿ ದೊಡ್ಡ ಕಿಟಕಿಗಳು. ಕಿಟಕಿಗಳ ಮೂಲಕ, ಕಾಫಿ ಗಿಡಗಳು, ತೋಟದ ನೀರಾವರಿಗಾಗಿ ನಿರ್ಮಿಸಿದ ಕೆರೆ, ಮನೆ ತೋಟದ ಹೂವಿನ ಗಿಡಗಳು ಎಲ್ಲ ಕಾಣುತ್ತಿದ್ದವು. ನನ್ನ ಕುರ್ಚಿಯ ಪಕ್ಕದಲ್ಲೇ ಒಂದು ಪುಸ್ತಕದ ಶೆಲ್ಫ್. ಪುಸ್ತಕ ಪ್ರಕಾಶನದ ಎಲ್ಲ ಪುಸ್ತಕಗಳನ್ನೂ ಅದರಲ್ಲಿ ವಾರಣವಾಗಿ ಜೋಡಿಸಿಟ್ಟಿತ್ತು. ಶೆಲ್ಫಿನ ಮೇಲೆ ಪೂಜ್ಯ ಕುವೆಂಪು ರವರ ಫೋಟೋ. ಅಕಾಡೆಮಿ ಮತ್ತು ಇನ್ನಿತರ ಪ್ರಶಸ್ತಿಗಳಂತೆ ಕಾಣುತ್ತಿದ್ದ ಅನೇಕ ಕಂಚಿನ ನಟರಾಜ ಪ್ರತಿಮೆಗಳು, ಶಾರದಾದೇವಿ, ರಾಮಕೃಷ್ಣ ಪರಮಹಂಸರು, ಹಾಗೂ ಸ್ವಾಮಿ ವಿವೇಕಾನಂದರ ಚಿತ್ರಗಳು, ಆ ಹಜಾರದ ಶುಭ್ರವಾದ ಬಿಳಿಯ ಗೋಡೆಗಳ ಮೇಲೆ ಇದ್ದದ್ದು ಅಲ್ಲಿನ ಶಾಂತ ವಾತಾವರಣಕ್ಕೆ ಪೂರಕವಾಗಿದ್ದವೇನೋ ಅನ್ನಿಸಿತ್ತು. ಹಜಾರದ ಆಚೆ ಮೂಲೆಯಲ್ಲಿ ಒಂದು ದೊಡ್ಡ ಮೇಜು. ಅದು ತೇಜಸ್ವಿಯವರ ವರ್ಕ್ ಟೇಬಲ್. ಆ ಮೇಜಿನ ಮೇಲೆ ಅನೇಕ ಪುಸ್ತಕಗಳು. Art work ಗಳು ಡಿಸ್ಕೆಟ್‌ಗಳು ಒಂದರ ಮೇಲೊಂದು ಬಿದ್ದು ಜಾಗಕ್ಕಾಗಿ ಹೆಣಗುತ್ತಿದ್ದವು.

ಹಿಂದಿನ ಮಧ್ಯಾಹ್ನ ನಾನು ಮಂಗಳೂರಿನಿಂದ ತೇಜಸ್ವಿಯವರೊಂದಿಗೆ ಮಾತನಾಡಿದಾಗ ''ನಾಳೆ ಬೆಳಗ್ಗೇನೇ ಬಂದು ಬಿಡಿ. ಶ್ರೀರಾಮ್ ಬಂದಿರ್ತಾರೆ. ಹ್ಯಾಂಡ್‌ಪೋಸ್ಟ್ ಹತ್ತಿರ ರಿಕ್ವೆಸ್ಟ್ ಸ್ಟಾಪ್ ಇದೆ'' ಅಂತ ಆತ್ಮೀಯತೆಯಿಂದ ಆಹ್ವಾನಿಸಿದ್ದರು. ನಾನು ಬೆಳಗ್ಗೆ ಐದೂವರೆಗೇ ಎದ್ದು

ಬೆಳಗಾಂ ಬಸ್ ಹತ್ತಿದ್ವೆ. ಉಜಿರೆ ದಾಟಿದ ಮೇಲೆ ಚಾರ್ಮಾಡಿ ಘಾಟ್ ರಸ್ತೆ ಪ್ರಾರಂಭ. ಬೆಳಗಿನ ಸೂರ್ಯನ ಬೆಳಕಿನಲ್ಲಿ ಪಶ್ಚಿಮ ಘಟ್ಟಗಳ ಗಂಭೀರ ರಮಣೀಯತೆ ನಿಜಕ್ಕೂ ಚೇತೋಹಾರಿ. ಬಯಲು ಸೀಮೆಯಲ್ಲಿ ಧೂಳೆಬ್ಬಿಸಿಕೊಂಡು, ರಾಜಾರೋಷವಾಗಿ ಓಡಾಡುತ್ತಿದ್ದ ಈ ಬಸ್ಸು, ಈ ಘಟ್ಟಗಳ ರಾಕ್ಷಸ ಸನ್ನಿಧಿಯಲ್ಲಿ ಕುಬ್ಜವಾಗಿ ಇರುವೆಯಂತೆ ಮೆಲ್ಲನೆ ಸಾಗಿತ್ತು. ಹಸಿರು ಪ್ರಪಾತಗಳು, ಕಡಿದಾದ ಬಂಡೆಗಳು, ಹೇರ್‌ಪಿನ್ ತಿರುವುಗಳು, ಇವೆಲ್ಲವನ್ನೂ ಒಳಗೊಂಡಿದ್ದ ಈ 'ಜುಗಾರಿ ಕ್ರಾಸ್ ರಂಗಸ್ಥಳ'ವನ್ನು ಕಣ್ಣು ತುಂಬಾ ಹೀರುತ್ತಿದ್ದಂತೆಯೇ, ದಖ್ಖಿ ಪ್ರಸ್ಥ ಭೂಮಿಯ ಸಮತಲವನ್ನು ಸೇರಿದ್ದವು. ಜೇನು ಹಟ್ಟಿ ಅಂತಲೋ, ಇನ್ನಾವುದೋ ಹೆಸರಿನ ಹಳ್ಳಿಯಲ್ಲಿ, ದಾರಿ ಪಕ್ಕದ ದೇವಸ್ಥಾನದ ಪೂಜಾರಿ ಬಸ್ಸು ನಿಲ್ಲಿಸಿ, ಆರತಿ ತಟ್ಟೆಗೆ ಕಾಣಿಕೆ ಹಾಕಿಸಿಕೊಂಡ. ಅಲ್ಲಿಂದ ಸ್ವಲ್ಪ ಪ್ರಯಾಣದ ನಂತರ ಕಂಡಕ್ಟರ್ 'ಹ್ಯಾಂಡ್ ಪೋಸ್ಟ್ ಬಂತು ಸಾರ್' ಅಂತ ಹೇಳಿ ಬಸ್ ನಿಲ್ಲಿಸಿದಾಗ ಬೇಗನೆ ಇಳಿದಿದ್ದೆ. ಕೆಲವು ಅಂಗಡಿಗಳು, ಒಂದು ಆಟೋ, ಅಷ್ಟೇ ಅಲ್ಲಿದ್ದದು. ಆ ಆಟೋ ಡ್ರೈವರ್ 'ತೇಜಸ್ವಿಯವರ ಮನೆ ಗೇಟ್ ತನಕ ಬಿಡುತ್ತೇನೆ ಸಾರ್. ಒಳಗೆ ಬರುಲ್ಲ' ಅಂದ. ಯಾರ ಮನೆಗೆ ಹೋಗಬೇಕಾದರೂ ಗೇಟ್ ವರೆಗೂ ತಾನೆ ಹೋಗೋದು ಅಂದ್ಕೊಂಡು ಆಟೋ ಹತ್ತಿದೆ. ಐದು ನಿಮಿಷದ ಹಾದಿ. ಗೇಟ್ ಬಳಿ ಇಳಿದು ಒಳಗೆ ಹೋದೆ.

ಗೇಟನ್ನು ದಾಟಿದೊಡನೆ ಯಾವುದೋ ಕಾಡಿನಲ್ಲಿದ್ದಂತೆ ಭಾಸವಾಯಿತು. ಕಾಫಿ ಗಿಡಗಳು ಇನ್ನಿತರ ಗಿಡಮರಗಳು ದಟ್ಟವಾಗಿ ಹಬ್ಬಿದ್ದವು. ಅವುಗಳ ಮಧ್ಯೆ ಒಂದು ಜೋಡಿ ಕಾಲುಹಾದಿ. ಮರಗಿಡಗಳ ನೆರಳಿನಲ್ಲಿ ಸಾಗಿದ್ದ ಆ ದಾರಿಯಲ್ಲಿ ನಡೆಯುತ್ತಿದ್ದಾಗ ಕಾಡಿನ ಹಕ್ಕಿಗಳ ವೈವಿಧ್ಯಮಯ ಕೂಗಾಟ ಆ ತೋಟವನ್ನು ತುಂಬಿತ್ತು. ಐದು ನಿಮಿಷದ ನಡಿಗೆಯ ನಂತರ, ದೂರದಲ್ಲಿ ಹೂ ಗಿಡಗಳ ಮಧ್ಯೆ ಮಂಗಳೂರು ಹಂಚಿನ ಕುಟೀರವೊಂದು ಕಣ್ಣಿಗೆ ಬಿತ್ತು. ಬಗೆ ಬಗೆಯಾದ ಹೂವಿನ ಗಿಡಗಳನ್ನು ಬಳಸಿ ನಡೆದು, ಮನೆಯ ಹಜಾರ ಪ್ರವೇಶಿಸಿದೆ. ನನ್ನನ್ನು ನಗುಮುಖದಿಂದ ಇದಿರುಗೊಂಡ ವ್ಯಕ್ತಿಗೆ ಗಡ್ಡವಿರಲ್ಲಿಲ. ಹಾಗಾಗಿ ಇವರು ಶ್ರೀರಾಮ್ ಇರಬೇಕು ಅಂದುಕೊಂಡೆ. ಅಷ್ಟರಲ್ಲಿ ತೇಜಸ್ವಿ ಬಂದರು.

''ಬನ್ನಿ ಶಿವಕುಮಾರ್, ಮೂಡಿಗೆರೆವರೆಗೂ ಹೋಗಿ ಬಂದ್ರೋ, ಇಲ್ಲಾ ಇಲ್ಲೇ ರಿಕ್ವೆಸ್ಟ್ ಸ್ಟಾಪ್ ಸಿಕ್ತೋ. ಇವರು ಶ್ರೀರಾಮ್, ಇವರು ಖ್ಯಾತ ಛಾಯಾಗ್ರಾಹಕ ಮುಕುಂದ್ ಇವರು ನನ್ನ ಶ್ರೀಮತಿಯವರು ರಾಜೇಶ್ವರಿ'' ಅಂತ ಅಲ್ಲಿದ್ದವರನ್ನೆಲ್ಲಾ ನನಗೆ ಪರಿಚಯಿಸಿದರು. ಶ್ರೀಮತಿ ರಾಜೇಶ್ವರಿಯವರು ಮಾಡಿದ ಕಟ್ಟಿ ಕಡುಬು, ತಟ್ಟೆ ಇಡ್ಲಿ, ಹಸಿರು ಚಟ್ನಿ ಇವುಗಳನ್ನು ಗಡದ್ದಾಗಿ ತಿಂದು, ಕಾಫಿ ಕುಡಿದು ನಾವೆಲ್ಲಾ ಪುನಃ ಬಂದು ಕೂತಾಗ ಘಂಟೆ ಹತ್ತಾಗಿತ್ತು. ಆಗಲೇ ತೇಜಸ್ವಿಯವರು ಈ ಲೀಗಲ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಬಗ್ಗೆ ಮಾತಾಡಿದ್ದು.

''ಹಳ್ಳಿಗಳ ಕಡೆಗಿಂತ, ನೀವು ಬೆಂಗಳೂರಿನಲ್ಲಿ ನೋಡಬೇಕು ಸಾರ್. ಯಾವ ಆಫೀಸಿಗೆ ಹೋದ್ರೂ ಲಂಚ, ರುಷುವತ್ತು ತಾಂಡವವಾಡ್ತಿರುತ್ತೆ. ಮೊನ್ನೆ ಇನ್‌ಕಮ್‌ಟ್ಯಾಕ್ಸ್ ಆಫೀಸಿಗೆ ಹೋಗಿದ್ದಾಗ, ಅಲ್ಲಿನ ಆಫೀಸ್ ಜವಾನ, ಯಾವುದೋ ಗಿರಾಕಿ ಹತ್ರ ಸೋನಿ ಟಿ.ವಿ. ವ್ಯಾಪಾರ ಮಾಡ್ತಾ ಇದ್ದ. ಆ ಜವಾನನ ಮೇಲು ಸಂಪಾದನೆ ಎಷ್ಟು ಅಂತ ನೀವೇ ಊಹಿಸ್ಕೋಬಹುದು'' ಅಂತ ನಾನು ಹೇಳಿದೆ.

''ಅವನು ಟಿ.ವಿ. ಕೊಳ್ಳೋದಕ್ಕೆ ಲಂಚ ತೊಗೊಳ್ತಾನೆ ಅಂತೀರಲ್ಲಾ, ಈ ಟಿ.ವಿ. ಕೊಳ್ಳಬೇಕು ಅನ್ನೋ ಕನ್‌ಸ್ಯೂಮರಿಸ್ಟ್ ಹುಚ್ಚನ್ನ ಅವನಿಗೆ ಹಿಡಿಸಿದ್ದೂ ನಿಮ್ಮ ಸರ್ಕಾರಾನೇ ತಾನೆ. ಈಗ ಪ್ರಾರಂಭವಾಗಿರೋ ಲಿಬರಲೈಸೇಷನ್‌ನ ಭವಿಷ್ಯ ಎಲ್ಲಾ ಮಾರುಕಟ್ಟೆ ಮೇಲೆ ತಾನೆ ನಿಂತಿದೆ. ಒಂದು ಬೇಡದ ಅಗತ್ಯ ಸೃಷ್ಟಿಸಿ, ಆಮೇಲೆ ಜನ ಆ ಅಗತ್ಯ ಪೂರೈಸಿಕೊಳ್ಳೋದಕ್ಕೆ ಲಂಚ ತಗೊಂಡ ಅಂತ ದೂರಿದರೆ ಹೇಗ್ರಿ?''

''ಸರಿಯಾಯ್ತು. ಒಂದು ನೀಡ್ ಇದೆ ಅಂದ ಮಾತ್ರಕ್ಕೆ ನ್ಯಾಯದ ಹಾದಿ ಬಿಟ್ಟು ಅನ್ಯಾಯದ ದಾರಿ ಹಿಡಿಯುಕ್ಕೆ ಯಾರಿಗೆ ಹಕ್ಕಿದೆ ಸಾರ್? ಈಗ ಇಂಗ್ಲೆಂಡ್ ದೇಶಾನೆ ತಗೊಳ್ಳಿ, ನನಗೆ ತಿಳಿದಿರೋ ಪ್ರಕಾರ ಆ ಸಮಾಜದ ನೈತಿಕ ನಡವಳಿಕೆ, ನಮ್ಮದಕ್ಕಿಂತ ಎಷ್ಟೋ ಮೇಲು''.

''ಅದು ನಿಜ ಇರಬಹುದು. ಆದ್ರೆ ಆ ನೈತಿಕ ನಡವಳಿಕೆನ ನಿಭಾಯಿಸೋ ಶ್ರೀಮಂತಿಕೆ ಅವರಿಗೆ ಹೇಗೆ ಬಂತು ಸ್ವಲ್ಪ ಯೋಚ್ನೆ ಮಾಡಿ. ಆ ಜನ ತಮ್ಮ ಕಾಲೋನಿಗಳ ಸಂಪತ್ತನ್ನೆಲ್ಲಾ ಕೊಳ್ಳೆ ಹೊಡೆದದ್ದು ನೈತಿಕತೆ ಅಂತೀರಾ. ತಮ್ಮ ದೇಶದ ಸರಹದ್ದಿನ ಆಚೆ ಮನಸ್ಸಿಗೆ ಬಂದ ಹಾಗೆ ಆಟ ಆಡಿ, ದೇಶದ ಒಳಗೆ ನಾನು ಎಥಿಕಲ್ ಆಗಿ ಇರ್ತೀನಿ ಅನ್ನೋದು ನಮ್ಮ ಭ್ರಷ್ಟಾಚಾರದ ಸಂಸ್ಕೃತಿಗಿಂತ ಹೇಗೆ ಭಿನ್ನ?'' ಅಂತ ತೇಜಸ್ವಿ ಕೇಳಿದರು. ''ಸಮಾಜದ ಈ ಕನ್‌ಸ್ಯೂಮರಿಸ್ಟ್ ಮೌಲ್ಯಗಳು ಹೀಗೇ ಮುಂದುವರಿದ್ರೆ, ಒಟ್ಟಾರೆ ಸಮಾಜದ ಒಳಿತು ಕೆಡುಕುಗಳನ್ನ ಯಾರು ನೋಡ್ಕೋತಾರೆ?'' ನಾನು ಕೇಳಿದೆ.

''ಹಿಂದೆ ಸಮಾಜವಾದ ಈ ಕೆಲಸ ಮಾಡ್ತಾ ಇತ್ತು. ಅಟ್‌ಲೀಸ್ಟ್ ಥಿಯರಿಟಿಕಲಿ. ಈಗ ಅದರ ಜಾಗಾನ ಪರಿಸರವಾದ ಮಾಡತ್ತೆ. ಕಳೆದ ಒಂದು ದಶಕದಲ್ಲಿ ಪರಿಸರವಾದಿಗಳು ಸಾಧಿಸಿರೋದು ಕಡಿಮೆ ಏನೂ ಅಲ್ಲ. ಜನಕ್ಕೆ ಪರಿಸರ ಅಂದ್ರೇನು ಅನ್ನೋ ಒಂದು ಬೇಸಿಕ್ ತಿಳುವಳಿಕೆ ತಂದ್ಕೊಟ್ಟಿದಾರೆ. ಈ ಪರಿಸರ ಪ್ರಜ್ಞೆ ಬಗ್ಗೆ ನಮ್ಮ ಸರ್ಕಾರದ ಡಬಲ್ ಸ್ಟಾಂಡರ್ಡ್ಸ್ ಮಾತ್ರಾ ನನಗೆ ಇಷ್ಟ ಆಗುಲ್ಲ'' ಅಂದರು ತೇಜಸ್ವಿ.

''ಏನದು Double - standards?" ಅಂತ ಶ್ರೀರಾಮ್ ಕೇಳಿದರು.

''ಮೊನ್ನೆ ಜೆ. ಎಚ್. ಪಟೇಲ್ ಸಿಕ್ಕಿದ್ರು. ಏನೇ ಆಗಲಿ, ಕೈಗಾ ಅಣುಸ್ಥಾವರ ಸ್ಥಾಪಿಸೇ ಸ್ಥಾಪಿಸ್ತೀನಿ ಅಂತ ಹೇಳಿದ್ರು. ಇದೇ ಸರ್ಕಾರದ ಜನ ಶಿವರಾಮ ಕಾರಂತರಿಗೆ ಸನ್ಮಾನ ಮಾಡಿ ಶಾಲು ಕೂಡ ಹೊದಿಸ್ತಾರೆ. ಅವರ ಅಭಿಪ್ರಾಯಗಳಿಗೆ ಮಾತ್ರ ಬೆಲೆ ಕೊಡುಲ್ಲ. ಇದಕ್ಕೇನಂತೀರಿ'' ಅಂತ ಕೇಳಿದ್ರು ತೇಜಸ್ವಿ.

ಸೃಜನ ಶೀಲತೆಯ ಬಗ್ಗೆ ತೇಜಸ್ವಿಯವರ ಅಭಿಪ್ರಾಯ ಕೇಳಬೇಕು ಅಂತ ಬಹು ದಿನಗಳಿಂದ ಆಶೆಯಿತ್ತು.

'' ಒಬ್ಬ ಲೇಖಕ ಬೇರೆ ಬೇರೆ ಪ್ರಕಾರಗಳಲ್ಲಿ ಬರೆಯುವಾಗ ಕಾದಂಬರಿ ಪ್ರಕಾರದಲ್ಲಿ ಮೂಡುವ ಸೃಜನ ಶೀಲತೆ ಹೆಚ್ಚು ಉತ್ತಮ ಅಂತ ಹೇಳಬಹುದೇ ಸಾರ್? ನಿಮ್ಮ ಪರಿಸರದ ಕತೆ, ಜುಗಾರಿ ಕ್ರಾಸ್ ಎರಡೂ ಪುಸ್ತಕಗಳನ್ನ ನೋಡಿದ್ರೆ ಯಾವುದನ್ನ ಹೆಚ್ಚು ಸೃಜನಶೀಲ ಕೃತಿ ಅಂತ ಕರೀಬಹುದು?'' ಅಂತ ಕೇಳಿದೆ.

''ಹಾಗೇನೂ ಇಲ್ಲಾರೀ, ಒಬ್ಬ ಲೇಖಕ ತನ್ನ Artistryನ ಯಾವ ಪ್ರಕಾರದಲ್ಲಿ

ಬೇಕಾದ್ರೂ ಮೆರೆಸಬಹುದು. ಟಿ. ಎಸ್. ಎಲಿಯಟ್‌ನ "The Waste land' ಓದಿದ್ದೀರಾ? ಅದಕ್ಕಿಂತ drab ಸಬ್ಜೆಕ್ಟ್ ಯಾವುದು ಸಿಗುತ್ತೆ ನಿಮಗೆ? ಅಂಥಾ ವಸ್ತು ಇಟ್ಕೊಂಡು ಅವನು ಅದ್ಭುತ ಕೃತಿ ಸೃಷ್ಟಿಸಿದ್ದಾನೆ. ಅಷ್ಟೇಕೆ, ಗ್ಯಾರಿ ಝುಕಾವ್‌ನ ಡ್ಯಾನ್ಸಿಂಗ್ ವುಲಿ ಮಾಸ್ಟರ್ಸ್ ತಗೊಳ್ಳಿ. ಮೆಟಾಫಿಸಿಕ್ಸ್ ಬಗ್ಗೆ ಅವನು ಬರ್ದಿರೋದು ಯಾವುದೇ ರಸವತ್ತಾದ ಕಾದಂಬರಿಗಿಂತ ಚೆನ್ನಾಗಿ ಓದಿಸ್ಕೊಂಡು ಹೋಗುತ್ತೆ. ನನಗನ್ನಿಸುತ್ತೆ ಈ ದಿನಗಳಲ್ಲಿ ನಮ್ಮ ಲೇಖಕರೆಲ್ಲಾ ಓದೋದನ್ನ ಮರ್ತಿದಾರೆ ಅಂತ. ಓದದೇ ಮಾಡದೇ ಸುಮ್ನೆ ಕೂತ್ಕೊಂಡು ಬರೀತೀನಿ ಅಂದ್ರೆ ಇನ್ನೇನಾಗುತ್ತೆ. ಒಬ್ಬ ಲೇಖಕ, ಅವನು ಎಷ್ಟು ಖ್ಯಾತ ಲೇಖಕ ಆದ್ರೂ, ಒಂದು ಹೊಸ ಪುಸ್ತಕ ಓದಿ ಎಕ್ಸೈಟ್‌ಮೆಂಟ್ ಪಡೆಯೋ ಶಕ್ತೀನ ಎಂದಿಗೂ ಕಳಕೋಬಾರದು...."

ಅಲ್ಲಿಂದ ಮಾತು ಪುಸ್ತಕ ಪ್ರಕಾಶನದ ಪುಸ್ತಕಗಳ ಬಗ್ಗೆ ತಿರುಗಿತು.

"ನಿಮ್ಮ ಪುಸ್ತಕಗಳ ಹೊರ ಹೊದಿಕೆ ವಿನ್ಯಾಸ ಬಹಳ ಚೆನ್ನಾಗಿ ಬರ್ತಾ ಇದೆ ಸಾರ್. ಕಪ್ಪು ಹಿನ್ನೆಲೆಯಲ್ಲಿ, ಎದ್ದು ಕಾಣೋ ಹಾಗೆ ವರ್ಣ ಚಿತ್ರ ಮೂಡಿಸೋದು ಬ್ರಿಲಿಯಂಟ್ ಐಡಿಯಾ. ಆದ್ರೆ ಇದಕ್ಕೆಲ್ಲಾ ಬಹಳ ಖರ್ಚಾಗಲ್ವೇ?" ನನ್ನ ಪ್ರಶ್ನೆ

"ಖರ್ಚಾಗತ್ತೆ. ಆಗ್ದೇ ಇರುತ್ಯೇ. ಒಂದು ಉತ್ತಮ ಪುಸ್ತಕ ಅಂದ್ರೆ, ಸಾಹಿತ್ಯ ಮಾತ್ರ ಅಲ್ಲ. ಅದರ ಎಲ್ಲಾ Production ಮೌಲ್ಯಗಳೂ ಅತ್ಯುತ್ತಮವಾಗಿರಬೇಕು. ಆವಾಗ್ಲೇ ಅಂಥ ಕೆಲಸ ಮಾಡಿದ್ದೂ ಸಾರ್ಥಕ. ಮೊನ್ನೆ ಯಾರೋ ಉದ್ದಾಮ ಸಾಹಿತಿಗಳು ಸಿಕ್ಕಿದ್ರು. 'ನಿಮ್ಮ ಪುಸ್ತಕ ಏನ್ಸಾರ್! ಅಷ್ಟು ಒಳ್ಳೆ ಪೇಪರ್. ಮಲ್ಟಿಕಲರ್ ಹೊದಿಕೆ. ಆಫ್‌ಸೆಟ್ ಮುದ್ರಣ. ಇಷ್ಟೆಲ್ಲಾ ಮುತುವರ್ಜಿ ಕೇವಲ ಕನ್ನಡ ಪುಸ್ತಕಕ್ಕೆ ಯಾಕೆ?" ಅಂತ ಕೇಳಿದ್ರು. ಇದು ಈ ಜನಗಳ ಕನ್ನಡಾಭಿಮಾನ"

"ಅದು ನಿಜ ಸಾರ್. ನನಗೂ ಈ ಅನುಭವ ಆಗಿದೆ. ಅಪರಂಜಿಗೆ ಚಂದಾಕೊಡಿ ಅಂತ ಕೇಳಿದ್ರೆ, ಪತ್ರಿಕೆ ಚೆನ್ನಾಗಿದೆ, ಆದ್ರೆ ನನ್ನ ಮಕ್ಕಳಿಗೆ ಕನ್ನಡ ಓದಕ್ಕೆ ಬರುಲ್ಲ. ಇಂಗ್ಲಿಷ್ ಎಡಿಷನ್ ಇದೆಯಾ ಅಂತ ಕೇಳ್ತಾರೆ. ಅಂದ ಹಾಗೆ ಅಪರಂಜಿಗೆ ಒಂದು ಹೊಸ ತಿರುವು ಕೊಡೋಣ ಅನ್ನಿಸ್ತಾ ಇದೆ. ನಮ್ಮ ಬರಹಗಾರರೆಲ್ಲಾ ಒಂದು ಸೆಟ್ ಪ್ಯಾಟರ್ನ್ ಹಿಡಿದು ಬಿಟ್ಟಿದ್ದಾರೆ. ಯಾವುದೇ ವಿಷಯ ಆಗ್ಲೀ ಅದೇ ಎರಕದಲ್ಲಿ ಹುಯ್ದು ಹಾಸ್ಯ ಮೂಡಿಸೋಕ್ಕೆ ಯತ್ನಿಸ್ತಾರೆ. ಈ ಹೊಸ ತಿರುವಿನ ಬಗ್ಗೆ ನಿಮ್ಮದೇನಾದ್ರೂ ಸಲಹೆ ಇದೆಯಾ ಸಾರ್?" ಅಂತ ನಾನು ಕೇಳಿದೆ.

"ಅಪರಂಜಿಗೆ ಹೊಸ ತಿರುವು ಕೊಡೋದು ನಿಮ್ಮ ಕೈಲಿಲ್ಲಾರೀ. ಒಂದು ಪತ್ರಿಕೆಯ ಸ್ವರೂಪ ಅನ್ನೋದು ಅನೇಕ ಕಾರಣಗಳನ್ನ ಅವಲಂಬಿಸಿರುತ್ತೆ. ಲೇಖಕರು, ಓದುಗರು, ಆ ಪತ್ರಿಕೆ ನಡೆಯುತ್ತಿರುವ ಕಾಲ, ಆ ಕಾಲದ ಜನರ ಮನೋಧರ್ಮ ಇವೆಲ್ಲಾ ಸೇರಿ ಒಂದು ಪತ್ರಿಕೆಯನ್ನ ಜೀವಂತಗೊಳಿಸುತ್ವೆ. ಈಗ ಕೊರವಂಜಿನೇ ತಗೊಳ್ಳಿ. ಅದರ ಜನಪ್ರಿಯತೆಗೆ ಅದು ಬದುಕಿದ್ದ ಕಾಲವೂ ಒಂದು ಮುಖ್ಯ ಕಾರಣ. ಲಂಕೇಶ್ ಪತ್ರಿಕೆ ಈಗ ಎಂತಹ ಬರಹವನ್ನಾದರೂ ಜೀರ್ಣಿಸಿಕೊಳ್ಳೋ ಶಕ್ತಿ ಪಡೆದಿರೋದಕ್ಕೂ, ಅದರ ನಿಲುವು, ಇಂದಿನ ಪರಿಸರ ಬಹು ಮಟ್ಟಿಗೆ ಕಾರಣ. ಇದೇ ಲಂಕೇಶ್ ಪತ್ರಿಕೆ ಬೇರೆ ಯಾವುದಾದರೂ ಕಾಲದಲ್ಲಿ ಹುಟ್ಟಿದ್ರೆ ಇಷ್ಟೇ ಯಶಸ್ಸು ಪಡೀತಿತ್ತು ಅಂತ ಹೇಳಲಾರೆ. ಇನ್ನು ಅಪರಂಜಿ ಹಾಸ್ಯದ ಬಗ್ಗೆ

ಹೇಳೋದಾದ್ರೆ ಅದು ಬಹುಮಟ್ಟಿಗೆ Urban ಹ್ಯೂಮರ್‌ನ ಪ್ರತಿನಿಧಿಸುತ್ತೆ. ಹಳ್ಳಿಗಾಡಿನ ಪರಿಸರದಲ್ಲಿ ಈ ಹಾಸ್ಯ ಅನೇಕ ಬಾರಿ ಕ್ಲಿಕ್ ಆಗೋದೇ ಇಲ್ಲ''

ಅಷ್ಟು ಹೊತ್ತಿಗೆ ಶ್ರೀರಾಮ್ ''ತೇಜಸ್ವಿ, ಮೊನ್ನೆ ಬೆಂಗಳೂರಿನಲ್ಲಿ ಗಿರೀಶ್ ಕಾರ್ನಾಡ್‌ರನ್ನು ಭೇಟಿ ಮಾಡಿದ್ದೆ. ಸೈಕಲ್‌ವಾಲಾ ಚೆನ್ನಾಗಿದೆ ಅಂತ ಹೇಳಿದ್ರು'' ಅಂತ ಹೇಳಿದರು. ''ಶಿವಕುಮಾರ್- ಗಿರೀಶ್ ಹೇಳಿದ ಮಾತು Let it not go to your head. ನೀವು ಒಳ್ಳೆಯ ಬರಹಗಾರರಾಗಬೇಕಾದ್ರೆ, Self -Criticism faculty ನ ಎಂದಿಗೂ ಕಳಕೋಬಾರ್ದು. ನೀವು ಏನು ಬೇಕಾದ್ರೂ ಬರೀರಿ. ಆದ್ರೆ ಅಷ್ಟೇ ಸಮಯಾನ ಅದನ್ನ ವಿಮರ್ಶೆ ಮಾಡಿ ಅಳಿಸಿ ಹಾಕೋದಕ್ಕೆ ವಿನಿಯೋಗಿಸಿ. ನಾನೇ ಹತ್ತಾರು ಕಾದಂಬರಿಗಳನ್ನ ಮನಸ್ಸಿನಲ್ಲೇ ಸೃಷ್ಟಿಸಿ, ಅಳಿಸಿ ಹಾಕಿದ್ದೀವಿ. ಹಾಗೆ ಫಿಲ್ಟರ್ ಮಾಡಿದ ನಂತರ ಉಳಿಯೋದು ಸಾರ್ಥಕ ಸಾಹಿತ್ಯ ಆಗೋ ಸಾಧ್ಯತೆ ಇರುತ್ತೆ''. ತೇಜಸ್ವಿ ಹೇಳಿದರು.

''ತಟ್ಟೆ ಹಾಕಿದೆ, ಊಟಕ್ಕೆ ಬನ್ನಿ - ಮಾತಾಡ್ತಾ ಇದ್ರೆ ನಿಮಗೆ ಹೊತ್ತು ಹೋಗೋದೇ ಗೊತ್ತಾಗುಲ್ಲ'' ಅಂತ ಹೇಳಿ ರಾಜೇಶ್ವರಿಯವರು ನಮ್ಮನ್ನೆಲ್ಲಾ ಊಟಕ್ಕೆ ಎಬ್ಬಿಸಿದರು. ಊಟಕ್ಕೆ ಕೂತಾಗ ತೇಜಸ್ವಿ ಅವರು,

''ರೀ ಶಿವಕುಮಾರ್, ನಾನ್ ವೆಜಿಟೇರಿಯನ್ ಸೇರ್ದೇ ಇದ್ರೆ ಈಗ್ಲೇ ಹೇಳ್ಬಿಡಿ. ದಾಕ್ಷಿಣ್ಯಕ್ಕೆ ತಿಂದು ಆಮೇಲೆ ಲಾಟ್ರಿ ಹೊಡೆಯೋ Brahmin complex ಇಟ್ಕೊಬೇಡಿ'' ಅಂತ ಲೇವಡಿ ಮಾಡಿದರು.

ನಾನು ''ಹಾಗೇನೂ ಇಲ್ಲಾ ಸಾರ್. ನಾನು ಇಂಗ್ಲೆಂಡಿನಲ್ಲಿ ಓದ್ತಾ ಇದ್ದಾಗ ಬೀಫ್, ಬೇಕನ್ ಅಂತ ಸಿಕ್ಕಿದ್ದನ್ನೆಲ್ಲಾ ತಿಂದ್ಕೊಂಡು ಜೀವನ ಸಾಗಿಸ್ಬೇಕಾಗಿತ್ತು. ಹಿಂದೊಮ್ಮೆ ಚೈತ್ರ ನನ್ನನ್ನ ನಿಮ್ಮನೇಗೆ ಕರೆದುಕೊಂಡು ಹೋಗಿ ಚಿಕನ್ ಕೊಡಿಸ್ತೀನಿ ಅಂತ ಭಾಷೆ ಕೊಟ್ಟಿದ್ದ. ಇವತ್ತು ಅವನು ಕೊಟ್ಟ ಭಾಷೆ ಈಡೇರ್ತಾ ಇದೆ'' ಅಂದೆ.

''ಅಯ್ಯೋ, ಮೊದಲೇ ಹೇಳಿದ್ರೆ, ನಾನು ಚಿಕನ್ ಅನ್ನೇ ಮಾಡ್ತಾ ಇದ್ದೆ. ಹೋಗ್ಲಿ ಬಿಡಿ, ಮುಂದಿನ ಸರ್ತಿ ಬಂದಾಗ ಖಂಡಿತ ಚಿಕನ್ ಮಾಡ್ತೀನಿ'' ಅಂತ ರಾಜೇಶ್ವರಿಯವರು ಆಶ್ವಾಸನೆ ಕೊಟ್ಟರು.

ಊಟವಾದ ನಂತರ, ತೇಜಸ್ವಿಯವರು ಬಹಳ ಉತ್ಸಾಹದಿಂದ, ತಮ್ಮ ಕಂಪ್ಯೂಟರ್ ಗ್ರಾಫಿಕ್ಸ್ ಸೆಟ್‌ಅಪ್ ತೋರಿಸಿದರು. ಕಂಪ್ಯೂಟರ್‌ನಲ್ಲಿ ಕೋರೆಲ್ ಡ್ರಾ ಸಾಫ್ಟ್‌ವೇರ್ ಅಳವಡಿಸಿ, ಬೇಕಾದ ಚಿತ್ರಗಳನ್ನು ಸೃಷ್ಟಿಸಿ ಮಾರ್ಪಡಿಸುವ ವಿಧಾನವನ್ನು ನನಗೆ ಅವರು ವಿವರಿಸಿದರು.

''ನಿಮ್ಮ ಕಂಪ್ಯೂಟರಿಗೆ ನೀವೂ ಶಬ್ದ ರತ್ನ ಹಾಕಿ, ನಿಮ್ಮ ಮುಂದಿನ ಪುಸ್ತಕದ ಕರಡನ್ನ ಫ್ಲಾಪಿಯಲ್ಲೇ ಕಳಿಸಿ, ನೀವು ಕೈಯಲ್ಲಿ ಬರೆಯೋದು, ನಾವು ಕೀ ಇನ್ ಮಾಡೋದು ಇವೆಲ್ಲಾ ತಪ್ಪುತ್ತೆ'' ಅಂತ ಅವರು ಸಲಹೆ ಮಾಡಿದರು.

ಕಂಪ್ಯೂಟರಿನ ಮೇಲೆ ನೇರವಾಗಿ ಬರೆಯೋಕ್ಕೆ ನಾನು ನಿಮ್ಮ ತರಹ ಬರಹಗಾರನಲ್ಲವಲ್ಲ. ಒಂದು ಪೇಜು ಬರೆದು, ಅರ್ಧಪೇಜು ಹೊಡೆದು ಹಾಕಿ ಪೇಪರನ್ನ ಕಿತ್ತು ಮುದುರಿ

ಮೂಲೆಗೆಸೆದು ಮತ್ತೆ ಬರೆದರೆ ಮಾತ್ರ ನನಗೆ ಮುಂದಿನ ಸಾಲುಗಳು ಹೊಳೆಯೋದು ಅಂತ ಹೇಳುಕ್ಕೆ ನನಗೆ ಧೈರ್ಯ ಬರಲಿಲ್ಲ. ''ಆಗಲಿ ಸಾರ್'' ಅಂದೆ.

ಬಸ್ಸಿಗೆ ಟೈಂ ಆಗಿತ್ತು. ತೇಜಸ್ವಿ ಅವರು ನಮ್ಮನ್ನು ಹ್ಯಾಂಡ್ ಪೋಸ್ಟ್‌ಗೆ ಡ್ರಾಪ್ ಮಾಡಿದರು. ತೇಜಸ್ವಿ ಶ್ರೀರಾಮ್ ಅವರಿಗೆ ವಿದಾಯ ಹೇಳಿ, ನಾನು, ಮುಕುಂದ್, ಬಸ್ ಹತ್ತಿದೆವು. ಬಸ್‌ನಲ್ಲಿ ಪ್ರಯಾಣ ಮಾಡುವಾಗ ''ಅಯ್ಯೋ, ಒಂದು ಮುಖ್ಯವಾದ ಪ್ರಶ್ನೇನೆ ಮರೆತನಲ್ಲಾ. ನಿಮ್ಮ ದೃಷ್ಟಿಯಲ್ಲಿ ಜೀವನದ ಸಾರ್ಥಕತೆ ಅಂದರೇನು? ಅಂತ ಕೇಳ ಬೇಕಾಗಿತ್ತು'' ಅನ್ನಿಸಿತು. ಹಾಗೇ ಯೋಚಿಸಿದೆ. ಒಂದು ನಿಮಿಷವೂ ಕಾಲ ಹರಣ ಮಾಡದೇ, ಕನ್ನಡದ ಇಂದಿನ ಹಾಗೂ ಮುಂದಿನ ಪೀಳಿಗೆಗಳ ಓದುಗರಿಗೆ, ಅತ್ಯುತ್ತಮ ಪುಸ್ತಕಗಳನ್ನು, ಅತಿ ಆಕರ್ಷಕವಾಗಿ ಒದಗಿಸುವ ದೀಕ್ಷೆ ತೊಟ್ಟಿರುವ ತೇಜಸ್ವಿಯವರನ್ನು ಪ್ರತ್ಯಕ್ಷವಾಗಿ ನೋಡಿಯೂ, ಸಾರ್ಥಕತೆ ಎಂದರೇನು ಎಂದು ಕೇಳುವುದು, ಮಾವಿನ ಹಣ್ಣಿನ ಮಂಡಿಯಲ್ಲಿ ನಿಂತು, ಮಾವಿನ ಹಣ್ಣು ಹೇಗಿರುತ್ತೆ ಎಂದು ಕೇಳುವಷ್ಟೇ ಮೂರ್ಖತನ ಅನ್ನಿಸಿತು.



''ನಂ ಬಡಾವಣೆ ಐಶ್ವರ್ಯ ಅಂತೆ ಅವಳು!''

ಒಂದು ಕಿಡ್ನಾಪ್ ಪ್ರಸಂಗ

ಓಂ ಪ್ರಕಾಶ್

ನನ್ನ ಹೆಸರು ಕಾಳಪ್ಪ, ಕಾಳ ಅಂತ ಕರೀರಿ ಸಾಕು. ನಾನು ಹೇಳ್ತಿರೋದು ಕತೆ ಅಲ್ಲ. ನಿಜವಾಗಿ ನಡೆದದ್ದು. ಆದ್ರೆ ಯಾರಿಗೂ ಹೇಳ್ಬೇಡಿ, ನನ್ ಮಾನ ಮೂರ್ಕಾಸಾಗುತ್ತೆ! ನನ್ನೂರು ಶ್ರೀರಂಗಪಟ್ಟಣದ ಹತ್ರ ಒಂದು ಹಳ್ಳಿ; ಓದು ಬರಹ ಸುತರಾಂ ಇಲ್ಲ. ಅದೂ ಇದೂ ಚಿಕ್ ಮೋಸಗಳು, ಕೂಲಿ ತರಹ ನಟಿಸಿ ಸೂಟ್‌ಕೇಸ್ ಕದಿಯೋದು, ಅವರಿವರನ್ನ ಬೆದರ್ಸಿ ಒಂದಷ್ಟು ದಿನಾ ಸಂಪಾದಿಸೋದು, ಹಿಂಗೇ ಜೀವ್ನ ಮಾಡ್ತಿದ್ದೆ. ಪಟ್ನದ ಪೋಲೀಸರ್ಗೆಲ್ಲ ನನ್ ಹೆಸ್ರು ಗೊತ್ತಿತ್ತು. ಒಂದಿನ ಮೈಸೂರಲ್ಲಿ, ಅರಮನೆ ಹತ್ರ ಸಿಕ್ದ ಗೆಳೆಯ ಒಬ್ಬ, ಹೆಸರು ಬಸಪ್ಪ. ಈ ಬಸಪ್ಪೂ ನನ್ ತರಹ ಕುಳಾನೇ ಪಾಪ! ಎರಡ್ಸಲ ಕಂಬಿ ಎಣಿಸಿದ್ನಂತೆ ಬೆಂಗ್ಳೂರಲ್ಲಿ. ಬಸಪ್ಪ ಹೇಳ್ದ ಅಲ್ಕಣೋ, ಭಾರೀ ಒಂದು ಕೆಲ್ಸ ಮಾಡ್ಬೇಕು ಇಬ್ರೂ ಸೇರಿ ಅಂತ ಅಂದ. ಸರಿ, ಕಿಡ್ನಾಪ್‌ಗಿಂತ ಭಾರೀ ಯಾವ್ದಿದೆ ಹೇಳಿ, ಇಬ್ರೂ ರಾತ್ರಿಯೆಲ್ಲ ಯೋಚ್ನೆ ಮಾಡಿದ್ವಿ, ಮೈಸೂರಲ್ಲಿ ಭಾರೀ ವ್ಯಾಪಾರಿ ಇದಾರೆ, ಹೆಸ್ರು ಜನಾರ್ಧನರಾಯ ಅಂತ! ಅವರ ಮಗ ಒಬ್ಬಿದಾನೆ; ಅವನ್ನ ಕಿಡ್ನಾಪ್ ಮಾಡಿದ್ರೆ ಐವತ್ತು ಸಾವ್ರಕ್ಕೆ ಕಮ್ಮಿ ಇಲ್ಲ ಸಂಪಾದ್ನೆ ಅಂತ ಮನಸ್ಸಲ್ಲೇ ಭಾರೀ ಕನಸ್ಸು ಕಂಡ್ವಿ.

ಸರಿ, ಮೈಸೂರಿಗೆ ಹೋದ್ವು ಸಾವ್ಕಾರ್ರ ಮನೆ ಹತ್ರ ಅವರ ಹುಡುಗ ಆಡ್ತಿದ್ದ. ಚೂಟಿಯಾಗಿದ್ದ. ಅವನ ಹತ್ರ ಹೋಗಿ ಬಸಪ್ಪ ಕರೆದ, ಮಗೂ, ಬರ್ತೀಯೇನೋ, ಕಬಿನಿ ಹತ್ರ ಪಿಕ್‌ನಿಕ್ ಹೋಗೋಣ ಅಂದ. ಆ ಹುಡುಗ ಪಾಪ ಓಡೋಡಿ ಬಂದ! ಟ್ಯಾಕ್ಸೀಲಿ ಹೋದ್ವಿ ಬೇಗ, ಕಬಿನೀ ನದಿ ಹತ್ರ. ಟ್ಯಾಕ್ಸೀನ ವಾಪಸ್ ಕಳಿಸಿದ್ವಿ, ನಾನು, ಬಸಪ್ಪ ಇಬ್ರೂ ರಾಜುಗೆ (ಅದೇ ಅವನ ಹೆಸ್ರು) ಹೇಳಿದ್ವಿ, 'ನೋಡು ಮರಿ, ನಿನಗೆ ನಾವು ಏನೂ ಮಾಡುಲ್ಲ, ನಂ ಜತೆ ಕ್ಯಾಂಪ್ ಮಾಡಿಕೊಂಡು ಕಾಡಲ್ಲಿ ಇರು' ಅಂತ. ರಾಜು ಕೇಕೆ ಹಾಕಿಕೊಂಡು ಎಗರಾಡಿದ! ಈ ತರಹ ಕ್ಯಾಂಪ್‌ಗೆ ಹೋಗೋಣ ಅಂತ ಅಪ್ಪಂಗೆ ಹೇಳಿದ್ರೆ ಅವನು ಯಾವತ್ತೂ ಕೇಳಿಲ್ಲ, ಇಲ್ಲೇ ಚೆನ್ನಾಗಿದೆ ಅಂದ. ವಿಧಿ ನಂ ಬೆನ್ನ ಹಿಂದೆ ನಗ್ತಿತ್ತು ಅಂತ ಆಗ ನಮಗೆ ಅರ್ಥವಾಗ್ಲಿಲ್ಲ. ಆ ಹುಡುಗ ರಾಜು ಚೂಟಿ ಅಂದ್ನಲ್ಲ, ಭಾರೀ ಚೂಟಿ, ನಿಮಿಷಕ್ಕೆ ನೂರು ಪ್ರಶ್ನೆ ಕೇಳೋನು; ಬಸಪ್ಪನ ಹತ್ರ, ಕಳ್ಳ ಪೋಲೀಸ್ ಆಡೋಣ ಅಂತ ಮರದ ರೆಂಬೇಲಿ ಬಸಪ್ಪನ್ನೇ ಹೊಡೆಯಲು ಹೋದ, ಪಾಪ! ರಾತ್ರೆ ಬಂತು. ನಾವೆಲ್ಲ ಮಲಗಿದ್ವಿ, ಏಕೋ ನನಗೆ ಎಚ್ರ ಆಯ್ತು! ರಾಜು ಒಂದು ಕಲ್ಲು ತೆಗೆದು ಬಸಪ್ಪನ ತಲೇ ಮೇಲೆ ಹಾಕುಕ್ಕೆ ಪ್ಲಾನ್ ಮಾಡ್ತಿದ್ದ! ಕಿಟಾರ್ನೆ ಕೂಗಿ ಬಸಪ್ಪನ್ನ ಕಾಪಾಡ್ದೆ. ಬೆಳಗಿನ ತನಕ ನಾನು ಇಲ್ಲ ಬಸಪ್ಪ ಎದ್ದಿರೋದು ಅಂತ ಪ್ಲಾನ್ ಮಾಡ್ಬೇಕಾಯ್ತು! ಬೆಳಗ್ಗೆ ಇನ್ನೂ ಮುಖ ತೊಳೆಯೋಕಿಲ್ಲ, ರಾಜು ಒಂದು ಬಿಲ್ಲು ಬಾಣ ಮಾಡಿ, ಬಾಣ ನನ್ನ ಕಣ್ಣಿಗೆ ಸರಿಯಾಗಿ ಬಿಟ್ಟ! ರಾಬಿನ್ ಹುಡ್ ನಾನು ಅಂತ ಕೂಗ್ತಿದ್ದ! ಸಧ್ಯ ನಾನು ತಲೆ ಹಿಂದಕ್ಕೆ ಮಾಡ್ದೆ ಕರೆಕ್ಟ್ ಸಮಯಕ್ಕೆ. ಅಂತಹ ರಣ ಚೇಷ್ಟೆ ಹುಡುಗನ್ನ ನಿಭಾಯ್ಸೋದು ಹೇಗೆ ಅಂತ ಬಸಪ್ಪ ತಲೆ ಮೇಲೆ ಕೈ ಹೊತ್ತು ಕೂತ. ನಾನು ಸಮಾಧಾನ ಮಾಡಿದೆ. ಬೇಗ ಜನಾರ್ಧನರಾಯರಿಗೆ ಒಂದು ಪತ್ರ ಬರೆಯೋಣ ಅಂದೆ. ಬರೆದ್ವಿ,

'ಜನಾರ್ದನ ರಾಯರೆ,

ನಿಂ ಮಗ ನಂ ಹತ್ರ ಸೇಫಾಗಿದಾನೆ. ಅವನನ್ನ ವಾಪಸ್ ಪಡೀಬೇಕಾದ್ರೆ, ಐವತ್ತು ಸಾವಿರ ರೂಪಾಯಿ ಒಂದು ಸೂಟ್‌ಕೇಸ್‌ನಲ್ಲಿಟ್ಟು ನಾವು ಹೇಳಿದ ಜಾಗಕ್ಕೆ ತಲಪಿಸಿ. '' ಆ ಜಾಗದ ಹೆಸರ್ನೂ ಬರೆದ್ವಿ, ಪತ್ರವನ್ನ ಅವರ ಮನೆಗೆ ರಾತ್ರಿ ಹಾಕಿ ಬಂದ ಬಸಪ್ಪ. ರಾಜು ಮಾತ್ರ ಹಾಯಾಗಿ ನಂ ಪ್ರಾಣ ತೆಗೀತ ಇದ್ದ. ಮನೇ ಯೋಚನೆ ಸುತರಾಂ ಇರ್ಲಿಲ್ಲ ಅವನಿಗೆ! ಪತ್ರ ಜನಾರ್ಧನರಾಯರಿಗೆ ಸೇರಿ ಮೂರು ದಿನ ಆಯ್ತು! ಏನೂ ಉತ್ರ ಇಲ್ಲ! ದಿನಾ ನಾವು ರಾಜು ಚೇಷ್ಟೆಗಳಿಂದ ಬಳಲಿ, ಸಂಜೆ ಹೊತ್ಗೆ ಸುಣ್ಣವಾಗ್ತಿದ್ವಿ ಅಷ್ಟೆ. ನಾಲ್ಕನೇ ದಿನ ಸಂಜೆ ಒಂದು ಪತ್ರ ಕಾಣ್ತು ಲೆವೆಲ್ ಕ್ರಾಸಿಂಗ್ ಹತ್ರ. ಓಡೋಡಿ ಹೋಗಿ, ತೆಗೆದು ಓದಿದೆ.

''ಕಿಡ್ನಾಪ್ ಧೀರರೆ,

ರಾಜುನ ವಾಪಸ್ ಕಳಿಸುಕ್ಕೆ ಐವತ್ತು ಸಾವಿರ ಕೇಳಿದ್ದೀರ. ಇದು ತುಂಬಾ ಜಾಸ್ತಿ. ಅವನ್ನ ನೋಡ್ಕೋಳೋ ಕಷ್ಟ ನನಗೆ ಚೆನ್ನಾಗಿ ಗೊತ್ತು; ಮಗು ವೇಷದ ರಕ್ಕಸ ಅವನು. ನೀವು ಅವನನ್ನ ವಾಪಸ್ ನನ್ನ ಬಳಿ ಕಳಿಸಬೇಕು ಅಂತ ನಿಮಗೆ ಇಷ್ಟ ಇದ್ರೆ, ಐನೂರು ರೂಪಾಯಿ ಜತೆ ಅವನ್ನ ಈ ರಾತ್ರಿ ಕರೆತನ್ನಿ!

ಪತ್ರ ಓದಿ ನಮಗೆ ರೇಗಿತು. ಅಲ್ಲ ಕಿಡ್ನಾಪ್ ಮಾಡಿರೋ ನಾವು, ತಂದೆಗೇ ಹಣ ಕೊಡಬೇಕಂತೆ. ಬಸಪ್ಪ ದೀನನಾಗಿ ನನ್ ಕಡೆ ನೋಡಿದ. 'ಕಾಳ, ರಾಜು ಕಾಟದಿಂದ ಇಬ್ರೂ ಸುಸ್ತಾಗಿದೀವಿ! ಐನೂರು ರುಪಾಯಿ ಏನು ಮಹಾ, ನಂ ಆರೋಗ್ಯ ಮುಖ್ಯ! ನನ್ನ ಮನಸ್ಸು ಕರಗ್ತು. ಸರಿ, ರಾತ್ರಿ ರಾಜೂನ ಕರಕೊಂಡು ಹೋದ್ವಿ, ಇನ್ನೂ ಎರಡು ದಿನಾ ಕ್ಯಾಂಪ್ ಅಂತ ರಾಜು ಕೂಗಾಡ್ತಿದ್ದ! ರಾತ್ರಿ ಜನಾರ್ಧನರಾಯರು ಮನೆಯಿಂದ ಹೊರಬಂದರು. ಬಸಪ್ಪ ಐನೂರು ರುಪಾಯಿ ಎಣಿಸಿ ಅವರ ಕೈಗಿಟ್ಟ. ರಾಜೂಗೆ ನಮ್ಮನ್ನ ಬಿಡುಕ್ಕೆ ಸುತರಾಂ ಇಷ್ಟ ಇರ್ಲಿಲ್ಲ. ನನ್ ಸೊಂಟದ ಸುತ್ತ ಬಲವಾಗಿ ಹಿಡಿದ! ರಾಯರು ಬಹಳ ಕಷ್ಟ ಪಟ್ಟು ಅವನನ್ನ ಎಳೆದರು. ಇನ್ ಹತ್ತು ನಿಮಿಷ ಕೊಡ್ತೀನಿ, ಅಷ್ಟರಲ್ಲಿ ನೀವಿಬ್ರೂ ಓಡಿಹೋಗಿ ಅಂತ ಏದುಸಿರು ಬಿಡುತ್ತ ಅಂದ್ರು. ನನ್ನ ಕಾಲುಗಳೂ ಬಲವಾಗಿವೆ. ಆದ್ರೂ, ಆ ಬಸಪ್ಪ ಜಿಂಕೆ ತರಹ ಓಡ್ತಿದ್ದ! ಅವನ್ನ ಸೇರಿದ್ದು ನಾನು ಎರಡು ಮೈಲಿ ಓಡಿದ ಮೇಲೆ!!

(ಪ್ರಾತಃ ಸ್ಮರಣೀಯ ಓ. ಹೆನ್ರಿಯನ್ನು ನೆನೆಯುತ್ತ ಬರೆದದ್ದು!)

★★

'ನಾ ಪತ್ತೆ'ದಾರಿ

ಮನೆಗೆ
ಬಿದ್ದ
ಕನ್ನದ
ಪತ್ತೆ ಮಾಡಲು
ಬಂದ
ಪತ್ತೆದಾರನೊಬ್ಬ
ಮನೆಯಲ್ಲಿದ್ದ
ಕನ್ನೆಯೊಡನೆ
ನಾಪತ್ತೆಯಾದ!

ಗೀತಾ ಶಾಸ್ತ್ರಿ

ಮತ್ತೊಂದು ಮೇಘ ಸಂದೇಶ

(ಗ ಕಾವ್ಯ)

ಚಿಂತಾಮಣಿ ಕೊಡ್ಲೆಕೆರೆ

(ಭವಿಷ್ಯಕ್ಕೆ ತೆರಳಿ, ಚಿಂತಾಮಣಿಯವರು ಈ ಗ ಕಾವ್ಯ (ಗದ್ಯ ಕಾವ್ಯ? ಗತ ಕಾವ್ಯ?) ವನ್ನು ಹೆಕ್ಕಿ ತಂದು ನಿಮ್ಮ ಮುಂದೆ ಇಟ್ಟಿದ್ದಾರೆ - ಸಂ.)

ಹೋಗು ಮೋಡವೇ ಹೋಗು, ನೀನು ನನ್ನ ನಲ್ಲೆಯಿರುವಲ್ಲಿಗೆ ಹೋಗು. ನನ್ನ ಸಂದೇಶವನ್ನು ಅವಳಿಗೆ ನೀಡು ಮತ್ತು ಇಲ್ಲಿಗೆ ವಾಪಸು ಬಂದು ಅವಳು ಏನೇನು ಹೇಳಿದಳೆಂದು ನನಗೆ ತಿಳಿಸು.

ಓ ಮೇಘನೇ, ಓ ಅಮೋಘನೇ - ನಿನಗೆ ನೆನಪಿದೆಯೇ? ಬಹು ಹಿಂದೆ ನೀನು ಕಾಳಿದಾಸನ ಶಾಪಗ್ರಸ್ತ ಯಕ್ಷ ಕುಮಾರನಿಗೆ ದೂತನಾಗಿದ್ದೆ. ಅನಂತರ ಯಾರೂ ನಿನ್ನ ಸೇವೆಯನ್ನು ಬಳಸಿಕೊಂಡಿಲ್ಲ. ಆದರೂ ನೋಯದಿರು, ಬೇಯದಿರು - ಓ ಮೋಡವೇ, ನಾನೀಗ ನಿನ್ನನ್ನು ಆಶ್ರಯಿಸಿರುವೆನು.

ಅಚ್ಚರಿಗೊಳ್ಳದಿರು ಓ ಮೇಘನೇ - ನಾನು ಗದ್ಯದಲ್ಲಿ ನಿನ್ನೊಡನೆ ಸಲ್ಲಾಪಿಸುತ್ತಿರುವುದಕ್ಕೆ, ಕಾಳಿದಾಸನ ಶ್ಲೋಕಗಳು ರಮಣೀಯವಾಗಿರಬಹುದು. ಆದರೆ ಅವುಗಳಲ್ಲಿ ಯಥಾವತ್ತಾಗಿ ಉರು ಹಚ್ಚಿ ಯಕ್ಷಿಯ ಬಳಿ ನಿವೇದಿಸುವುದು ನಿನಗೆ ಎಷ್ಟೊಂದು ಕಷ್ಟದ ಕೆಲಸವಾಗಿತ್ತು, ನೆನಪಿದೆಯೇ? ಆದುದರಿಂದಲೇ ನಿನಗೆ ಹೃದ್ಯವಾದ ಗದ್ಯದಲ್ಲೇ ಉಸುರುವೆನು. ಅಂಜದಿರು, ಅಳುಕದಿರು, ಸಾವಧಾನದಿಂದ ನನ್ನ ಮಾತುಗಳನ್ನು ಲಾಲಿಸು.

ಹೇ ಗಗನ ಯಾತ್ರಿಯೇ, ಇಳಿದು ಬಾ, ಒಳಗೆ ಬಾ, ಕುಳಿತುಕೋ ಕೂರಲು ಕುರ್ಚಿಯಿದೆ. ಈ ಚಹಾವನ್ನು ಸ್ವೀಕರಿಸು ಅಸಾಮಿನ ಬೆಟ್ಟಗಳ ಪ್ರಕೃತಿ ರಮಣೀಯ ದೃಶ್ಯಗಳ ನಡುವೆ ಅರಳಿದ ತಾಜಾ ಚಹಾದೆಲೆಗಳನ್ನು ನಿನಗಾಗಿ ಕುದಿಸಿ ಈ ಚಹಾವನ್ನು ನನ್ನ ಕೈಯಾರೆ ಮಾಡಿರುವೆ. ಅದಕ್ಕೆ ಇಂದ್ರಲೋಕದ ಕಾಮಧೇನುವಿನ ಹೆಸರುಳ್ಳ ಹಾಲನ್ನು ಹಾಕಿರುವೆ. ಕೆ.ಜಿ.ಗೆ ಹದಿನೈದು ರೂಪಾಯಿ ಕೊಟ್ಟು ತಂದಿರುವ ಶರ್ಕರವನ್ನು ಹದವಾಗಿ, ಹಿತವಾಗಿ ಬೆರೆಸಿರುವೆ. ಇದನ್ನು ನೀನು ಸ್ವೀಕರಿಸು.

ಏನು ಗಗನರಾಜ, ಆ ಯಕ್ಷನಲ್ಲಿದ್ದ ನೋವು ನನ್ನಲ್ಲಿ ಕಾಣದಲ್ಲ ಎಂದು ನೀನು ಅಚ್ಚರಿ ಪಡುತ್ತಿರುವೆಯಾ? ನಿಜ, ನನ್ನ ಮಡದಿಯು ಊರಿಗೆ ಹೋಗಿರುವುದರಿಂದ ನನಗೆ ತುಂಬ ನೆಮ್ಮದಿಯಾಗಿದೆ. ನನ್ನ ಪಾಡಿಗೆ ನಾನಿದ್ದೇನೆ. ಆದರೆ ಓ ಮೇಘನೇ, ಹಾಗೆಂದು ನೀನವಳಿಗೆ ತಿಳಿಸದಿರು. ನಿನ್ನನ್ನು ಬೆಂಡೆತ್ತಿ ಬಿಡುವಳು. ನನ್ನ ಕೈ ಹಿಡಿದವಳು ಎಂಥ 'ಘಟಾಣಿ' ಎಂದು ನೀನು ತಿಳಿದಿರಲಾರೆ ಅದನ್ನೀಗ ಹೇಳುವೆನು.

ಒಂದು ತಿಂಗಳ ಹಿಂದೆ ಒಂದು ರಾತ್ರಿ ನಾನು ಹತ್ತು ಘಂಟೆಗೆ ಮನೆ ಸೇರಿದೆನು. ಪ್ರತಿದಿನವೂ ಆರು ಘಂಟೆ ಹದಿನೈದು ನಿಮಿಷಕ್ಕೆ ಮನೆಯಲ್ಲಿರಬೇಕೆಂದು ನನ್ನ ಹೆಂಡತಿ ಕರುಣಾ ನನಗೆ ವಿಧಿಸಿರುವಳು. ಅಂದು ನಾನು ಲೇಟಾಗಿ ಬಂದೆನು. ಫಲವೇನು? ಎಂಟು ಏಟುಗಳನ್ನು

ತಿಂದೇನು. ಬಲಗೈಯ ಮೂಲೆಯಲ್ಲಿರುವ ಈ ಗಾಯವನ್ನು ಗಮನಿಸಿದೆಯಾ? ನನ್ನವಳು ಕರುಣಾ ನಿರ್ದಯದಿಂದ ನನಗೆ ನೀಡಿದ ಪ್ರಸಾದವಿದು. ನನ್ನ ಮಡದಿಯೇನಾದರೂ ಈ ಕುರಿತು ಕೇಳಿದರೆ ಗಾಯವು ಅಷ್ಟಷ್ಟಾಗಿ ಮಾಯುತ್ತಿರುವುದಾಗಿಯೂ, ಇದಕ್ಕೆ ಮುಲಾಮು ಸವರುವಾಗಲೆಲ್ಲ ನನ್ನವಳ ನೆನಪು ಬಂದು ನಾನು ವಿಷಾದ ಭರಿತನಾಗುತ್ತೇನೆಂದೂ ಅವಳಿಗೆ ತಿಳಿಸು ಮತ್ತು ಹಾಗೆ ಮಾತಾಡುವಾಗ ಸ್ವಲ್ಪ ದೂರದಲ್ಲೇ ಕುಳಿತುಕೋ, ಏಕೆಂದರೆ, ಅವಳು ತನ್ನ ಟೂಥ್‌ಬ್ರಶ್‌ನ್ನು ಇಲ್ಲಿಯೇ ಬಿಟ್ಟು ಹೋಗಿರುವಳು.

ಈಗಲೂ ನನ್ನ ಎದೆ ಹಿಡಿದಂತಾಗುತ್ತದೆ. ಮಿತ್ರ, ಹೇಗಿದ್ದಳು ಹುಡುಗಿ! ಹೇಗಾದಳು! ತೆಳ್ಳಗೆ ಬಳಕುವ ಬಳ್ಳಿಯಂತಿದ್ದಳು. ಈಗ ತುಂಬಿದ ಡ್ರಮ್ಮಾಗಿದ್ದಾಳೆ. ಬಾಯ್ತೆರೆದರೆ ಮುತ್ತು ಸುರಿಯುತ್ತಿತ್ತು. ಈಗ ಬೆಂಕಿಯ ಕಿಡಿಗಳನ್ನು ಕಾರಿದಂತೆನಿಸುತ್ತದೆ. ಯಾಕೆ ಹೀಗಾದಳು, ಮತ್ತೆ ಹಿಂದಿನಂತೆ ಹೇಗಾಗಬಲ್ಲಳು ಎಂದು ನಾನು ಯೋಚಿಸುತ್ತಲೇ ಈ ಇಡೀ ತಿಂಗಳನ್ನು ಕಳೆದಿದ್ದೇನೆ. ಅವಳೂ ಹೀಗೇ ನನ್ನ ಕುರಿತು ಯೋಚಿಸುತ್ತಿರಬಹುದೆಂದೂ ತಿಳಿದಿದ್ದೇನೆ. ಇದು ಮನೆ, ಮನೆಯ ಕಥೆ, ಮೋಡದಣ್ಣ, ಆಕಾಶದಲ್ಲೇ ಚಲಿಸುವ ನಿನಗೆ ಈ ಅಂತರಂಗದ ತುಡಿತಗಳು ಅರ್ಥವಾಗುವವೆ?

ಅವಳು ಹೀಗೆ ಆಗುವುದಕ್ಕೆ ನಾನೇ ಕಾರಣವೇನೋ ಎನಿಸುತ್ತದೆ ಕೆಲವು ಸಲ. ಆದರೆ ನನಗಿಂತ ಹೆಚ್ಚಾಗಿ ನನಗೆ ನೌಕರಿ ಕೊಟ್ಟ ಈ ಸಂಸ್ಥೆ, ಈ ಸಂಸ್ಥೆಯನ್ನಾಳುವ ಸರಕಾರಗಳು ಈ ಸ್ಥಿತಿಗೆ ನೇರವಾಗಿ ಹೊಣೆಯಾಗುತ್ತವೆ ಎಂದರೆ ನಿನಗೆ ಅಚ್ಚರಿಯಾಗದಿರಲಿ. ಕಾರಣ - ನನ್ನವಳ ಮನವೆಂಬ ಆಗಸದಲ್ಲಿ ಆಶೆಗಳೆಂಬ ಮೋಡಗಳು ಗುಂಪುಕಟ್ಟಿಕೊಂಡು ನರ್ತಿಸುತ್ತಲೇ ಇರುತ್ತವೆ. (ಆದರೆ ಮಳೆ ಸುರಿಯುವುದು ಮಾತ್ರ ಕಣ್ಣುಗಳ ಮೂಲಕ!) ಮೇಘ ಮೋಘಾ ಈ ಪರಿಸ್ಥಿತಿಗೆ ನಾನಲ್ಲ, ನನ್ನ ಸರಕಾರ ಹೊಣೆ ಎಂದು ನಿನಗೆ ಮತ್ತೊಮ್ಮೆ ತಿಳಿಸುತ್ತಿದ್ದೇನೆ. ನೀನೂ ಅವಳಿಗೆ ಹಾಗೆಂದು ತಿಳಿಸು. ತಿಳಿಸಲು ಪ್ರಯತ್ನಿಸು. ಎಷ್ಟೇ ಸಮಯ ವ್ಯರ್ಥವಾಗಲಿ, ಭೂಲೋಕದ ರಮಣಿಯರಿಗೆ ಒಂದು ವಿಷಯ ತಿಳಿಯುವುದು ಎಷ್ಟು ಕಷ್ಟ ಎಂಬುದು ನಿನಗೆ ಅರ್ಥವಾಗಲಿ.

ಮತ್ತೆ ನಮ್ಮ ನಡುವೆ ಮೋಡ ಮುಸುಕಿದ ಹಗಲು ರಾತ್ರಿಗಳನ್ನು ನೆನೆಯುವೆನು. ನಮ್ಮ ಮೂಡುಗಳು ಹಾಳಾದ ಆ ಗಳಿಗೆಗಳಲ್ಲಿ ನಮ್ಮ ಮನಸ್ಸುಗಳೇ ಕತ್ತಲು ತುಂಬಿದ ಕಾಡುಗಳಂತೆ ನನಗೆ ಕಂಡಿವೆ, ಮೋಡಗಳ ದೊರೆಯೆ. ಅಂಥ ಒಂದು ಜನವರಿಯ ರಾತ್ರಿ ನಾನು ಸಿಕ್ಕಾಪಟ್ಟೆ ಕೂಗಾಡಿದ್ದನ್ನು ನನ್ನವಳಿಗೆ ನೆನಪಿಸು, ಅವಳ ಕಣ್ಣೀರಿನಿಂದ ಒದ್ದೆಯಾಗಿ ಹೋದ ತಲೆದಿಂಬನ್ನು ನೋಡಿ ಇಂದಿಗೂ ನಾನು ದುಃಖಿಸುವುದಾಗಿ ಅವಳಿಗೆ ತಿಳಿಸು. ಈ ಮಾತುಗಳನ್ನು ಕೇಳಿ ಅವಳು ಅತ್ತು ಬಿಟ್ಟಾಳು, ಅದು ಅವಳಲ್ಲಿ ಇನ್ನೂ ಉಳಿದಿರುವ ಆರ್ದ್ರತೆಯ ದ್ಯೋತಕವೆಂದು ನೀನು ಭಾವಿಸು.

ನೀನು ಎಂದೂ ಮಧ್ಯಾಹ್ನ ಹನ್ನೆರಡು ಘಂಟೆಯಿಂದ ಎರಡು ಘಂಟೆಯ ನಡುವೆ ನನ್ನ ಮಡದಿಯನ್ನು ಮಾತಾಡಿಸಲು ಹೋಗಬೇಡ. ಅದು ಅವಳ ಮಧ್ಯಾಹ್ನದ ಲಘುನಿದ್ರೆಯ ಅವಧಿ. ಆ ಸಮಯದಲ್ಲಿ ದೇವರೇ ಬಂದರೂ ಅವಳು ಸಿಟ್ಟಿಗೆದ್ದು ಗಟ್ಟಿಯಾಗಿ ಬೈಯಲಾರಂಭಿಸಿದರೆ ಆಶ್ಚರ್ಯವಿಲ್ಲ. ಈ ಸೂಚನೆಯನ್ನು ನೀನು ಮರೆಯಬೇಡ.

ಮತ್ತು ಎಂದೂ ರಾತ್ರಿ ನೀನು ಏಳು ಘಂಟೆಯಿಂದ ಎಂಟೂ ಮೂವತ್ತರ ವರೆಗೆ ನನ್ನ ಮಡದಿಯನ್ನು ಮಾತಾಡಿಸಲು ಹೋಗಬೇಡ. ಆಗ ದೂರದರ್ಶನದಲ್ಲಿ ಅವಳು ಕನ್ನಡ ಕಾರ್ಯಕ್ರಮಗಳನ್ನು ನೋಡುತ್ತಿರುತ್ತಾಳೆ ಮತ್ತು ಮನಸ್ಸಿನ ಸ್ಥಿಮಿತವನ್ನು ಆಗಲೇ ಕಳೆದುಕೊಂಡಿರುತ್ತಾಳೆ! ರಾತ್ರಿಯ ವೇಳೆ ನೀನು ಅವಳ ಊರು ಸೇರುತ್ತಿದ್ದಂತೆ, ಕನ್ನಡ ಕಾರ್ಯಕ್ರಮಗಳು ಮುಗಿದ ಬಳಿಕ ಇನ್ನೂ ಹದಿನೈದು ನಿಮಿಷ ಕಳೆದು ಬಿಡಲಿ, ಆಮೇಲೆ ಅವಳನ್ನು ಭೇಟಿಯಾಗು.

ಅವಳು ಅಂಗಡಿಯಿಂದ ತಂದಿಟ್ಟು ಹೋದ ಅಕ್ಕಿಯನ್ನು ನಾನು ಈಗಾಗಲೇ ಸ್ವಚ್ಛಗೊಳಿಸಿರುವುದಾಗಿ ನೀನವಳಿಗೆ ತಿಳಿಸು. ಮಗನ ಪುಸ್ತಕಗಳಿಗೆ ಬೈಂಡ್ ಹಾಕಿಟ್ಟಿರುವುದಾಗಿಯೂ, ಹೆಸರಿನ ಲೇಬಲ್‌ಗಳನ್ನು ಅಂಟಿಸಿರುವುದಾಗಿಯೂ ನೀನು ಅವಳಿಗೆ ತಿಳಿಸು. ನಿತ್ಯವೂ ಮನೆಯ ಕಸ ತೆಗೆಯುತ್ತಿರುವುವುದಾಗಿಯೂ, ನಾನು ಎಲ್ಲ ಕೆಲಸಗಳನ್ನೂ ನಾನೇ (ನೆಮ್ಮದಿಯಿಂದ) ಮಾಡಿಕೊಳ್ಳುತ್ತಿರುವುದಾಗಿಯೂ ಅವಳಿಗೆ ತಿಳಿಸು. ದಿನ ನಿತ್ಯದ ಖರ್ಚುಗಳು ಅವಳು ವಿಧಿಸಿದ ಮಿತಿಯೊಳಗೇ ಇವೆ ಎಂದು ತಿಳಿಸಲು ನೀನೆಂದೂ ಮರೆಯಬೇಡ.

ನನ್ನವಳ ಊರಿಗೆ ಹೋಗುವಾಗ ತುಮಕೂರಿನಲ್ಲಿ ನೀನು ಇಡ್ಲಿಯನ್ನು ತಿನ್ನಲು ಎಂದೂ ಮರೆಯಬೇಡ. ಅಲ್ಲಿ ಇಡ್ಲಿ ತುಂಬಾ ಚೆನ್ನಾಗಿ ಸಿಗುವುದೆಂದು ಅರ್ಥವಲ್ಲ. ಆ ಬಳಿಕ ತುಂಬ ಹೊತ್ತು ಬಸ್ಸನ್ನು ಎಲ್ಲಿಯೂ ನಿಲ್ಲಿಸುವುದಿಲ್ಲ ಮತ್ತು ನಿಲ್ಲಿಸಿದ ಕಡೆ ನಿನಗೆ ಅಷ್ಟು ಒಳ್ಳೆಯ ಇಡ್ಲಿ ದೊರೆಯಲಾರದು. ಆ ಬಸ್ಸು ಹೋಗುತ್ತಿರುವ ಹಾದಿಯಲ್ಲೇ ನೀನು ಆಕಾಶದಲ್ಲಿ ಚಲಿಸುತ್ತಿರಬೇಕೆಂಬುದನ್ನು ಎಂದೂ ಮರೆಯಬೇಡ. ಇಲ್ಲವಾದರೆ ನೀನು ಗೇರುಸೊಪ್ಪೆಗೆ ಬದಲು ಆಗುಂಬೆಗೆ ಹೋಗಬೇಕಾಗಿ ಬಂದೀತು!

ತುಮಕೂರಿನಲ್ಲಿ ನೀನು ಇಡ್ಲಿಯನ್ನು ತಿಂದು ನಮ್ಮ ಊರಿಗಭಿಮುಖವಾಗಿ ನಿನ್ನ ಪಯಣವನ್ನು ಬೆಳೆಸು. ಕೆಲವೇ ಗಂಟೆಗಳಲ್ಲಿ ಶಿವಮೊಗ್ಗೆ ಬರುವುದು. ಮಲೆನಾಡಿನ ಗುಡ್ಡಗಳನ್ನು ನೀನಿದೀಗ ಪ್ರವೇಶಿಸುತ್ತಿರುವೆ. ಕಾಳಿದಾಸನ ಕಾಲದಲ್ಲಿ ಅಪೂರ್ವ ವನರಾಶಿ, ಪ್ರಕೃತಿ ಸೌಂದರ್ಯ ಕಂಡು ಆಸ್ವಾದಿಸಿದ ನೀನು ಇದೀಗ "ಮಲೆನಾಡು ಎಂಬಲ್ಲೇ ಇಷ್ಟು ಬಯಲುನಾಡೆ! ಓ ಮಲೆನಾಡೇ, ನಿನ್ನ ಪಾಡೇ" ಎಂದು ದುಃಖಾರ್ತತೆಯಿಂದ ಹಾಡಿಕೊಳ್ಳುವಂತಾಗಬಹುದು. ಕಣ್ಣೀರೂ ಉಕ್ಕಿ ಬರಬಹುದು. ಕಂಠ ಬಿಗಿಯಬಹುದು. ಆದುದರಿಂದ ನಿನ್ನ ಪ್ರಯಾಣದ ಸಮಯದಲ್ಲಿ ಒಂದು ಕರ್ಚೀಫ್ ಮತ್ತು ಕೆಲವು ವಿಕ್ಸ್ ಮಾತ್ರೆಗಳನ್ನು ಇಟ್ಟುಕೊಳ್ಳಲು ಮರೆಯಬೇಡ.

ಹೀಗೆ ನೀನು ನನ್ನವಳ ಊರನ್ನು ಸೇರು ಮೋಡಣ್ಣಾ ಅಷ್ಟು ದೂರದಲ್ಲಿ ಕಾಣುತ್ತಿರುವ ಎತ್ತರದ ಮನೆ, ಮಂಗಳೂರು ಹಂಚು ಹೊದಿಸಿದ ಮನೆ ಅದೇ ನನ್ನವಳ ಮನೆ, ಕಾಣಣ್ಣಾ. ಅಲ್ಲಿ ಅವರು ಮುದ್ದಿನಿಂದ ಬೆಳೆಸಿರುವ ಟೈಗರ್ ಎಂಬ ನಾಯಿಯಿರುವುದು. ಟೈಗರ್ ಎಂದರೆ ಹುಲಿಯಲ್ಲವೇ ಎಂದು ಹೇಳುತ್ತಿರುವೆಯಾ? ಈ ನಾಯಿಯೂ ಕೂಡ ಹುಲಿಯಂತೆಯೇ, ಸಿಂಹದಂತೆಯೇ ನಾಯಿಗೆ 'ಗ್ರಾಮಸಿಂಹ' ಎನ್ನುವರೆಂದು ನಿನ್ನ ಸ್ಮರಣೆಯಲ್ಲಿರಲಿ.

ನಮ್ಮೂರಿನ ಗುಡ್ಡಗಳ ಗೇರು, ಮಾವಿನ ಹಣ್ಣು, ಮುಳ್ಳು ಹಣ್ಣುಗಳನ್ನು ನೀನು ಸವಿ. ಸಮುದ್ರದ ವೈಭವದ ನೋಟಗಳನ್ನು ನೋಡು. ಈ ಹಣ್ಣುಗಳ ಸವಿ, ಈ ಸಮುದ್ರದ ಗಂಭೀರತೆ,

ಈ ಬೆಟ್ಟಗಳ ವೈಭವ ಮತ್ತು ಎತ್ತರ ಎಂದೆಂದೂ ಅವಳ ವ್ಯಕ್ತಿತ್ವದಲ್ಲಿರಲೆಂದು ಅವಳ ಗಂಡ ಹಾರೈಸುತ್ತಿರುವನೆಂದು ನನ್ನವಳಿಗೆ ತಿಳಿಸು. ನನ್ನವಳ ಮನೆಯಲ್ಲಿ ಹಲಸಿನ ಬೇಳೆ ಸುಟ್ಟಿದ್ದರೆ ಅವನ್ನು ನೀನು ಖಂಡಿತ ತಿನ್ನು, ಅದು ತುಂಬಾ ರುಚಿಯಾಗಿರುತ್ತದೆ.

ಊರಿಂದ ಬರುವಾಗ ಹಲಸಿನ ಹಣ್ಣಿನ ಹಪ್ಪಳ ಅಪ್ಪೆ ಮಿಡಿಯ ಉಪ್ಪಿನಕಾಯಿಗಳನ್ನುಮರೆಯದೇ ತರಲು ಮತ್ತು ಸಾಧ್ಯವಾದಷ್ಟೂ ತಡವಾಗಿ ಬರಲು - ನನ್ನವಳಿಗೆ ತಿಳಿಸು. ಇದನ್ನು ''ಅವಳ ಸಂತೋಷವೇ ನನಗೆ ಮುಖ್ಯ'' ಎಂಬ ಸವಿಯಾದ ಮಾತುಗಳ ಮೂಲಕ ಹೇಳಲು ನೀನು ಮರೆತು ಬಿಡಬಾರದು. ಅವಳು ಬರುವ ದಿನ, ಸಮಯಗಳನ್ನು ನನಗೆ ಮುಂಚಿತವಾಗಿ ತಿಳಿಸಲಿ. ನಾನು ಮನೆಯನ್ನು ಸಂಪೂರ್ಣ ಸ್ವಚ್ಛಗೊಳಿಸಲು ಇದರಿಂದ ಅನುಕೂಲವಾಗುತ್ತದೆ. (ಇದು ನೀನೊಬ್ಬನೇ ತಿಳಿದಿರಬೇಕಾದ ಸಂಗತಿ). ಅವಳು ಮುಂಚಿತವಾಗಿ ತಿಳಿಸುವುದೇಕೆಂದು ಕೇಳಿದರೆ ಅವಳ ಸಲುವಾಗಿ ಬಸ್‌ಸ್ಟ್ಯಾಂಡನಲ್ಲಿ ನಾನು ಆ ದಿನ ಕಾಯುತ್ತಿರಲು ಈ ಪ್ರಶ್ನೆ ಕೇಳಿದ್ದೇವೆಂದು ತಿಳಿಸು. ......

ಏನು ಮೇಘ ಸೋದರ, ನಿನ್ನ ಕಣ್ಣುಗಳಲ್ಲಿ ನೀರು!

ಇದೇ ಬದುಕು, ಮಿತ್ರ, ವೇದಾಂತಿಯಾಗುತ್ತಿದ್ದೇನೆಂದು ತಿಳಿಯಬೇಡ. ಸುಖ, ದುಃಖಗಳ, ಪ್ರೀತಿ ದ್ವೇಷಗಳ ಸಂಬಂಧಗಳ ಗೂಢ ಭೇದಿಸಲು ಹೊರಟರೆ ಕಗ್ಗಂಟಾಗುತ್ತವೆ. ಅದು 'ಹೀಗೇ' ಎಂದು ನೀನು ನಡೆಯುತ್ತಿದ್ದರೆ ಮುಂದಿನ ಹಾದಿ ತಾನಾಗಿ ತೆರೆಯುತ್ತವೆ. ....

ತಿಳಿನೀರಿನ ನಗೆಯಾಳದ ಮೇಲೆ
ತಿರುಗುತ ಬಹು ವೇಳೆ
ಕಣ್ಣೀರಿನ ಕಡಲಿನ ಪಾಲು
ಹಾಸ್ಯದ ಹರಿಗೋಲು

ಓಹ್ - ಕೊನೆಗೂ ಪದ್ಯಕ್ಕೇ ಬಂದೆನೆ! ಇರಲಿ, ಕಾವ್ಯದ ಗೆಲುವು ಅದು. ಆ ಕಾವ್ಯ ನಮ್ಮನ್ನು ಗೆಲುವಾಗಿಸಲಿ. ಬದುಕನ್ನು ಚೆಲುವಾಗಿಸಲಿ ಎಂದು ಹಾರೈಸುತ್ತ, ಓ ಮೋಡದಣ್ಣಾ, ನೀನು ನಿನ್ನ ತಾರಾಖಚಿತ ಗಗನ ಲೋಕವನ್ನು ಸೇರು. ನಾನು ಈ ಭೂಮಿಯಲ್ಲಿ ಮೃದುವಾಗಿ ಹೆಜ್ಜೆಗಳನ್ನಿಡುವೆನು.

★★

ನಡುಕ!

ಮನೆ
ನಡುಗಿ
ಪಾತ್ರೆಗಳು
ಉರುಳುತ್ತವೆ
ಭೂಕಂಪವಾದಾಗ
ಮತ್ತು
ಮಡದಿ
ಕೆಂಪಗಾದಾಗ!

ಗೀತಾ ಶಾಸ್ತ್ರಿ

ಬನ್ನಿ, ಫೋಟೋಗ್ಹೋಗೋಣಾ ....

ಸೀ. ಆರ್. ಸತ್ಯ

ರೀ, ಸಾವಿತ್ರಮ್ಮ .... ನೀವು ಒಬ್ರೇ ಹೋಗ್ತೀರೋ ಇಲ್ಲಾ ನಿಮ್ಮ ಯಜಮಾನ್ರ ಜೊತೆ ಹೋಗ್ತೀರೋ? ಗಂಡಾ ಹೆಂಡ್ತಿ ಇಬ್ಬರೂ ಒಟ್ಟಿಗೆ ಕೂತ್ಕೋಳ್ಳೊಕ್ಕೆ ಬಿಡಲ್ವಂತೆ ರೀ. ಒಬ್ರಾದ ಮೇಲೆ ಒಬ್ರು, ಬೇಕಾದರೆ ಕೂತ್ಕೋಬಹುದಂತೇ ..... ಅದಕ್ಕೇ ನಾನು ನಮ್ಮ ಯಜಮಾನ್ರಗೆ ನೀವು ಯಾವಾಗ ಬೇಕಾದರೂ ಹೋಗಿಬನ್ನಿ. ನನ್ನ ಪಾಡಿಗೆ ನಾನು ನನ್ನ ಸ್ನೇಹಿತರ ಜೊತೆ ಹೋಗ್ತೀನಿ ಅಂತ ಅಂದೆ!

ಬೆಳಗ್ಗೆ ರತ್ನಮಾಲ ಫೋನ್ ಮಾಡಿದ್ಲು .... ''ಫೋಟೋಗೆ ದೊಡ್ಡ ಕ್ಯೂ ಇರುತ್ತೆ. ಕ್ಯೂಲೈನು ಬಿಸಿಲಲ್ಲಿ ಇರ್ಬೇಕಾಗುತ್ತೆ - ಫೋಟೋ ತೆಗೆಯೋ ಹೊತ್ತಿಗೆ ಮುಖವೆಲ್ಲಾ ಬೆವತು ನಮ್ಮ ಮೇಕಪ್ ಎಲ್ಲಾ ಹಾಳಾಗುತ್ತೆ - ದೊಡ್ಡ ಛತ್ರಿ ಹಿಡಿಕೊಂಡು ನಿಂತ್ಕೊಳ್ಳಿ ನೆರಳು ಸಿಗುತ್ತೆ'' ಅಂತ, ಜೊತೆಗೆ, ''ಕೂಲಿಂಗ್ ಗ್ಲಾಸ್ ಹಾಕ್ಕೊಳ್ಳಿ ಫೋಟೋಲೂ ಚೆನ್ನಾಗಿ ಕಾಣಿಸ್ತೀರಿ'' ಅಂತ ಅಂದಳು. ಅಲ್ರೀ, ಈ ಕಿತಾಪತಿ ರತ್ನಮಾಲಾಗೆ ನನ್ಹತ್ರ ಕೂಲಿಂಗ್ ಗ್ಲಾಸ್ ಇಲ್ಲಾ ಅಂತ ಗೊತ್ತಿದ್ದೂ ಗೊತ್ತಿದ್ದೂ ಹೀಗೆ ಮಾತಾಡ್ತಾಳಲ್ಲ? ಅಷ್ಟಲ್ಲೂ ನಾನೇನು ಕೂಲಿಂಗ್ ಗ್ಲಾಸ್ ಹಾಕ್ಕೊಂಡು ಇಂದಿರಾಗಾಂಧಿ ತರಹ ಕಾಣಬೇಕೆ?

ಥ್ಹಂ! ಏನಂದ್ರಿ, ಸವಿತಾನೇ? ಹ್ಞೂ! ಅವಳೂ ಫೋನ್ ಮಾಡಿದ್ಲು. ' ಇಫ್ ಪಾಸಿಬಲ್, ನಾವೆಲ್ಲಾ ಯಾಕೆ ಒಂದು ಗ್ರೂಪ್ ಫೋಟೋನೇ ತೆಗಿಸ್ಕೋಬಾರದು?' ಅಂತ. ಇದೇನ್ರಿ ಇವಳ ಹುಚ್ಚು? ನಮ್ಮ ಲೇಡೀಸ್ ಅಸೋಸಿಯೇಶನದ್ದು ವಾರ್ಷಿಕೋತ್ಸವ ಅಂತ ಅಂದ್ಕೊಂಡುಬಿಟ್ಟಳೋ ಹೇಗೆ? ಅಷ್ಟೇ ಅಲ್ಲ; ನಮ್ಮ ಬಡಾವಣೆಲಿರೋ ಹೆಂಗಸ್ರೆಲ್ಲಾ ಕಾಂಚೀವರಂ ಹಳದೀ ಬಾರ್ಡರ್ ಸೀರೇನೇ ಉಟ್ಕೊಂಡ್ರೆ ಫೋಟೋಗಳಲ್ಲಿ ಒಂದೇ ತರಹ ಕಾಣ್ತೇವಿ ಅಲ್ವಾ! ಅಂತ ಬೇರೇ ಕೇಳಿದ್ಲು. ನಾನು ಹೇಳ್ದೆ. ''ಸವಿತಾ, ನೀವು ಆ ತರಹ ಸೀರೇನ ಮೊನ್ನೆ ಖರೀದಿ ಮಾಡಿದ್ದು ನಮ್ಮ ಅಸೋಸಿಯೇಶನ್‌ಗೆಲ್ಲಾ ಗೊತ್ತು. ಈಗ ತೆಗೆಯೋ ಫೋಟೋಗಳಲ್ಲಿ ಬರೀ ಮುಖವನ್ನು ಮಾತ್ರ ಅವರು ತೆಗೆಯೋದು. ನಿಮ್ಮ ಸ್ಯಾರಿ, ಬಾರ್ಡರ್ ಇತ್ಯಾದಿಗಳಿಗೆ ಯಾವುದಾದರೂ ಪ್ರೈವೇಟ್ ಸ್ಟೂಡಿಯೋಗೆ ಬೇಕಾದ್ರೆ ಹೋಗಿ'' ಅಂತ, ಪಟ್ ಅಂತ ಉತ್ತರ ಕೊಟ್ಟೆ. ಪಟ್ ಅಂತ ಫೋನ್ ಕೆಳಗೇ ಇಟ್ಟುಬಿಟ್ಳು! ಅವಳೋ ಅವಳ ಮಾತೋ!

ಆ ಕಂಟ್ರಾಕ್ಟರ್ ಹೆಂಡ್ತಿ ಭಾಗ್ಯ ಬಂದಿದ್ದಳು ರೀ. ಅವಳ ಗಂಡ ಮದುವೆ ಆದಾಗ್ಲಿನಿಂದ ಇದುವರೆಗೂ, ಒಂದು ಫೋಟೋನೂ ತೆಗೆಸಿಲ್ವಂತೆ. ''ತೆಗೆಸೋಕ್ಕೆ ದುಡ್ಡು ಇಲ್ಲಾ ಅಂತ ಅಲ್ಲ. ತೆಗಿಸೋಕ್ಕೆ ನಮ್ಮ ಯಜಮಾನ್ರಿಗೆ ಟೈಮ್ ಸಿಕ್ತಾ ಇಲ್ಲ''. ಅಂತ ಬೇರೆ ಎಕ್ಸ್‌ಪ್ಲನೇಶನ್ ಕೊಟ್ಳು! ಈ ಕಂಟ್ರಾಕ್ಟರುಗಳ ಕತೆಗಳು ನನಗೆ ಗೊತ್ತಿಲ್ವೆ, ಬಿಡಿ! ಇನ್ನೂ ಏನಂದ್ಲು ಗೊತ್ತೆ? ''ಫೋಟೋ ಬೂತ್ ನಮ್ಮನೆಯಿಂದ ಐನೂರು ಅಡಿ ದೂರದಲ್ಲೇ ಇದ್ದರೂ, ಕಾರಿನಲ್ಲೇ ಹೋಗೋಣ ಅಂತಾ ಇದೀನ್ರೀ. ಇಲ್ಲದಿದ್ದರೆ ಬಿಸಿಲಿನಲ್ಲಿ ನಡೆದು ಹೋಗ್ಬೇಕು. ಫೋಟೋದಲ್ಲಿ ಮುಖದ ಮೇಲೆ ಸುಸ್ತು ಕಾಣುತ್ತೆ. ನಮ್ಮ ಯಜಮಾನ್ರಿಗೆ ಆಮೇಲೆ ಅದು ಇಷ್ಟಾ ಆಗೋಲ್ಲ.!'' ನೋಡ್ರೀ ಇವಳ ದಿಮಾಖಿನ, ತನ್ನ ಮದುವೆ ರಿಸೆಪ್ಷನ್ ಫೋಟೋ ಅನ್ನೋ ಹಾಗೆ ಆಡ್ತಾಳೆ.

ನಮ್ಮ ಕ್ಲಬ್ ಟ್ರೆಶರರ್ ಸುಂದರಿ ಸಿಕ್ಕಿದ್ಲುರೀ. ಫೋಟೋ ಯಾವಾಗ ತೆಗಿಸ್ಕೋತೀ ಅಂತ ಕೇಳಿದೆ. ''ನಮ್ಮದೇನು ಬಿಡಿ. ಇಬ್ಬರೇ ಇರೋದು. ಯಾವಾಗಲೋ ಒಂದು ನಿಮಿಷ ಸ್ಕೂಟರ್ ಮೇಲೆ ಹೋಗಿ ತೆಗಿಸ್ಕೋತೀವಿ. ಪಾಪ ನಿಮ್ಮದೇ ಕಷ್ಟ ಅಲ್ಲವಾ? ಮನೇನಲ್ಲಿ ಹದಿನೆಂಟು ವಯಸ್ಸಿಗೂ ಮೇಲಿರೋರನ್ನೆಲ್ಲಾ ಹೊರಡಿಸಿಕೊಂಡು ಒಳ್ಳೇ ಜಾತ್ರೆಗೆ ಹೋಗೋ ಹಾಗೆ ಹೊರಡಬೇಕು''. ಅಂತ ಕುಹಕದ ಸಹಾನುಭೂತಿ ಹೇಳಿದ್ಲು. ಚಿಕ್ಕ ವಯಸ್ಸಾದರೂ ಧೋರಣೆ ಹೇಗಿದೆ ನೋಡಿದ್ರಾ ಸಾವಿತ್ರಮ್ಮ? ನಮ್ಮ ನಿಮ್ಮ ತರಹ ಅವಳಿಗೂ ವಯಸ್ಸು ಆಗೇ ಆಗುತ್ತೆ - ಹದಿನೆಂಟು ವರ್ಷ ವಯಸ್ಸಿನ ಮೇಲಿನ ಮಕ್ಕಳೂ ಆಗುತ್ವೆ, ದೇವ್ರಿಲ್ವೆ, ನೋಡ್ಕೋತಾನೆ ಬಿಡಿ.

ಅಂದ್ಹಾಗೆ, ನಮ್ಮ ಔಟ್‌ಡೋರ್ ಕಮಿಟಿ ಮೆಂಬರ್‌ಗಳೆಲ್ಲಾ ಬ್ಯೂಟಿ ಪಾರ್ಲರ್‌ಗೆ ಹೋಗಿ ಆಮೇಲೆ ಫೋಟೋಗೆ ಬರ್ತೀವಿ ಅಂತ ಹೇಳ್ತಿದಾರೇ ರೀ. ಇದಕ್ಕೆಲ್ಲಾ ಆ ಶಶಿಕಲಾನೇ ಲೀಡರ್ರು. ಅವಳು ಈ ''ಬೆಂಗಳೂರು ಸಿಟಿ''ಯನ್ನು ''ಸನ್‌ಸಿಟಿ'' ಅಂತ ಮಿಸ್ಟೇಕ್ ಮಾಡ್ಕೊಂಡು ಮಿಸ್ ಯೂನಿವರ್ಸೋ, ಮಿಸ್ ವರ್ಲ್ಡೋ ಆಗ್ತೀನಿ ಅಂತ ಅಂದ್ಕೊಂಡಿದಾಳ್ರೀ. ಇವಳಿಗೆ ಇರೋ ಬ್ಯೂಟಿಗೆ ಆ 501 ಬಾರ್ ಸೋಪ್‌ನವರೋ ಇಲ್ಲಾ ಸನ್‌ಲೈಟ್ ಸೋಪಿನವರೋ ಪ್ರೈಜ್ ಕೊಡಬೇಕು ಅಷ್ಟೇ! ನಮ್ಮ ಬಡಾವಣೇಲಿ ಇಂಥವರ ಹತ್ತಿರ ದಿನ ನಿತ್ಯ ಸಮಜಾಯಿಸೋದು ಸಾಕಾಗಿ ಹೋಗಿದೇರೀ.

ಸಾವಿತ್ರಮ್ಮ, ನಿಮಗೆ ಹೇಳೋದೇ ಮರೆತೆ. ಬ್ಯಾಂಕ್ ಮುಂದೆ ಅಲುಮೇಲು ಸಿಕ್ಕಿದ್ಲು. ''ಲಾಕರ್‌ನಿಂದ ನನ್ನ ಮೂಗುಬೊಟ್ಟು, ವಜ್ರದ ಓಲೆ ಸರಗಳನ್ನೆಲ್ಲಾ ತಂದೆ. ನಾಳೆ ಫೋಟೊ ಇದೆ ಅಲ್ವಾ?'' ಅಂತ ಕೊಕ್ಕರೆ ತರಹ ತಲೆ ಅಲ್ಲಾಡಿಸಿದಳು. ನಾಳೆ ಆ ಬಿಸಿಲಿನಲ್ಲಿ ನಿಂತಿರೋ ಕ್ಯೂನಲ್ಲಿ ಇವಳ ಕತ್ತಿನಿಂದ ಫಳಾ ಫಳಾ ಅಂತ ಕನ್ನಡಿ ತರಹ ಎಲ್ಲರಿಗೂ ಸೂರ್ಯರಶ್ಮಿ ಕಣ್ಣಿಗೆ ಕುಕ್ಕಿಸಿ ಮೆರೀತಾಳೆ .... ಆ್ಞ, ಏನಂದ್ರಿ? ನಿಜಾ, ನಿಜಾ, ಈ ಒಡವೆಗಳೆಲ್ಲಾ ಹಾಕ್ಕೊಂಡೇ ನಾವು ಪರಲೋಕಕ್ಕೆ ಹೋಗ್ತೀವ್ಯೆ? ಮೆರೀಲಿ ಬಿಡಿ, ಮೆರೀಲಿ .....

ಸಾವಿತ್ರಮ್ಮ, ಅಂದ್ಹಾಗೆ, ಅವರು ಫೋಟೋ ತೆಗೆಯೋದು ಬ್ಲಾಕ್ ಎಂಡ್ ವೈಟ್‌ನಲ್ಲೋ ಇಲ್ಲಾ ಕಲರ್‌ನಲ್ಲೋ ರೀ? ನಮ್ಮೆಜಮಾನ್ರನ್ನ ಬೆಳಗ್ಗೆ ಕೇಳಿದ್ದಕ್ಕೆ ''ಹ್ಯಾಗೆ ತೆಗೆದ್ರೆ ಏನು? ನೀನು ಫೋಟೋಲಿ ಬೀಳೋದು ಅಪ್ಪಟ ಕಪ್ಪು ಬಣ್ಣದಲ್ಲೇ ತಾನೇ?'' ಅಂತ ಅಂದರು - ಅವರು ಯಾವಾಗಲೂ ಹೀಗೆ ಹಾಸ್ಯ ಮಾಡ್ತಾರೇ ರೀ. ಏನೋ ನಾನು ನೋಡೋಕ್ಕೆ ಚೆನ್ನಾಗಿ ಕಾಣ್ಸಿದ್ರೆ - ಅದೇ ಫೋಟೋಲಿ ಇವರಿಗೂ ಸಂತೋಷ ಆಗುತ್ತೆ. ನಾನು ಇವರಿಗೆ ''ಕೋಟ್ ಹಾಕ್ಕೋಳೀ ಫೋಟೋಗೇ'' ಅಂತ ಅಂದಿದ್ದಕ್ಕೆ, ''ಕೋಟ್ ಫೋಟೋಲಿ ಬರೋದಿಲ್ಲಾ ಕಣೇ ..... ಏನಾದ್ರೂ ವಿಗ್ ಇದ್ರೆ ಕೊಡು, ಬೋಳು ತಲೆಗೆ ಬೇಕಾಗುತ್ತೆ!'' ಅಂತ ಅಂದ್ರು. ಹ್ಞೂ ರೀ .... ತುಂಬಾ ಹಾಸ್ಯ ಪ್ರವೃತ್ತಿ.

ವಿಗ್ ಅಂದ ತಕ್ಷಣ ಜ್ಞಾಪಕಕ್ಕೆ ಬಂತು ಸಾವಿತ್ರಮ್ಮ. ನಿಮ್ಮ ಮಗಳು ದುಬಾಯಿಯಿಂದ ಒಳ್ಳೇ ಹೇರ್ ಡೈ ಕಳ್ಸೀದಾಳೆ ಅಂತ ಹೇಳಿದ್ದು ಜ್ಞಾಪಕ. ನನಗೆ ಒಂದು ಸ್ವಲ್ಪ ಕೊಡ್ತೀರೇನ್ರಿ? ಥ್ಯಾಂಕ್ಸ್. ಏನೋ ಈ ಹಾಳು ಫೋಟೋಲಿ ನನ್ನ ನರೆತ ಕೂದಲು ಕಾಣದಿದ್ರೆ ಸರಿ! ಯಾಕೆ ನಗ್ತಿದೀರೀ ಸಾವಿತ್ರಮ್ಮ?

ಓಹೋ ಅರ್ಥವಾಯ್ತು! ಈ ನಮ್ಮ ಫೋಟೋ ಗಲಾಟೆಗೆಲ್ಲಾ ಕಾರಣ ಕರ್ತ ಅನ್ನಿಸಿಕೊಂಡ

ಟಿ. ಎಸ್. ಶೇಷನ್‌ಗೇ ತಲೇಲಿ - ಬಿಳಿಕೂದಲು ಇರಲಿ, ಒಂದು ಕೂದಲೂ ಇಲ್ಲಾ ಅಂತ ಅಂದ್ರಾ? ಪಾಪ, ಪಾಪ, ರೂಲ್ಸ್ ಪ್ರಕಾರ ಆತನೂ ಫೋಟೋ ತೆಗಿಸ್ಕೊಳ್ಳಲೇ ಬೇಕು ಅಲ್ಲವೆ? ಪಾಪ, ಪಾಪ!!

ಹಾಗಾದ್ರೆ, ನಾನು ಈಗ ಫೋನ್ ಇಡ್ತೀನಿ ಸಾವಿತ್ರಮ್ಮ, ಒಂದೆರಡು ನಿಮಿಷ ನಿಮ್ಹತ್ರ ಮಾತಾಡಿದ್ದು ಹಾಯಾಗಿತ್ತು. ಹೇಗಿದ್ರೂ ಬ್ಯೂಟಿ ಪಾರ್ಲರ್‌ನಲ್ಲಿ ನೋಡೇ ನೋಡ್ತೀವಲ್ಲಾ? ಬರ್ಲೇ?? ಥ್ಯಾಂಕ್ಸ್, ಸಾವಿತ್ರಮ್ಮ ....

ಡಾ|| ಸಿ. ಆರ್. ರಘು

ಪತ್ನಿ ಶಾಂತಾ ವಿದಾಯ ಹೇಳಿ ಹೊರಟ ಹಲವೇ ತಿಂಗಳುಗಳಲ್ಲಿ ರಘು ನಮ್ಮೆಲ್ಲರನ್ನಗಲಿ ಶಾಂತಾರವರನ್ನು ಸೇರಿದ್ದಾರೆ. ಅಪರಂಜಿಯ ಪ್ರಾರಂಭದ ದಿನಗಳಿಂದ ಅವಳನ್ನು ಅಭಿಮಾನ ಪೂರ್ವಕವಾಗಿ ಆರೈಕೆ ಮಾಡಿದ ದಂಪತಿಗಳು ಶಾಂತಾ ಮತ್ತು ರಘು. ಇವರಿಬ್ಬರೂ, ತಮ್ಮ ಅಪಾರ ಮಿತ್ರ ಬಳಗವನ್ನು (ಹಲವೊಮ್ಮೆ ಆಗ್ರಹ ಪೂರ್ವಕವಾಗಿ) ಅಪರಂಜಿಗೆ ಪರಿಚಯಿಸಿ ನೆರವಾಗಿದ್ದರು. ರಘು ತೀರಾ ಸಂಭಾವಿತ ವ್ಯಕ್ತಿ. ಅದಕ್ಕೆ ತಕ್ಕಂತೆ ಅವರಿಗೆ ನಿದ್ರೆಯಲ್ಲಿ ನಿರಾಯಾಸವಾದ ಮರಣ ದಕ್ಕಿತು. ಬೆಳಗ್ಗೆ ಅವರನ್ನು ನೋಡಲು ಹೋದಾಗ, ಅವರು ಹಿಂದಿನ ರಾತ್ರಿ ಓದುತ್ತಿದ್ದ ಜುಗಾರಿ ಕ್ರಾಸ್ ಅವರ ಎದೆಯ ಮೇಲೆ ಒರಗಿತ್ತು. ಅತಿ ಆಶಾವಾದ, ಅಥವಾ ಅತಿ ನಿರಾಶಾವಾದಕ್ಕೆ ಎಡೆಗೊಡದೆ ಜೀವನದ ವಿರಾಟ್ ಅರ್ಥ ಹೀನತೆಯನ್ನು ಗಂಭೀರ ವಿಶ್ವಾಸದಿಂದ ಇದಿರುಗೊಂಡ ಸ್ನೇಹ ಜೀವಿ ಡಾ|| ರಘು.

ಆರ ಕೈ ತುತ್ತಿಗಂ ನಿನ್ನ ಕಾಯಿಸದೆ ವಿಧಿ।
ಯಾರ ಭುಜಕಂ ಭಾರವಾಗಿಸದೆ॥
ಆರ ಸೆಲೆ ಸುಳಿವು ಮಂಟದವೊಲಾಗಿಸಿ ನಿನ್ನ।
ಪಾರಗಾಣಿಸ ಬೇಡು - ಮಂಕುತಿಮ್ಮ ॥

ಕರುಣಾಮಯ ವಿಧಿ ರಘುರವರನ್ನು ಪಾರಗಾಣಿಸಿತು. ನಮ್ಮನ್ನಗಲಿದ ಈ ನಗು ಸರಸಿ ದಂಪತಿಗಳ ಆಶೀರ್ವಾದ ಅಪರಂಜಿಗೆ ಸದಾ ಕಾಲವೂ ಶ್ರೀ ರಕ್ಷೆಯಾಗಿರಲಿ.



“ಇನ್ನೂ ಒಂದು ಹ್ಯಾಂಡೀಕ್ರಾಪ್ ಎಕ್ಸಿಬಿಷನ್‌ಗೆ ಹೋಗ್ಬೇಕೇ?”

ರಂಗವಿಲಾಸ

ಆ.ರಾ.ಸೇ

1

ಇಂಗ್ಲಿಷಿನಲ್ಲಿ (They say) ದೆ, ಸೇ ಎಂಬೊಂದು ಪ್ರಯೋಗವಿದೆ.

ದೆ, ಸೇ,

ಸತ್ಯವು ಕಲ್ಪನೆಗಿಂತ ಹೆಚ್ಚು ವಿಸ್ಮಯಕರ

ದೆ ಸೇ,

ಸತ್ಯವೇ ಅತ್ಯಂತ ಶ್ರೇಷ್ಠ ಹಾಸ್ಯ, ದೆ ಸೇ, ಏನೇನೋ!

ಅವರು ಏನಾದರೂ ಹೇಳಲಿ; ನಾನು (ಎಂದರೆ ನಾನಲ್ಲ - ಈ ಕಥೆಯ ನಿರೂಪಕ) ಕಂಡ, ಕೇಳಿದ, ಅರೇಬಿಯನ್ ನೈಟ್ಸ್‌ಗೆ ಸೈಡ್ ಹೊಡೆಯುವ ಕತೆಯನ್ನು ಹೇಳುತ್ತೇನೆ. ಸ್ವಲ್ಪ ಉದ್ದವಾಗಬಹುದು. ಗಮನವಿಟ್ಟು ಕೇಳುವಂಥವರಾಗಿರಿ.

ಇದು ಎಂದರೆ ಈ ಕತೆ, ಯಾವಾಗ ಆರಂಭವಾಯಿತೋ ನೆನಪಿಲ್ಲ. ಆದ್ದರಿಂದ ಒಂದು ಕ್ರಿಕೆಟ್ ಮ್ಯಾಚಿನಿಂದ ಆರಂಭಿಸೋಣ.

ನಮ್ಮ ಶಾಲೆಯ ಬಿ ಟೀಮಿಗೆ ತಮ್ಮಣ್ಣ, ನಾಗರಾಜು, ಜಗ್ಗ ಇವರ ಶಿಫಾರಸಿನಿಂದ ನಾನು ಆಯ್ಕೆಯಾದೆ. ಆದರೆ ನಾನು ಹನ್ನೊಂದರೊಳಗೊಬ್ಬನೋ ಇನ್ನೊಂದನೆಯವನೋ ನಿರ್ಧಾರವಾಗಿರಲಿಲ್ಲ. ಆದ್ದರಿಂದ ನಾನು ಕ್ಯಾಪ್ಟನ್ ಮನೆಗೆ ಎಡತಾಕ ಬೇಕಾಯಿತು.

ಕ್ಯಾಪ್ಟನ್, ಸಾರಥಿ. ಅವನೊಬ್ಬ ಕುಡುಮಿ. ಯಾವಾಗ ಹೋದರೂ ಮನೆಯಲ್ಲಿರುತ್ತಿರಲಿಲ್ಲ. ಅವನು ಇಲ್ಲವೆಂಬ ಸುದ್ದಿ ಕೊಡುತ್ತಿದ್ದವಳು ಅವನ ಅಕ್ಕ. ಮೈಥಿಲಿ ಎಂದು ಅವಳ ಹೆಸರು.

ಮೈಥಿಲಿ ಬಹಳ ಸ್ಫುರದ್ರೂಪಿಯಾಗಿದ್ದಳು ಎಂದು ನನಗೆ ಈಗೀಗ ತಿಳಿಯುತ್ತಿದೆ. ನನಗಿಂತ ಸ್ವಲ್ಪ ಹೆಚ್ಚು ವಯಸ್ಸಿನವಳು. ನಗುಮುಖದವಳು. ಮಾತು ಗಂಭೀರ. ಸ್ವಲ್ಪ ಜರ್ಬು ಇದ್ದರೂ ಇರಬಹುದು.

ನನ್ನ ಸಹವಾಸದಿಂದ ಸಾರಥಿ ಎಲ್ಲಿ ಅಡ್ಡದಾರಿ ಹಿಡಿದಾನೋ ಎಂಬ ಶಂಕೆ ಬೇರೆ ಇತ್ತೇನೋ! ಹದಿನೈದು ಬಾರಿ ಸಾರಥಿ ಇಲ್ಲ ಎಂದು ಹೇಳಿದ ಮೇಲೆ ನನಗೆ ಸಾರಥಿಯ ಹತ್ತಿರ ಇದ್ದ ಕೆಲಸವೇನು ಎಂದು ಕೇಳಿ ತಿಳಿದು ಬಿ ಇಲೆವೆನ್ನಿನಲ್ಲಿ ನನಗೆ ಒಂದು ಜಾಗ ಸಿಗುವಂತೆ ಮಾಡುತ್ತೇನೆ ಎಂದಳು. ನನಗೆ ಒಂದು ಕಡೆ ಧನ್ಯತಾಭಾವ. ಇನ್ನೊಂದು ಕಡೆ ಕೃತಜ್ಞತೆ.

ಮುಂದಿನದು ಇತಿಹಾಸ. ನಮ್ಮ ಬಿ ಇಲೆವೆನ್ ಜಯಗಳಿಸಿತು. ಅದಕ್ಕೆ ಕಾರಣ ನಾನೇ. ನಾಟ್ ಔಟ್ ಹನ್ನೊಂದು ರನ್ ಹೊಡೆದದ್ದಲ್ಲದೆ, ಮೂರು ಕ್ಯಾಚ್‌ಗಳು ನನ್ನನ್ನು ಹಿಡಿದವು. ಸಾರಥಿ ಮನೆಗೆ ಕರೆದುಕೊಂಡು ಹೋಗಿ ಕಾಫಿ ಕೊಡಿಸಿದ.

ಕಾಲ ಕಳೆಯಿತು. ನಾನು ಮುಗಿಲು ಹಳ್ಳಿಯ ಸ್ವಪ್ನ ಸುಂದರಿ ಫೌಂಡೇಷನ್ನಿನವರು ಆರಂಭಿಸಿದ ಉದಯನ ಮಹಾವಿದ್ಯಾಲಯದಲ್ಲಿ ಬಿ. ಎಸ್ಸಿಗೆ ಸೇರಿದೆ. ಹೊಟ್ಟೆಯಲ್ಲಿ ಅನ್ನವಿಲ್ಲ, ಓದಲು ಪುಸ್ತಕವಿಲ್ಲ. ಕುಡಿಯಲು ಕಾಫಿಯಿಲ್ಲ, ಬರೆದುಕೊಳ್ಳಲು ಹಾಳೆಯಿಲ್ಲ, ಬರೆಯಲು ಪೆನ್ ಇಲ್ಲ. ಹಿಂದಿನ ಬೆಂಚಿನಲ್ಲಿ ಕುಳಿತು, ಡೆಸ್ಕಿನ ಮೇಲೆ ತಲೆಯಿಟ್ಟು ಮಲಗುವುದು; ಇಲ್ಲವೆ ಅ.ನ.ಕೃ ಕಾದಂಬರಿ (ಕಡ ತಂದದ್ದು) ಯನ್ನೋ, ಇನ್ನೇನೆನ್ನೋ, ಓದುವುದು. ಒಂದು ದಿನ ಕೊರವಂಜಿಯ ಒಂದು ಸಂಚಿಕೆ ಓದುತ್ತಿದ್ದೆ. ಹಿಂದಿನ ದಿನದಿಂದ ಅದರಲ್ಲಿ ಅರ್ಥವಾಗದಿದ್ದ ಒಂದು ಜೋಕಿನ ಅರ್ಥ ಹೊಳೆದು ಜೋರಾಗಿ ನಕ್ಕು, ಓದನ್ನು ಮುಂದುವರಿಸಿದೆ. ಸ್ವಲ್ಪ ಹೊತ್ತಿನ ಮೇಲೆ ಇಡೀ ತರಗತಿ ಸ್ತಬ್ಧವಾಯಿತೆಂದು ತಿಳಿಯಿತು. ನಾನು ಏಕೆಂದು ಚಿಂತಿಸದೆ, ತಲೆಯೆತ್ತದೆ, ಓದು ಮುಂದುವರಿಸಿದೆ.

'ಏನೋ ಅದು?' ಎಂಬ ಕೋಪದ ಪ್ರಶ್ನೆ ಕೇಳಿತು. ತಲೆಯೆತ್ತಿ ನೋಡಿ ಬೆಚ್ಚಿ ಬಿದ್ದೆ. ಲೆಕ್ಚರರು ನನ್ನ ಹಿಂದೆ ನಿಂತು ನಾನು ಓದುತ್ತಿದ್ದ ಪುಸ್ತಕವನ್ನು ನೋಡುತ್ತಿದ್ದರು. ನಾನು ಬೆಬೆ ಬೆಬೆ ಎನ್ನುತ್ತಾ ಎದ್ದು ನಿಂತೆ.

'ಏನದು?'

ಪ್ರಶ್ನೆಯ ಕಠಿಣತೆಗೆ ಬೆಚ್ಚಿ ಬಿದ್ದೆ.

'ಕೊ .... ಕೊ ... ಕೊ..... ಕೊ ......' ಎಂದೆ.

'ಏ ಕೋಳಿ, ತಾ ..... ಆ ಪುಸ್ತಕ' ಎಂದರು.

ಅವರೇ ಅದನ್ನು ಕಿತ್ತುಕೊಂಡು ನೋಡಿ

'ಕೊರವಂಜಿಯೋ? ವೆರಿಗುಡ್' ಎಂದು ಅದನ್ನು ನನಗೆ ಕೊಟ್ಟು ಹಿಂದಿರುಗಿ ಹೋಗಿ ಪಾಠ ಮುಂದುವರಿಸಿದರು.

ಆ ನಮ್ಮ ಮೇಷ್ಟರ ಹೆಸರು ರಂಗಣ್ಣ. ಅವರದು ಎತ್ತರವಾದ ದೇಹ. ಕಾಂತಿಯುಕ್ತವಾದ ಮುಖ. ಗುಂಗುರು ಕೂದಲುಗಳು. ಉದಾಸೀನ ಸ್ವಭಾವ. ಪಾಠ ಹೇಳುವುದರಲ್ಲಾಗಲೀ, ಮಾತನಾಡುವುದರಲ್ಲಾಗಲೀ, ನಡೆಯುವುದರಲ್ಲಾಗಲೀ, ಅವರಿಗೆ ಯಾವ ಉತ್ಸಾಹ, ಲವಲವಿಕೆ ಇರಲಿಲ್ಲ. ಆದರೆ ಆಯಿತು ಹೋದರೆ ಹೋಯಿತು ಎನ್ನುವ ಮನೋಭಾವ ಎದ್ದು ತೋರುತ್ತಿತ್ತು. ಪ್ರಿನ್ಸಿಪಾಲರು ಬರಲಿ, ಸ್ವ. ಸು. ಫೌಂಡೇಷನ್ ಅಧ್ಯಕ್ಷರು ಬರಲಿ, ಪ್ರಾಣಿ ತನ್ನಷ್ಟಕ್ಕೆ ತಾನಿರುತ್ತಿತ್ತು. ಪ್ರಿನ್ಸಿಪಾಲರು ಇನ್ನೊಬ್ಬ ರಂಗಣ್ಣ. (ಆ ಕಾಲದಲ್ಲಿ ಉದಯನ ಕಾಲೇಜನ್ನು ರಂಗವಿಲಾಸ ಎನ್ನುತ್ತಿದ್ದರು. ಅಷ್ಟೊಂದು ರಂಗಗಳು ಅಲ್ಲಿದ್ದವು. ಅಟೆಂಡರ್, ಕ್ಲರ್ಕ್ ರಂಗಣ್ಣಗಳೇ. ಆಗ ಎರಡೇ ವರ್ಷದ ಬಿ. ಎಸ್ಸಿ. ಸೀನಿಯರ್ ಬಿ. ಎಸ್ಸಿಯಲ್ಲಿ ನಾವು ಆರು ತಿಂಗಳು ಓದಿದ ಮೇಲೆ, ಇದ್ದಕ್ಕಿದ್ದಂತೆ ಕಾಲೇಜಿನಲ್ಲಿ ಪ್ರಯೋಗ ಶಾಲೆಯನ್ನು ಆರಂಭಿಸಿದರು. ಆಗ ಒಂದು ದಿನ ಕೇವಲ ಕುತೂಹಲಾಸಕ್ತನಾಗಿ ಅಲ್ಲಿಗೆ ಹೋಗಿದ್ದೆ. ಪ್ರಿನ್ಸಿಪಾಲರು ಒಂದು ಮೂಲೆಯಲ್ಲಿ ತಲೆ ಮೇಲೆ ಕೈಹೊತ್ತು ಕುಳಿತಿದ್ದರು. ರಂಗಣ್ಣನವರು ನಗು ನಗುತ್ತಾ

''ಸರ್, ಈ ರೀಏಜೆಂಟ್ ಎರಡು ಗ್ರಾಂ ಸಾಕು ಎಂದು ಹೇಳಿದ್ದೆ. ನೀವು ಎರಡು ಪೌಂಡ್

ತರಿಸಿದ್ದೀರಿ. ಇದು ಈ ಕಾಲೇಜಿಗೆ 2149ನೇ ಇಸ್ವಿಯ ವರೆಗೆ ಬರುತ್ತದೆ'' ಎನ್ನುತ್ತಿದ್ದರು.

ಆಗ ಒಂದು ದಿನ ಸಂಜೆ ಶಿವಲೀಲಾ ಸಭಾ ಭವನದಲ್ಲಿ ರಾಮಾಯಣದ ಮೇಲೆ ಭಾಷಣ ಏರ್ಪಡಿಸಿದ್ದರು. ಅದನ್ನೋದಿ ನನಗೆ ನಗು. ಜೀವನವೇ ರಂಪು ರಾಮಾಯಣ ಇನ್ನು ಮತ್ತೇಕೆ ಈ ಭಾಷಣ ಎಂದುಕೊಂಡು ಏಕೋ ಏನೋ ಆ ಭಾಷಣಕ್ಕೆ ಹೋದೆ. ಭಾಷಣಕಾರರು ನಮ್ಮ ರಂಗಣ್ಣ - ಲೆಕ್ಚರರ್. ಇದುವರೆಗೂ ಎಂಥೆಂಥವರೋ ರಾಮಾಯಣದ ಮೇಲೆ ಭಾಷಣ ಮಾಡಿದ್ದು ಕೇಳಿದ್ದೇನೆ. ಬರೆದದ್ದು ಓದಿದ್ದೇನೆ. ಆದರೆ ರಂಗಣ್ಣನವರ ಭಾಷಣದ ಮುಂದೆ ಅವು ಏನೂ ಅಲ್ಲ. ಇರಲಿ.

ಜೀವನದಲ್ಲಿ ಸಾವಿರ ಛಾಯೆಗಳ, ವರ್ಣಗಳ, ನೆಲೆಗಟ್ಟಿನ ಜನಗಳ ಸಂಪರ್ಕ ಬರುತ್ತದೆ. ಅದರ ದೆಸೆಯಿಂದ ಹಿಂದಿನ ಎಷ್ಟೋ, ಮಂದಿ ಮರವಿನ ಹಗೇವು ಸೇರಿರುತ್ತಾರೆ. ' ಈಗ' ಎನ್ನುವುದೇ, ಕೋಟ್ಯಾಂತರ ಸಂಖ್ಯೆಯಲ್ಲಿ ಬೆಳೆದು ' ಈಗ' ಇಲ್ಲವಾಗಿ ಹೋಗುತ್ತದೆ. ಕಾಲೇಜನ್ನು ಬಿಟ್ಟು, ಜೀವನರಂಗಕ್ಕಿಳಿದು ಹಲವು ವರ್ಷ ಕಳೆದಿದ್ದವು. ಒಂದು ದಿನ ಮುಗಿಲು ಹಳ್ಳಿಯ ಹಳೆಗಲ್ಲಿಯೊಂದರ ಒಂದಾನೊಂದು ಗೋಡೌನಿನ ಕಾವಲುಗಾರನಾಗಿ ಒಂದು ಹಗಲಿನ ಕಾರ್ಯಭಾರ ನಿರ್ವಹಿಸಲು ಹೋಗುತ್ತಿದ್ದೆ. ಗಲ್ಲಿಯಲ್ಲೊಂದು ಮನೆ. ಅದರ ಬಾಗಿಲಿನಿಂದ ಹೆಣ್ಣು ಮಗಳೊಬ್ಬಳು ಹೊರಬಂದು, ಬೀದಿಯಲ್ಲಿ ಹೋಗುತ್ತಿದ್ದ ನನ್ನನ್ನು ನಿಟ್ಟಿಸಿದಳು.

'ಅರೇ, ಮೈಥಿಲಿ? ಇದೇನು ಇಲ್ಲಿ?' ಎಂದು ಕೇಳಿದೆ.

' ಇದು ನಮ್ಮ ಮನೆ' ಎಂದಳು.

'ಯಾರದು?' ಎಂದು ಕೇಳುತ್ತಾ ಲೆಕ್ಚರರ್ ರಂಗಣ್ಣ ಹೊರಗೆ ಬಂದರು.

'ನಮಸ್ಕಾರ ಸರ್'

'ಏನೋ ಗಮಾರ? ಒಳಗೆ ಬಾ. ಕೊರವಂಜಿ ನಿಂತೇ ಹೋಯಿತು. ನೀನು ಏನಾದರೂ ಪಾಸಾದೆಯೋ?' ಹೀಗೆ ಕೇಳುತ್ತಾ ರಂಗಣ್ಣ ವಿಮನಸ್ಕರಾಗಿ ನಿಟ್ಟುಸಿರು ಬಿಟ್ಟರು.

ನನಗರಿವಿಲ್ಲದಂತೆ ಅವರ ಮನೆಯೊಳಕ್ಕೆ ಹೋದೆ. ಮನೆಯೊಳಗೆ ಏನೋ ಹುಳಿ ವಾಸನೆ. ಮದ್ಯದ್ದು.

'ಲೋ ಗಮಾರ, ನೀನು ಏನು ಯೋಚಿಸುತ್ತಿದ್ದೆ ಎಂದು ಗೊತ್ತು. ಇದು ನನ್ನ ಮಾವ ಮದುವೆಯಲ್ಲಿ ಹೊಲಿಸಿ ಕೊಟ್ಟ ಸೂಟು. ಇರುವುದು ಇದೊಂದೇ. ನನಗೆ ಬರುತ್ತಿರುವ ಸಂಬಳವೂ ಆಗಿನದೇ. ಪ್ರಮೋಷನ್ ಇರಲಿ, ಇಂಕ್ರಿಮೆಂಟೇ ಸಿಕ್ಕಿಲ್ಲ. ಏನು ಮಾಡುತ್ತಿದ್ದೀ? ಇವಳು ಹೇಗೆ ಗೊತ್ತು?'

ನಾನು ನನ್ನ ಕ್ರಿಕೆಟ್ ಕತೆಯನ್ನು ಹೇಳಿದೆ. ' ಇಲೆವೆನ್‌ನಲ್ಲಿ ಹತ್ತರ ಮೇಲೆ ಒಂದಾಗಿ ಸೇರಿದೆ ತಾನೇ? ಈಗ ಹನ್ನೊಂದರ ಜೊತೆಗೆ ಇನ್ನೊಂದಾಗಿರುವೆ ತಾನೇ?

ಹೌದು ಕಾಪಿ ಹೊಡೆದವರು ವಿದೇಶಕ್ಕೆ ಹೋದರು. ರ್‍ಯಾಂಕ್ ಬಂದರು. ವಿದ್ವತ್ತಿನಿಂದಲ್ಲ. ರಂಗಣ್ಣ ಗಲ್ಲಿಯಲ್ಲೇ. ನಾನೂ ಅಲ್ಲಿಗೇ ಬಂದಿದ್ದೇನೆ. ಆದರೇನಂತೆ, ನಾನು ಬದುಕಿದ್ದೇನೆ.

ಇಂದು ಇಲ್ಲಿ ಇದ್ದೇನೆ. ನನಗೆ ಉಪಕಾರ ಮಾಡಿದ ಮೈಥಿಲಿ ನನ್ನ ಗುರು ಪತ್ನಿ. ನಮ್ಮ ಸಾರಥಿ ಏನಾದನೋ? ಕೇಳಲು ಹೆದರಿಕೆ. ಆದರೆ ರಾಮಾಯಣ ಕಾವ್ಯದ ಅಭ್ಯಾಸದಲ್ಲಿ ನಿಷ್ಣಾತನಾದ ರಂಗಣ್ಣ ಏಕೆ ಹೀಗೆ ಕುಡಿತ ಕಲಿತ? ಅವನಿಗೇಕೆ ಇಂಕ್ರಿಮೆಂಟ್ ಸಿಕ್ಕಲಿಲ್ಲ?

ನನ್ನ ಬಾಳೇ ನನಗೊಂದು ಹೊರೆಯಾಗಿತ್ತು. ನೂತನ ದಿಗಂತಗಳು ಎಲ್ಲಿಯೂ ಇಲ್ಲ - ನನ್ನ ಪಾಲಿಗೆ ಎಂದುಕೊಂಡು ಸುಮ್ಮನಾದೆ.

ಮೈಥಿಲಿ ಕಾಫಿ ತಂದು ಕೊಟ್ಟಳು.

ರಂಗಣ್ಣನವರು 'ಏನೋ ಗಮಾರ, ನನ್ನ ಪಾಲಿಗೆ ಒಮ್ಮೆ ಕಾಫಿ ಒಂದು ಚೈತನ್ಯದಾಯಕ ಪಾನೀಯವಾಗಿತ್ತು. ಈಗ ಅದು! ಮತ್ತೆ ಕಾಫಿಯಲ್ಲಿ ಚೈತನ್ಯ ಕಾಣಿಸುವಂತಾದೀತೇ?' ಎಂದು ನಿಟ್ಟುಸಿರು ಬಿಟ್ಟರು. ಮೈಥಿಲಿ ಮೆಲ್ಲಗೆ ಅತ್ತು ಕಣ್ಣೊರೆಸಿಕೊಂಡಳು.

'ತಮ್ಮ, ನನ್ನ ಬಾಳು ನೆಟ್ಟಗಾದೀತೇ?' ಎಂದು ಪಿಸು ದನಿಯಲ್ಲಿ ಕೇಳಿ, ಉತ್ತರಕ್ಕೆ ಕಾಯದೆ ಒಳಕ್ಕೆ ಹೋಗಿ ಬಿಟ್ಟಳು.

3

ಗಲ್ಲಿಯ ಗೋಡೌನನ್ನು ಒಳಹೊಕ್ಕೆ. ಮಹಾ ರೌರವ, ಅಂಧತಾ ಮಿಸ್ರ ಎಂದು ಏನೇನೋ ಹೇಳುತ್ತಾರಲ್ಲ, ಅದು ಹೇಗಿದ್ದೀತೆಂಬ ಕಲ್ಪನೆ ಬಂದಿತು. ಬಾಗಿಲು ತೆಗೆದಾಗ ಹೊರಗಿನಿಂದ ಒಳಹೊಕ್ಕ ಬೆಳಕು, ಸೋತು, ಹೊರಕ್ಕೇ ತಿರುಗಿ ಓಡಿ ಹೋಯಿತು. ಹೊಸಿಲ ಬಳಿ ಒಂದು ಎರಡು ಬಿಲ್ಲೆ ಪೇಪರು ಬಿದ್ದಿತ್ತು. ಅದನ್ನೆತ್ತಿಕೊಂಡು, ಗೋಡೌನ್ ಬಾಗಿಲು ಹಾಕಿ, ಮುಂದುಗಡೆ ಇದ್ದ ಮುರುಕು ಜಗುಲಿಯ ಮೇಲೆ ಕುಳಿತು ಓದಲಾರಂಭಿಸಿದೆ. ವಿಶ್ವದ ಮಹಾದ್ಭುತ ವಾರ್ತೆ ಅದರಲ್ಲಿ ಅಚ್ಚಾಗಿತ್ತು.

ಉದಯನ ಕಾಲೇಜಿನ ಪ್ರಿಯಾಲಜಿ ವಿಭಾಗದ ಮುಖ್ಯಸ್ಥರಾಗಿ ಪ್ರೊ॥ ಸಣ್ಣ ಕಾಮಣ್ಣನವರ ನೇಮಕ.

ಆ ಪತ್ರಿಕೆ ಮೂರು ತಿಂಗಳು ಹಳೆಯದು. ಅದನ್ನೋದಿಯೇ ಅಮರ ಮಹಾಕವಿ ಷೇಕ್ಸ್‌ಪಿಯರನು ತನ್ನೊಂದು ನಾಟಕದಲ್ಲಿ ಹೀಗೆಂದು ಉದ್ಗರಿಸಿರಬೇಕು.

"Ah what a fall my country men, Then you and I and even Science fell like heck'

(ದೇಶ ಬಾಂಧವರೇ ಎಂತಹ ಪತನ! ಆಗ ನಾನು, ನೀವು (ಮತ್ತು ವಿಜ್ಞಾನವೂ ಸಹಾ) ಧುಡುಂಧುಢಕ್ಕೆಂದು ಹೆಕ್ಕಿನಂತೆ ಪತನ ಹೊಂದಿದೆವು)

ಈಗ flash back. ಈ ಸಣ್ಣ ಕಾಮಣ್ಣ ನನ್ನ ಜೊತೆಗೇ ಉದಯನ ಕಾಲೇಜಿನ ಕೊನೆ ಬೆಂಚಿನಲ್ಲಿ ಕುಳಿತಿರುತ್ತಿದ್ದ. ಬಾಯಲ್ಲಿ ಬೆರಳಿಟ್ಟರೆ ಕಚ್ಚಲೂ ತಿಳಿಯದಂತಹ ಸಾಧು ಪ್ರಾಣಿ. ನಾನು ಒಂದು ಸಬ್ಜೆಕ್ಟಿನಲ್ಲಿ ಎರಡು ಬಾರಿ ಫೇಲಾದೆ. ಅವನು ಐದು ಸಬ್ಜೆಕ್ಟಿನಲ್ಲಿ ಹತ್ತು ಬಾರಿ ಫೇಲಾದ. ಮುಗಿಲು ಹಳ್ಳಿಗೆ ಛಾನಲ್ ಬಂದಿತು. ಸಣ್ಣ ಕಾಮಣ್ಣನ ಅಪ್ಪನ ಮೂವತ್ತು ಎಕರೆ ಬೆದ್ಲು ಜಮೀನು ಗದ್ದೆಯಾಯಿತು. ಸಣ್ಣ ಕಾಮಣ್ಣ ಎಂ. ಎಸ್ಸಿಯಾದ. ಉದಯನ ಕಾಲೇಜು

ಸ್ವಪ್ನ ಸುಂದರಿ ವಿಶ್ವವಿದ್ಯಾಲಯವಾಯಿತು. ಸಣ್ಣ ಕಾಮಣ್ಣ ಪ್ರಿಯಾಲಜಿ ವಿಭಾಗದ ಮುಖ್ಯಸ್ಥನಾಗಿ ಲೆಕ್ಚರರ್ ರಂಗಣ್ಣನವರಿಗೆ ಬಾಸ್ ಆದ. ಪಾಪ, ರಂಗಣ್ಣನವರ ಮದ್ಯಪಾನ ವ್ಯಸನ ಗಾಢವಾದುದರಲ್ಲಿ ಏನಾಶ್ಚರ್ಯ!

ಮುಂದಿನ ಕತೆ ಹೇಳುವ ಮೊದಲು ಒಂದಿಷ್ಟು ಸಾಹಿತ್ಯ ಮೀಮಾಂಸೆ ಮಾಡೋಣ.

ಈ ಕತೆ ಪ್ರಥಮ ಪುರುಷ ಏಕವಚನದಲ್ಲಿದೆ. ಇದೇ ಉತ್ತಮ ಎಂದು ನನ್ನ ಭಾವನೆ. ತೃತೀಯ ಪುರುಷದಲ್ಲಿ ಬರೆಯುವುದು ಅಪ್ರಮಾಣಿಕ ಎಂಬ ಗುಮಾನಿ ನನಗೆ. ನಾಯಕಿ ಮಾಲಾನ ಮನಸ್ಸಿನಲ್ಲಿ ತೀವ್ರವಾದ ಗಾಢ ಪ್ರೇಮವಿತ್ತು ಎಂದು ಕತೆಗಾರನಿಗೆ ಹೇಗೆ ಗೊತ್ತು? ನಾಯಕನಲ್ಲಿ ಉದಾತ್ತ ಅಥವಾ ದುಷ್ಟ ಆಲೋಚನೆ ಬಂದದ್ದು ಇವನಿಗೇನು ಗೊತ್ತು? ವಿಮರ್ಶಕ ಮಹಾಶಯರು ಸಾಮಾಜಿಕ, ರಾಜಕೀಯ, ಬಣಾತ್ಮಕ ಅಥವಾ ಸ್ವಮೋಹಿತ ನಿಲುವುಗಳಿಂದ ಒಂದು ಕೃತಿ ಗಣನೀಯ, ಮುಖ್ಯ, ಸಬ್ಲೈಂ ಇತ್ಯಾದಿ ತಲೆಪಟ್ಟಿಗಳನ್ನು ಕೃತಿಗಳಿಗೆ ಹಚ್ಚುತ್ತಾರೆ ಎಂದು ನನ್ನ ಅನಿಸಿಕೆ. ಇನ್ನು ಕತೆ.

ಅದೇ ಸಂಜೆ ಭೂಮ್ಯಾಕಾಶಗಳು ಟರಟರಿಸುವಂತಹ ಶಬ್ದ ಮಾಡುತ್ತಿದ್ದ ಮೋಟರ್‌ಬೈಕ್ ಏರಿದ್ದ ಸಣ್ಣ ಕಾಮಣ್ಣ ನನ್ನನ್ನು ಕಂಡು, ವಾಹನ ನಿಲ್ಲಿಸಿ, ವಿಜಯ ಕೆಫೆಗೆ ಕರೆದುಕೊಂಡು ಹೋಗಿ ಸೀ ಕಾರ ಕಾಫಿ ಸಿಗರೇಟು ಕೊಡಿಸಿ

'ಅಣ್ಣಾ, ಇದೆಲ್ಲಾ ನಿನ್ನ ಆಶೀರ್ವಾದ' ಎಂದ.

'ಲೆಕ್ಚರ್ ರಂಗಣ್ಣೋರ ಗತಿಯೇನೋ?' ಎಂದು ಕೇಳಿದೆ.

'ಅದಕ್ಕೊಂದು ವ್ಯವಸ್ಥೆ ಮಾಡ್ತಿನಿ' ಎಂದ.

4

ಎರಡು ಮೂರು ವರ್ಷಗಳ ನಂತರ ನಾನು ಒಮ್ಮೆ ಪ್ರಾರಬ್ಧ ಪೀಡಿತನಾಗಿ, ನೂರು ದೊಂಬಿ ರಸ್ತೆಯ ಮಧ್ಯಭಾಗದಲ್ಲಿ ನಡೆದು ಹೋಗುತ್ತಿದ್ದೆ. ಕಾರಣ ನಿಮಗೆ ಗೊತ್ತಿರಬೇಕು. ಮುಗಿಲು ಹಳ್ಳಿಯ ರಸ್ತೆ ಸಂಚಾರ ನಿಯಮವನ್ನು ಕವಿ ಹೀಗೆ ಅಚ್ಚುಕಟ್ಟಾಗಿ ಹೇಳಿದ್ದಾನೆ.

ಎಡ ಬಲಗಳೆರಡೂ ಮಾರಕ ರಾಮರಾಮ ರಸ್ತೆ ಮಧ್ಯದಿ ನಡೆವುದೇ ಪೂರ ಕ್ಷೇಮ. ಹಿಂದಿನಿಂದ ಬಂದ ಕಾರ್ ಒಂದು, ನನ್ನ ಬೆನ್ನಿಗೆ ಸ್ವಲ್ಪ ತಾಕಿ ನಿಂತಿತು. ಹೌಹಾರಿ ತಿರುಗಿ ನೋಡಿದೆ. ಸೊಗಸಾದ ಪಾಚಿ ಹಸಿರು ಬಣ್ಣದ ಕಾರು. ಸ್ಟೀರಿಂಗ್ ವೀಲ್ ಹಿಡಿದವಳು ಮೈಥಿಲಿ. ಅವಳು ಸನ್ನೆ ಮಾಡಿದಂತೆ ಹೋಗಿ ಕಾರ್ ಹತ್ತಿದೆ. ಕಾರು ಮುಗಿಲು ಹಳ್ಳಿಯ ರತ್ನಾವಳಿ ವಿಸ್ತರಣದ ಹೊಸಾಹೊಸ ಮಹಡಿ ಮನೆಯೊಂದರ ಮುಂದೆ ನಿಂತಿತು. ಒಂದು ಪಗಲ್ ಉರುಳಿಪುದು ಒಂದು ಪಗಲ್ ಎತ್ತುವುದು ಮಾನುಷಮ ನೆಲಮರ್ ಇಬ್ಬರೂ ಮನೆಯ ಒಳಗೆ ಹೋದೆವು. ಏನು ಸದಭಿರುಚಿಯ ಗೃಹಾಲಂಕರಣ! ಎಂತಹ ಸರಳತೆ, ಎಷ್ಟು ಅಚ್ಚುಕಟ್ಟು!

ಮೈಥಿಲಿ ಹೇಳಿದಳು ''ಏನೋ, ಇವರು ನಿನ್ನನ್ನು ಗಮಾರ ಅಂದರಲ್ಲಾ ಆ ಹೊತ್ತು, ಅದು ತಪ್ಪಂತೆ. ಕೋಳಿ ಅನ್ನಬೇಕಾಗಿತ್ತು ಅಂದರು.''

''ಮೇಷ್ಟ್ರು ಎಲ್ಲಿ?''

''ಸ್ವಲ್ಪ ತಿಂಡಿ ಮಾಡಿಕೊಂಡು ಬರುತ್ತೇನೆ. ಇದನ್ನು ಓದು. ನಿನಗೆ ಎಲ್ಲಾ ತಿಳಿಯುತ್ತದೆ''.

ಓಗೆ ಮೈಥಿಲಿ ಒಂದು ಉದ್ದನೆಯ ಕಾಗದ ಕೊಟ್ಟಳು. ಅದರ ಸಾರಾಂಶ ಹೀಗಿತ್ತು.

5

ಸಣ್ಣ ಕಾಮಣ್ಣ, ನನಗೆ ಹೇಳಿದಂತೆ ನಡೆದುಕೊಂಡಿದ್ದ. ರಂಗಣ್ಣನವರು ತನ್ನ ಸಹಾಯಕರಾಗುವುದು ಅವನಿಗೆ ಇಷ್ಟವಿರಲಿಲ್ಲ. ಅವನು ತನ್ನೆಲ್ಲಾ ಪ್ರಭಾವ ಉಪಯೋಗಿಸಿ, ಹತ್ತು ಸಾವಿರ ರೂಪಾಯಿ ಸ್ಕಾಲರ್‌ಷಿಪ್ ಕೊಡಿಸಿ, ರಂಗಣ್ಣನವರನ್ನು ಇಂಗ್ಲೆಂಡಿಗೆ ಉನ್ನತ ವಿದ್ಯಾಭ್ಯಾಸಕ್ಕಾಗಿ ಕಳಿಸಿದ.

ರಂಗಣ್ಣನವರು ಲಂಡನ್ ತಲುಪಿದರು. ಅವರಿಗೆ ಮೊದಲ ಕಂತಿನ ದುಡ್ಡು ಏತಕ್ಕೂ ಸಾಲದು. ಅಲ್ಲದೆ ಸ್ವಪ್ನ ಸುಂದರಿ ಫೌಂಡೇಷನ್ನಿನವರು ಅವರಿಗೆ ರಜಾ ಮಂಜೂರು ಮಾಡದ್ದರಿಂದ ಮೈಥಿಲಿ ಹಾಗೂ ಬೆಂಗಳೂರಿನಲ್ಲಿ ಓದುತ್ತಿದ್ದ ಮಕ್ಕಳಿಗೆ ಜೀವನೋಪಾಯವೇ ಇಲ್ಲದಂತಾಯಿತು. ಅವರು ಹೇಗೆ ಬದುಕಿದರೆಂದು ನನಗೇನೋ ಅರ್ಥವಾಯ್ತು. ಹೇಗೆಂದರೆ, ತಿಂಗಳುಗಟ್ಟಲೆ ಉಪವಾಸ, ಸಿಕ್ಕಾಗ ಊಟ; ಇಲ್ಲದಿದ್ದರೆ ಇಲ್ಲ.

ರಂಗಣ್ಣನವರು ಮುಗಿಲು ಹಳ್ಳಿಯಲ್ಲಿದ್ದ ಕೆಲವು ಸ್ನೇಹಿತರಿಗೆ ಕಾಗದ ಬರೆದರು. ರುದ್ರ, ಪರಮೇಶಿ, ಕಲ್ಗ, ಜಗಲೂರ, ನೂರೊಂದ, ಅಡವಿ, ಮೊದಲಾದವರೆಲ್ಲಾ ಎರಡು ಮೂರು ಸಾವಿರ ಜೊತೆ ಮಾಡಿ ಕಳಿಸಿದರು. ರಾವಣಾಸುರನ ಹೊಟ್ಟೆಗೆ ಆರು ಕಾಸಿನ ಕಡಲೆಯಂತೆ. ದುಡ್ಡು ಇದ್ದರೆ ಖರ್ಚಾಗುವುದು ನಿಧಾನ. ಇಲ್ಲದಿದ್ದರೆ ಎಷ್ಟು ಬಂದರೂ ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತದೆ. ರಂಗಣ್ಣನವರಿಗೂ ಹಾಗೇ ಆಯಿತು. ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವುದಿರಲಿ, ತಮ್ಮನ್ನೇ ತಾವು ನೋಡಿಕೊಳ್ಳಲಾಗದಂಥ ಸ್ಥಿತಿಗಿಳಿದರು. ಕುಡಿತ ಬಹಳಷ್ಟು ಹೆಚ್ಚಿರಬೇಕು. ಅಧ್ಯಯನದಲ್ಲೂ ಅವರಿಗೆ ಆಸಕ್ತಿ ಉಳಿಯಲಿಲ್ಲ. ಕಣ್ಣುಕಟ್ಟಿ ಅಡವಿಯಲ್ಲಿ ಬಿಟ್ಟ ಹಾಗಾಯಿತು. ಒಂದು ದಿನ ತಮ್ಮಲ್ಲಿದ್ದ ಹಣವನ್ನು ನೋಡಿಕೊಂಡರು. ಮೈಥಿಲಿ ಹಾಗೂ ಮಕ್ಕಳು ತಮ್ಮ ಹೀನ, ದೀನ ಸ್ಥಿತಿಯ ಅಳಲು ತೋಡಿಕೊಂಡು ಬರೆದ ಕಾಗದಗಳನ್ನೋದಿದರು. ಒಂದು ತಂಬಿಗೆ ಕಣ್ಣೀರು ಸುರಿಸಿದರು. ತಮ್ಮ ಇಷ್ಟ ದೇವತೆ ಶ್ರೀರಾಮನನ್ನು ಸ್ಮರಿಸಿಕೊಂಡರು. ರಾವಣ ಸತ್ವದಿಂದ ತಮ್ಮ ಕತ್ತು ಹಿಡಿದ ಬಡತನ, ದುರ್ವ್ಯಸನಗಳ ಬಲವನ್ನು ಕಂಡು ಶರಣಾಗತರಾಗಿ ಒಂದು ತೀರ್ಮಾನಕ್ಕೆ ಬಂದರು.

ಜೀವನದಲ್ಲಿ ಸೋಲು ಖಂಡಿತ. ತನ್ನ ಮೇಲೇ ಹಿಡಿತವಿಲ್ಲದ ತಾನು ಸಂಸಾರದವರನ್ನೇನು ಕಾಪಾಡಿಯೇನೊ? ಉಳಿದ ಸ್ವಲ್ಪ ಹಣದಲ್ಲಿ ಪ್ಯಾರಿಸ್ಸಿಗೆ ಹೋಗಿ, ಅಲೆದಾಡಿ ಕುಡಿದು, ಯಾವುದಾದರೂ ಒಂದು ಬಹು ಮಹಡಿ ಕಟ್ಟಡದಿಂದ ಕೆಳಕ್ಕೆ ಹಾರಿ ಬಿಡುವುದು. ಆತ್ಮಹತ್ಯೆಯು ಮಹಾಪಾಪವಾದರೂ, ಬೇರೆ ಮಾರ್ಗ ಉಳಿದಿಲ್ಲ. ಶ್ರೀರಾಮನನ್ನು ನೆನೆದು ಕೆಳಗೆ ನೆಗೆದು ಬಿಡೋಣ. ಪಾಪವೆಲ್ಲಿ?

(ಪಾಠಕ ಮಹಾಶಯರೇ, ನೆಗ್ಲಿ ಹಾಳು, ದ್ಯಾಪನ ಹಳ್ಳಿ, ಒಂಟೇ ಹಾಳುಗಳನ್ನೇ ನೋಡದ ನಾವು ಲಂಡನ್ ಪ್ಯಾರಿಸ್‌ಗಳನ್ನು ನೆಟ್ಟಗೆ ವರ್ಣಿಸದಿರುವುದಕ್ಕಾಗಿ ಕ್ಷಮಿಸಿ. ಈ ಕತೆಯನ್ನೇನಾದರೂ ಸಿನಿಮಾ ಮಾಡಿದರೆ, ಲೋಕೇಷನ್ ಷೂಟಿಂಗ್‌ಗೆ ನನ್ನನ್ನು ಕರೆದರೆ, ನೀವೂ

ನನ್ನ ಜೊತೆಗೆ ಬರಬಹುದು)

ಸರಿ, ರಂಗಣ್ಣ ಜಯ್ ಜಯ್ ರಘುವೀರ ಸಮರ್ಥ ಎಂದು ಪ್ಯಾರಿಸ್ ತಲುಪಿಯೇ ಬಿಟ್ಟ. ಅಲ್ಲಿ ಎರಡು ಮೂರು ದಿನ ಅಲೆದ. ಹಣ ಮುಗಿಯಿತು. ಕಡೆಯ ಬಾಟಲಿಯನ್ನೆತ್ತಿ, ಒಂದು ಚಿಕ್ಕ ಉದ್ಯಾನದ ಕಲ್ಲು ಬೆಂಚಿನ ಮೇಲೆ ಮಲಗಿಬಿಟ್ಟ. ನಿದ್ರಾದೇವಿ ಅವನನ್ನು ಬಿಗಿಯಪ್ಪುಗೆಯಲ್ಲಿ ಬಂಧಿಸಿದಳು.

ಅವನು ಎದ್ದಾಗ ಎರಡು ಗಂಟೆ ಬೆಂಚಿನ ಮೇಲೆ ಕುಳಿತು ನೋಡಿದ. ಇದಿರಿನಲ್ಲಿ ಒಂದು ಮಹಾ ಸೌಧ. ಅದರ ಹತ್ತನೆಯ ಮಹಡಿಯಲ್ಲಿ ಕೆಳಗೆ ಧುಮುಕಿ ಪ್ರಾಣ ಬಿಡಲು ಪ್ರಶಸ್ತ ಜಾಗವೊಂದು ಕಾಣಿಸಿತು.

ಕಟ್ಟಡವನ್ನೇರಲಾರಂಭಿಸಿದ. ಭರತ ಮಾತೆ, ಕನ್ನಡ ನಾಡು ಬೆಂಗಳೂರು, ಮುಗಿಲುಹಳ್ಳಿ, ಮೈಥಿಲಿ, ಮಕ್ಕಳು ಯಾರಿಗೆ ಯಾರು? ಈ ದೇಹ ನಾನು ಎಂದದ್ದರಿಂದಲ್ಲವೇ, ಹೆಂಡತಿ, ಮಕ್ಕಳು ಮನೆ, ಓದು, ಉದ್ಯೋಗ, ಅಪಮಾನ ಆತ್ಮಹತ್ಯೆ. ಎಲ್ಲವೂ ಆತ್ಮವೇ ಆದಾಗ, ಹಾಗಾದವನಿಗೆ ಮೋಹವೆಲ್ಲಿ ಶೋಕವೆಲ್ಲಿ, ಶ್ರೀಮನ್ಮಹಾವಿಷ್ಣುವೇ ಆದ ಶ್ರೀರಾಮ ತಾನು ದಶರಥ ಕೌಸಲ್ಯೆಯರ ಮಗನೆಂದುಕೊಂಡಿದ್ದ. ಇನ್ನು ತಾನು!

ಹತ್ತನೆಯ ಮಹಡಿಗೆ ಹತ್ತಿದ. ತಾನು ಕೆಳಗೆ ಹಾರಲು ಆಯ್ದುಕೊಂಡಿದ್ದ ಸ್ಥಳದತ್ತ ಧಾವಿಸುತ್ತಿದ್ದ. ಒಂದು ಕದ ತೆರೆಯಿತು. ಸಮವಸ್ತ್ರಧಾರಿಯಾದ ಒಬ್ಬನು ಬಂದು ರಂಗಣ್ಣನನ್ನು ಒಳಕ್ಕೆ ಕರೆದುಕೊಂಡು ಹೋಗಿ, ಒಂದು ಕುರ್ಚಿಯಲ್ಲಿ ಕೂರಿಸಿದ. ಎದುರಿಗೆ ಮೇಜಿನಾಚೆ ಮೂವರು ಕುಳಿತಿದ್ದರು.

''ನಿಮಗೆ ಸುಸ್ವಾಗತ'' ಎಂದರು. ಅವರು ಮೂವರೂ. ರಂಗಣ್ಣ ತನ್ನೆದುರಿನಲ್ಲಿದ್ದ ಲೋಟದಿಂದ ಒಂದು ಗುಟುಕು ನೀರು ಕುಡಿದು ಪ್ರತಿ ವಂದಿಸಿದ.

ತಲೆಯಲ್ಲಿ ಯಾರೋ ಏಳೆಂಟು ಸುತ್ತಿಗೆಗಳಿಂದ ಮೊಳೆಗಳನ್ನು ಹೊಡೆಯುತ್ತಿದ್ದರು. ಜಠರದಲ್ಲಿ ವೈಶ್ವಾನರನು ಪುಟಿದೆದ್ದು ತಾಂಡವ ನೃತ್ಯಕ್ಕಾರಂಭಿಸಿದ್ದ.

ನಂತರ ಅವರು ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ರಂಗಣ್ಣ ಉತ್ತರ ಕೊಡಲಾರಂಭಿಸಿದ. ಒಂದರ್ಧ ಗಂಟೆ ಪ್ರಶ್ನೋತ್ತರಗಳಾದ ಮೇಲೆ ಆ ಮೂವರೂ ಏನೇನೋ ಮಾತನಾಡಿಕೊಂಡು, ಒಳಕ್ಕೆ ಹೋದರು. ಹೋಗುವ ಮೊದಲು 'ಅರ್ಧಗಂಟೆ ಇಲ್ಲೇ ಕೂತಿರಿ' ಎಂದು ಅಪ್ಪಣೆಯಿತ್ತರು.

ರಂಗಣ್ಣನವರಿಗೆ ಬವಳಿ ಬಂದು ಮುಂದಿದ್ದ ಮೇಜಿನ ಮೇಲೆ ಹಣೆಯಿಟ್ಟು ಕೈಚಾಚಿ ಕುಳಿತರು.

ಅರ್ಧ ಗಂಟೆಯಾದ ಮೇಲೆ ಆ ಮೂವರು ಬಂದು ರಂಗಣ್ಣನನ್ನೆಬ್ಬಿಸಿ

''ಅಭಿನಂದನೆಗಳು. ಆಫ್ರಿಕಾದ ಭೂಮಧ್ಯರೇಖಾ ವಿಶ್ವವಿದ್ಯಾಲಯದ ಪ್ರಿಯಾಲಜಿ ವಿಭಾಗಕ್ಕೆ ನಿಮ್ಮನ್ನು ಮುಖ್ಯಸ್ಥರಾಗಿ ಆಯ್ಕೆ ಮಾಡಲಾಗಿದೆ. ಇದು ಮಾನವ ಕುಲದ ಸೇವೆಗಾಗಿ ಮಾಡುವ ಕೆಲಸವಾದುದರಿಂದ ನೀವು ವರ್ಷಕ್ಕೆ ಕೇವಲ ಒಂದು ಲಕ್ಷ ರೂಪಾಯಿ ಸಂಭಾವನೆ ಸ್ವೀಕರಿಸಲು ಒಪ್ಪಬೇಕು. ನಿಮಗೆ ನಲವತ್ತೈದು ಎಕರೆ ಪ್ರದೇಶದಲ್ಲಿರುವ ಹದಿನೆಂಟು ಕೋಣೆಗಳ

ಒಂದು ಚಿಕ್ಕ ಮನೆಯನ್ನು ಮಾತ್ರ ಕೊಡಬಲ್ಲೆವು. ಕೇವಲ ಐದು ಜನ ಆಳುಗಳು. ಎರಡೇ ಕಾರುಗಳು ಪ್ರಿಯಾಲಜಿಯನ್ನು ಪ್ರಥಮ ದರ್ಜೆಯಿಂದಾರಂಭಿಸಿ ಸ್ನಾತಕೋತ್ತರ ಅಧ್ಯಯನದ ವರೆಗೆ ಅಭ್ಯಾಸಕ್ಕೆ ಸಜ್ಜುಗೊಳಿಸುವುದು ನಿಮ್ಮ ಗುರಿ. ಅದಕ್ಕೆ ಆಗುವ ಖರ್ಚು ನಮ್ಮದೇ. ಈ ದಿವಸ, ಎಂಟು ರಾಷ್ಟ್ರಗಳ ಅಗ್ರಗಣ್ಯ ಪ್ರಿಯಾಲಜಿಸ್ಟರ್ ಸಂದರ್ಶನದಲ್ಲಿ ಆಯ್ಕೆಯಾದ ಹಿರಿಮೆ ನಿಮ್ಮದು. ನಿಮ್ಮದು ಯಾವ ವಿಶ್ವವಿದ್ಯಾನಿಲಯ? ಯಾವ ರಾಷ್ಟ್ರ?''

''ನಾನು ಕನ್ನಡಿಗ, ಭಾರತೀಯ. ಮುಗಿಲು ಹಳ್ಳಿಯ ಸ್ವಪ್ನ ಸುಂದರಿ ಫೌಂಡೇಷನ್ನಿನ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದೇನೆ. ಲಂಡನ್ನಿನಲ್ಲಿ ಅಧ್ಯಯನಕ್ಕೆಂದು ಬಂದೆ. ಹಾಗೇ ಪ್ಯಾರಿಸ್ ನೋಡಿಕೊಂಡು ಹೋಗಲು ಬಂದೆ''

ಆದಿನ ರಿಟ್ಜ್ ಹೋಟಲಿನಲ್ಲಿ ಮೂರು ರೂಂ ಸೂಟಿನಲ್ಲಿ ವಾಸ, ನಂತರ ಭೂಮಧ್ಯರೇಖಾ ವಿಶ್ವವಿದ್ಯಾನಿಲಯಕ್ಕೆ ಪ್ರಯಾಣ ಎಂದು ನಿಗದಿಯಾಯಿತು. ಹೋಗುವ ಮುನ್ನ ನಿಮ್ಮ ದೇಶದ ಪ್ರಧಾನಿಗಳಿಗೆ ಈ ವಿಷಯ ತಿಳಿಸಬೇಕು. ಏನಾದರೂ ನಿಮಗೆ ಬೇಕಾಗುವ ಕೆಲಸ ಭಾರತದಲ್ಲಿದ್ದರೆ ಮಾಡಿಸಿ ಕೊಡುತ್ತೇವೆ ಎಂದರು.

ಮೈಥಿಲಿ ತಿಂಡಿ ಕಾಫಿ ತಂದಳು. ನಿಧಾನವಾಗಿ ಕುಳಿತು ಮಾತನಾಡಿದೆವು.

'ಮುಂದೇನಾಯಿತು?' ಎಂದು ಕೇಳಿದೆ.

6

ಅದೇ ದಿವಸ ನಡುರಾತ್ರೆ ಪ್ರಧಾನಿಗಳು ಸ್ವಪ್ನ ಸುಂದರಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಸಂಪರ್ಕಿಸಿದರಂತೆ. ಪ್ರಧಾನಿಗಳು ರೇಗಿ ಕೆಂಡಾಮಂಡಲವಾಗಿದ್ದರಂತೆ.

''ವಿಶ್ವದಲ್ಲೇ ಅಗ್ರಮಾನ್ಯ ವಿಜ್ಞಾನಿ ರ್‍ಯಂಗಾನಾಗೆ ರಜ ಇಲ್ಲವೇ? ಅವನು ನಿಮ್ಮಲ್ಲಿ ತುಕಾಲಿ ಲೆಕ್ಚರರೇ? ನಾಳೇ ಬೆಳಿಗ್ಗೆ ಹನ್ನೆರಡು ಗಂಟೆಯೊಳಗಾಗಿ ರಜಾ ಮಂಜೂರಾಗಿ ಆ ಹಣವೆಲ್ಲಾ ಅವರ ಹೆಂಡತಿ ಮಕ್ಕಳ ಕೈ ಸೇರಬೇಕು'' ಎಂದು ಫೋನಿನಲ್ಲಿ ಅಪ್ಪಣೆ ಕೊಟ್ಟರಂತೆ. ಅಂದೇ ಮೈಥಿಲಿಗೆ ಹಣ ಬಂದಿತು. ಅವಳೀಗ ಈ ಮನೆಯ ಒಡತಿ.

ರಂಗಣ್ಣ, ಭೂಮಧ್ಯರೇಖೆಯ ಮೇಲೇ ವೈಭವದಿಂದ ಮೆರೆಯುತ್ತಿದ್ದಾನೆ. ಅವನ ಮೆರೆತವನ್ನು ನೋಡಿ ಸಂತಸಪಡುವವರು ಯಾರೂ ಇಲ್ಲ. ಇಷ್ಟರಲ್ಲೇ ರಂಗಣ್ಣ ಬರುವವನಿದ್ದನಂತೆ. ಸಾಧ್ಯವಾದರೆ ನಾನು ಅವನನ್ನು ನೋಡಬೇಕಂತೆ.

ಎರಡು ಮೂರು ದಿನಗಳ ನಂತರ ಸಣ್ಣ ಕಾಮಣ್ಣ ಸಿಕ್ಕ. ಅವನೀಗ ಮುಗಿಲು ಹಳ್ಳಿ ವಿಶ್ವವಿದ್ಯಾಲಯದ ಪ್ರತಿಷ್ಠಿತ ವಿಜ್ಞಾನಿ. ಆದರೆ ನನ್ನನ್ನು ಕಂಡಾಗಲೆಲ್ಲಾ ಬೆನ್ನು ಹತ್ತಿ ಬಂದು ತನ್ನ ಅಳಲನ್ನು ತೋಡಿಕೊಳ್ಳುತ್ತಾನೆ. ಎಷ್ಟೇ ಆಗಲಿ ಕೊನೆಯ ಬೆಂಚಿನ ವಿದ್ಯಾರ್ಥಿಗಳು ತಾನೆ.

ಸಣ್ಣ ಕಾಮಣ್ಣ ತನ್ನ ಕಾರಿನಲ್ಲಿ ನನ್ನನ್ನು ಕೂಡಿಸಿಕೊಂಡು ಆರಂಭಿಸಿದ

''ನೋಡಲೇ, ರಂಗಣ್ಣ ಮೇಷ್ಟ್ರು ಕರೆಸಿಕೊಂಡಿದ್ರು. ಎಂಥದೋ ಕಾನ್ಫರೆನ್ಸಂತೆ. ಅದ್ಯಾರ್‍ಯಾರೋ ಬಂದಿದ್ರು. ಏನೇನೋ ಮಾತಾಡಿದ್ರು. ಒಂದು ರವೆ ಕಾಳಿನಷ್ಟು ಅರ್ಥ ಆಗ್ಲಿಲ್ಲ. ಅದಕ್ಕೇ ನೋಡು, ನಾನು ಬಾಯಿ ಬಿಡಲೇ ಇಲ್ಲ. ಅದ್ಯಾರೋ ಅಮೇರಿಕಾದವನಂತೆ ರಂಗಣ್ಣನನ್ನು ಭಾಷಣಕ್ಕೆ ಕರೆದ. ರಂಗಣ್ಣ ತನ್ನ ಬದಲು ನನ್ನ ಹೆಸರನ್ನು ಸೂಚಿಸಿದ. ನೋಡಯ್ಯ

ಗಾಬ್ರಿ ಆತು. ರಂಗಣ್ಣನನ್ನು ಕರೆದು ಮೇಷ್ಟ್ರೆ, ನಾನು ನಿಮಗೆ ಏನು ದ್ರೋಹ ಮಾಡಿದ್ದೆ? ನಿಮ್ಮನ್ನು ಫಾರಿನ್ನಿಗೆ ಕಳಿಸ್ಲಿಲ್ಲೇ? ನನ್ನ ಕೈ ಬಿಟ್ಟು ಬಿಡ್ರೀ'' ಅಂದೆ. ಒಳ್ಳೇ ಮೇಷ್ಟ್ರು. ಒಪ್ಪಿಗೆಂಡ್ರು. ಅಲ್ಲಲ್ಲೇ ರಂಗಣ್ಣನ ತಲೆ ಒಳ್ಗೆಯಾತ್ರದ್ಯೆತೆ? ಅವರು ಏನು ತಿನ್ತರೆ?''

''ತಿಂತಳಿಗೊಮ್ಮೆ ಥರ್ಮೋರ್ವೇರಿನಲ್ಲಿ ಮೆಣ್ಸಿನಕಾಯಿ ತರಿಸ್ಗೆಂಡು ತಿನ್ತರೆ''

''ಹಂಗಾರೆ, ನಾನು ವಾರಕ್ಕೆ ಮೂರ್ಸರಿ ತಿಂತಿನಿ ಮೆಣ್ಸಿನಕಾಯಿ. ನನ್ತಲೆಗೆ ಸೆಗಣೀನೋ ಎರೆಮಣ್ಣೋ ಐತೆ ತಗಿ''

ನಾನು ಅದನ್ನೇ ಯೋಚಿಸುತ್ತಾ ಇದ್ದೇನೆ. ಒಬ್ಬನಿಗೂ ಇನ್ನೊಬ್ಬನಿಗೂ ಭಾಗ್ಯ ವಿತರಣೆಯಲ್ಲಿ ಏನು ಏಕೆ ವ್ಯತ್ಯಾಸ!

ಇನ್ನೊಂದು ವಿಷಯವನ್ನು ಸ್ಪಷ್ಟವಾಗಿ ಹೇಳಬೇಕು. ವಜ್ರಗಳು ಬೇಕಾದಷ್ಟಿವೆ. ಅವನ್ನು ಸಂಸ್ಕರಿಸಿ ರತ್ನ ಮಾಡುವುದು ಅಗತ್ಯ. ಆದರೆ ಈಗ ಏನಾಗಿದೆ ಎಂದರೆ ಸಂಸ್ಕಾರ ಮಾಡಿದ ಅನೇಕ ಗಾಜಿನ ಹರಳುಗಳಿವೆ ಅನ್ನಿಸುತ್ತದೆ. ವಜ್ರಗಳೂ ರತ್ನಗಳೂ ತಿಪ್ಪೆಯಲ್ಲಿ ಬಿದ್ದಿವೆ ಅನ್ನಿಸುತ್ತದೆ.

ಈ ಕತೆ ಹೇಳಿ ನನಗಂತೂ ಸುಸ್ತಾಗಿದೆ. ಈ ಕತೆಯಲ್ಲಿ ಬರುವ ಎಲ್ಲ ಪಾತ್ರಗಳೂ ಕಾಲ್ಪನಿಕ. ಯಾವ ಜೀವಂತ ವ್ಯಕ್ತಿಗೂ ಇವು ಸಂಬಂಧಿಸಿಲ್ಲ.

They say,

ನ ಬ್ರೂಯಾತ್ ಸತ್ಯಮ ಪ್ರಿಯಂ

They say,

ಮೆರೆವ ಮರುಭೂಮಿಯಲಿ ಮಾನ್ಯನು ಖದಿರ

★★★

(ರಂಗಣ್ಣ, ರಂಗಣ್ಣನವರು ಎಂದು ಪ್ರಯೋಗ ಮಾಡಿರುವುದು ಮುಗಿಲು ಹಳ್ಳಿಯ ಕನ್ನಡದ ವಿಶೇಷ ಒಂದು ಪ್ರಯೋಗ ಹೀಗಿದೆ.

'ಏನಲೇ ರಾಯರೇ')

★★

ಚಿತ್ತ

ದೇವಾಲಯಕ್ಕೆ
ಬರುವ
ಭಕ್ತರಲ್ಲಿ
ಕೆಲವರು
ಚಪಲ ಚಿತ್ತರು
ಮತ್ತು
ಇನ್ನುಳಿದ
ಅನೇಕರು
ಚಪ್ಪಲಿ ಚಿತ್ತರು

ಗೀತಾ ಶಾಸ್ತ್ರಿ

ಶುಭಾಶಯಗಳೊಂದಿಗೆ

ಎನ್. ಎಸ್. ಗಿರಿಮಾಜಿ ಅಂಡ್ ಸನ್ಸ್

ನಂ. 46, ಇಂಡಸ್ಟ್ರಿಯಲ್ ಸಬರ್ಬ್
ಯಶವಂತಪುರ ಬೆಂಗಳೂರು – 560 022
ದೂರವಾಣಿ: 337 2972, 839 4469

ಮೊಸರನ್ನದ ಮಧ್ಯಸ್ಥಿಕೆ

ನಂದಿನಿ ಕಾಪಡಿ

ಈಗ ನಾನು ಹೇಳುತ್ತಿರುವ ಕಥೆ ಭಾರತದಲ್ಲಿ 'ಹಸಿರುಕ್ರಾಂತಿ' ಬರುವುದಕ್ಕಿಂತ ಹಿಂದಿನದು. ... ಭಾರತದ ಕೃಷಿಯಲ್ಲಿ ಬದಲಾವಣೆಗಳು ಆಗಲೇಬೇಕು ಎಂದು ತಜ್ಞರು ಹೇಳುತ್ತಿದ್ದರು. ದಕ್ಷಿಣ ಅಮೇರಿಕಾ ಖಂಡದಲ್ಲಿನ ದೇಶವೊಂದು ಭತ್ತದ ಹೊಸತಳಿಯೊಂದನ್ನು ಬೆಳೆದಿದೆ, ಆ ತಳಿಯನ್ನು ಭಾರತಕ್ಕೆ ಅಳವಡಿಸಿ, ಇಲ್ಲೂ ಬೆಳೆದರೆ ಈಗ ಬರುತ್ತಿರುವುದಕ್ಕಿಂತ ನಾಲ್ಕುಪಟ್ಟು ಹೆಚ್ಚು ಬೆಳೆ ಬರುತ್ತದೆ ಎಂದು ತಜ್ಞರ ವಿಚಾರ. ದಕ್ಷಿಣ ಭಾರತದಲ್ಲಿನ ರಾಜ್ಯವೊಂದಕ್ಕೆ ಈ ಹೊಸ ತಳಿಯ ಪ್ರಯೋಗ ಮಾಡಲು ಅತ್ಯುತ್ಸಾಹ. ಆ ರಾಜ್ಯದ ಕೃಷಿ ಇಲಾಖೆಯ ಮುಖ್ಯಸ್ಥರನ್ನೂ, ಇತರ ತಜ್ಞರನ್ನೂ ದಕ್ಷಿಣ ಅಮೇರಿಕಾಗೆ ಕಳಿಸಿ ಆ ತಳಿಯನ್ನು ಇಲ್ಲಿ ತಂದು ಪ್ರಯೋಗ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದೊಂದಿಗೆ ಪತ್ರ ವ್ಯವಹಾರ, ಚರ್ಚೆ ಮುಂತಾದುವನ್ನು ನಡೆಸಿತ್ತು. ಕೇಂದ್ರ ಸರ್ಕಾರದ ತಜ್ಞರನ್ನೂ, ನಮ್ಮ ರಾಜ್ಯದ ಸರ್ಕಾರದ ತಜ್ಞರನ್ನೂ ಆ ದೇಶಕ್ಕೆ ಕಳಿಸಲು ತಯಾರಾಯಿತು. ವಿದೇಶೀ ಕಾರ್ಯಾಲಯದಿಂದ ಒಬ್ಬ ಪ್ರತಿನಿಧಿಯೂ, ಕೇಂದ್ರೀಯ ಕೃಷಿ ಮಂತ್ರಾಲಯದಿಂದ ಇಬ್ಬರು ಪ್ರತಿನಿಧಿಗಳೂ, ರಾಜ್ಯ ಸರ್ಕಾರದಿಂದ, ಕೃಷಿ ಇಲಾಖೆಯ ಇಬ್ಬರು ಪ್ರತಿನಿಧಿಗಳು ಹಾಗೂ ಹಣಕಾಸು ವಿಭಾಗದ ಕಾರ್ಯದರ್ಶಿಗಳೂ ಜಂಟಿಯಾಗಿ ಅಲ್ಲಿಗೆ ಹೋಗಿ ಹೊಸ ತಳಿಯನ್ನು ಭಾರತಕ್ಕೆ ತರುವ ಬಗ್ಗೆ ವಿವರವಾಗಿ ಮಾತುಕತೆ ನಡೆಸಬೇಕೆಂದು ನಿರ್ಧರಿಸಲಾಯಿತು.

ಇದೇನು ಸರ್ಕಾರದ ಬಗ್ಗೆಯೇ ಮಾತು .... ಬೇಜಾರು ಎಂದುಕೊಳ್ಳಬೇಡಿ. ಇವೆಲ್ಲಾ ಹಿನ್ನೆಲೆಯಲ್ಲಿ ನಮ್ಮ ಕಥೆ ಮುಂದೋಡುತ್ತದೆ. .....

ಈಗ ನಮ್ಮ ಮುಖ್ಯ ಪಾತ್ರಧಾರಿಗಳು ಯಾರು ಎಂದು ಹೇಳುತ್ತೇನೆ ಕೇಳಿ. ದೆಹಲಿಯಿಂದ ಬಂದ ಇಬ್ಬರು ತಜ್ಞರಲ್ಲಿ ಒಬ್ಬರು ಮಹಾರಾಷ್ಟ್ರದವರು (ಡಾ|| ಕುಲಕರ್ಣಿ) ಒಬ್ಬರು ದಕ್ಷಿಣದವರು (ಡಾ|| ರಾವ್) ವಿದೇಶೀ ಕಾರ್ಯಾಲಯದವರು. ಕಾಶ್ಮೀರ ರಾಜ್ಯದವರು (ಶ್ರೀ ಘುಸ್ರೊ). ರಾಜ್ಯ ಸರ್ಕಾರದಿಂದ ಬಂದ ಪ್ರತಿನಿಧಿಗಳಲ್ಲಿ ಇಬ್ಬರು ದಕ್ಷಿಣ ಭಾರತೀಯರು (ಡಾ|| ಸುಬ್ರಮಣ್ಯನ್, ಶ್ರೀ ಪ್ರಭಾಕರ) ಮತ್ತೊಬ್ಬರು ಬಂಗಾಲಿಗಳು (ಶ್ರೀ ಬೋಸ್) ... ಒಂದು ಕಿವಿಮಾತು. ಇವೆಲ್ಲಾ ನಿಜವಾದ ವ್ಯಕ್ತಿಗಳ ಹೆಸರುಗಳಲ್ಲ. ನಮ್ಮ ಕಥೆಗೆ ಬೇಕಾದಂತೆ ಪಾತ್ರಗಳ ಹೆಸರುಗಳನ್ನು ಸೂಚಿಸಲಾಗಿದೆ......

ಎಲ್ಲರೂ ದಕ್ಷಿಣ ಅಮೇರಿಕಾದ ಆ ದೇಶಕ್ಕೆ ಬಂದಿಳಿದರು. ಆ ದೇಶದಲ್ಲಿದ್ದ ಭಾರತದ ರಾಯಭಾರಿ ಕಛೇರಿಯಿಂದ ಶ್ರೀ ಚೋಪ್ರಾ (ಪಂಜಾಬಿನವರು) ಗುಂಪಿನೊಂದಿಗೆ ಸೇರಿದರು.

ಆ ದೇಶದ ಕೃಷಿ ತಜ್ಞರೊಂದಿಗೆ ವಿವರವಾಗಿ ಮಾತುಕತೆ ಪ್ರಾರಂಭವಾಯಿತು. ಎರಡು ದಿನಗಳ ನಂತರ ಆ ಭತ್ತದ ತಳಿಯನ್ನು ಅಭ್ಯಸಿಸಲು ಊರಿನಿಂದ ಹೊರಗಿರುವ ಗದ್ದೆಗಳಿಗೆ ಪ್ರಯಾಣ ಏರ್ಪಾಡಾಗಿತ್ತು. ನಮ್ಮ ತಜ್ಞರೆಲ್ಲಾ ಬಲು ಆಸಕ್ತಿಯಿಂದ ತಮ್ಮ ಕೆಲಸ ಪ್ರಾರಂಭಿಸಿದರು.

ನಾಲ್ಕು ದಿನಗಳು ಕಳೆದು ಹೋದವು. ಮಾತುಕತೆ ಯಾವ ಹಂತಕ್ಕೂ ಬಂದು ಮುಟ್ಟಲಿಲ್ಲ.

ತಜ್ಞರ ಕೆಲಸವೂ ಮುಗಿದಿರಲಿಲ್ಲ. ಈ ಎಲ್ಲರನ್ನೂ ಆ ದೇಶದ ರಾಜಧಾನಿಯ ಉತ್ತಮ ಹೋಟೆಲೊಂದರಲ್ಲಿ ಇಳಿಸಲಾಗಿತ್ತು. ಊಟ ತಿಂಡಿಯೆಲ್ಲಾ ಯುರೋಪಿಯನ್ ಮಾದರಿ ಯಾ ಆ ದೇಶದ ಪ್ರಕಾರವಿತ್ತು.

ಇನ್ನೊಂದೆರಡು ದಿನಗಳು ಕಳೆದವು. ತಜ್ಞರ ಕೆಲಸ ಸುಮಾರಾಗಿ ಮುಗಿದಿತ್ತು. ರಾಜ್ಯದ ಹಣಕಾಸು ಕಾರ್ಯದರ್ಶಿಗಳು ಆ ದೇಶದ ಪ್ರತಿನಿಧಿಗಳೊಂದಿಗೆ ಹಣಕಾಸು ವಿವರಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡಿದರು. ಊ ..... ಹೂ ...... ಮಾತುಕತೆ ಸರಿ ಹೋಗಲೇ ಇಲ್ಲ. ಈಗಿನಂತೆ ಆಗ ಬೇಗನೇ ಸಂಪರ್ಕ ಮಾಡಲು ಸಾಧ್ಯವಾಗುವ ಯಾವುದೇ ಸವಲತ್ತೂ ಇರಲಿಲ್ಲ. ನಮ್ಮ ದೇಶವನ್ನು ಸಂಪರ್ಕಿಸುವುದು ರಾಯಭಾರಿ ಕಛೇರಿಯ ಮೂಲಕವೇ. ಆ ಕಡೆಯಿಂದ ಕೆಲಸ ಬೇಗನೆ ಮುಗಿಸಿ ಬನ್ನಿ ಎಂಬ ಆದೇಶ. ಇತ್ತಲಾಗಿ ಮುಖ್ಯ ಅಂಶಗಳೇ ತಯಾರಾಗಿಲ್ಲ. ಒಪ್ಪಂದ ಮಾಡಿಕೊಳ್ಳುವುದು ಅಷ್ಟೊಂದು ಸುಲಭದ ಕೆಲಸವೇ?

ಹತ್ತನೇ ದಿನ .... ಎಲ್ಲರೂ ಆ ತಳಿ ಬೇರೆ ಬೇರೆ ಭಾಗಗಳಲ್ಲಿ ಹೇಗೆ ಬೆಳೆಯುತ್ತಿದೆ ಎಂದು ನೋಡಲು ಪ್ರವಾಸ ಹೊರಟರು. ಊಟದ ಹೊತ್ತಿಗೆ ವಾಪಸು ಬಂದು ಬಿಡುವ ಯೋಜನೆಯಿತ್ತು. ಮಧ್ಯಾಹ್ನ ಗಂಟೆ ಹನ್ನೊಂದೂವರೆ ಮಟ ಮಟ ಬಿಸಿಲು ಹೊಟ್ಟೆ ತಾಳ ಹಾಕಲು ಪ್ರಾರಂಭಿಸಿತ್ತು. ಒಂದು ಗದ್ದೆಯಿಂದ ಇನ್ನೊಂದು ಗದ್ದೆಯತ್ತ ನಡೆಯುತ್ತಾ ಹೊರಟಿದ್ದರು ಎಲ್ಲರೂ. ಅಷ್ಟರಲ್ಲಿ ನಮ್ಮ ಡಾ॥ ರಾವ್‌ರಿಗೆ ''ದಿವ್ಯ ದೃಶ್ಯ''ವೊಂದು ಕಾಣಿಸಿಯೇ ಬಿಟ್ಟಿತು. ಆ ದೇಶದ ರೈತನೊಬ್ಬ ಒಂದು ತಟ್ಟೆಯ ತುಂಬಾ ಬಿಸಿ ಬಿಸಿ ಅನ್ನವನ್ನು ಪೇರಿಸಿಕೊಂಡು ಅದರ ಮೇಲೆ ದೊಡ್ಡ ಅವರೆಕಾಳುಗಳಿಂದ ಮಾಡಿದ ವ್ಯಂಜನವನ್ನು ಹಾಕಿಕೊಂಡು ಊಟ ಮಾಡಲು ಕುಳಿತಿದ್ದ .... ಡಾ॥ ರಾವ್ ಗುಂಪನ್ನು ಬಿಟ್ಟು ಅವನತ್ತ ನಡೆದವರೇ ಇಂಗ್ಲೀಷಿನಲ್ಲಿ '' ಇಲ್ಲಿ ಅನ್ನ ಎಲ್ಲಿ ಸಿಗುತ್ತದೆ?'' ಎಂದು ಕೈ ಬಾಯಿ ಚಿನ್ಹೆಗಳೊಂದಿಗೆ ಹೇಳಿದರು. ಇಂಗ್ಲಿಷ್ ಅರ್ಥವಾಗದ ರೈತ ತಲೆಯಾಡಿಸಿದ. ಡಾ॥ ರಾವ್ ಬೇಗ ಬೇಗ ನಡೆದು ಬಂದು ಗುಂಪಿನವರಿಗೆ ಇಲ್ಲಿ ಅನ್ನ ಸಿಗುವ ಬಗ್ಗೆ ಹೇಳಿದರು. ಪಿಸು ಮಾತಿನಲ್ಲಿ ಎಲ್ಲರೂ ಏನೋ ಹೇಳಿಕೊಂಡು ಆ ರೈತನತ್ತಲೇ ನಡೆದರು. ನಮ್ಮ ದಕ್ಷಿಣ ಭಾರತೀಯರೇ ಅಲ್ಲದೆ ಅವರೊಂದಿಗಿದ್ದ ಕಾಶ್ಮೀರದವರೂ ಹಾಗೂ ಬಂಗಾಲದವರೂ ಬೇಗ ಬೇಗ ರಾಯಭಾರಿ ಕಛೇರಿಯ ಪ್ರತಿನಿಧಿಯೊಂದಿಗೆ ಹಿಂದಿಯಲ್ಲಿ ಮಾತನಾಡುತ್ತಾ ''ಅನ್ನ ಕಂಡು ಹತ್ತು ದಿನಗಳ ಮೇಲಾಗಿ ಹೋಯ್ತು. ಈ ತಳಿಯ ಭತ್ತದ ರುಚಿ ಹೇಗಿರುತ್ತದೆ ಎಂದು ನೋಡಬೇಡವೆ'' ಎಂದು ಸೂಚಿಸಿಯೂ ಬಿಟ್ಟರು. ನಮ್ಮ ವಿದೇಶೀ ಪ್ರತಿನಿಧಿ ಆ ದೇಶದವರೊಂದಿಗೆ ಸ್ಪ್ಯಾನಿಷ್ ಭಾಷೆಯಲ್ಲಿ ಏನು ಹೇಳಿದನೋ ಏನೋ ....

ಮುಂದಿನ ಒಂದು ಗಂಟೆಯ ಕಾಲ ಭಾರೀ ಉತ್ಸಾಹದಿಂದ ಕಳೆಯಿತು. ''ಸಮಯರಕ್ಕಿಲಿ'' ಎಂದು ಉಪ್ಪಿನ ಕಾಯಿಯ ಚಿಕ್ಕ ಶೀಷೆಯೊಂದನ್ನು ಪ್ರಭಾಕರ ಅವರ ಪತ್ನಿ ಕಳಿಸಿದ್ದರು. ಅದನ್ನು ಪ್ರಭಾಕರ ಅವರ ಬ್ರೀಫ್ ಕೇಸಿನಲ್ಲೇ ಇರಿಸಿದ್ದು ಅನುಕೂಲವಾಯಿತು. ಕುಲಕರ್ಣಿ ಹಾಗೂ ಡಾ॥ ರಾವ್ ಬೆಳಿಗ್ಗೆ ರಾಜಧಾನಿಯಿಂದ ಮೊಸರನ್ನು ಪತ್ತೆ ಮಾಡಿ ಪ್ರಯಾಣಕ್ಕೆ ಆಗುತ್ತೆ ಎಂದುಕೊಂಡು ಇಟ್ಟುಕೊಂಡಿದ್ದರಂತೆ. ಮೂವರು ದಕ್ಷಿಣ ಭಾರತೀಯರು, ಒಬ್ಬರು ಮಹಾರಾಷ್ಟ್ರದವರು ಮೊಸರನ್ನ ತಯಾರಿಸಿಯೇ ಬಿಟ್ಟರೆ, ನಮ್ಮ ಕಾಶ್ಮೀರದವರು ಹಾಗೂ ಬಂಗಾಲಿಯವರು

ಧೈರ್ಯಮಾಡಿ ಆ ರೈತ ತಿನ್ನುತ್ತಿರುವ ಅವರೆಕಾಳಿನ ವ್ಯಂಜ್ಯನವನ್ನೇ ಕಲೆಸಿಕೊಂಡರು.


ಬಿಸಿಲಿನ ಸಮಯದಲ್ಲಿ, ತಂಪಾದ ಮೊಸರನ್ನ ಅದರಲ್ಲಿ ಮಾವಿನಕಾಯಿ ಉಪ್ಪಿನಕಾಯಿ ಜೊತೆ ಬೇರೆ! ನಮ್ಮ ಬಂಗಾಲಿ ಹಾಗೂ ಕಾಶ್ಮೀರದ ಜನರಿಗೆ ಬೇಕಾದ ಹುರಿದ ಮೀನು ಸಿಕ್ಕಿಬಿಟ್ಟಿತು. ಒಟ್ಟಿನಲ್ಲಿ ಪರಮಾತ್ಮನೇ ಬಂದು ಇವರೆಲ್ಲರನ್ನೂ ಕೃತಾರ್ಥರನ್ನಾಗಿ ಮಾಡಿದ ಅನುಭವ.

'' ಇಂತಹ ಮೊಸರನ್ನ ತಿಂದೇ ಇರಲಿಲ್ಲ'' ಎಂದು ಸುಬ್ರಮಣ್ಯನ್ ಹೇಳಿದರೆ ಪ್ರಭಾಕರ ''ಬೇಗ ಊರಿಗೆ ವಾಪಸು ಹೋಗೋಣ. ಇಲ್ಲಿನ ಊಟ ಸಾಕಾಗಿ ಹೋಗಿದೆ'' ಎಂದುಕೊಂಡರು. ರಾಯಭಾರಿ ಪ್ರತಿನಿಧಿಯತ್ತ ನೋಡುತ್ತಾ ವಿದೇಶಿ ಕಾರ್ಯಾಲಯದವರು ನಕ್ಕರು. ಇಂದು ಖಚಿತವಾಗಿ ಒಪ್ಪಂದ ಮಾಡಿಕೊಳ್ಳುವ ಮೊದಲಿನ ಕಾರ್ಯಗಳೆಲ್ಲಾ ನಡೆದು ಹೋಗುತ್ತವೆ ಎಂದು ಭವಿಷ್ಯ ಹೇಳಿದರು.

ಅವರ ಭವಿಷ್ಯ ನಿಜವಾಯಿತು. ಭತ್ತದ ತಳಿಯ ಬಗ್ಗೆ ಕೂಲಂಕಷ ವಿವರಣೆ. ಅದು ನಮ್ಮ ದೇಶದಲ್ಲಿ ಸರಿಯಾಗಿ ಬರುವ ಬಗ್ಗೆ ವಿವರಗಳು ರಾಜ್ಯ ಸರ್ಕಾರದ ಹಣಕಾಸು ವ್ಯವಸ್ಥೆ, ವಿದೇಶೀ ಕಾರ್ಯಾಲಯದಿಂದ ಮನ್ನಣೆ ಎಲ್ಲವೂ ಮಧ್ಯಾಹ್ನದೊಳಗೆ ತಯಾರಾದವು. ಅತಿಥಿಗಳು ಸಂತೋಷ ಪಟ್ಟಿದ್ದನ್ನು ನೋಡಿದ ಆ ದಕ್ಷಿಣ ಅಮೇರಿಕಾದವರೂ ತೃಪ್ತಿಗೊಂಡರು.

ಅಂತೂ ಬಿಕ್ಕಟ್ಟನ್ನು ಪರಿಹರಿಸುವುದರಲ್ಲಿ ಮೊಸರನ್ನ ದೊಡ್ಡ ಮಧ್ಯಸ್ತಿಕೆ ಮಾಡಿತ್ತು.

★★



''ಯಜಮಾನ್ರಿಗೆ ಟ್ರಾನ್ಸ್‌ಫರ್ ಟೈಂ ಅಂತೆ ಕಣೇ!''

ಇನ್‌ವಿಸಿಬಲ್ ಟ್ರೇನಲ್ಲಿ ಇನ್‌ವಿಸಿಬಲ್ ಟೀ ಇದೆ ಸಾರ್, ಸ್ವಲ್ಪ ತಗೋತೀರಾ?"



ಸೈಯದ್ ಅಲಿ ಹೊಲಿದ ಸಫಾರಿ ಸೂಟು

ಎಸ್. ಎನ್. ಶಿವಸ್ವಾಮಿ

ನಾನೊಂದು ಖಾಸಗಿ ಕಾಲೇಜಿನಲ್ಲಿ ಹಂಗಾಮಿ ಉಪಾಧ್ಯಾಯನಾಗಿ ಸೇವೆ ಸಲ್ಲಿಸಿ, ಆ ಕಾಲೇಜು ಡೊನೇಷನ್ನುಗಳಿಲ್ಲದೆ ಮುಚ್ಚುವ ನೆಲೆ ತಲುಪಿ ನಾನು ಕೆಲಸ ಕಳೆದುಕೊಂಡು, ಈಗ ಬೇರೆ ಕೆಲಸ ಹುಡುಕುತ್ತಿದ್ದೇನೆ. ಇನ್ನೂ ಸಿಕ್ಕಿಲ್ಲ. ಈ ಪರಿಸ್ಥಿತಿಯಲ್ಲಿ ಉಗಾದಿಗೆ ನಾನು ಹೊಸ ಬಟ್ಟೆ ಕೊಂಡುಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲವಲ್ಲ! ಹೀಗಿದ್ದೂ ಈ ಸಲದ ಉಗಾದಿಗೆ ಎರಡು ತಿಂಗಳಿರುವಾಗಲೇ ಒದಗಿದ ಒಂದು ಆಕಸ್ಮಿಕದಿಂದಾಗಿ ನನಗೂ ಹಬ್ಬಕ್ಕೆ ಹೊಸ ಬಟ್ಟೆಯ ಯೋಗ ಬಂತು. ಕುಚೇಲನ ಮಿತ್ರ ಕೃಷ್ಣನ ಹಾಗೆ ನನಗೂ ಒಬ್ಬ ಆಪ್ತ ಸ್ನೇಹಿತನಿದ್ದಾನೆ, ಅಳಗಿರಿಸ್ವಾಮಿ ಅಂತ. ಅಳಗಿರಿಸ್ವಾಮಿಗೆ ಆಕಸ್ಮಾತ್ ಟೆರಿಲೀನ್ ಬಟ್ಟೆ ಥಾನಿನಲ್ಲಿ ಕೊನೆಗೆ ಉಳಿದಿದ್ದ ಒಂದು ತುಂಡು ಬಹಳ ಅಗ್ಗವಾಗಿ ಸಿಕ್ಕಿತು. ಅದು ಅವನಿಗೆ ಸಿಕ್ಕಿದ್ದು ಸೈಯದ್ ಅಲಿ ಅನ್ನುವ ದರ್ಜಿಯಂಗಡಿಯ ಜಗುಲಿಯ ಮೇಲೆ ಕೂತಿದ್ದ ಒಬ್ಬ ತಿರುಗು ವ್ಯಾಪಾರಿಯಿಂದ ಅಂತ ಅಳಗಿರಿಸ್ವಾಮಿ ಹೇಳಿದ. ಆ ಬಡ ವ್ಯಾಪಾರಿಯ ಹತ್ತಿರ ಅಳತೆ ಟೇಪು ಕೂಡ ಇಲ್ಲದೆ ಮೊಳ ಹಾಕಿ ಬಟ್ಟೆ ಅಳೆಯುತ್ತಿದ್ದಾಗ ಸೈಯದ್ ಅಲಿ ತನ್ನ ಟೇಪಿನಿಂದ ಅಳೆದು ಆ ಬಟ್ಟೆ ತುಂಡಿನಲ್ಲಿ ಒಂದು ಸೂಟಿಗೆ ಬೇಕಾದ ಬಟ್ಟೆಗಿಂತ ಜಾಸ್ತಿ ಇತ್ತೆಂಬ ಆಶ್ವಾಸನೆ ಕೊಟ್ಟನಂತೆ. ಕೂಡಲೇ ಅಳಗಿರಿಸ್ವಾಮಿಗೆ ನನ್ನ ನೆನಪು ಬಂದು ನಮ್ಮಿಬ್ಬರಿಗೂ ಏನಾದರೂ ಬಟ್ಟೆ ಹೊಲಿಸೋಣ ಅನ್ನಿಸಿತಂತೆ. ಬಟ್ಟೆ ಪ್ಯಾಕೆಟ್ ಹಿಡಿದುಕೊಂಡು ನೇರವಾಗಿ ನಮ್ಮ ಮನೆಗೂ ಬಂದ. ನನ್ನೆದುರಿಗೆ ಬಟ್ಟೆ ಹರವಿ ಕೇಳಿದ.

''ಹ್ಯಾಗಿದೆಯಯ್ಯ ಬಟ್ಟೆ?'' ಗಾಢವಾದ ಬಣ್ಣ, ಪಟ್ಟೆ ಪಟ್ಟೆ ನಮೂನೆ.

''ಬಣ್ಣ ಗ್ಯಾರಂಟೀನೋ?'' ಅಂತ ಕೇಳಿದೆ

''ಗ್ಯಾರಂಟಿ. ಸೈಯದ್ ಅಲಿ ಹೇಳಿದ''.

''ಮಿಲ್ಲಿನ ಹೆಸರು ಅಡ್ರೆಸ್ಸುಗಳೆಲ್ಲ ಪ್ರಿಂಟಾಗಿದೆಯಲ್ಲ''?

''ಅವೆಲ್ಲಾ ಬ್ರಷ್ ಮಾಡಿದ್ರೆ ಅಳಿಸಿ ಹೋಗುತ್ತೆ ಅಂತ ಸೈಯದ್ ಅಲಿ ಹೇಳಿದ''.

''ಅದೇನೋ ಸರಿ. ಒಂದ್ಸಲ ನೀರಿಗೆ ಹಾಕಿದ್ರೂ ಹೋಗುತ್ತೆ''.

''ಡ್ರೈಕ್ಲೀನೇ ಮಾಡಿಸಬೇಕಂತೆ. ನೀರಿಗೆ ಹಾಕಬೇಡಿ ಅಂತ ಸೈಯದ್ ಅಲಿ ಹೇಳಿದ್ದಾನೆ''.

'' ಈ ಸೈಯದ್‌ಅಲಿ ಯಾರಯ್ಯ? ಇವನೂ ಕಮರ್ಷಿಯಲ್ ಸ್ಟ್ರೀಟಿನ ಸೈಯದ್ ಬಾಖರ್ ತರಹದ ದುಬಾರಿ ಟೈಲರ್ ತಾನೆ?''

''ಅಲ್ಲ. ಇವನು ಕಮರ್ಷಿಯಲ್ ಸ್ಟ್ರೀಟಿನ ಹಿಂದಿನ ಓಣೀಲಿ ಅಂಗಡಿ ಇಟ್ಟಿದ್ದಾನೆ. ಇವನೊಬ್ಬ ಭೀಷ್ಮ. ಸೈಯದ್ ಬಾಖರ್ ಗೀಖರ್ ಎಲ್ಲರೂ ಬಟ್ಟೆ ಹೊಲಿಯೋದನ್ನು ಇವನ ಹತ್ರ ಬಂದು ಕಲೀಬೇಕು''.

ಅಳಗಿರಿಸ್ವಾಮಿ ಕೊಂಡ ತುಂಡಿನಲ್ಲಿ ನಮ್ಮಿಬ್ಬರಿಗೂ ಸಫಾರಿ ಸೂಟು ಹೊಲಿಸಬಹುದು ಅಂತ ಅವನ ಅಭಿಪ್ರಾಯ. ನಾನು ಸಣಕಲನಾಗಿದ್ದರಿಂದಲೇ ಅವನಿಗೆ ಈ ಯೋಚನೆ ಹೊಳೆದಿರಬೇಕು. (ಸಣಕಲ ಅಂದರೆ ಅಷ್ಟಿಷ್ಟು ಸಣಕಲನಲ್ಲ. ಒಂದು ಸಲ ನಾನೊಂದು ರೆಡಿಮೇಡ್ ಅಂಗಡಿಯಲ್ಲಿ ಬುಷ್ ಷರ್ಟ್ ಹಾಕಿ ಅಳತೆ ನೋಡಿಕೊಳ್ಳುತ್ತಿದ್ದಾಗ ಇನ್ನೊಬ್ಬ

ಗಿರಾಕಿ ಅಂಗಡಿಯವನನ್ನು "ಆ ಹ್ಯಾಂಗರ್ ಮೇಲಿರೋ ಬುಷ್ ಷರ್ಟ್ ಕೊಡಿ, ನೋಡೋಣ" ಅಂದ. ಅಂಗಡಿಯವನು ಅದು ಹ್ಯಾಂಗರ್ ಅಲ್ಲವೆಂದೂ ನನ್ನ ಕೊರಳ ಎಲುಬೆಂದೂ ಅವನಿಗೆ ವಿವರಿಸಬೇಕಾಯಿತು.)

"ನಿಮ್ಮ ಸೈಯದ್ ಅಲಿಗೆ ಕಂತಿನಲ್ಲಿ ದುಡ್ಡು ಕೊಡೋದಾದರೆ, ಆಗಲಿ" ಅಂದೆ.

ಅಳಗಿರಿಸ್ವಾಮಿ ನಮ್ಮಿಬ್ಬರ ಬಟ್ಟೆಗೂ ತಾನೇ ಕೂಲಿ ಕೊಡುವುದಾಗಿಯೂ ನಾನು ಕೆಲಸ ಸಿಕ್ಕಿದ ಮೇಲೆ ದುಡ್ಡು ಕೊಟ್ಟರಾಯಿತು ಎಂದೂ ನನಗೆ ಆಸೆ ತೋರಿಸಿದ ಮೇಲೆ ನಾನು ಅವನ ಜತೆಗೆ ಕಮರ್ಷಿಯಲ್ ಸ್ಟ್ರೀಟಿನ ಕಡೆಗೆ ಹೊರಟೆ. ಸೈಯದ್ ಅಲಿಯ ಅಂಗಡಿ ಇದ್ದದ್ದೂ ಒಂದು ಚಿಕ್ಕ ಓಣಿಯಲ್ಲಿ. ನಾವು ಹೋದಾಗ ಸೈಯದ್ ಅಲಿ ನೊಣ ಕೂಡ ಹೊಡೆಯದೆ ತನ್ನ ಮೇಜಿನ ಮುಂದೆ ಕಣ್ಣು ಮುಚ್ಚಿ ಕೂತಿದ್ದ. ಅಳಗಿರಿಸ್ವಾಮಿ ಸದ್ದು ಮಾಡಬೇಡವೆಂದು ಸನ್ನೆಯಿಂದಲೇ ಸೂಚಿಸಿ ನನ್ನ ಕಿವಿಯಲ್ಲಿ "ನಮಾಜು ಮಾಡ್ತಿದ್ದಾನೆ" ಅಂತ ಎಚ್ಚರಿಸಿದ. ಪಿಸುಮಾತಿನಲ್ಲೇ ನಮ್ಮ ಸಂಭಾಷಣೆ:

" ಇವನಿಗೆ ಸಹಾಯಕರೂ ಯಾರೂ ಇದ್ದ ಹಾಗಿಲ್ಲ?"

" ಇವನೇ ಒಬ್ಬ ಸಹಾಯಕ. ಸುತ್ತಮುತ್ತಲ ದೊಡ್ಡ ದೊಡ್ಡ ಟೈಲರುಗಳು ಕಟಿಂಗ್ ಮಾಡಿ, ಬಟ್ಟೆಗಳನ್ನು ಹೊಲಿಯೋಕೆ, ಗುಂಡಿ ಕಾಜಾ ಹೊಂದಿಸೋಕೆ ಇವನ ಹತ್ರ ಕಂಟ್ರಾಕ್ಟ್ ಮಾಡಿಕೊಂಡಿದ್ದಾರೆ".

ನಮಾಜ ಮುಗಿಸಿ ಸೈಯದ್ ಅಲಿ ನಮ್ಮ ಕಡೆ ಕಣ್ಣುಬಿಟ್ಟು ನೋಡಿದ ಅಳಗಿರಿಸ್ವಾಮಿಯನ್ನು ಗುರುತಿಸಿ "ಬಂದಿರಾ, ಬನ್ನಿ" ಅಂದ.

ಇಬ್ಬರ ಅಳತೆಯನ್ನು ತೆಗೆದುಕೊಂಡ. ನನ್ನ ಅಳತೆ ನೋಡುತ್ತ " ಫಿಟ್ ಹ್ಯಾಗಿಡಲಿ? ಬಟ್ಟೆ ಕಡಿಮೆ ಇರೋದ್ರಿಂದ ಸ್ವಲ್ಪ ಫಿಟ್ಟಾಗೇ ಹೊಲೀಬೇಕಾಗುತ್ತೆ. ಪರವಾಯಿಲ್ಲವೆ?" ಅಂತ ಕೇಳಿದ.

ನಾನು ಯಥಾ ಪ್ರಕಾರ ನನ್ನ ಅಧಿಕ ಪ್ರಸಂಗಿತನ ತೋರಿಸುತ್ತ "ಫಿಟ್ ಅಂದರೆ ಬಟ್ಟೆ ಹಾಕ್ಕೊಂಡಾಗಲೆಲ್ಲ ಫಿಟ್ ಬರೋಷ್ಟುಹಾಗೆ ಫಿಟ್ ಬೇಡ" ಅಂತ ಪನ್ ಮಾಡಿದೆ. ಅದು ಸೈಯದ್ ಅಲಿಗೆ ಅರ್ಥವಾಗದೆ ತೆಪ್ಪಗೆ ಅಳತೆ ತೆಗೆದುಕೊಂಡ.

"ಮೈ ಚರ್ಮಕ್ಕಿಂತ ಬಿಗಿಯಾಗಿರೋದಿಲ್ಲ ತಾನೆ?" ಅಂತ ಇನ್ನೊಂದು ಜೋಕು ಹಾಕಿಸಿದೆ.

ಸೈಯದ್ ಅಲಿ ನಗುತ್ತ "ಅದು ಹ್ಯಾಗೆ ಸಾರ್, ಮೈ ಚರ್ಮಕ್ಕಿಂತ ಬಿಗಿಯಾಗಿ ಬಟ್ಟೆ ಹೊಲಿಯೋದು?" ಅಂತ ಕೇಳಿದ.

"ಅಂದರೆ, ಕೂತರೆ, ನಿಂತರೆ, ಬಗ್ಗಿದರೆ ಮೈ ಚರ್ಮ ಹರಿಯೊಲ್ಲ. ಅದಕ್ಕಿಂತ ಬಿಗಿಯಾದ್ರೆ ಬಟ್ಟೆ ಹರಿಯುತ್ತೆ ತಾನೆ!" ಅಂತ ನಾನು ವಿವರಿಸಿ ಸೈಯದ್ ಅಲಿಯನ್ನು ನಗಿಸಿದೆ.

ಸೈಯದ್ ಅಲಿ ಅಳತೆ ಕೆಲಸ ಮುಗಿಸುತ್ತ "ಒಂದೇ ಪಾಕೆಟ್ ಆಗುತ್ತೆ. ಅಷ್ಟಕ್ಕೇ ಬಟ್ಟೆ ಮಿಗೋದು. ಎಲ್ಲಿಡಲಿ ಪಾಕೆಟ್?" ಅಂತ ಕೇಳಿದ.

ನಾನು " ಎಲ್ಲಾದರೂ ಸರಿಯೆ. ಒಂದೇ ಪಾಕೆಟ್ ಧಾರಾಳವಾಯ್ತು. ನನ್ಹತ್ರ ಆ ಒಂದು ಪಾಕೆಟ್‌ನಲ್ಲಿಡುವಷ್ಟೂ ದುಡ್ಡು ಇರೊಲ್ಲ" ಅಂದೆ.

ಸೈಯದ್ ಅಲಿ ಅಳಗಿರಿಸ್ವಾಮಿಗೆ "ನಿಮ್ಮ ಫ್ರೆಂಡು ಭಲೇ ತಮಾಷೆ.... ಬುಧವಾರ ಬಂದು ಸಫಾರಿಗಳನ್ನ ತಗೊಂಡ್ಹೋಗಿ" ಅಂದ.

ಬುಧವಾರ, ಗುರುವಾರ, ಶುಕ್ರವಾರ, ಮುಂದಿನ ಬುಧವಾರವೂ ಬಂತು. ಬಟ್ಟೆಗಳು ಇನ್ನೇನು ತಯಾರಾಗಿವೆಯೆಂದೂ, ಗುಂಡಿಗಳನ್ನು ತರಲು ಐದು ರೂಪಾಯಿ ಅಡ್ವಾನ್ಸ್ ಬೇಕೆಂದೂ ಸೈಯದ್ ಅಲಿ ಹೇಳಿದ. ಅವನೇನೋ ಐವತ್ತು ರೂಪಾಯಿಗಳಷ್ಟು ಅಗ್ಗದ ಕೂಲಿಗೆ ನಮ್ಮಿಬ್ಬರ ಸಫಾರಿಗಳನ್ನೂ ಹೊಲಿಯಲು ಒಪ್ಪಿದ್ದ. ಆದರೆ ಈಗಾಗಲೇ ನಮಗೆ ಅವನ ಅಂಗಡಿಗೆ ಅಲೆಯುವುದರಲ್ಲೇ ಸಾಕಷ್ಟು ಖರ್ಚಾಗಿತ್ತು.

ಅಳಗಿರಿಸ್ವಾಮಿ ನಮ್ಮಲ್ಲಿ ಇರುವುದೇ ಐದು ರೂಪಾಯಿಗಳೆಂದೂ, ಬಸ್ಸಿಗೆ ಬೇರೆ ದುಡ್ಡಿಲ್ಲವೆಂದೂ ಸೈಯದ್ ಅಲಿಗೆ ಹೇಳಿದ. ಅವನು ಬಸ್ಸಿಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದ ಎರಡೋ ಮೂರೋ ರೂಪಾಯಿಗಳನ್ನು ಕೊಡಿರೆಂದು ಗೋಗರೆದ.

ಇನ್ನೂ ನಾಲ್ಕೈದು ದಿನ ಅಂಗಡಿಗೆ ಅಲೆದಾಡಿಸಿ ಸೈಯದ್ ಅಲಿ ನಮ್ಮ ಸಫಾರಿಗಳನ್ನು ಸಿದ್ಧ ಪಡಿಸಿದ. ನಮ್ಮನ್ನು ಬಿಟ್ಟರೆ ಅವನಿಗೆ ಬೇರೆ ಗಿರಾಕಿಗಳೇ ಇರಲಿಲ್ಲ ಅಂತ ನಾವು ಮಾತನಾಡಿಕೊಳ್ಳುತ್ತಿದ್ದದ್ದನ್ನೂ ಕೇಳಿಸಿಕೊಂಡ ಪಕ್ಕದ ಅಂಗಡಿಯವನು, ಅವನು ದರ್ಜಿಯೇ ಅಲ್ಲವೆಂದೂ, ಯಾರೋ ಅವನಿಗೆ ಕೊಡಬೇಕಾದ ದುಡ್ಡಿಗೆ ಅಮಾನತ್ತಾಗಿ ಹೊಲಿಗೆ ಮಿಷನ್ ಅವನಲ್ಲಿ ಬಿಟ್ಟು ಹೋದದ್ದೆಂದೂ ಗುಟ್ಟಾಗಿ ನಮಗೆ ತಿಳಿಸಿದ್ದ. ಅಳಗಿರಿಸ್ವಾಮಿಗೆ ಸೈಯದ್ ಅಲಿ ಹೇಳಿದ್ದೇ ಬೇರೆ; ಹಿಂದೊಂದು ಕಾಲದಲ್ಲಿ ಹಲವಾರು ಪ್ರತಿಷ್ಠಿತ ವ್ಯಕ್ತಿಗಳು ಸೈಯದ್ ಅಲಿಯನ್ನೇ ಹುಡುಕಿಕೊಂಡು ಬಂದು ಬಟ್ಟೆ ಹೊಲಿಸಿಕೊಳ್ಳುತ್ತಿದ್ದರಂತೆ! ಆಗ ಚೆನ್ನಾಗಿ ಸಂಪಾದಿಸಿದ ನೆನಪಿಗೋಸ್ಕರ ಅವನು ಈಗಲೂ ಆ ಚಿಕ್ಕ ಅದೃಷ್ಟಶಾಲಿ ಅಂಗಡಿಯಲ್ಲೇ ವ್ಯಾಪಾರ ಮಾಡುತ್ತಿದ್ದನಂತೆ.

'' ಒಂದ್ಸಲ ಹಾಕ್ಕೊಂಡು ಟ್ರೈಯಲ್ ನೋಡಿ ಬಿಡೋಣ'' ಅಂದ, ಅಳಗಿರಿಸ್ವಾಮಿ.

ನಿಲುವುಗನ್ನಡಿಗೆ ತನ್ನ ಅಂಗಡಿಯಲ್ಲಿ ಜಾಗವಿಲ್ಲವೆಂದೂ, ಬೇಕಾದರೆ ಹತ್ತಿರದ ಇನ್ನೊಬ್ಬ ದರ್ಜಿಯಂಗಡಿಗೆ ಕರೆದುಕೊಂಡು ಹೋಗುತ್ತೇನೆಂದೂ ಸೈಯದ್ ಅಲಿ ಹೇಳಿದ. ನಾವಿಬ್ಬರೂ ಒಬ್ಬರನ್ನೊಬ್ಬರು ನೋಡಿಕೊಂಡು ಓಕೆ ಮಾಡುತ್ತೇವೆಂದು ಹೇಳಿ ಹೊಸ ಬಟ್ಟೆ ಹಾಕಿಕೊಂಡೆವು.

ಎರಡೂ ಅರೆ ತೋಳಿನ ಸಫಾರಿಗಳು. ಕೆನೆತ್ ಕೌಂಡಾ ಸ್ಟೈಲ್‌ನಲ್ಲೆ ಹೊಲಿದಿರುವುದಾಗಿ ಸೈಯದ್ ಅಲಿ ವಿಶೇಷವಾಗಿ ಒತ್ತಿ ಹೇಳಿದ.

ಷರ್ಟ್‌ಗೆ ಜೇಬುಗಳಿಲ್ಲ. ಷರಾಯಿಗಳ ಹಿಂಭಾಗದಲ್ಲಿ ಮಾತ್ರ ಒಂದೊಂದು ಜೀನ್ಸ್ ರೀತಿಯ ತೇಪೆ ಜೇಬು. ಬಟ್ಟೆಯ ಮಿಲ್ ಮಾಲಿಕರ ಹೆಸರು ಇತ್ಯಾದಿ ತಪಶೀಲುಗಳನ್ನು ನಿಷ್ಪಕ್ಷಪಾತವಾಗಿ ಸೈಯದ್ ಅಲಿ ಇಬ್ಬರಿಗೂ ಹಂಚಿದ್ದ. ಗುಂಡಿಗಳು ಬೇರೆ ಬೇರೆ ಬಣ್ಣದಲ್ಲಿದ್ದವು. ಸೈಯದ್ ಅಲಿ '' ಈ ಬಟ್ಟೆಗೆ ಹೊಂದೋ ಗುಂಡಿಗಳು ಸಿಗಲೇ ಇಲ್ಲ ಸಾರ್. ಬಹಳ ಹುಡುಕಿದೆ. ಅದಕ್ಕೇ ನಿಮಗೆ ಬಟ್ಟೆ ಕೊಡೋದರಲ್ಲಿ ನಿಧಾನ ಆಯ್ತು. ನನ್ಹತ್ರ ಇದ್ದ ಗುಂಡಿಗಳನ್ನೇ ಹೊಲಿದಿದ್ದೀನಿ. ಬಣ್ಣ ಬಣ್ಣದ ಪ್ಯಾಟರ್ನ್ ಇರೋವೇ. ಚೆನ್ನಾಗಿ ಮ್ಯಾಚ್ ಆಗಿವೆ ಅಲ್ವೆ?'' ಅಂತ ಕೇಳಿದ.

ನನ್ನ ಸಫಾರಿ ಬಹಳ ಬಿಗಿಯಾಗಿತ್ತು. ಬಹುಶಃ ಸೈಯದ್ ಅಲಿ ಅದನ್ನ ಒಂದೇ ಮೀಟರ್ ಬಟ್ಟೆಯಲ್ಲಿ ಬಹಳ ಯುಕ್ತಿ ಉಪಯೋಗಿಸಿ ಹೊಲಿದಿರಬೇಕು! ಅರ್ಧ ತೋಳಾದರೂ ಅದು ಕಂಕುಳಿಗೆ ಬಲು ಹತ್ತಿರವೇ ಇತ್ತು. ಷರಾಯಿ ಉದ್ದ ಸಾಲದೆನ್ನಿಸಿತು. ಅಳಗಿರಿಸ್ವಾಮಿ

ಸಂತುಷ್ಟನಾಗಿ ''ಬಾರಯ್ಯ, ನೀವು ಕೊಡೋ ಕೂಲಿಗೆ ಇದಕ್ಕಿಂತ ಒಳ್ಳೆ ಫಿಟ್ಟಿಂಗ್ ಯಾರು ಕೊಡ್ತಾರೆ!'' ಅಂದು ಬಿಟ್ಟ.

ನಾನು ಕೆಲಸ ಹುಡುಕಿಕೊಂಡು ಹೋದಾಗ ಹೊಸ ಸಫಾರಿಯನ್ನೇ ಹಾಕಿಕೊಂಡು ಹೋಗುತ್ತಿದ್ದೆ. ಮಳೆಗಾಲವಲ್ಲದಿದ್ದರೂ ಒಂದು ದಿನ ಮಳೆ ಬಂತು. ಸಫಾರಿ ಸೂಟನ್ನ ನೆನೆಸಬೇಡಿ ಅಂತ ಸೈಯದ್ ಅಲಿ ಹೇಳಿಯೇ ಇದ್ದ. ಈಗ ಅದು ನೆಂದು ಇನ್ನಷ್ಟೂ ಶ್ರಿಂಕಾಗಿ, ಹಾಕಿದ ಸೂಟನ್ನು ಬಿಚ್ಚುವುದೇ ಕಷ್ಟವಾಯ್ತು. ಆದರೆ ಮಳೆಯಿಂದ ಒಂದು ಅನುಕೂಲವೂ ಆಯ್ತು. ಬಟ್ಟೆಯ ಮೇಲೆ ಪ್ರಿಂಟಾಗಿದ್ದ ಅಕ್ಷರಗಳು ಹರಡಿ ಬಟ್ಟೆಗೆ ಒಂದು ತರಹದ ಹೊಸ ಎಫೆಕ್ಟ್ ತಂದಿತ್ತು. (ಸೈಕಡೆಲಿಕ್ ಎಫೆಕ್ಟ್!)

ಸಫಾರಿ ಧರಿಸಿ ಹೋದ ಕೆಲಸಗಳು ನನಗೆ ಯಾವುದೂ ದಕ್ಕಲಿಲ್ಲ. ಸಂದರ್ಶನಕಾರರು ಎಷ್ಟೇ ಸೌಜನ್ಯದಿಂದ 'ಕೂತ್ಕೊಳ್ಳಿ' ಅಂದರೂ ನಾನು ಷರಾಯಿ ಹರಿದು ಹೋದೀತೆಂಬ ಭಯದಿಂದ ಸೆಟೆದು ನಿಂತೇ ಇರುತ್ತ ಆತ್ಮ ವಿಶ್ವಾಸದ ಕೊರತೆ ತೋರಿಸಿಕೊಳ್ಳುತ್ತಿದ್ದೆ.

ಕೊನೆಗೆ ಬೇಸತ್ತು ಒಂದು ಐಸ್‌ಕ್ರೀಂ ಪಾರ್ಲರ್‌ನ ಮುಂದೆ ಹೋಗುತ್ತಿದ್ದಾಗ ಅದರ ಮಾಲೀಕರು ನನ್ನನ್ನು ಒಳಗೆ ಕರೆದು ನನಗೆ ತಮ್ಮ ಪಾರ್ಲರಿನಲ್ಲಿ ಕೆಲಸಕ್ಕೆ ಆಹ್ವಾನಿಸಿದರು. ಅಲ್ಲಿದ್ದ ನೌಕರರೆಲ್ಲ ನನ್ನ ಹಾಗೇ ಪಟ್ಟೆ ಪಟ್ಟೆ ಬಣ್ಣದ ಬಿಗಿ ಬಟ್ಟೆ ಹಾಕಿದ್ದದ್ದನ್ನ ನಾನು ಗಮನಿಸಿದೆ. ಸಂಬಳ ಟಿಪ್ಸ್, ಎಲ್ಲಾ ಸೇರಿಸಿದರೆ ಖಾಸಗಿ (ಹಂಗಾಮಿ) ಕಾಲೇಜು ಮೇಷ್ಟರಿನ ಸಂಪಾದನೆಯಷ್ಟೇ ಅಲ್ಲಿ ಬರಬಹುದೆಂದು ಅಂದಾಜು ಮಾಡಿದೆ. ಪಾರ್ಲರ್ ಕೆಲಸಕ್ಕೆ ಸೇರೋಣ ಅಂತಿದ್ದೀನಿ. ನೀವೇನೆನ್ನುತ್ತೀರಾ?

★★★



''ಹೌದು! ಕ್ಯಾಪಿಟೇಷನ್ ಕಾಲೇಜಿಗೆ ಸೇರಿದ, ನನ್ನ ಸುಪುತ್ರ!''

ರಾಜಕಾರಿಣಿಯಾಗು

ಶ್ರೀಮತಿ ಅರುಣಾ ಆರ್. ಕಾರಂತ

ಊದಿ ಮೊಯ್ಲಿಯೆ ಆಗು
ಬಾರ್ನಿ ಬಂಗಾರಪ್ಪನಾಗು
ರಾಮ ಕೃಷ್ಣನೆ ಆಗು ಜಯವ ಗಳಿಸಿ
ಏನಾದರೂ ಆಗು
ನಿನ್ನಿಚ್ಛೆಯಂತಾಗು
ಏನಾದರೂ ಸರಿಯೆ ಮೊದಲು ರಾಜಕಾರಣಿಯಾಗು
ಓದು ಬರದವನಾಗು
ಬುದ್ಧಿ ಇರದವನಾಗು
ಶುದ್ಧವಿಲ್ಲದನಾಗು ಮಲೆಯು ಮಾತಿನಲಿ
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೆ ಹಣವ ಗಳಿಸು
ಪಕ್ಷರಹಿತನೆ ಆಗು
ಪಕ್ಷಾಂತರಿಯೆ ಆಗು
ಕುಖ್ಯಾತ ಅಜ್ಞಾನಿ ಅವ್ಯವಹಾರಿಯಾಗು
ಹೇಗಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೆ ಮೊದಲು ರಾಜಕಾರಣಿಯಾಗು

ಮೊರಾರ್ಜಿ - 100

ಹಾ. ರಾ.

ನಮ್ಮನೆ ಮಡಿ ಕೋಲ್ಗೆ ನಮ್ಮಜ್ಜಿ
ಹೆಸರಿಟ್ಟಾಳ್ರಿ 'ಮುರಾರ್ಜಿ'
ನೆಟ್ಟಗೆ ನಿಂತು ಸಿಪಾಯ್ಯಾಂಗ ನಡೆಯೋರ್ಗೆಲ್ಲ
ನಾವು ಇಟ್ಟೀವ್ರಿ ಹೆಸರು ಮೊರಾರ್ಜಿ!
ಮೊರಾರ್ಜಿ ಮೊರಾರ್ಜಿ
ಒಳ್ಳೆ ಖಾರದ 'ಮಿರ್ಚಿ'!
ಕೋಟಿನ ಗುಂಡೀಗೂ ಕಲಿಸ್ತಾರ್ರಿ
ಶಿಸ್ತು - ಅಂತಾನ್ರಿ ಅವರ ಖಾಸ ದರ್ಜಿ!
ಇಂದ್ರಾಜಿ ಮುಂದೆ ಹಾಕ್ಲಿಲ್ಲ ಅರ್ಜಿ,
ನಮ್ಮ ಮೊರಾರ್ಜಿ!
ಬಂತು, ಹೋಯ್ತು ಎಮರ್ಜೆನ್ಸಿ
ಅವರಿಗಿರಲಿಲ್ಲ ಏನೂ ಅರ್ಜೆನ್ಸಿ!
ಮೊರಾರ್ಜಿ ಅಂದ್ರೆ ಕೆಲವರಿಗಲರ್ಜಿ
ಅವರ್ಗುಂಡಿಗೇಗೆ ನಾಟ್ಲಿಲ್ಲ ಬ್ಲಿಟ್ಸ್ ಭರ್ಜಿ!
ವಿಮಾನ ಕೆಳಗೆ ಬಿದ್ದಾಗ ನಡೆದೇ ಬಂದ ಮರ್ಜಿ
ನೋಡ್ತಾ ಇದ್ರೆ ತದ್ರೂಪು ಮಹಾತ್ಮಗಾಂಧೀಜಿ!
ವಜ್ರ ಹೂವಿನ ಗುಣಗಳೊಂದ್ಕಡೆ ಕೂಡುದ್ರೆ ಮರಾರ್ಜಿ
ಚೈತನ್ಯ = ಸತ್ಯ X ಶಿಸ್ತು X ಡ್ಯೂಟಿ ಅಂದ್ರೂ ಮುರಾರ್ಜಿ!
$(E = TD^2)$
ಮಹಡಿ ಮೇಲೆ ಕೂತು ಮಕ್ಕಳಾಟಾನ ನೋಡ್ತಾರ್ರಿ ಮುರಾರ್ಜಿ
ಅದ್ಕ ನಗ್ತಾ ನಗ್ತಾ ಅವರ ಪಾದಕ್ಕೆರಗಾಳ್ರೀ ನಮ್ಮ ಪರಂಜಿ!

ಶ್ರಾದ್ಧ

ಶ್ರೀನಿವಾಸ ವೈದ್ಯ (ಶೀನೂ)

ಮಾಘ ಮಾಸದ ಶುಕ್ಲಪಕ್ಷದ ದ್ವಾದಶಿ ನಮ್ಮ ತಂದೆಯವರ ಶ್ರಾದ್ಧದ ದಿನ. ಅದು ಸಾಧಾರಣ ಜನವರಿ ಫೆಬ್ರವರಿ ತಿಂಗಳಿನ್ಯಾಗ ಯಾವಾಗೋ ಬರತದ. ಆ ಸುಮಾರಕ್ಕ ನನ್ನ ಸ್ವರ್ಗಸ್ಥ ತಂದೆಯವರ ನೆನಪು ನನ್ನನ್ನು ಎಡೆಬಿಡದೆ ಕಾಡುತ್ತಿರುತ್ತದೆ.

ಹಂಗ ನೋಡಿದರ ನಮ್ಮ ತಂದೀದು ಸಾಕಷ್ಟು ವಿರೋಧಾಭಾಸಗಳಿಂದ ಕೂಡಿದ ಮರೆಯಲಾರದ ವ್ಯಕ್ತಿತ್ವ. ಇಡೀ ವರುಷನೂ ಅವರ ನೆನಪು ಬಿಟ್ಟಿರೂದುಲ್ಲ. ಆದರೂ ಮಾಘ ಮಾಸದ ಶುಕ್ಲಪಕ್ಷದ ಸುಮ-ಸುಮಾರಿಗೆ ಅವರ ಸ್ಮೃತಿ ತೀವ್ರವಾಗಿ ಇನ್ನೇನು ಮನೆಯ ಯಾವುದೋ ಒಂದು ಮೂಲೆಯಿಂದ ಅವರು ಎದ್ದು ಬಂದು ಬಿಡತಾರೇನೋ ಅನ್ನುವಷ್ಟು ಸ್ಫುಟವಾಗಿ, ತೀಕ್ಷ್ಣವಾಗಿ ಮನಸ್ಸನ್ನು ಕೆಣಕಲಿಕ್ಕೆ ಹಚ್ಚತದ.

ನಮ್ಮ ತಂದಿ ಲೋಕಮಾನ್ಯ ತಿಳಕರ ಭಕ್ತರು. ತಿಳಕರ ತತ್ವಗಳನ್ನೂ ಕಠೋರ ಶಿಸ್ತನ್ನೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಹವಣಿದವರು. ಒಂದೆರಡು ಸಲ ಜೇಲು ಕಂಡವರು. ಅಂತೆಯೇ ಅವರಿಗೆ ಈ ನಾಲ್ಕಾಣೆ ಎರಡಾಣೆಯ ಚಿಲ್ಲರೆಗಳಿಂದ ತುಂಬಿದ ವ್ಯಾವಹಾರಿಕ ಜಗತ್ತಿನಲ್ಲಿ ವ್ಯವಹರಿಲು ಬರಲೇ ಇಲ್ಲ.

ನಮ್ಮದು ನರಸಿಂಹನ ಒಕ್ಕಲು. ನಮ್ಮ ತಂದೀದು ಶ್ರೀಮದ್ಗಾಂಭಿರ್ಯದಿಂದೊಪ್ಪುವ, ತುಸು ಮಟ್ಟಿಗೆ ಉಗ್ರವೇ ಎನ್ನಬಹುದಾದ ರೂಪ. ಸಾಮಾನ್ಯಕ್ಕಿಂತ ಸ್ವಲ್ಪ ಎತ್ತರವೇ, ದಪ್ಪವೇ ಎನ್ನಬಹುದಾದ ಮೈಕಟ್ಟು. ದುಂಡು ಮುಖಕ್ಕೆ ಒಪ್ಪದ ಕೆಂಡಗಣ್ಣು. ಎತ್ತರ ಮಟ್ಟಸವಾದ ಹಣೆ. ಮುಖದ ಮೇಲೆ ಎರಡೋ ಮೂರೋ ದಿವ್ಸದ ಕಳೆ, ತಿದ್ದಿ ತಿದ್ದಿ, ತೀಡಿ ತೀಡಿ ಎರಡೂ ಕಡೆ ಚೂಪಾಗಿ ಬೆಳೆಸಿದ ಜೊಂಡು ಮೀಶೆ, ಮಶೀನ್ ಕಟ್ ತಲೆ, ಮಂಗಳಾರತಿ ಬತ್ತಿಯಷ್ಟು ಚಂಡಿಕೆ. ನಿತ್ಯ ಪೂಜೆ ಮಾಡಿಯೂ ಕೂಡ ಸಾಂಸಾರಿಕ ಸೋಲುಗಳನ್ನು ಎದುರಿಸಲಾರದ್ದಕ್ಕೋ ಏನೋ, ಮುಖದಲ್ಲಿ ಮೂಡಿದ ನಿರಂತರ ಸಿನಿಕ ಕಳೆ, ಸಾತ್ವಿಕ ಸಂತಾಪದ ಕ್ರುದ್ಧ ಭಾವ.

ಅವರು ಸದೋದೀತ ಎರಡೂ ಕೈಯಿಂದ ಮೀಶೆ ತಿರುಚಿ ತಿರುಚಿ, ಒಂದೊಂದು ತುದಿಗೂ ಒಂದೊಂದು ಲಿಂಬೆಹಣ್ಣು ಚುಚ್ಚಲಿಕ್ಕೆ ಬರುವಂತೆ ಚೂಪಾದ ಮೀಸೆ ಬೆಳೆಸಿದ್ದರು, ಕ್ರಾಂತಿಕಾರಿ ಚಂದ್ರಶೇಖರ ಆಝಾದನಂತೆ.

ಯಾವಾಗಲೂ ಎಡಗೈಯಿಂದ ಬಲಗಡೆ ಮೀಶೆ, ಬಲಗೈಯಿಂದ ಎಡಗಡೆ ಮೀಶೆ ನೇವರಿಸುತ್ತಿದ್ದರು. ಈ ಕೈಯಿಂದ ಆ ಮೀಶೆ, ಆ ಕೈಯಿಂದ ಈ ಮೀಶೆ! ಯಾವದಾದರೊಂದು ಕೈ ಖಾಲಿ ಇಲ್ಲದಿದ್ದರೆ ನವೆ ಅನುಭವಿಸುತ್ತಾ ಹಾಗೇ ಇರುತ್ತಿದ್ದರೇ ಹೊರತು, ಅದೇ ಕೈಯಿಂದ ಅದೇ ಮೀಶೆಯನ್ನು ಎಂದೂ ನೇವರಿಸುತ್ತಿದ್ದಿಲ್ಲ. ತತ್ವನಿಷ್ಠೆ ಅಂದರೆ ಅದು!

ಆ ಕಾಲದ ತಂದೆಯರದ್ದೊಂದು ವಿಚಿತ್ರನೂ ಇತ್ತು. ಮಕ್ಕಳ ಸಂಗ್ತೀ ನೇರವಾಗಿ, ಡಾಯಿರೆಕ್ಟ ಆಗಿ, one to one ಆಗಿ Face to face ಯೆಂದೂ ಮಾತಾಡತಿದ್ದಿಲ್ಲ. ಏನೇ ಇದ್ದರೂ ಅದು ತಮ್ಮ ಶ್ರೀಮತಿಯ ಮುಖಾಂತರ ಅಂದರೆ ನಮ್ಮ ತಾಯಿಯವರ

ಮುಖಾಂತರ. ತಿಳಕರು ತಮ್ಮ ಮಕ್ಕಳನ್ನ ಹೀಂಗ ಬೆಳೆಸಿದರು ಅಂತ ಕೇಳಿದ್ದೆ. ಬಹುಶಃ ಪ್ರೀತಿ, ಅಂತಃಕರಣ, ಮಮತೆ, ಸ್ನೇಹ, ವಾತ್ಸಲ್ಯ ಇಂತಹ ದುರ್ಬಲ ಭಾವನೆಗಳಿಗೆ ಆಸ್ಪದ ಕೊಟ್ಟರೆ ಮಕ್ಕಳು ಎಲ್ಲಿ ಕೆಟ್ಟು ಹೋದಾರೋ ಎಂಬ ಭಯ.

ಅಷ್ಟs ಅಲ್ಲ ಪರೋಕ್ಷವಾಗಿ, Indirect ಆಗಿ ಸಹಿತ ಏನೆ ಮಾತಾಡಿದರೂ ಅದು ಕೂಡ ವೈಭವೋಪೇರಿತವಾದ, ತೀಕ್ಷ್ಣವಾದ, ಹರಿತವಾದ, ಉಗ್ರವಾದ ವ್ಯಂಗದಿಂದ ಕೂಡಿರುತ್ತಿತ್ತು. ಅಬ್ಬಬ್ಬ! ಅಂತಹ ರುದ್ರ ಗಂಭೀರ ಶ್ರೀಮಂತ ವ್ಯಂಗ್ಯವನ್ನು ನಾನು ಆಮೇಲೆ ಕೇಳಲೇ ಇಲ್ಲ. ಅನುಭವಿಸಲೇ ಇಲ್ಲ.

ಈ ರೀತಿ ನಮ್ಮ ಹಿರಿಯರ, ನಿಷ್ಠುರ - ಕಠೋರ - ದರ್ಪದ ಆಡಳಿತದಲ್ಲಿ ನಾನೂ ನನ್ನ ಅಕ್ಕ ಸರೋಜಕ್ಕ ಇಬ್ಬರೂ ಬೆಳೆದೆವು. ಸರೋಜಕ್ಕನ ಜತೆಗೆ ಮಾತ್ರ ಆಗಾಗ ಸ್ವಲ್ಪ ಮಮತೆಯಿಂದ ಪ್ರೀತಿಯಿಂದ ಕಾಲ ಕಳೆಯುತ್ತಿದ್ದರು ನಮ್ಮ ತಂದೆ. ಬಹುಶಃ ಅವಳು ಕುಲಕ್ಕೆ ಹೊರಗಾಗಬೇಕಾದ ಹೆಣ್ಣು ಎಂತಲೋ ಏನೋ? ನನ್ನ ಜತೆ ಮಾತ್ರ ಯಾವಾಗಲೂ ಎದುರಾಳಿಯಂತೆ. ಅದೂ ಆಟದ ಎದುರಾಳಿಯಲ್ಲ. ಕಾಳಗದಲ್ಲಿಯ ಎದುರಾಳಿಯಂತೆ.

ಒಂದು ಸಲ, ಬಹುಶಃ ನಾನು ಹತ್ತು ಹನ್ನೆರಡು ವರುಷದವನಿದ್ದಾಗ ''ಅವ್ವಾ ದಿನಾ ಜೋಳದ ಭಕ್ರಿ ತಿಂದು ತಿಂದು ಬ್ಯಾಸರ ಬಂದsದ. ಇವತ್ತೊಂದು ದಿವ್ಸ ಚಪಾತಿ ಮಾಡವ್ವ'' ಅಂದೆ. ಅವತ್ತೆs ಮನ್ಯಾಗ ಗೋದಿ ಇದ್ದಿದ್ದಿಲ್ಲ ಅಂತ ಕಾಣಸ್ತದ. ನಮ್ಮ ಜಿವ್ಹಾ ಚಾಪಲ್ಯದ ಸುದ್ದಿ ನಮ್ಮ ತೀರ್ಥರೂಪರ ಕಿವಿಗೆ ಬಿತ್ತು. ತೊಗೋ .... ಮಂತ್ರ ಪುಷ್ಪ ಸುರೂನ ಆತು.

''ನಾನು ಒಬ್ಬ ನತದೃಷ್ಟ, ದಟ್ಟ ದರಿದ್ರ ಬಡಕಾರಕೂನ. ಅಧಮಾಧಮ. ನನಗ ಬರೋ ಕೂಲೀ ದುಡ್ಡಿನೊಳಗ ಗೋದಿ ತರಲಿಕ್ಕೆ ಆಗೂದುಲ್ಲ ಅಂತ ಹೇಳ್ರಿ. ನಾಳೆ ತಮ್ಮ ಚಿರಂಜೀವಿರೇನು ದಿವಾಣ ಸಾಹೇಬರು ಆಗ್ತಾರಲ್ಲ ..... ಆದ ಮ್ಯಾಲ ದಿನಾಲೂ ಹೋಳಿಗೆ ..... ತುಪ್ಪ ..... ಕಡಬೂ ..... ಪಾಯಸ ..... ಮಂಡಿಗೆ ಇತ್ಯಾದಿಯಲ್ಲಾ ಪಂಚಭಕ್ಷ್ಯ ಪರಮಾನ್ನ ತಿಂದು ತುಪ್ಪದಾಗ ಕೈತೊಳಕೊಳ್ಳಲಿಕ್ಕೆ ಹೇಳ್ರಿ ..... ತುಪ್ಪದಾಗ ಕೈತೊಳಕೊಂಡು ತಲೀ ಬೋಳಿಸಿಕೊಳ್ಳಲಿಕ್ಕೆ ಹೇಳ್ರಿ''

ಈ ತಲೆ ಬೋಳಿಸಿಕೊಳ್ಳುವ ಮಾತು ನಮ್ಮ ನಿತ್ಯ ಜೀವನದ ಪ್ರತಿಕ್ಷಣದ ಒಂದು ಅವಿಭಾಜ್ಯ ಅಂಗವೇ ಆಗಿತ್ತು. ಅದು common factor, bracketದ ಹೊರಗ ಇದ್ದಂಗ. ಉಳಿದದ್ದೆಲ್ಲ bracketದ ಒಳಗ. ಉದಾಹರಣೆಗೆ,

''ಕುಮಾರ ಕಂಠೀರವ ಅವರಿಗೆ ಸ್ನಾನಾ ಮಾಡಿ ತಲಿ ಬೋಳಿಸಿಕೊಳ್ಳಲಿಕ್ಕೆ ಹೇಳ್ರಿ''

''ಯುವರಾಜರು ಊಟಾ ಮುಗಿಸಿ ತಲೀಬೋಳಿಸಿಗೋತಾರೇನು ಕೇಳ್ರಿ''

''ಪಡಸಾಲ್ಯಾಗಿಂದು ಆ ದರಿದ್ರ ಮಾರೀ ಸಾಯಿಕಲ್ ಹೊರಗಿಟ್ಟು ತಲೀ ಬೋಳಿಸಿಕೋ ಅನ್ನರಿ ನಿಮ್ಮ ಚಿರಂಜೀವರಿಗೆ''.

'' ಇವತ್ತ ಗುರುವಾರsದು ರಾಯರವಾರ. ನಿಮ್ಮ ಮಿರ್ಜಾ ಸಾಹೇಬರಿಗೆ ಸ್ನಾನಾ ಮುಗಿಸಿ ಒಂದಿಷ್ಟು ಗುರುಸ್ತೋತ್ರ ಅಂದು ತಲೀ ಬೋಳಿಸಿಕೊಳ್ಳಿಕ್ಕೆ ಹೇಳ್ರಿ''

''ನಿಮ್ಮ ಪುತ್ರ ರತ್ನರಿಗೆ ಸ್ವಲ್ಪ ನಾರಾಯಣಾಚಾರ ಮನೀ ತನಕ ಹೋಗಿ ವೈಷ್ಣವರ ಏಕಾದಶಿ

ಯಂದ... ಅಂತ ಕೇಳಿಕೊಂಡು ಬಂದು ತಲೀ ಬೋಳಿಸಿಕೊಳ್ಳಿಕ್ಕೆ ಹೇಳ್ರಿ''

ಈ ರೀತಿ ಅಸ್ಮಾದಿಕರು ಯಾವದೇ ಕಾರ್ಯವನ್ನು ಮಾಡಿದರೂ ಅದು ನಮ್ಮ ತಲೆ ಬೋಳಿಸಿಕೊಳ್ಳುವದರಲ್ಲಿ ಪರ್ಯವಸಾನವಾಗುತ್ತಿತ್ತು.

ನಮ್ಮ ತೀರ್ಥರೂಪರಿಗೆ ನನ್ನ ಕೇಶರಾಶಿಯ ಮೇಲಿದ್ದ ಈ ಅಪೂರ್ವ ಪ್ರೀತಿ ವಾತ್ಸಲಗಳನ್ನು ಕಂಡು ನಾವು ಎಳೆಯರು ಅವರಿಗೆ ''ಮುಂಡನ ಮಿಶ್ರರು'' ಅಂತ ನಾಮಕರಣ ಮಾಡಿದ್ದೆವು.

''ಮುಂಡನ ಮಿಶ್ರರು'' ಗ್ರಾಮೋದ್ಯೋಗದ ಕುಸುಬಿ ಎಣ್ಣೆಯ ಕೇಂದ್ರದಾಗ ಅಕೌಂಟ್ಸ ಅಸಿಸ್ಟಂಟ ಅಂತ ಕೆಲಸ ಮಾಡತಿದ್ದರು. ಸ್ವಾತಂತ್ರ್ಯ ಸಿಕ್ಕ ಮೇಲೆ ಟಿಳಕರ ಅನುಯಾಯಿಗಳು, ಗಾಂಧೀ ಭಕ್ತರು, ಇಂತಹ ಕೆಲವು ಕೈಲಾಗದ ಅಪಹಾತ ದೇಶಭಕ್ತರಿಗೆ ಜೀವನೋಪಾಯಕ್ಕೆ ಇರಲೀಂತ ಸರಕಾರದವರು ''ಖಾದೀ ಗ್ರಾಮೋದ್ಯೋಗ'', ''ನೀರಾ ಕೇಂದ್ರ'' ''ಅಂಬರ ಚರಖಾ''ದಂತಹ ಕೆಲಕೆಲವು ಅಳುಬುರುಕ ರಣಹೇಡಿ ಡಿಪಾರ್ಟಮೆಂಟಗಳನ್ನು ಸೃಷ್ಟಿದ್ದರು. ಉಳಿದ ಘಟ್ಟುಳ್ಳ ದೇಶಭಕ್ತರೆಲ್ಲ ಮಂತ್ರಿಗಳೂ ಉಪಮಂತ್ರಿಗಳೂ ಆಗಿ ದೇಶವನ್ನು ಬಾಚಿಕೊಳ್ಳಲಿಕ್ಕೆ ಸುರು ಮಾಡಿದ್ದರು ಆಗಲೇ!

ನಮ್ಮ ತಂದೆಯವರೇನೋ ಗ್ರಾಮೋದ್ಯೋಗದಲ್ಲಿ, ಅತ್ಯಂತ ನಿಷ್ಠೆಯಿಂದ, ಶ್ರದ್ಧಾಭಕ್ತಿಗಳಿಂದ

ಗರಗದ ರೈತ ಗದಿಗೆಪ್ಪನಿಗೆ ಕುಶಿಬಿ ಬಾಬ್ತು	ರೂ. 12.	ಆ. 6.	ಪೈ. 4
ಚಕ್ಕಡಿ ಬಾಡಿಗೆ	ರೂ. 0.	ಆ. 8.	ಪೈ. 5
ಹಮಾಲಿ	ರೂ. 0.	ಆ. 6.	ಪೈ. 1

ಹಿಂತಾ ಹುಚ್ಚ ಹುಚ್ಚ ಲೆಕ್ಕ ಬರೀತಿದ್ದರು. ಆದರೆ ಅವರ ಮಗನಾದ ನನಗ ಮಾತ್ರ ಲೆಕ್ಕ ಅಂದ್ರ ಅಷ್ಟಕ್ಕಷ್ಟೆ.

ಒಮ್ಮೆ - ಬಹುಶಃ ನಮ್ಮ ಆರನೇ ಇಯತ್ತೆಯ ಪರೀಕ್ಷೆಯಲ್ಲಿ ಗಣಿತ ಪೇಪರಿನಲ್ಲಿ ನಮಗೆ ಗುಂಡು ಗುಂಡಾದ ಒಂದು ಸೊನ್ನೆ ಪ್ರಾಪ್ತವಾಗಿತ್ತು. ಅಬ್ಬ! ಮುಂಡನ ಮಿಶ್ರರ ಅಂದಿನ ಆ ಆರ್ಭಟ, ಕೋಪಾಟೋಪ, ಹಿರಣ್ಯಕಶಿಪುನಂತಹ ಉಗ್ರರೂಪ, ಒದರ್ಯಾಟ, ಚೀರ್ಯಾಟ ಎಂದಿಗೂ ಮರೆಯಲಿಕ್ಕಾಗದು. ಏನು ಅಂದಿನವರೆಗೆ ಜಗತ್ತಿನಲ್ಲಿ ಯಾರಿಗೂ ಗಣಿತ ಪೇಪರಿಗೆ ಸೊನ್ನೆ ಬಿದ್ದಿದ್ದೆ ಇಲ್ಲವೇ? ಶೂನ್ಯ ಸಂಪಾದನೆಯ ಈ ಪ್ರಥಮ ಶ್ರೇಯಸ್ಸು ನಮಗೇ ಸಲ್ಲಬೇಕೇನು? ಇದೆಲ್ಲ ತಿಳೀಬೇಕಲ್ಲ! ಇಲ್ಲ, ಬರೇ ಥೈ ಥತಥೈ ಅಂತ ಕುಣದ್ಯು ಕುಣದ್ರು ಕುಣದ್ಯು ಕುಣದರು ಇಡೀ ದಿವಸ.

ಅವತ್ತ ನಾವು ಅಡಿಗೀ ಮನಿಯೊಳಗ ದೊಡ್ಡ ಖಂಬದ ಹಿಂದೆ ಅಡಗಿ ಕುಳಿತಿದ್ದೆವು. ಪಕ್ಕದಲ್ಲಿ ನಮ್ಮ ಮಾತೋಶ್ರೀಯವರು ಭಕ್ರೀ ಬಡಕೋತ ಕೂತಿದ್ದರು. ಅದೇ ಸಮಯಕ್ಕೆ ರಕ್ಕಸನಾದ ಆ ಹಿರಣ್ಯಕಶಿಪು ಕೋಪೋದ್ರಿಕ್ತನಾಗಿ ಖಡ್ಗವನ್ನು ಝಳಪಿಸುತ್ತ ಧಾವಿಸಿ ಬಂದು ನಮ್ಮ ಬಡತಾಯಿಗೆ

''ನಿಮ್ಮ ಚಿರಂಜೀವರಿಗೆ ..... ನಿಮ್ಮ ವಂಶದ ಕುಡಿಗೆ ಯಷ್ಟ ಮಾರ್ಕ್ಸ್ ಬಿದ್ದಾವ ನೋಡಿರೇನು? ..... ನಮ್ಮ ಸಮಸ್ತ ಮನೆತನದ ಮರ್ಯಾದಿ ಈ ಕಡೆಯಿಂದ ಆ ಕಡೆ ಹಾಯ್ದು ಹೋಗೋ ಅಷ್ಟು ಬಿದ್ದಾವ .... ಇಷ್ಟ ದಿವಸ ಈ ನಿಮ್ಮ ವಂಶೋದ್ಧಾರಕರು .... ಈ ನಿಮ್ಮ ಕುಲದೀಪಕರು .... ಈ ದೇವಾಂಶ ಸಂಭೂತರು ತಮ್ಮ ತಲೀ ಅಷ್ಟS ಬೋಳಿಸಿಕೋತಿದ್ದರು ..... ಇವತ್ತ ತಮ್ಮದಷ್ಟS ಅಲ್ಲದS ನಮ್ಮದೂ ..... ನಮ್ಮ ಪಿತೃಗಳದೂ .... ಪಿತಾಮಹ ಪ್ರಪಿತಾಮಹಗಳದೂ ..... ಎಲ್ಲಾರದೂ ತಲೀ ಬೋಳಿಸಿ ಒಗದು ಬಿಟ್ಟಾರ .... ಇನ್ನೊಂದು ಸ್ವಲ್ಪ ದಿವ್ಸ ಹೀಂಗ ಬಿಟ್ಟರ ಅವರನ್ನ ಹೆತ್ತಹೊತ್ತ ತಪ್ಪಿಗೆ ನಿಮ್ಮದನ್ನೂ ಮುಗಿಸಿ ಬಿಡತಾರ ...... ಒಂದು ಸಣ್ಣ ಮಣೀ ತಂದು ಅದರ ಮ್ಯಾಲ ಕೂಡಂತಾರ ನಿಮಗ ..... ಯಲ್ಲಿದ್ದಾರ..... ಯಲ್ಲಿದ್ದಾರ? .....ನಿಮ್ಮ ಪುತ್ರ ರತ್ನರು ಯಲ್ಲಿದ್ದಾರ ....? ಈ ಮನೆತನದ ಮೇಧಾವಿ ಗಣಿತಜ್ಞ ಶ್ರೀನಿವಾಸನ್ ರಾಮಾನುಜಂ ರವರು ಯಲ್ಲಿದ್ದಾರ ....? ದೈವೀ ಕಳೆಯಿಂದ ತುಂಬು ತುಳುಕುತ್ತಿರುವ ಅವರ ಆ ದರಿದ್ರ ವದನಾರವಿಂದದ ದರ್ಶನ ಮಾಡಿಕೊಂಡು ಹಾಳಾಗಿ ಹೋಗಬೇಕಂತೇನಿ .... ಯಲ್ಲಿದ್ದಾರ ..... ಯಲ್ಲಿದ್ದಾರ ....?''

..... ಈ ರೀತಿ ಒದರ್ಯಾಡಿಕೋತ ...... ಚೀರ್ಯಾಡಿಕೋತ.......ಹಣಿ ಹಣಿ ಬಡಕೋತ, ''ಭಕ್ತಪ್ರಲ್ಹಾದ'' ನಾಟಕದಾಗಿನ ಹಿರಣ್ಯಕಶಿಪುನ್ಹಂಗ ರಂಗದ ಇನ್ನೊಂದು ಭಾಗಕ್ಕೆ ನಿಷ್ಕ್ರಮಿಸಿದರು. ಇಷ್ಟೆಲ್ಲ ಯಾಕ ಅಂದ್ರ ಅದೊಂದು ಸೊಟ್ಟ ಮಾರಿ ಗಣಿತದಾಗ ಜೀರೋ ಬಿದ್ದದ್ದಕ್ಕ. ಹಂಗ ನೋಡಿದರ ಅದೊಂದೇ ಸಲ ನನಗ ಜೀರೋ ಬಿದ್ದದ್ದು, ಅದಕ್ಕೂ ಮೊದಲೆಲ್ಲ ಭೊಲೋತನ್ಯಾಗ ಏಳು .... ಎಂಟು ..... ಮಾರ್ಕ ಬೀಳತಿದ್ದವು.

ಏನೇ ಇರಲಿ. ಅವತ್ತಿನ ನಮ್ಮ ಪಿತಾಶ್ರೀಯವರ ಹಿರಣ್ಯಕಶಿಪುನ ಆರ್ಭಟಕ್ಕ ಖಂಬದ ಹಿಂದ ನಾವೂ, ಖಂಬದ ಒಳಗೆ ಆ ಸಾಕ್ಷಾತ್ ನರಸಿಂಹ ಸ್ವಾಮಿಯೂ ಗಡ ಗಡ ಗಡ ಗಡ ನಡುಗುತ್ತ ಕುಳಿತದ್ದು ಸುಳ್ಳಲ್ಲ.

ಅವತ್ತ ಸ್ವಲ್ಪ ಹೊತ್ತಾದ ಮ್ಯಾಲ ಯಂದೂ ನನಗ ''ಬ್ರ'' ಅನ್ನದ ನಮ್ಮ ಅವ್ವ ''ಶೀನಪ್ಪSS .....ನೀನರS ಹಿಂಗ್ಯಾಕ ಮಾಡತೀಯೋ? ..... ನಿನ್ನ ಸಲುವಾಗಿ ಎಷ್ಟು ಕೆಟ್ಟ ಕೆಟ್ಟ ವಾಗತ್ಯದ ಮಾತೆಲ್ಲ ಕೇಳಬೇಕಾಗತದಲ್ಲೋ ನನಗSS ... ಸ್ವಲ್ಪ ಭೋಲೋತ್ನ್ಯಾಗಿ ಓದಿಕೋಬಾರದೇನೋ ......'' ಎನ್ನುತ್ತಲೇ ನಾವೂ ತಂದೆಯಷ್ಟೇ ಕ್ರುದ್ಧರಾಗಿ ''ಸುಮ್ಮನಿರವ್ವಾ ನಿನಗೇನು ತಿಳೀತದ ..... ಈ ಸಮಸ್ತ ಇಳಾ ತಳದೊಳಗ ..... ಭೂ ಮಂಡಲದಲ್ಲಿ ..... ಧರಿತ್ರಿಯ ಮ್ಯಾಲ ...... Under the sun on the earth ..... ಆ ಅನಂತಕೋಟಿ ಬ್ರಹ್ಮಾಂಡ ನಾಯಕನು ಸೃಷ್ಟಿಸಿದ ಈ ಮಾನವ ಪ್ರಪಂಚದಲ್ಲಿ ನನಗೊಬ್ಬನಿಗೇ ಏನು ಈ ಶೂನ್ಯ ಸಂಪಾದನೆಯಾದದ್ದು'' ಎಂದು ಆಕ್ರೋಶಿಸಿದ್ದವು.

ಅಂತೂ ಪಿತಾ ಪುತ್ರರ ಭಾಷಾಡಂಬರದ ಈ ಮಸ್ತಿಯಲ್ಲಿ, ವಾಗ್ವೈಖರಿಯ ಈ ಕುಸ್ತಿಯಲ್ಲಿ ಪಾಪ ನಮ್ಮ ತಾಯಿ ನುಗ್ಗ ನುಗ್ಗಾಗಿ ಹೋಗಿದ್ದರು.

ನಮ್ಮ ತಂದೆಯಿಂದ ನನಗೇನು ಬಳುವಳಿಯಾಗಿ ಬಂತೋ ಗೊತ್ತಿಲ್ಲ. ಆದರ ಈ ಪದಲಾಲಿತ್ಯದ ಮೋಹ, ಶಬ್ದಾಡಂಬರದ ಈ ಗುಡಗುಡಾಟ ಮಾತ್ರ ಅವರದ್ದೇ.

ತಮ್ಮದೊಂದೇ ರೌದ್ರ, ಕ್ರೌರ್ಯ ಸಾಲದೇನೋ ಎಂಬಂತೆ, ನಮ್ಮ ತಂದೆ ಆಗೀಗ ಶಾಲೆಗೆ ಬಂದು ಮಾಸ್ತರಿಗೆ ಸಹಿತ "ನನ್ನ ಮಗಾ ಅಂತ ಅನಮಾನ ಮಾಡಬ್ಯಾಡ್ರೀ. ತಪ್ಪ ಮಾಡಿದಾ ಅಂದ್ರ ಇಕ್ಕರಿಸಿರಿ ..... ಏನರs ಮಾಡಿದಾ ಅಂದ್ರ ಇಕ್ಕರಿಸಿರಿ ....." ಅಂತ ಬಜಾಯಿಸಿ ಹೋಗಿದ್ದರು. ಕೇಳಬೇಕ? ಮೊದಲs ಮಂಗ್ಯಾನಂತಹ ಮಾಸ್ತರಗೋಳ ಅವರು ..... ಮುಂದ ಮುಂದ ಕೇವಲ ಇವನ ಮಗ ..... ಈ ತಿರಸಪ್ಪನ ಮಗ ಅಂತsನs ತಪ್ಪ ಮಾಡಲಿ ಬಿಡಲಿ ಇಕ್ಕರಸಲಿಕ್ಕೆ ಹತ್ತಿದ್ದರು.

ಯಾರಿಗೆ ಹೇಳೋದದ? ಹಿಂಗ ಅನುಭವಿಸಿದಿವಿ. ಆವಾಗಿನ ಕಾಲಕ್ಕ ಈಗಿನ ಹಂಗ "ಪ್ರಾಣಿ ದಯಾ" ಸಂಘ ಸಂಸ್ಥೆಗಳೂ ಇರಲಿಲ್ಲ.

ಒಮ್ಮೊಮ್ಮೆ ನಮ್ಮ ತಂದಿನ್ನ ನೋಡಿ ನನಗ ಕೆಟ್ಟ ಅನ್ನಿಸತಿತ್ತು ಪಾಪ! ಅವರು ತಾವು ನೆಚ್ಚಿದ ಆದರ್ಶಗಳಿಗೆ, ನಂಬಿದ ತತ್ವಗಳಿಗೆ ನಿಷ್ಠರಾಗಿ ಬದುಕಲಿಕ್ಕೆ ಒದ್ದ್ಯಾಡತಿದ್ದರು. ಆದರೆ ಸುಳ್ಳು, ಮೋಸ, ವಂಚನೆಯಿಂದ ತುಂಬಿದ ಈ ನಿತ್ಯದ ಬದುಕಿನ ಜತೆಗೆ ಅವರಿಗೆ ಹೊಂದಾಣಿಕೆ ಮಾಡಿಕೊಳ್ಳಿಕ್ಕ ಬರಲೇ ಇಲ್ಲ. ಈ ಸುಮಾರಿಗೇ ಅವರ ಅಣ್ಣ ತಮ್ಮಂದಿರು - ನಮ್ಮ ಕಕ್ಕಂದಿರು ಸಹಿತ ಕೈಕೊಟ್ಟರು. ಅತ್ಯಂತ ಸಣ್ಣತನ ಮಾಡಿ ಧೂರ್ತತನ ಮಾಡಿ ಅವರ ಆಸ್ತಿ ಪಾಸ್ತಿಯಲ್ಲ ಯಗರಿಸಿ ಬಿಟ್ಟರು. ಆಸ್ತಿ ಪಾಸ್ತಿ ಕಳಕೊಂಡದ್ದಕ್ಕ ಅವರಿಗೆ ಕೆಟ್ಟ ಅನಸಲಿಲ್ಲ. ಆದರ ಮನುಷ್ಯರೆಂಬುವರ, ವಿಶೇಷತಃ ತನ್ನವರೆಂಬುವವರ ಸಣ್ಣತನ ನೋಡಿ, ಕ್ಷುದ್ರತನ ನೋಡಿ ಅವರು ಘಾಬರ್‍ಯಾಗಿ ಬಿಟ್ಟಿದ್ದರು. ಒಮ್ಮೊಮ್ಮೆ ತಾವೊಬ್ಬರೇ ಇದ್ದಾಗ "ಪಂಚ ಮಹಾಭೂತ ಯಲ್ಲಾ ಸುಳ್ಳು, ಮನಿಶ್ಯಾನ್ನ ಬರೇ ಮಣ್ಣಿನಿಂದ ಮಾಡ್ಯಾರ.. ಬರೇ ಮಣ್ಣು ... ಆಕಾಶ... ಕರುಣೆಯ ಆಪ್ ಯಲ್ಲಾ ಎಲ್ಲ್ಯದ... ಬರೇ ಮಣ್ಣು - ಮಣ್ಣು.... ಪಂಚ ಮಹಾಭೂತಗಳನ್ನುಳಿದು ಒಂದು ಅಕರಾಳ ವಿಕರಾಳ ಆರನೇ ಭೂತ ಅಗ್ನ್ಯಾನ ಮನಶಾ ಆರನೇ ಭೂತ" ಎಂದು ತಮ್ಮಷ್ಟಕ್ಕೇ ತಾವೇ ಒಟಗುಡುತ್ತಿದ್ದಾರು. ಮುಗ್ಧ ಹೆಂಡತಿ, ಅಬೋಧ ಮಕ್ಕಳು ಹಿಂಗಾಗಿ ಅವರ ಭಾವನಾ ಪ್ರಪಂಚದಾಗ ಯಾರ ಜತೆಗೂ ಹಂಚಿಕೊಳ್ಳಲಾಗದ ಒಂದು ಬೃಹತ್ ಶೂನ್ಯತೆ ಆವರಿಸ ತೊಡಗಿತ್ತು. ಒಂದ ತರಹದ ಪರದೇಶಿತನ ಅವರ ಮುಖದ ಮ್ಯಾಲ ಹೊಡೀತಿತ್ತು. ಅಂತರಂಗದ ಆ ಅವ್ಯಕ್ತ ಭೀತಿಗೆ, ಬೆಂಬಿಡದ ಪರದೇಶಿತನದ ಭಾವನೆಗೆ ಬೇಸತ್ತು, ಮೌಲ್ಯ ರಹಿತ ಸಮಾಜದಲ್ಲಿ ಬದುಕಲಿಕ್ಕಾಗದೇ, ಕೃದ್ಧರಾಗಿ, ಅವರು ಇಡೀ ವಿಶ್ವದ ತಲೆ ಬೋಳಿಸಲಿಕ್ಕೆ ಹೊರಟಂತಿತ್ತು. ಒಂದು ದೃಷ್ಟಿಯಿಂದ ಅವರೊಬ್ಬAngry old man!

ಹಿಂದಿನ ಕಾಲದ ರಾಜಮನೆತನಗಳಿಗೆಲ್ಲ ಒಂದೊಂದು ಲಾಂಛನ, ಧ್ವಜ ಇರುತ್ತಿತ್ತಂತೆ. ಹುಲಿಯನ್ನು ಹೊಯ್ಯುತ್ತಿದ್ದ ಹೊಯ್ಸಳ, ಮಹಾಭಾರತದ ಮಹಾರಥಿಗಳಾದ ಕಪಿಧ್ವಜ, ಉರಗಪತಾಕ, ಗಂಡಭೇರುಂಡದ ಮೈಸೂರರಸರು ಹೀಗೆ ಒಂದೊಂದು ವಂಶಕ್ಕೂ ಒಂದೊಂದು ಪತಾಕೆ, ಒಂದೊಂದು ಚಿಹ್ನೆ. ಒಂದು ವೇಳೆ ನಮ್ಮದೇನಾದರೂ ಅಂತಾಹ ರಾಜ ಮನೆತನವಾಗಿದ್ದರೆ, ನಮ್ಮ ಚಿಹ್ನೆಯಾಗಿ ಒಂದು ಉಗ್ರಮುಖದ ಮುಂಡ ಮೋಚಿದ ರುಂಡ ಮಾತ್ರ ಇರುತ್ತಿತ್ತು. ಮತ್ತೂ ನಾವು "ಹೊಯ್ಸಳ"ರಂತೆ "ಬೋಳ್ತಲೆ"ಯವರೆಂದು ಪ್ರಸಿದ್ಧರಾಗಿರುತ್ತಿದ್ದೆವು.

ವೀರಾಧಿ ವೀರರಾದ ನಮ್ಮ ವಂಶದ ಹಿರಿಯರು ಕದಂಬರ ಜತೆಗೋ ಹೊಯ್ಸಳರ

ಜತೆಗೂ ಘನ ಘೋರ ಕಾಳಗದಲ್ಲಿ ತೊಡಗಿದ್ದಾಗ, ನಮ್ಮ ಸೇನಾ ತುಕಡಿಗಳು ನಮ್ಮ ವಂಶದ ''ಬೋಳ್ತಲ'' ಪತಾಕೆ ಹಿಡಿದು, ''ಹೊಯ್ಸಳ ಮುರದಾಬಾದ'' ''ಬೋಳ್ತಲ ಜಿಂದಾಬಾದ'', ''ಬೋಳ್ತಲೆ''ಯವರಿಗೆ ಜಯವಾಗಲಿ ಎಂದು ವೀರಾವೇಶದ ಘೋಷಣೆಗಳನ್ನು ಕೂಗುತ್ತ ಸಮರಾಂಗಣದಲ್ಲಿ ಶತ್ರು ಸೈನಿಕರನ್ನು ಬೆನ್ನಟ್ಟಿ ಹಿಡಿ ಹಿಡಿದು ಅವರ ತಲೆ ಬೋಳಿಸುತ್ತಿದ್ದರೋ ಏನೋ.

ನಮ್ಮ ತಂದೆಯವರು ಯಾವಾಗಲೂ ಸಿಡಿಮಿಡಿ ಸ್ವಭಾವದವರು, ತಿರಸಷ್ಟರು ಇದ್ದರು ನಿಜ. ಆದರೆ ಅವರ ಮನದಲ್ಲಿ ಮಮತೆಯ, ವಾತ್ಸಲ್ಯದ ಸೆಲೆ ಬತ್ತಿ ಹೋಗಿತ್ತಂತಲ್ಲ. ಆದರೆ ಅವರ ಮಮತೆ, ವಾತ್ಸಲ್ಯಗಳು ಕೂಡ ಅತ್ಯುಗ್ರ ರೂಪದಲ್ಲಿಯೇ ಪ್ರಕಟವಾಗುತ್ತಿದ್ದವು.

ಒಮ್ಮೆ ನಾನು ಶಾಲೆಯಲ್ಲಿ ಯಾವದೋ ಆಟದಲ್ಲಿ ಬಿದ್ದು ಕೈಮುರಿದುಕೊಂಡು ಬ್ಯಾಂಡೇಜ ಕಟ್ಟಿಕೊಂಡು ಮನೆಗೆ ಬಂದು ನರಳುತ್ತ ಮಲಗಿದ್ದೆ. ಸುದ್ದಿ ತಿಳಿದು ಓಡೋಡಿ ಬಂದ ನಮ್ಮ ತಂದೆ ನನ್ನ ಹಾಸಿಗೆಗೆ ಧಾವಿಸಿ ''ನೀ ಅಷ್ಟು ಸುಖದಿಂದ ಇದ್ದದ್ದನ್ನು ನೋಡಿ, ತಲೀ ಬೋಳಿಸಿಕೊಂಡು ಸಾಯಬೇಕಂತೇನಲ್ಲೊ ....'' ಎಂದು ಹಣೆ ಹಣೆ ಚಚ್ಚಿಕೊಂಡಿದ್ದರು ಆತಂಕದಲ್ಲಿ. ಅಂತಹ ನೋವಿನಲ್ಲೂ ಸಹ, ಅಂದು ಅವರು ನನ್ನನ್ನು ಏಕವಚನದಲ್ಲಿ ಸಂಬೋಧಿಸಿದ್ದನ್ನು ಕಂಡು ಒಂದು ವಿಚಿತ್ರ ತೃಪ್ತಿಯನ್ನು ಅನುಭವಿಸಿದ್ದೆ.

ಅಂತೂ ಶಾಲೆಯ ಓದಿನಲ್ಲಿ, ಬಾಲ್ಯದ ಆಟ ಪಾಟಗಳಲ್ಲಿ ಸರೋಜಕ್ಕನ ಜತೆ ಜಗಳಾಟದಲ್ಲಿ ದಿನ ಕಳೆದದ್ದೇ ತಿಳಿಯಲಿಲ್ಲ.

ಒಂದು ದಿನ ಇದ್ದಕ್ಕಿದ್ದಂತೆ ದೊಡ್ಡವನಾಗಿ graduation ಮುಗಿಸಿ ಮುಂಬಯಿಗೆ ಹೊರಟು ನಿಂತು ಬಿಟ್ಟಿದ್ದೆ. ಆಗಿನ ದಿನದಾಗ ಸಾಲೀ ಕಾಲೇಜಿನ ಓದು ಮುಗಿಯೂತಲೆ ಯಲ್ಲಾರೂ ಬುದು ಬುದು ಬುದು ಬುದು ಅಂತ ಮುಂಬಯಿಗೆ ಹೋಗಿ ಬಿಡತಿದ್ದರು. ಹುಟ್ಟಿಸಿದ ದೇವರು ಹುಲ್ಲು ಮೇಯಿಸಿದರೂ ಅದನ್ನ ಮುಂಬಯಿಯೊಳಗ ಮೇಯಿಸತಿದ್ದ. ಹಿಂಗಾಗಿ ಆ ಬುದು ಬುದುದೊಳಗನೂ ನಾನು ಒಬ್ಬಾವ ಬುದು ಆಗಿ ಬುದ್ದು ಆಗಿ ಮುಂಬಯಿಗೆ ಹೊರಟಿದ್ದೆ.

1959ರ ಮೇ ತಿಂಗಳಿನ 29ನೆ ತಾರೀಖು ನನಗೆಂದೆಂದಿಗೂ ಮರೆಯದ ದಿನ. ಅವತ್ತ ನಾ ಧಾರವಾಡದ ತಾಯಿಗೆ, ಶರಣ ಹೊಡೆದಿದ್ದೆ. ನನ್ನ ಜೀವನದ 'ಬಾಲ್ಯಕಾಂಡ' ಮುಗದು 'ಸುಂದರ ಕಾಂಡ'ನೋ ಇಲ್ಲ 'ಬಂದರ ಕಾಂಡ'ನೋ ಯಾವದೋ ಒಂದು ಹೊಸ ಅಧ್ಯಾಯ ಪ್ರಾರಂಭ ಆಗೋದಿತ್ತು.

ಅವತ್ತ ಮಧ್ಯಾಹ್ನ 3.58ಕ್ಕ ಪೂನಾ ಮೇಲ ಧಾರವಾಡ ಸ್ಟೇಶನ್ ಬಿಡೋದಿತ್ತು. ಮರುದಿವ್ಸ ಮುಂಝಾನೆ ಪುಣೆದಾಗ ಗಾಡಿ ಬದ್ಲ ಮಾಡಿ ಮುಂಬಯಿಗೆ ಹೋಗಬೇಕು. ಕಳೆದ ಏಳೆಂಟು ದಿನಗಳಿಂದ ಮನೆಯಲ್ಲಿ ಗೆಳೆಯರ ಬಳಗದಲ್ಲಿ ಅದs ಮಾತs ನಡದಿತ್ತು. ಗಾಡಿ ಹೆಂಗ ಹತ್ತಬೇಕು ..... ಪುಣೇದಾಗ ಪ್ಲ್ಯಾಟಫಾರ್ಮ ಹೆಂಗ ಬದಲ ಮಾಡಬೇಕು ..... ಪುಣೇದ ಹಮಾಲರು ಭಾಮಟ್ಯಾಗೋಳು ಇರತಾರ, ಅವರ ಸಂಗ್ತಿ ಹೆಂಗ ಜಿಕೇರಿ ಮಾಡಬೇಕು. ....ಮುಂಬಯಿ ವ್ಹಿ.ಟಿ. ಸ್ಟೇಶನದೊಳಗ, ಯಂಕಣ್ಣ ಕಾಕಾ ಕರೀಲಿಕ್ಕೆ ಬಂದಿದ್ದಿಲ್ಲಾ ಅಂದ್ರ ಏನ

ಮಾಡಬೇಕು ..... ಏನ ಮಾಡಬಾರದು' ...... ತಲೀ ಚಿಟ್ಟ ಹಿಡದು ಹೋಗಿತ್ತು. ಅವ ಅವ ಮಾತ ಕೇಳಿ ಕೇಳಿ. ಮೊನ್ನೆಯಿಂದ ಯಾಕೋ ನಮ್ಮ ಪಿತಾಶ್ರೀಯವರೂ ಸ್ವಲ್ಪ ಮೆತ್ತಗಾಗಿದ್ದರು. ನನಗ ಕೇಳಸೋ ಹಂಗs ನಮ್ಮ ತಾಯಿಗೆ ''ವ್ಯಾಳ ವ್ಯಾಳಕ್ಕ ಸರಿಯಾಗ ಊಟಾ ಮಾಡಲಿಕ್ಕೆ ಹೇಳ್ರಿ..... ಪ್ರಕೃತಿ ಸಂಭಾಳಿಸಲಿಕ್ಕೆ ಹೇಳ್ರಿ.... ಏನರ ಅನುವು ಆಪತ್ತು ಬಂದ್ರ ಪತ್ರ ಬರೀಲಿಕ್ಕೆ ಹೇಳ್ರಿ ಯಷ್ಟುss ತ್ರಾಸಾದರೂ ಚಿಂತಿಲ್ಲ ರೊಕ್ಕ ಕಳಸ್ತೇನಿ .....'' ಅಂತ ಪದೇ ಪದೇ ಹೇಳತಿದ್ದರು.

ಅವ್ವ ಒಂದು ಬಿಳಿಯ ಆಲೀಮನಿ ಡಬ್ಬೀ ತುಂಬ ಹೆಸರಿಟ್ಟನ ಉಂಡಿ ಮಾಡಿ ಕೊಟ್ಟಿದ್ದಳು. ಸರೋಜಕ್ಕ ದೀಪಾವಳೀ ಆರತಿ ಒಳಗ ಕೂಡಿಸಿದ್ದು ಹತ್ತು ರೂಪಾಯಿ ನನ್ನ ಕೈಯಾಗ ಕೊಟ್ಟು, ಒಂದು ಜತೆ ಲೋಲಕ್ ತರಲಿಕ್ಕೆ ಹೇಳಿದ್ದಳು.

ಅವತ್ತ ಧಾರವಾಡ ಸ್ಟೇಶನ್‌ಕ್ಕ ನನ್ನ ಬೀಳ್ಕೊಡಲಿಕ್ಕೆ ಅಂತ ನನ್ನ ಅನೇಕ ಗೆಳೆಯರು, ಸರೋಜಕ್ಕ ಹಾಗೂ ಆಕಿ ಕೆಲವು ಗೆಳತಿಯರು ಬಂದಿದ್ದರು. ನನ್ನ ಅವ್ವ ಅಪ್ಪ ಮಾತ್ರ ಮನಿಯಿಂದನs ಆಶೀರ್ವಾದ ಮಾಡಿ ಕಳಿಸಿದ್ದರು. ಪ್ಲ್ಯಾಟ ಫಾರಮ್ ಮ್ಯಾಲೆ ಸರೋಜಕ್ಕನ ಗೆಳತೇರು ಒಂದು ಕಡೆ, ನಾವೆಲ್ಲ ಗಂಡು ಹುಡಗೂರು ಒಂದು ಕಡೆ ಗುಂಪು ಗುಂಪಾಗಿ ನಿಂತು ಹರಟೀ ಹೊಡೀಲಿಕ್ಕೆ ಹತ್ತಿದ್ವಿ. ಗಾಡೀ ಬರಲಿಕ್ಕೆ ಇನ್ನೂ ಹತ್ತ ಹದಿನೈದು ಮಿನೀಟ ಇತ್ತು.

''ಮುಂಬಯಿ ಒಳಗ ಯಾವ್ಯಾವ ಫಿಲ್ಮಿಸ್ಟಾರ್ ಯಲ್ಲೆಲ್ಲಿ ಇರತಾರ ...... ''ಸ್ಕೂಲ ಆಫ್ ಇಕಾನೊಮಿಕ್ಸದಾಗ ಎಂ. ಎ. ಮಾಡಿದರ ಹೆಂಗ ..... ಮರಾಠಿ ಹುಡಿಗೇರು ಭಾಳ ನಖರಾ ಮಾಡತಾರ ....'' ಇತ್ಯಾದಿ ಇತ್ಯಾದಿ ನಮಗರಿವಿಲ್ಲದಂತೆಯೇ ಹರಟಿಗೆ ರಂಗು ಏರಲಿಕ್ಕೆ ಹತ್ತಿತ್ತು. ಅಷ್ಟರಾಗ A.S.M ಬಂದು ಕಡೀ ಘಂಟೀ ಹೊಡದಾ. ನನ್ನ ಗೆಳೆಯರು ಒಂದೊಂದು ಬ್ಯಾಗ ಎತ್ತಲಿಕ್ಕೆ ಹತ್ತಿದರು. ಸರೋಜಕ್ಕ ಬಂದು ''ಇನ್ನ ಮ್ಯಾಲ ಸಿಗರೇಟು ಸೇದೂದುಲ್ಲ'' ಅಂತ ಆಣಿ ಮಾಡಿಸಿಕೊಂಡಳು. ಆಕೀ ಗೆಳತಿಯರು ''ಶೀನೂ ದೀಪಾವಳಿಗೆ ಬಾ ಪಗಡಿ ಆಡೋಣು'' ಅನ್ನಲಿಕ್ಕೆ ಹತ್ತಿದ್ದಾರು, ಧೂರ ನವಲೂರ ತಿರವಿನ ಹತ್ತಿರ ಪೂನಾ ಮೇಲಿನ ಝುಕ್ ಝುಕ್ ಹೊಗೆ ಕಾಣಸಲಿಕ್ಕೆ ಹತ್ತಿತ್ತು. ಅಷ್ಟರಾಗ ಪಾಟೀಲ ಪರಮೇಶಿ ನನ್ನ ಹತ್ತಿರ ಬಂದು ''ಶೀನೂ ನಿಮ್ಮ ಫಾದರ ಬರಲಿಕ್ಕೆ ಹತ್ಯಾರ ನೋಡು'' ಅಂದ. ನಾ ಗೇಟಿನ ಕಡೆ ನೋಡಿದೆ.

ನಮ್ಮ ಅಪ್ಪ ಧೋತರ ಎತ್ತಿ ಹಿಡಿದು ಧಾಪಗಾಲು ಹಾಕುತ್ತ ಏದುಶಿರ ಬಿಟಗೋತ ಧಾವಿಸಿ ಧಾವಿಸಿ ಗೇಟಿನೊಳಗೆ ಬರಲಿಕ್ಕೆ ಹತ್ತಿದ್ದರು. ನಾನು ಲಗು ಬಗೆಯಿಂದ ಅವರ ಬಳಿ ಧಾವಿಸಿ ''ಅಪ್ಪಾ, ಈ ಬಿಸಲಾಗ ನೀವ್ಯಾಕ ಬರಲಿಕ್ಕೆ ಹೋಗಿದ್ರಿ?'' ಎನ್ನುತ್ತಿದ್ದಂತೆಯೇ ಅವರು ಬೆವರೊರೆಸಿಕೊಳ್ಳುತ್ತ ''ಉಶ್ಯಪ್ಪ, ಎಲ್ಲಿ ಗಾಡಿ ಹೋಗಿ ಬಿಟ್ಟಿರತದೋ ಅನಕೋತ ಓಡೋಡಿ ಬಂದೆ'' ಅನಕೋತ ತಮ್ಮ ಕೋಟಿನ ಕಿಶೇದಿಂದ ನೂರರ ಎರಡು ನೋಟು ತಗದು ನನ್ನ ಕೈಯಾಗ ಜುಲುಮಿಯಿಂದ ಇಟ್ಟರು. ನಾನು ''ಕೊಟ್ಟಿಯಲ್ಲs ಮತ್ತ ಯಾಕ ....'' ಎಂದು ಪ್ರತಿಭಟಿಸುತ್ತಿದ್ದಾಂತೆಯೇ ''ಇರಲಿ ಇಟಗೋ ಬೇಕಾಗತದ ...'' ಅನಕೋತ ನನ್ನೆರಡೂ ಕೈ ಕ್ಷಣಹೊತ್ತು ಘಟ್ಟಿ ಬಿಗಿ ಹಿಡಿದು ನನ್ನ ಮುಖದ ಮ್ಯಾಲೆಲ್ಲ ಕಣ್ಣಾಡಿಸಿದರು. ನಾನು ಬಗ್ಗಿ ನಮಸ್ಕಾರ ಮಾಡಿ ಅವರ ಪಾದ ಸ್ಪರ್ಶ ಮಾಡಿದೆ. ಕೂಡಲೇ ಅವರು ಎರಡೂ ಕೈಲೆ ನನ್ನ ಬಾಚಿ

ಎಬ್ಬಿಸಿ, ನನ್ನ ಬೆನ್ನ ಮೇಲೆ ಕೈಯಾಡಿಸಿ, ಹೌದೋ ಅಲ್ಲೋ ಅನ್ನುವಷ್ಟು ನನ್ನನ್ನು ತಬ್ಬಿ ಹಿಡಿದು ''ನಡಿ ಇನ್ನ ಗಾಡೀ ಬಿಟ್ಟೀತು ....'' ಅನಕೋತ ನನ್ನ ದೂರ ಮಾಡಿದರು. ಅಷ್ಟರಾಗನ, ಪರಮೇಶಿ ಮತ್ತ ಸರೋಜಕ್ಕ ಓಡೋಡಿ ಬಂದು ''ಶೀನೂ ಗಾಡಿ ಬಿಡತದ ನಡಿ'' ಅಂತ ನನ್ನ ಓಡಿಸಿದರು. ನಾನು ಅವರ ಜತೆ ಜತೆಯಲ್ಲೇ ಓಡುತ್ತ, ಒಂದು ಕ್ಷಣ ನಿಂತು ಹೊರಳಿ ನೋಡಿದೆ. ನೋಡಬಾರದಿತ್ತು ನೋಡಿದೆ.

ನಮ್ಮ ಹಿರಣ್ಯಕಶಿಪು ತಂದೆ, ಧಾರವಾಡ ಸ್ಟೇಶನ್‌ದ ಬೃಹತ್ ಗಾತ್ರದ ಲೋಹದ ಕಂಬಕ್ಕೆ ಆತುಗೊಂಡು ನಿಂತು, ಬಲಗೈಯಿಂದ ಧೋತರ ಚುಂಗಿನಿಂದ ಕಣ್ಣೊರಸಿಕೊಳ್ಳುತ್ತ, ತಮ್ಮ ನಡುಗುವ ಎಡಗೈ ಮೇಲೆತ್ತಿ ನನಗೆ ವಿದಾಯ ಹೇಳುತ್ತಿದ್ದರು. ಅವರ ಮುಖದ ಮ್ಯಾಲೆ ಇನ್ನಿಲ್ಲದ ದೈನ್ಯ ಒಟ್ಟುಗೂಡಿ ಒಂದು ತೆರನ ಅನಾಥ ಪರದೇಶಿ ಕಳೆ ಸುರೀಲಿಕ್ಕೆ ಹತ್ತಿತ್ತು. ಅವರು ಒಮ್ಮೆಲೆ ಒಂದಿಪ್ಪತ್ತು ವರುಷ ಹೆಚ್ಚಿದ ನಿರ್ವಿಣ್ಣ, ನಿತ್ರಾಣ ಮುದುಕನಂತೆ ಕಾಣಸಲಿಕ್ಕೆ ಹತ್ತಿದ್ದರು.

ನನ್ನ ಜೀವನದ ಪ್ರಥಮೋಧ್ಯಾಯದ ಸಮಾಪ್ತಿ ಕಾಲದಲ್ಲಿ, ಅವತ್ತ ಧಾರವಾಡ ಬಿಡುವಾಗಿನ ತೀರ ಕೊನೆಯ ಕ್ಷಣದಲ್ಲಿ, ನಾನು ನನ್ನ ಕಣ್ಣುಗಳೊಳಗ, ಮನಸ್ಸಿನೊಳಗ, ಹೃದಯದೊಳಗ, ನನ್ನ ಹೆತ್ತ ತಂದೆಯ ಈ ಕರುಣಾದ್ರ್ರ, ದೈನಾಸ ಮೂರ್ತಿಯನ್ನು ತುಂಬಿಕೊಂಡು ಊರು ಬಿಟ್ಟೆ.

ಗಾಡಿ ಬಿಟ್ಟಿತು. ಗಾಡೀ ಜತೆಗೇನ ಓಡೋಡಿ ಬಂದು ಟಾ - ಟಾ - ಹೇಳಿಕೋತ ಗೆಳೆಯರು ಹಿಂದುಳಿದರು..... ಕಣ್ಣು ತುಳುಕಿಸುತ್ತ ನಿಂತಿದ್ದ ಸರೋಜಕ್ಕ ಆಕೀ ಗೆಳತಿಯರು ದೂರಾದರು. ಧಾರವಾಡದ ಸ್ಟೇಶನ್ನು, ಬಾರಾಕೋಠಿ, ಯುನಿವರ್ಸಿಟಿ ಲೆವಲ ಕ್ರಾಸಿಂಗ ಯಲ್ಲಾ ಹಿಂದ ಹಿಂದ ಸರದೂ. ಆದರ ಪ್ಲ್ಯಾಟಫಾರಮನ ಮೇಲೆ ಖಂಬಕ್ಕೊರಗಿ ಧೋತರ ಚುಂಗಲೇ ಕಣ್ಣೊರಿಸಿಗೋತ ನಿಂತ ನಮ್ಮ ಮುದಿ ತಂದೆ ಮಾತ್ರ ನನ್ನ ಜತೆಗೇ ಬಂದು ಬಿಟ್ರು.

ಅವತ್ತ ರೇಲ್ವೆ ಡಬ್ಬಿಯೊಳಗ ತರ ತರದ ಜನ ತುಂಬಿದ್ದರು. ಬಿಕ್ಕೆಯವರೂ, ಹಾಕರ್ಸೂ ತಮ್ಮ ಕಂಠ ಶೋಷಣೆ ನಡೆಸಿದ್ದಾರು. ಕಿಟಿಕಿ ಹೊರಗ ನಾಗಲಾವಿ, ಕಂಬಾರ ಗಣವಿ ಆಚೆಗೆ ಅಳಣಾವರದ ಜಂಗಲ್ಲು ಚಾಚಿಕೊಳ್ಳಲಿಕ್ಕೆ ಹತ್ತಿತ್ತ. ನನಗ ಇದ್ಯಾವದರ ಕಡೆನೂ ಲಕ್ಷ ಇದ್ದಿಲ್ಲ. ಧಾರವಾಡ ಸ್ಟೇಶನ ಮ್ಯಾಲ ಬಿಟ್ಟು ಬಂದ ಆ ಮುದಿ ಜೀವಕ್ಕ ನಾನು ಆರ್ತನಾಗಿ, ದೀನನಾಗಿ, ಕೇಳಿಕೊಳಿಕ್ಕೆ ಹತ್ತಿದ್ದೆ.

''ಅಪ್ಪಾ ..... ಅಪ್ಪಾ ..... ಈ ದೈನ್ಯ ಈ ಕಾರುಣ್ಯ ನಿಮಗ ಒಪ್ಪುವದಿಲ್ಲಪ್ಪ ... ನೀವು ಮೊದಲಿನ ಹಂಗ ಉಗ್ರರಾಗಿಯೇ ಇರಬೇಕಪ್ಪ .... ನೀವು ಹಿಂಗ ಸಣ್ಣ ಮಾರಿ ಮಾಡಿ ಕಣ್ಣೀರ ಹಾಕಿದ್ರ ಆದು ಮನೆತನಕ್ಕೆ ಒಳ್ಳೆಯದಲ್ಲಪ್ಪಾ...... ನನ್ನ ಬಗ್ಗೆ ಏನೇನೂ ಚಿಂತಿ ಮಾಡಬ್ಯಾಡಪ್ಪ ..... ನಾ ಹೊತ್ತ ಹೊತ್ತಿಗೆ ಊಟ ತಿಂಡಿ ಮಾಡಿಕೋತ ಪ್ರಕೃತಿ ಸಂಭಾಳಿಸತೇನಪ್ಪಾ .... ಕಾಳಜೀ ಮಾಡಬ್ಯಾಡಪ್ಪಾ ... ಯಾವದೇ ದೃಷ್ಟಿಯಿಂದ ನಿನ್ನ ಹೆಸರಿಗೆ ಕಳಂಕ ಬರದಂತೆ .... ಮನೆತನದ ಮರ್ಯಾದಿಗೆ ಧಕ್ಕೆ ಬರದಂತೆ ಬದಕತೇನಪ್ಪಾ ..... ನಿಮ್ಮಿಬ್ಬರನೂ ಮುಪ್ಪಿನ ಕಾಲಕ್ಕೆ ಗಿಳೀ ಸಾಕಿಧಂಗ ಸಾಕತೇನಪ್ಪ ..... ಅಕ್ಕನ ಲಗ್ನ ಮಾಡೋಣಪ್ಪ..... ನಾ ದುಡ್ಡು ಕಳಿಸತೇನಪ್ಪ .....ನೀ ಅಗದೀ ಏನೇನು ಅಂದ್ರ ಏನೇನೂ .... ಬಿಲ್ಕೂಲ ಚಿಂತಿ

ಮಾಡಬ್ಯಾಡಪ್ಪ.... ನಾ ಮುಂಬಯಿಗೆ ಹೋದ ಕೂಡಲೇ ತಲಿ ಬೋಳಿಸಿಕೋತೇನಪ್ಪಾ....

★★★

ಅದೆಲ್ಲ ಈಗ ಹಳೇ ಕಥಿ. ಸರೋಜಕ್ಕನ ಲಗ್ನ ಆತು. ಆಕಿನ್ನ ಅಲ್ಲೇ ಹುಬ್ಬಳಿಗೆ ಕೊಟ್ಟವಿ. ಈಗ ಅವರಿಬ್ಬರೂ ಗಂಡ ಹೆಂಡತಿ ಪರದೇಶಕ್ಕ ಹೋಗಿ ಕೂತು ಬಿಟ್ಟಾರ. ಸುದ್ದಿ ಇಲ್ಲ ಸುಖ ದುಃಖ ಇಲ್ಲ. ಮುಂದ ಎಂಟ ಹತ್ತು ವರುಷದಾಗ ತಾಯಿ ತಂದಿ ಇಬ್ಬರು ಹೋಗಿ ಬಿಟ್ಟರು. ಈಗ ನಾನೂ ನನ್ನ ಹೇಣ್ತಿ ಮಕ್ಕಳು ಯಲ್ಲಾರೂ ಕೂಡಿ ಹಿರಿಯರ ಶ್ರಾದ್ಧ ಕರ್ಮಗಳನ್ನು ಮಾಡತೀವಿ. ಮಾಘ ಮಾಸದ ಶುಕ್ಲಪಕ್ಷದ ದ್ವಾದಶಿ ನಮ್ಮ ತಂದಿ ಶ್ರಾದ್ಧ. ವೈದಿಕರು ಏನೇನೋ ಮಣ ಮಣ ಮಂತ್ರ ಅಂತಾರ. ಶ್ರದ್ಧೆಯಿಂದ ಮಾಡೋದೂ ಶ್ರಾದ್ಧ ಅಂತಾರ. ಎಳ್ಳು ನೀರಿನ ತರ್ಪಣ ಬಿಡರಿ ಅಂತಾರ.


ಪ್ರತಿ ಮಾಘ ಮಾಸ ಶುಕ್ಲ ಪಕ್ಷದ ದ್ವಾದಶಿ ದಿವಸ, ಧಾರವಾಡ ಸ್ಟೇಶನದೊಳಗ ಖಂಬಕ್ಕೊರಗಿ ಧೋತರ ಚುಂಗಲೇ ಕಣ್ಣೋರಸಿಕೊಳತಿದ್ದ ನಮ್ಮ ತಂದೀ ನೆನಪು ತೀವ್ರವಾಗಿ ಬರತದ. ಅವರನ್ನ ನೆನೆಯುವದೇ ನಾನು ತೋರುವ ಶ್ರದ್ಧೆ. ಆಗ ನನ್ನ ಕಣ್ಣಂಚಿನಲ್ಲಿ ತುಳುಕುವ ಎರಡು ಹನಿಯೇ ತರ್ಪಣ.

★★

ರಕ್ಷೆ - ಶಿಕ್ಷೆ!

ಕಾಸು
ಕದ್ದವನಿಗೆ
ರೌರವ ಶಿಕ್ಷೆ
ಕೋಟಿ
ಕೊಳ್ಳೆ
ಹೊಡೆದವನಿಗೆ
ಗೌರವ ರಕ್ಷೆ!

ಗೀತಾ ಶಾಸ್ತ್ರಿ


"ಒಳ್ಳೇ ಕೆಲ್ಸ ಮಾಡ್ದೆ!"
SGROSS

ಉದ್ಯೋಗಾರಣ್ಯಕ - 95

ಎಂ. ಎಸ್. ಪ್ರಭು

ಆಶಯ ಭಾಷಣ:

ಮಹನೀಯರೇ, ಮಹಿಳೆಯರೇ, ಟೀವಿ, ಆಕಾಶವಾಣಿ ಮತ್ತು ಪತ್ರಿಕಾ ಪ್ರತಿನಿಧಿಗಳೇ (ಬಂದಿದಾರೋ ಇಲ್ಲವ್ವೋ, ನಾನೇ ಖುದ್ದಾಗಿ ಹೋಗಿ ಬರಲೇ ಬೇಕೂಂತ ಕರೆದು ಬಂದಿದೀನಿ) ಆಂ ..... ನನ್ನ ಸಹೋದ್ಯೋಗಿ ಎರಡನೇ ದರ್ಜೆ ಗುಮಾಸ್ತರೇ ಮತ್ತು ಇತರರೇ, ಇಂದಿನ ಈ ಸಭೆಯ ಮುಖ್ಯ ಉದ್ದೇಶವೇನೂಂದ್ರೆ, ನನ್ನ ವೃತ್ತಿ ಬಾಂಧವರಿಗೆ ಒದಗಿ ಬಂದಿರೋ ಒಂದು ಮಹಾ ಆಪತ್ತನ್ನ ಕುರಿತು ಚರ್ಚೆ ಮಾಡೋದೇ ಆಗಿದೆ. ಹಿಂದೆಂದೂ ಇಂತಹ ಒಂದು ಗಂಭೀರ ಪರಿಸ್ಥಿತಿ ಒದಗಿ ಬಂದಿರಲಿಲ್ಲಾಂತ ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ನೀವೆಲ್ಲಾ ಪೇಪರ್‌ನಲ್ಲಿ ಓದಿರಬಹುದು. ಬಹುದೇನು ಓದೇ ಇದೀರಾ. ಬೀದರಿನ ಪ್ರೊಫೆಸರ್ ಒಬ್ಬರು ಎರಡನೇ ದರ್ಜೆ ಗುಮಾಸ್ತನ ಹುದ್ದೆಗೆ ಅರ್ಜಿ ಹಾಕಿಕೊಂಡು ಇಂಟರ್‌ವ್ಯೂನೂ ಕೊಟ್ಟಿದಾರೆ. ಅವರ್‍ಯಾಕೆ ಹೀಗೆ ಮಾಡಿದ್ರು ಅನ್ನೋದನ್ನ ಸ್ವಲ್ಪ ಕೂಲಂಕುಷವಾಗಿ ವಿಚಾರ ಮಾಡಿದ್ರೇ ಆದ್ರೆ ನಿಮಗೆಲ್ಲಾ ತಿಳಿಯುತ್ತೆ. ಅವರು ನಮ್ಮ ಮೇಲಿನ ಅಸೂಯೆಯಿಂದ, ಹೊಟ್ಟೆಕಿಚ್ಚಿನಿಂದ, ಹೊಟ್ಟೆಯುರಿಯಿಂದ, ನಮ್ಮ ವರ್ಗದ ಮೇಲೆ ಆಕ್ರಮಣ ಮಾಡೋದಕ್ಕೆ ಹೊರಟಿದಾರೆ. ನಾವು ನಮ್ಮ ನಮ್ಮ ಕರ್ತವ್ಯದಲ್ಲಿ ಯಶಸ್ಸು ಗಳಿಸಿರೋದು ಅವರ ಕಣ್ಣುರಿಗೆ ಕಾರಣವಾಗಿದೆ ಅಂತ ಇಲ್ಲಿ ಹೇಳಿದರೆ ತಪ್ಪಾಗಲಿಕ್ಕಲ್ಲ ಅಂತ ಘಂಟಾಘೋಷವಾಗಿ ಹೇಳಲಿಕ್ಕೆ ಇಷ್ಟಪಡ್ತೀನಿ. ನಮ್ಮ ಮೇಲೆ ಅವರಿಗಾದ್ರೂ ಯಾಕೆ ಅಸೂಯೆ, ಹೊಟ್ಟೆಕಿಚ್ಚು, ಹೊಟ್ಟೆ ಉರಿ, ಕಣ್ಣುರಿ? ನೀವೆಲ್ಲಾ ಸ್ವಲ್ಪ ಸಾವಧಾನವಾಗಿ ಯೋಚ್ನೆ ಮಾಡಬೇಕಾದಂಥ ಸಂಗ್ತಿ. ನಾನು ಮೊದಲೇ ಹೇಳಿದ್ಹಾಗೆ, ಮುಖ್ಯವಾಗಿ ನಮ್ಮ ಯಶಸ್ಸು. ನಮ್ಮ ಪಾಡಿಗೆ ನಾವು ನಮ್ಮ ನಮ್ಮ ಕೆಲಸ ಮಾಡ್ಕೊಂಡು ಹೋಗ್ತಿರ್ತೀವಿ, ಹೌದೋ, ಅಲ್ವೋ? ಆದ್ರೆ ಅವರು ಹೇಳೋ ಕಾರಣಾನೇ ಬೇರೆ ಇರಬಹುದು. ನಮಗಿರೋ ಗೌರವ, ವರ್ಚಸ್ಸು, ಬೆಲೆ ಅವರಿಗಿಲ್ಲ, ಸಮಾಜದಲ್ಲಿ ಎರಡನೇ ದರ್ಜೆ ಗುಮಾಸ್ತರ ಸ್ಥಾನಮಾನದ ಮುಂದೆ ಉಚ್ಚ ಅಧಿಕಾರಿಗಳ ಸ್ಥಾನಮಾನಕ್ಕೆ ಏನೂ ಬೆಲೆ ಇಲ್ಲ ಅಂತ ಅವರ ಅಂಬೋಣ. ಸರಿ, ಅದಕ್ಕೆ ನಾವಾದ್ರೂ ಮಾಡೋದೇನಿದೆ ಅಂತ ಈ ವೇದಿಕೆಯಿಂದ ನಾನು ಪ್ರಶ್ನೆ ಮಾಡ್ತೀನಿ. ನಮ್ಮ ಸಂವಿಧಾನದ ಪ್ರಕಾರ ವಯೋಮಿತಿ ಮತ್ತು ಶೈಕ್ಷಣಿಕ ಅರ್ಹತೆ ಪಡೆದವರೆಲ್ಲಾ ಗುಮಾಸ್ತ ಪದವಿಗೆ ಅರ್ಜಿ ಸಲ್ಲಿಸಬಹುದಾದರೂ, ಹೆಚ್ಚಿನ ಶೈಕ್ಷಣಿಕ ಅರ್ಹತೆ ಪಡೆದು, ಉನ್ನತ ಹುದ್ದೆಯನ್ನಲಂಕರಿಸಿರುವವರೂ ನಮ್ಮ ವರ್ಗದ ಮೇಲೆ ಈ ರೀತಿಯ ಅತಿಕ್ರಮಣ ಮಾಡ್ತಾ ಇರೋದು ಸಾಮಾಜಿಕ ನ್ಯಾಯದ ದೃಷ್ಟಿಯಿಂದ, ನೈತಿಕ ದೃಷ್ಟಿಯಿಂದ, ಧಾರ್ಮಿಕ ದೃಷ್ಟಿಯಿಂದ, ಮಾನವೀಯತೆಯ ದೃಷ್ಟಿಕೋನದಿಂದ ಅಸಮರ್ಥನೀಯ, ಖಂಡನಾರ್ಹ ಹಾಗೂ ಹೇಯ.

ಯಾರಾದರೂ ಎರಡನೇ ದರ್ಜೆ ಗುಮಾಸ್ತರಾಗುವ ಆದರ್ಶಕ್ಕೆ ಹೊಂದಿದ್ದರೆ, ಶ್ರದ್ಧೆ, ನಿಷ್ಠೆಯುಳ್ಳವರಾಗಿದ್ದರೆ, ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ನಂತರ ಮುಂದಕ್ಕೆ ಯಾಕಾದರೂ ಹೋಗಬೇಕಾಗಿತ್ತು? ಯಾಕೇಂದ್ರೆ, ಅವರಿಗೆ ಕಾಲೇಜು ಜೀವನದ ಮೋಜು ಬೇಕಾಗಿತ್ತು, ಅಧಿಕಾರದ ಬೆನ್ನು ಹತ್ತಿ ಹೋಗುವ ಆಶೆ ಅವರಲ್ಲಿತ್ತು. ನಾವಾದರೋ ಕಾಲೇಜು ಜೀವನವನ್ನು

ಬಲಿಗೊಟ್ಟು ಗುಮಾಸ್ತೆ ಹುದ್ದೆಗೆ ಮುಂದಾದೆವು. ಈ ಹುದ್ದೆಯಲ್ಲಿ ನಮಗೆ ಲಭ್ಯವಾದ ಅವಕಾಶಗಳನ್ನು ನಾವು ಕ್ರಿಯಾತ್ಮಕವಾಗಿ, ಸೃಜನಶೀಲವಾಗಿ ಬಳಸಿಕೊಂಡು ಸಾರ್ಥಕರಾಗ್ತೀವಿ. ಯಾಕೆ? ನಾವು ನಮ್ಮ ಕೆಲಸವನ್ನ, ನೌಕರಿಯನ್ನ, ಚಾಕರಿಯನ್ನ, ಸೇವೆಯನ್ನ ಮುಖ್ಯ ಅಂತ ತಿಳಕೋತೀವಿ, ಹೌದೋ, ಅಲ್ವೋ? ಆದ್ರೆ ಅವರೇನು ಮಾಡ್ತಾರೆ, ತಾವಷ್ಟೇ, ತಮ್ಮ ಕೆಲಸವಷ್ಟೇ ಮುಖ್ಯ ಅಂತ ತಿಳಕೊಂಡು ಬಿಟ್ಟಿದ್ದಾರೆ. ಆದ್ರೆ ನಾವು ನಮ್ಮ ಕೆಲಸಾನ ಮುಖ್ಯ ಅಂತ ತಿಳಕ್ಕೊಳ್ಳದಿದ್ರೆ ಅವರ ಪ್ರಾಮುಖ್ಯತೆಗೆ ಧಕ್ಕೆ ಬರುತ್ತೆ ಅನ್ನೋ ಮಾತನ್ನ ನಾನು ಒತ್ತಿ ಹೇಳ್ತೀನಿ. ನಾವು ನಮ್ಮ ಕೆಲ್ಸಾನ ಮುಖ್ಯ ಅಂತ ತಿಳಕೊಂಡು ಮಾಡ್ತಿರೋದ್ರಿಂದ ನಮಗೆ ಬರೇ ಗೌರವ, ಸನ್ಮಾನ, ಅಂತಸ್ತನ್ನಷ್ಟೇ ಅವರು ನೋಡಿ, ಇವುಗಳ ಮೇಲೆ ತಮ್ಮ ಕಣ್ಣು ಹಾಕಿದಾರೆ. ಅಂದ್ರೆ ತಾತ್ಪರ್ಯ ಏನಪ್ಪಾಂದ್ರೆ, ಮತ್ತೊಬ್ಬರ ಹಕ್ಕನ್ನು ಕಸಿದುಕೊಳ್ಳೋ ಹುನ್ನಾರ ನಡೆದಿದೆ ಅನ್ನೋದು ಅಂಗೈ ಮೇಲಿನ ಹುಣ್ಣನಷ್ಟೇ ಸ್ಪಷ್ಟವಾಗಿದೆ ಎಂಬ ತಕ್ಕಂಥ ಮಾತ್ನ ನಾನು ಇಲ್ಲಿ ಹೇಳೋಕೆ ಇಷ್ಟ ಪಡ್ತೀನಿ.

ಆತ್ಮೀಯ ಸಹೋದ್ಯೋಗಿಗಳೇ, ನೀವು ನಮ್ಮ ಪರಂಪರೆಯನ್ನಷ್ಟು ನೆನಪು ಮಾಡಿಕೊಳ್ಳಿ, ನಮ್ಮದು ಅತ್ಯಂತ ಪ್ರಾಚೀನವಾದ ಪರಂಪರೆ. ವ್ಯಾಸ ಮುನಿಯ ಪಕ್ಕದಲ್ಲಿ ಕೂತುಕೊಂಡು ಮಹಾಭಾರತದ ಡಿಕ್ಟೇಶನ್ ತಗೊಂಡ್ನಲ್ಲ, ಗಣೇಶ್, ಅವನೇ ನಮ್ಮ ಮೂಲ ಪುರುಷ ಅಂತ ಭಾವಿಸಿದ್ರೆ ತಪ್ಪಾಗಲಿಕ್ಕಿಲ್ಲ. ಇತ್ತೀಚೆ ಸ್ಟೆನೋ ಅಂತಾರಲ್ಲ ಆ ವರ್ಗವೂ ನಮ್ಮಲ್ಲಿ ಒಂದು ಪ್ರಭೇದವೇ ಹೊರತು ಬೇರಲ್ಲ. ಆಗ್ನಿಂದಾ ನಮ್ಮ ವರ್ಗ ಬೆಳೆದು ಬರ್ತಾ ಇದೆ, ಸಮಾಜ ಋಣ, ಸರಕಾರದ ಋಣ ತೀರಿಸ್ತಾ ಇದೆ. ಈಗ ಬೆಳೆದು ನಿಂತಿರೋ ಸರಕಾರದ ಮಹಾ ಯಂತ್ರದಲ್ಲಿ ನಾವು ಬಹು ಸಂಖ್ಯಾತ ಚಕ್ರಗಳು. ನಾವು ತಿರುಗಿದ್ರೇನೆ ಸರಕಾರ ಇದೆ ಅಂತ ಸಾಬೀತಾಗುತ್ತೆ. ನಾವು ತಿರುಗುವ ಚಕ್ರಗಳಾಗಬೇಕಾದ್ರೆ ಅದಕ್ಕೆ ಎಣ್ಣೆ ಸವರಲೇ ಬೇಕು. ಇದರ ಮರ್ಮವನ್ನ ಮಹಾಜನತೆ ಅರ್ಥ ಮಾಡ್ಕೊಂಡಿರೋ ಹಾಗೆ ಮೇಲಧಿಕಾರಿಗಳು ಅರ್ಥ ಮಾಡ್ಕೊಂಡಿಲ್ಲ ಅಂತ ನಾನು ವಿಷಾದದಿಂದ ಹೇಳಬೇಕಾಗಿದೆ. ಯಾರು ಏನೇ ಹೇಳಲಿ ನಮ್ಮದು ಸಾರ್ಥಕ ಸೇವೆ.

ನಾವು ಮುಖ್ಯರು ಅನ್ನೋ ವಿಷಯದಲ್ಲಿ ಲವಲೇಶವೂ ಸಂಶಯಬೇಡ. ಈ ನಮ್ಮ ಪ್ರಾಮುಖ್ಯತೆಯೇ ನಮಗೆ ಮುಳುವಾಗೋ ಪರಿಸ್ಥಿತಿ ತಂದಿದೆ. ಈಗ ನಮ್ಮ ಆದ್ಯ ಕರ್ತವ್ಯ ಏನಪ್ಪಾಂದ್ರೆ, ನಮ್ಮ ಪ್ರಾಮುಖ್ಯತೇನೂ ಉಳಿಸ್ಕೋ ಬೇಕು, ನಾವೂ ಉಳೀಬೇಕು ಮತ್ತು ಮುಖ್ಯವಾಗಿ ನಮ್ಮ ಹಕ್ಕಿನ ಮೇಲೆ ಇತರರ ಹಸ್ತಕ್ಷೇಪವಾಗಬಾರದು. ಒಂದು ಕಾಲದಲ್ಲಿ ಎರಡನೇ ದರ್ಜೆ ಗುಮಾಸ್ತ ಅಂದರೆ ಹಾಸ್ಯಾಸ್ಪದವಾದ ವಸ್ತುವಾಗಿದ್ದ. ' ಯಃಕಶ್ಚಿತ್' ಅನ್ನೋ ಪದವನ್ನೇ ಅವನಿಗೆ ವಿಶೇಷಣವಾಗಿ ಹಚ್ತಾ ಇದ್ರು. ನಮ್ಮ ಹಾಸ್ಯ ಸಾಹಿತ್ಯದ, ಪ್ರಹಸನಗಳ ಅವಲೋಕನ ಮಾಡಿ ನೋಡಿ. ಅಲ್ಲಿ ಬರೇ ಇಂದಾಗೆ ಗುಮಾಸ್ತನ ಚಿತ್ರಣವನ್ನು ವಿಶ್ಲೇಷಣೆ ಮಾಡಿ. ಈ ಸಮಾಜ ನಮ್ಮನ್ನು ಹೇಗೆ ನಡೆಸಿಕೊಂಡಿದೆ ಅಂತಾ ನಿಮಗೇ ಗೊತ್ತಾಗುತ್ತೆ. ಆದ್ರೆ ಅದೆಲ್ಲಾ ಗುಮಾಸ್ತನ ಜೀವನದ ಜೀವಾಳವನ್ನರಿಯದೇ ಸ್ವಕಪೋಲ ಕಲ್ಪನೆಯಿಂದ ಮೂಡಿ ಬಂದ ಅವಾಸ್ತವ ಪಾತ್ರಗಳು ಅಂತ ಮಾತ್ರ ಹೇಳೋಕೆ ಇಷ್ಟಪಡ್ತೀನಿ. ಆ ದೀನತೆ, ಆರ್ದ್ರತೆ ನಿಸ್ಸಹಾಯಕತೆ, ಪೆದ್ದುತನ, ಎಡಬಿಡಂಗಿತನ, ಎಲ್ಲಾ ಹಳೇ ಮಾತು. ಈಗ ನಾವು ಖಂಡಿತ ಹಾಗಿಲ್ಲ. ನಮ್ಮ ನಮ್ಮ ಜವಾಬ್ದಾರಿ ಏನು, ಧರ್ಮ ಏನು, ಹಕ್ಕು ಏನು ಅನ್ನೋದನ್ನ ಅರ್ಥ ಮಾಡ್ಕೊಂಡಿದೀವಿ, ಅನುಷ್ಠಾನಗೊಳಿಸ್ತಾ ಇದೀವಿ. ಆದ್ರಿಂದಾನೇ ನಾವು ಮುಖ್ಯರು ಅಂತ

ನಾವು ಹೆಮ್ಮೆ ಪಡೋಣ. ಬೇರೆಯವರು ಕರುಬುವಷ್ಟು ಮುಖ್ಯವಾಗಿ ಬೆಳೆದಿದೀವಲ್ಲಾ ಅದಕ್ಕೇ ಹೆಮ್ಮೆ ಪಡೋಣ!

ಸರಕಾರದ ಯಾವುದೇ ಕಚೇರಿಯನ್ನು ತೆಗೆದುಕೊಳ್ಳಿ. ಅಲ್ಲಿ ನಿಜವಾಗಲೂ ಯಾರು ಕೆಲಸ ಮಾಡ್ತಾರೆ? ನಾವು, ನಮ್ಮ ಬಂಧುಗಳು, ನಮ್ಮ ಸಹೋದ್ಯೋಗಿಗಳು, ನಿಜವಾದ, ಅರ್ಥಪೂರ್ಣವಾದ ಕೆಲಸ ನಡೆಯೋದು ನಮ್ಮಿಂದ ಮಾತ್ರ, ಬೇರೆ ಯಾರಿಂದಾನೂ ಅಲ್ಲ. ಆದರೂ ಆಗಿಂದಾಗ್ಗೆ ನಮ್ಮ ಮೇಲೆ ಆಘಾತಗಳು ಆಗ್ತಾನೇ ಇರುತ್ವೆ, ಉಳಿತಾಯದ ಹೆಸರಿನಲ್ಲಿ ಹತ್ತು ಪರ್ಸೆಂಟ್ ಪೋಸ್ಟ್‌ಗಳನ್ನು ರದ್ದು ಮಾಡ್ತಾ ಇರ್ತಾರಲ್ಲ, ಅದು ಅನ್ವಯವಾಗೋದು ನಮಗೇ ಹೊರತು, ಮೇಲಿನ ಹುದ್ದೆಗಳಿಗಳಲ್ಲ. ನಮ್ಮ ಶಕ್ತಿಯನ್ನು ಕುಂದಿಸೋ ಕುತಂತ್ರ ಇದು, ಬೇರೇನೂ ಅಲ್ಲ. ಇಲ್ಲಿ ನಮ್ಮ ಶಕ್ತಿ ಕುಂದಿದ್ರೆ, ಅಲ್ಲಿ ತಮ್ಮ ಶಕ್ತಿ ಹೆಚ್ಚುತ್ತೆ ಅಂತ ತಿಳಿದುಕೊಂಡಿರಬೇಕು ಅವರು. ಒಂದು ಮಾತನ್ನ ಸ್ಪಷ್ಟವಾಗಿ ಹೇಳಿ ಬಿಡ್ತೀನಿ. ಯಾರೇನೇ ಮಾಡಿದ್ರೂ ನಮ್ಮ ಶಕ್ತಿ ಕುಂದೋದಿಲ್ಲ, ನಮ್ಮ ಪ್ರಾಮುಖ್ಯತೆ ಕಮ್ಮಿಯಾಗೋದಿಲ್ಲ. ಅಷ್ಟಲ್ಲದೆ ಮೇಲಧಿಕಾರಿಗಳು ನಮ್ಮ ಹುದ್ದೆಗೆ ಕೈಹಾಕೋಕೆ ಬರ್ತಾ ಇದ್ರಾ, ನೀವೇ ಯೋಚಿಸಿ. ಎಲ್ಲಾ ಕೆಲಸಗಳೂ ನಮ್ಮಿಂದಾನೇ ಆಗುತ್ವೆ ಅಂತ ಹೇಳಿದ್ನಲ್ಲಾ, ಅದ್ರಲ್ಲಿ ಉತ್ಪ್ರೇಕ್ಷೆ ಕಿಂಚಿತ್ತೂ ಇಲ್ಲ. ಮೇಲಧಿಕಾರಿಗಳು ಏನ್ಮಾಡ್ತಾರೆ? ಪುಟಪ್, ಬ್ರಿಂಗಪ್ ಅಂತ ಬರೀತಾರೆ. ಆಮೇಲೆ ಆಕಾಗದದ ಹಿಂದು ಮುಂದೆಲ್ಲಾ ತಿಳಕೊಂಡು ಮೇಲಿನವರ ಬುದ್ಧಿ ಮಟ್ಟಕ್ಕೂ ನಿಲುಕೋ ಹಾಗೆ ನೋಟ್ ಬರೆದು, ಉತ್ತರದ ಕರಡು ಬರೆದು, ಮುಂದಿನ ಕ್ರಮ ಏನೂಂತ ತಿಳಿಸಿಕೋಡೋ ಗುರುತರವಾದ ಜವಾಬ್ದಾರಿ ನಮ್ಮದಲ್ಲದೆ ಅವರದ್ದಾ? ನಾವಿಷ್ಟೆಲ್ಲಾ ಮಾಡಿದ ಮೇಲೆ ಅಪ್ರೂವ್ಡ್ ಅಂತ ಬರೆದು ಗುದ್ಲಿ ಗುರುತು ಹಾಕಿ ಅದನ್ನು ಜಾರಿಗೊಳಿಸೋ ಜವಾಬ್ದಾರೀನೂ ನಮ್ಮ ಮೇಲೇನೇ ಬಿಡ್ತಾರೆ. ಅವರಿಗೆ ಹೆಸರು ಬೇಕು, ಶ್ರಮ ಪಡೋರು ನಾವು. ಇದು ನಮ್ಮ ಶೋಷಣೆ ಅಲ್ಲದೆ ಬೇರೇನೂ ಅಂತಾ ಕೇಳೋಕೆ ಇಷ್ಟ ಪಡ್ತೀನಿ.

ಅದೂ ಅಲ್ಲದೆ, ನಮ್ಮ ಇಡೀ ಅಧಿಕಾರ ವರ್ಗ ರಚನೆಯ ಮೂಲಭೂತ ಸಿದ್ಧಾಂತಕ್ಕೂ ಈಗ ಒಂದು ಗುರುತರವಾದ ಅಪಾಯ ಬಂದಿದೆ. ಮೇಲಿನೋರೆಲ್ಲಾ ಕೆಳಗಿನ ಹುದ್ದೆಗೆ ಲಗ್ಗೆ ಹಾಕಿದ್ರೆ ಕೆಳಗಿನವರು ಮತ್ತೂ ಕೆಳಗಿನ ಹುದ್ದೆಗೆ ಪ್ರಯತ್ನ ಪಡಬೇಕಾಗುತ್ತೆ. ಮೂರನೇ ದರ್ಜೆಗೆ ನಾವೆಲ್ಲಾ ಹಿಂಭಡ್ತಿ ಹೊಂದಬೇಕು. ಮೂರನೇ ದರ್ಜೆಯವರು ನಾಲ್ಕನೇ ದರ್ಜೆಗೆ ಹೋಗಬೇಕು. ನಾಲ್ಕನೇ ದರ್ಜೆಯವರ ಗತಿ? ಸ್ವಲ್ಪ ಯೋಚಿಸಿ. ಐದನೇ ದರ್ಜೆ ಹುದ್ದೆ ಇಲ್ಲದಿರೋಣ, ಅದನ್ನ ಸೃಷ್ಟಿಸಬೇಕಾಗುತ್ತೆ, ಎಚ್ಚರಿಕೆ! ಹಾಗೇನಾದ್ರೂ ಹೊಸ ಕೆಳಸ್ತರದ ವರ್ಗ ಸೃಷ್ಟಿಯಾಗದಿದ್ರೆ, ನಾಲ್ಕನೇ ದರ್ಜೆಯವರನ್ನೆಲ್ಲಾ ನಿರುದ್ಯೋಗಿಗಳು ಅಂತ ಪರಿಗಣಿಸಬೇಕಾಗುತ್ತೆ. ಇದು ವಾಸ್ತವಾಂಶಕ್ಕೆ ಮಾನ್ಯತೆ ನೀಡಿದಂತೆ ಅಂತ ಯಾರಾದ್ರೂ ಕುಹಕವಾಡಬಹುದು, ಆಡಲಿ ಬಿಡಿ. ಈಗಿನ ಪರಿಸ್ಥಿತಿಯಲ್ಲಿ ಕೆಳಗಿನ ದರ್ಜೆಗೆ ನಾವು ಹೋಗಲು ಹಿಂದೇಟು ಹಾಕ್ತಿದೀವಿ ಅಂತ ಏನೂ ಅಲ್ಲ. ಆ ದರ್ಜೆಗಳಿಗೂ ತಮ್ಮದೇ ಆದ ಸ್ವಾರಸ್ಯ ಇದ್ದೇ ಇದೆ. ಆದ್ರೆ ಹೀಗೇ ಹೋಗ್ತಾ ಇದ್ರೆ ಇದು ಎಲ್ಲಿ ನಿಲುತ್ತೆ?

ಬೀದರ್‌ನ ಪ್ರೊಫೆಸರ್ ನಮ್ಮ ದರ್ಜೆಯ ಮೇಲಿಟ್ಟಿರುವ ಅಭಿಮಾನಕ್ಕೆ ನಾವು ಅವರಿಗೆ ವಂದನೆ ಸಲ್ಲಿಸೋಣ. ಆದ್ರೆ, ನಾವು ನಮ್ಮ ಜಾಗಾನ ಭದ್ರ ಮಾಡಿಕೊಳ್ಳೋಣ, ಪರಕೀಯ

ಆಕ್ರಮಣದ ವಿರುದ್ಧ ಧ್ವನಿ ಎತ್ತೋಣ, ಕೊನೆಯ ವರೆಗೂ ಹೋರಾಡೋಣ - ಬಂಧುಗಳೇ ಏಳಿ, ಎಚ್ಚೆತ್ತು ಕೊಳ್ಳಿ, ಹೋರಾಟಕ್ಕೆ ಸಿದ್ಧವಾಗಿ!

(ಪ್ರಚಂಡ ಕರತಾಡನ)

ಆತ್ಮೀಯ ಸಹೋದ್ಯೋಗಿಗಳೇ, ಈಗ ಚರ್ಚೆ ಮಾಡಬಹುದು, ಪ್ರಶ್ನೆ ಕೇಳಬಹುದು.

ಪ್ರಶ್ನೆ : ಈಗಾಗ್ಲೇ ಐ. ಎ. ಎಸ್. ಅಧಿಕಾರಿಗಳು ತಮ್ಮದಲ್ಲದ ಕ್ಷೇತ್ರಗಳಲ್ಲೂ ತಮ್ಮ ನೇಮಕಾತಿಗೆ ಪ್ರಯತ್ನಪಟ್ಟು ಸರಕಾರವನ್ನು ಒಲಿಸಿಕೊಂಡು ಅಧಿಕಾರ ಗ್ರಹಣ ಮಾಡ್ತಿದಾರೆ. ಹೀಗಾಗಿ ಡಿಪಾರ್ಟ್‌ಮೆಂಟ್ನೋರಿಗೆ ನ್ಯಾಯವಾಗಿ ಬರಬೇಕಾದ ಪ್ರೊಮೋಷನ್ ಸಿಗ್ತಾ ಇಲ್ಲಾಂತ ಅಸಮಾಧಾನವಾಗಿದೆ.

ಉತ್ತರ: ಈ ವಿಷಯ ನಮ್ಮ ಇಂದಿನ ಸಮಸ್ಯೆಗೆ ಸಂಬಂಧಪಟ್ಟಿದ್ದಲ್ಲ. ಆದರೂ ಸಂಬಂಧಪಟ್ಟನೊಂದ ವರ್ಗದವರು ಪ್ರತಿಭಟಿಸಬೇಕು. ನಾವು ಅವರಿಗೇ ಸಹಾನೂಭೂತಿ ವ್ಯಕ್ತ ಪಡಿಸಬಹುದು.

ಪ್ರಶ್ನೆ : ಒಂದ ದಿನ ಒಂದು ಗುಮಾಸ್ತ ಆಫೀಸಿಗೆ ಬರದೇ ಹೋದ್ರೆ ಅವನ ಕೆಲಸವನ್ನು ಬೇರೆ ಯಾರೂ ಮಾಡೋಕಾಗೋದಿಲ್ಲ ಅನ್ನೋ ಒಂದು ಸತ್ಯ ಅವನ ಪ್ರಾಮುಖ್ಯತೆಯನ್ನೇ ಒತ್ತಿ ತೋರಿಸುತ್ತೆ. ಬೇರೆಯವರು ಬಂದು, ಅವರು ಮೇಲಧಿಕಾರಿಗಳಿರಲಿ, ಇನ್ನೊಬ್ರೇ ಇರಲಿ, ಆ ಕೆಲ್ಸಾನ ಮಾಡ್ತೀನಿ ಅಂದ್ಕೊಂಡ್ರೆ ಅವರು ಮೂರ್ಖತನ ಪ್ರದರ್ಶಿಸಿದ ಹಾಗೇ ಅಲ್ಲವೇ?

ಉತ್ತರ: ಹೌದು, ಹೌದು!

ಪ್ರಶ್ನೆ : ಒಂದು ವೇಳೆ ಅವರು ತಮಗಿರೋ ಅಧಿಕಾರ ಚಲಾಯಿಸಿ ನಮ್ಮ ಕೆಲಸಾನೂ ತಾವೇ ಮಾಡಿದ್ರೆ, ಸರಕಾರಕ್ಕಾಗೋ ನಷ್ಟ, ಸಾರ್ವಜನಿಕರಿಗಾಗೋ ಅನಾನುಕೂಲಕ್ಕೆ ಏನಾದ್ರೂ ಪರಿಹಾರ ಇದೆಯೆ?

ಉತ್ತರ: ಇದು ಕಾನೂನಿನ ಪ್ರಶ್ನೆ. ಸರಕಾರ ಇದನ್ನೆಲ್ಲಾ ಗಮನಿಸಿ ಮೇಲಧಿಕಾರಿಗಳಲ್ಲಿರೋ ಕೆಳವರ್ಗದ ಹುದ್ದೆಗಳ ಲಾಲಸೆಯನ್ನು ಕಮ್ಮಿ ಮಾಡಬೇಕೇ ಹೊರತು, ಅವರಿಗೆ ಕನಿಷ್ಠ ವಿದ್ಯಾರ್ಹತೆ ಇದೆ ವಯೋಮಿತಿಯೊಳಗೂ ಇದಾರೆ ಅನ್ನೋ ಕಾರಣಕ್ಕೆ ಅವರನ್ನ ಇಂಟರ್‌ವ್ಯೂಗೆ ಕರೀಬಾರದು, ಕರೆದರೂ ಆರಿಸಬಾರದು. ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಕ ಪ್ರತಿಬಂಧಕೋಪಾಯಗಳನ್ನು ಜಾರಿಗೆ ತರಬೇಕು.

ಪ್ರಶ್ನೆ : ಒಂದು ವೇಳೆ ಇದು ಅಸಾಧ್ಯವಾದರೆ ನಾವು ಮುಂದೇನು ಮಾಡಬೇಕು?

ಉತ್ತರ: ಇದೇನಾದ್ರೂ ಮುಂದುವರಿದರೆ ಆಗೋ ಪರಿಣಾಮಗಳನ್ನು ಯೋಚಿಸಬೇಕು. ಪ್ರತಿಯೊಬ್ಬನೂ ತನ್ನ ಕೆಳಗಿನವನಾಗ ಬಯಸಿದರೆ, ಚೀಫ್ ಸೆಕ್ರಟರಿ ಅಂಡರ್ ಸೆಕ್ರಟರಿ ಯಾಗ್ತಾನೆ, ಚೀಫ್ ಮಿನಿಷ್ಟರ್ ಅವನ ಪೀಯೆ ಆಗ್ತಾನೆ, ಡೈರೆಕ್ಟರ್ ಅಸಿಸ್ಟೆಂಟ್ ಡೈರಕ್ಟರಾಗ್ತಾನೆ, ಹೆಡ್ಮಾಸ್ಟರ್ ಆರ್ಡಿನರಿ ಟೀಚರ್ ಆಗ್ತಾನೆ, ಪೋಲೀಸ್ ಇನ್‌ಸ್ಪೆಕ್ಟರ್ ಕಾನ್‌ಸ್ಟೇಬಲ್ ಆಗ್ತಾನೆ. ಎಲ್ಲಾ ತಲೆಕೆಳಗಾಗುತ್ತೆ. ಇದೆಲ್ಲಾ ಹೀಗಾಗೋಕೆ ಬಿಡೋ ಬದಲು, ನೇಮಕಾತಿ ನಿಮಯಗಳನ್ನೇ ಬದಲಿಸಿ, ಪ್ರತಿಯೊಬ್ಬನನ್ನೂ ಉನ್ನತ ಹುದ್ದೆಗೆ ಮೊದಲು ನೇಮಿಸಿ, ಕಾಲಕ್ರಮೇಣ, ಮುಂಬಡ್ತಿ ಕೊಡೋ ಬದಲು ಹಿಂಬಡ್ತಿ ಕೊಟ್ಟು ಕೆಳಗಿನ ಹುದ್ದೆಗಳಿಗೆ ಕಳಿಸಿಕೊಡೋದು ಒಳ್ಳೇ ವ್ಯವಸ್ಥೆ. ಹೀಗಾಗಿ ಪ್ರತಿಯೊಬ್ಬ ಮೇಲಧಿಕಾರಿಯೂ ತಾನು ಆಸೆ

ಪಡುವ ಕೆಳವರ್ಗಕ್ಕೆ ಯೋಗ್ಯತಾನುಸಾರ ಬರುವ ಅವಕಾಶವಿದ್ದೇ ಇರುತ್ತದೆ. ಎಲ್ಲಾ ಸಕ್ರಮವಾಗೇ ಇರುತ್ತೆ.

ಪ್ರಶ್ನೆ : ಒಂದು ಪೇಪರ್ನ್ನ, ಒಂದು ಫೈಲ್‌ನ ಅಚ್ಚುಕಟ್ಟಾಗಿ ಪುಟಪ್ ಮಾಡೋದೂಂದ್ರೆ ಕಳ್ಳೇ ಪುರಿ ತಿಂದ ಹಾಗೆ ಅಂತ ಯಾರಾದ್ರೂ ಭಾವಿಸಿದ್ರೆ ಅದಕ್ಕಿಂತ ಹೆಚ್ಚಿನ ಮೂರ್ಖತನ ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ. ನಾವು ಮಾಡೋ ಕೆಲಸದಲ್ಲಿ ಅನಿವಾರ್ಯವಾಗಿ ವಿಳಂಬ ಆಗುತ್ತೆ ಯಾಕೆ? ಒಂದು ಫೈಲು ಎಲ್ಲಾ ವಿಧಗಳಲ್ಲೂ ಸಂಪೂರ್ಣವಾಗಿರಬೇಕು, ಯಾವುದೇ ಊನ, ಅವಲಕ್ಷಣ ಇರಬಾರದು, ಸರ್ವಾಂಗ ಸುಂದರವಾಗಿರಬೇಕು ಅನ್ನೋ ನಮ್ಮ ಕಾಳಜಿಯಿಂದ ತಾನೇ? ಮೇಲಧಿಕಾರಿಗಳ ಅವಸರಕ್ಕೆ ಅರೆಬರೆಯಾಗಿ ಪುಟಪ್ ಮಾಡಿದ್ರೆ ಅದ್ರಿಂದಾಗೋ ಅನಾಹುತಕ್ಕೆ ಯಾರು ಹೊಣೆ? ಅಪಕೀರ್ತಿನ ನಮ್ಮ ತಲೇಗೇ ಕಟ್ತಾರೆ, ಮೆಮೋ ಕೊಡ್ತಾರೆ, ಶೋಕಾಸ್ ನೋಟೀಸ್ ಇಷ್ಯೂ ಮಾಡ್ತಾರೆ. ನಾವು ನಮ್ಮ ಸುರಕ್ಷತೆನೂ ನೋಡ್ಕೋ ಬೇಕೋ ಬೇಡ್ವೋ? ಪುಟಪ್ ಮಾಡಿದ ಮೇಲೆ ಕ್ವೈರಿ ಹಾಕಿ ಕಳಿಸಿ ಬಿಡಬಹುದು, ಸುಲಭವಾಗಿ ಅದಕ್ಕೆ ಸಮಾಧಾನಾನೂ ನಾವು ಸಿದ್ಧ ಮಾಡಿಕೊಂಡಿರಬೇಕು. ಇಲ್ಲಿ ಬಂದು ಕೂತುಕೊಂಡು ಫೈಲುಗಳ, ರೆಕಾರ್ಡ್‌ಗಳ ಧೂಳು ಕುಡಿದುಕೊಂಡು ಕೆಲಸ ಮಾಡಲಿ ಗೊತ್ತಾಗುತ್ತೆ ನಮ್ಮ ಕಷ್ಟ! ಈ ಸಂದರ್ಭದಲ್ಲಿ, ನಾವು ಎದುರಿಸುವ ಸಮಸ್ಯೆಗಳನ್ನು ಸಮರ್ಥವಾಗಿ ಪ್ರಚಾರ ಮಾಡಿ ಅವರ ಹೃದಯದಲ್ಲಿ ವಾಸ್ತವತೆಯ ಭಯ ಹುಟ್ಸೋ ಹಾಗೆ ಮಾಡಿ ಅವರ ಅನೈತಿಕ ಸಾಹಸವನ್ನು ಮೂಲದಲ್ಲೇ ತಡೆಗಟ್ಟಬೇಕೂಂತ ಸಲಹೆ ಮಾಡ್ತೀನಿ.

ಉತ್ತರ: ಉತ್ತಮವಾದ ಸಲಹೆ. ಈ ಸಭೆಯ ಠರಾವುಗಳನ್ನು ಸರಕಾರಕ್ಕೆ ತಕ್ಷಣ ಕಳಿಸಿಕೊಡೋ ಏರ್ಪಾಟು ಮಾಡ್ತೀನಿ. ನಮ್ಮ ಹಿತೈಷಿಗಳಾದ ಟಿವಿ, ಆಕಾಶವಾಣಿ ಮತ್ತು ಪೇಪರ್‌ನೋರೆಲ್ಲಾ ಈ ವಿಷಯಕ್ಕೆ ವ್ಯಾಪಕವಾದ ಪ್ರಚಾರಕೊಟ್ಟು ನಮ್ಮ ಹೋರಾಟದಲ್ಲಿ ನಮಗೆ ನೆರವಾಗಬೇಕೂಂತ ಸವಿನಯವಾಗಿ ಪ್ರಾರ್ಥಿಸಿಕೊಂಡು ಇಂದಿನ ಸಭೆಯನ್ನು ಮುಗಿಸ್ತೀನಿ, ನಮಸ್ಕಾರ. ಕೊನೆಯದಾಗಿ ನಮ್ಮೆಲ್ಲ ಆಶೋತ್ತರಗಳ ಈಡೇರಿಕೆಗಾಗಿ ನಮ್ಮ ಅಭಿಮಾನ ದೇವತೆಯೂ, ನಮ್ಮ ಪೂರ್ವ ಪ್ರವರ್ತಕನೂ ಆದ ಗಣಪತಿಯನ್ನು ಭಕ್ತಿ ಭಾವಾತಿರೇಕದಿಂದ ಒಕ್ಕೊರಲಿನಿಂದ ಭಜನೆ ಮಾಡೋಣ. ಎಲ್ಲಾ ನನ್ನ ಜೊತೆ ದನಿಗೂಡಿಸಿ.

ಬೆನಕ ಬೆನಕಾ
ಏಕದಂತಾ, ಪಚ್ಚೆಕಲ್ಲು
ಪಾಣೆಬಟ್ಲು, ಮುತ್ತಿನುಂಡೆ
ಹೊನ್ನಗಂಟೆ, ಏರಿಮೇಲಿನ ಗಣಪತಿಯೇ
ನಮ್ಮ ಕೈಹಿಡಿದು ಕಾಪಿಡು!
ಗಣೇಶ ಬಂದಾ
ಹೊಟ್ಟೆಮೇಲಿ ಗಂಧಾ
ಕಾಯ್ಕಡ್ಬು ತಿಂದ
ಉದ್ದಿನ್ಕಡ್ಬೂ ತಿಂದ
ಚಿಕ್ಕೆರೇಲಿ ಬಿದ್ದ
ದೊಡ್ಕೆರೇಲೆದ್ದ.

ಆ ಕಾಲವೊಂದಿತ್ತು - ದಿವ್ಯತಾನಾಗಿತ್ತು ......

ವಿಜಯ ಸಚ್ಚಿದಾನಂದ

ಈಗ ಅವರಿಬ್ಬರೂ ನಮ್ಮೊಂದಿಗಿದ್ದಿದ್ದರೆ ಒಂದು ಶತಮಾನಕ್ಕೂ ಮೇಲಾಗಿರುತ್ತಿದ್ದರೇನೋ! ಆತನ ಅಚ್ಚು ಕಪ್ಪು ಎನ್ನಬಹುದಾದ ಬಣ್ಣ, ಪುಟ್ಟ ಕಣ್ಣುಗಳು, ಬಕ್ಕತಲೆ, ಮೇಲಾಗಿ ವೃದ್ಧಾಪ್ಯದಿಂದಾಗಿ ಬಾಗಿದ ಬೆನ್ನಾಗಿದ್ದರೂ ಸಹ ನನ್ನ ಕನಸಿನ ಎಳೆ ಕಣ್ಣುಗಳಿಗೆ ಆತ ರೇಸಿನ ಕುದುರೆಯಂತೆ ಕಾಣುತ್ತಿದ್ದರು. ಆಕೆಯೋ .... ದಂತದ ಪುತ್ಥಳಿ. ಕೆನ್ನೆಯ ತುಂಬಾ ಅರಿಸಿನ ಹಚ್ಚಿ ಹಣೆ ತುಂಬಾ ಕಾಸಿನಗಲ ಕುಂಕುಮವಿಟ್ಟು, ತುರುಬಲ್ಲಿ ಮಲ್ಲಿಗೆಯೋ ಜಾಜಿಯ ದಂಡೆಯೋ ಮುಡಿದರೆ ಆ ತಾಯಿ ಸಾಕ್ಷಾತ್ ಪಾರ್ವತಿ ದೇವಿಯಂತೆ ಕಾಣುತ್ತಾಳೆಂದು ಮಂದಿಯ ಅಂಬೋಣವಾಗಿತ್ತು.

ಆತ ಆಗಿನ್ನೂ 19ರ ಹರಯ. ಮದ್ರಾಸಿನ ಗಿಂಡೀ ಕಾಲೇಜಿನಲ್ಲಿ ಎರಡನೆ ವರ್ಷದ B.A ವಿದ್ಯಾರ್ಥಿಯಂತೆ. ಬೇಸಿಗೆ ರಜಕ್ಕೆಂದು ತನ್ನೂರಾದ ಮೈಸೂರಿಗೆ ಬಂದಿದ್ದಾನೆ. ಬಂದಾಗಿನಿಂದಲೂ ಅವನ ಕಾಲು ಭೂಮಿಯ ಮೇಲೆ ನಿಲ್ಲುತ್ತಲೇ ಇಲ್ಲ. ಗಾಳಿಯಲ್ಲಿ ತೇಲಾಡುತ್ತಿದ್ದಾನೆ. ಕನಸಿನ ಲೋಕದಲ್ಲಿದ್ದಾನೆ. ಯಾಕಿರಬಾರದು? ಅವನ ಸಾಧನೆಯೇನು ಕಮ್ಮಿಯೆ? ಹಿಂದಿನ ದಿನವಷ್ಟೆ ತನ್ನೂರಿಗೆ ಹೊರಡುವ ಮುನ್ನ ಇಂಗ್ಲೀಷ್ ಪ್ರೊ. ಜಾನ್‌ಸನ್‌ರವರನ್ನು ಕಾಣಲು ಹೋದಾಗ ಅವರಾದರೂ ಏನೆಂದಿದ್ದರು? "Well done! my boy! ಹೋದ ವರ್ಷದಂತೆ ಈ ವರ್ಷವೂ ಇಂಗ್ಲೀಷಿನಲ್ಲಿ ನೀನೇ ಮೊದಲಿಗನಾಗಿದ್ದೀ. ಅದಕ್ಕಾಗಿ ನಿನ್ನ ಹೆಸರನ್ನು ಸ್ಕಾಲರ್‌ಶಿಪ್‌ಗಾಗಿ ರೆಕಮೆಂಡು ಮಾಡಿದ್ದೀನಿ. ಮುಂದೆಯೇ ಹೀಗೇ ಒಳ್ಳೆ ಹೆಸರನ್ನು ತೆಗೆಯುವೆ ಎಂದು ಆಶಿಸುವೆ" ಎಂದು ಹೇಳಿ ಬೆನ್ನು ತಟ್ಟಿರಲಿಲ್ಲವೇ! ಸ್ಕಾಲರ್‌ಶಿಪ್ ಎಂದರೇನು ಸಾಮಾನ್ಯವೇ - ಅಪ್ಪಟ ಬೆಳ್ಳಿಯ ನಾಲ್ಕು ನಾಣ್ಯಗಳು.

ಆತನೇನು ಕಷ್ಟಪಟ್ಟಿದ್ದು ಕಮ್ಮಿಯೇ! ಆದರೂ ಆತನಿಗೆ ಅದು ಕಷ್ಟವೆನಿಸಿರಲಿಲ್ಲ. ಏಕೆಂದರೆ ಆತನಿಗೆ 'ರೊಮ್ಯಾಂಟಿಕ್ ಪೊಯಟ್'ಗಳು ಎನಿಸಿಕೊಂಡ ಶೆಲ್ಲಿ, ಕೀಟ್ಸ್ ಮತ್ತು ವರ್ಡ್ಸ್ ವರ್ತ್ ಎಂದರೆ ಬಲು ಪ್ರೀತಿಯಂತೆ. ಶೇಕ್ಸ್‌ಪಿಯರ್ ಸಹ ಅಚ್ಚು ಮೆಚ್ಚಿನ ನಾಟಕಕಾರ. ರಾತ್ರಿಯಿಡಿ ಊಟ, ತಿಂಡಿ ನಿದ್ರೆ ಬಿಟ್ಟು ಓದೆಂದರೂ ತಯಾರಂತೆ. (ಹೌದು! ತನ್ನ ವೃದ್ಧಾಪ್ಯದಲ್ಲೂ ಅವುಗಳನ್ನು ಬಾಯಿಪಾಠ ಮಾಡಿದಂತೆ ಆತ ಹೇಳುತ್ತಿದ್ದರೆ ಅರ್ಥವಾಗದಿದ್ದರೂ ಸಹ ನಾನು ಬಾಯಿಬಿಟ್ಟುಕೊಂಡು ಆಲೈಸುತ್ತಿದ್ದೆ)

ತನ್ನ ಜಯಭೇರಿಯನ್ನು ಆಪ್ತರೊಂದಿಗೆ ಹಂಚಿಕೊಳ್ಳಲೆಂದು ಆತುರಾತುರನಾಗಿ ಊರಿಗೆ ಬಂದರೆ ಮೊದಲು ಎದುರಾದದ್ದು ಕನ್ನಡ ಆರನೆ ತರಗತಿಯಲ್ಲಿ ಮೂರು ಸಾರಿ ಡುಂಕಿ ಹೊಡೆದು ವಿದ್ಯೆಗೆ ತಿಲಾಂಜಲಿ ಬಿಟ್ಟು ಮುಂದಿನ ತೋಟ ನೋಡಿಕೊಳ್ಳುತ್ತಿದ್ದ ತಮ್ಮನಂತೆ! ಯಾಕೋ ಅವನನ್ನು ನೋಡ್ತಿದ್ದ ಹಾಗೆ ತಮ್ಮ ಹುಮ್ಮಸ್ಸೆಲ್ಲಾ ಸೂಜಿ ಚುಚ್ಚಿದ ಬೆಲೂನಿನ ಅನುಭವವಾಯತಂತೆ.

ಆದ್ರೂ ಅಮ್ಮನ ಮುದ್ದಿನ ಮಗ ತಾನೇ! ಅಮ್ಮನ ಮುಂದೆ ತನ್ನ ಪ್ರೊಫೆಸರ್ ಹೇಳಿದ್ದೆಲ್ಲಾ

ಬಣ್ಣಿಸಿ ಬಣ್ಣಿಸಿ ಹೇಳಿ, ''ಅಷ್ಟೇ ಅಲ್ಲಾ! ನಾಲ್ಕು ಬೆಳ್ಳಿ ನಾಣ್ಯ ಬೇರೆ ಸ್ಕಾಲರಶಿಪ್ ಅಂತ ಕೊಡ್ತಾರೆ'' ಅಂತ ಸಂತೋಷವಾಗಿ ಹೇಳ್ಕೊಂಡ್ಕಂತೆ.

''ಅಯ್ಯೋ ಮಗೂ! ನಾಲ್ಕು ಬೆಳ್ಳಿ ನಾಣ್ಯವೇನೋ? ದೇವರು ನಿನ್ನ ನೂರು ವರ್ಷಕಾಲ ಸುಖವಾಗಿಟ್ಟಿರಲಪ್ಪಾ! ನಮ್ಮ ಕಷ್ಟ ಇನ್ನು ಪರಿಹಾರವಾದ ಹಾಗೇನೇ ಕಣೋ! ನಿಮ್ಮಪ್ಪ ತರೋ ಹಣ ಏನೇನು ಸಾಲದು ....'' ಅಂತ ಶುರು ಮಾಡ್ತಿದ್ದ ಹಾಗೇ ಅಲ್ಲಿಂದ ಜಾಗ ಖಾಲಿ ಮಾಡಿದ್ರಂತೆ. (''ನೋಡದ್ಯಾ! ಎಂತಹ ಘಾಟಿ ನಮ್ಮಮ್ಮ! ಅಂದ್ರೆ ನಾನವಳಿಗಿಂತ ಘಾಟಮ್ಮಾ) ಅವಳೆಷ್ಟೇ ವಿಧದಲ್ಲಿ ಕೇಳಿದ್ರೂ ನಾನು ಮಾತ್ರ ಅವಳ ಕೈಗೆ ಆ ಹಣ ಮುಟ್ಟಿಸಲಿಲ್ಲಾ'' ಅಂತ ತಮ್ಮ ಬೊಕ್ಕ ತಲೆ ಸವರಿಕೊಳ್ಳುತ್ತಾ ನಗುತ್ತಿದ್ದರು. ಬಾಲ್ಯವನ್ನು ಮೆಲಕು ಹಾಕುತ್ತಾ)

ಇಂಗ್ಲೀಷ್ ಯಾರಿಗೂ ಅರ್ಥವಾಗದಿದ್ದರೇನು? (ತಂದೆಗೂ ಅಷ್ಟೇ ಅವರು ಕನ್ನಡ ಪಂಡಿತರು) ತನ್ನ ಪಾಡಿಗೆ ತಾನು ಮನೆ ಮುಂದಿನ ಸಂಪಿಗೆ ಮರದ ಕೆಳಗೆ ಕುಳಿತು ಶೇಕ್ಸ್‌ಪಿಯರನ ನಾಟಕವನ್ನು ತನ್ಮಯಿತೆಯಿಂದ ಓದಲು ಕೂತನಂತೆ. ಅಲ್ಲೇ ಬಾಗ್ಲ ಹತ್ರ ಕುಟ್ಟಾಣೇಲಿ ಎಲೆ ಅಡಿಕೆ ಕುಟ್ಕೋತಾ ಕೂತಿದ್ದ ಅಜ್ಜಿ'' ನೋಡು ಬಾರೇ! ಮಗು ಪಿರಂಗಿ ಭಾಷೇಲಿ ಏನೇನೂ ಎಷ್ಟು ಚಂದಾಗಿ ಹೇಳ್ತಾ ಕೂತಿದೆ'' ಅಂತ ಬೊಜ್ಜು ಬಾಯೀನ ಇಷ್ಟಗಲ ಬಿಟ್ಟು ನಗುತ್ತಾ ನೆಟ್ಟಿಗೆ ಮುರಿದಿದ್ದರಂತೆ. ಅಷ್ಟೇ ಅಲ್ಲ! ತಕ್ಷಣ ಕಣ್ಣಲ್ಲಿ ನೀರು ತುಂಬಿಕೊಂಡು '' ಇದಕ್ಕೊಂದು ಮದ್ವೆ ಮಾಡಿಬಿಟ್ರೆ ಕುಣ್ತುಂಬಾ ನೋಡಿ ನಾನು ಕಣ್ಣು ಮುಚ್ಕೋತೀನಿ. ಎಷ್ಟು ಹೇಳಿದರೂ ಇವ್ರಿಗೆ ನನ್ನ ಕಂಡ್ರೆ ಅಲಕ್ಷ್ಯ. ಇವಳು ಏನಾದ್ರೂ ಮಾಡ್ಕೊಳ್ಳೀಂದ್ರೆ. ಅವನೂ ಹಾಗೇ ಆಡ್ತಾನೇ. ಅಮ್ಮ ಏನು ಹೇಳ್ತಾಳೇಂತ ಕೇಳೋ ವ್ಯವಧಾನಾನೂ ಇಲ್ಲ'' ಅಂತ ತನ್ನ ಮಗ ಸೊಸೆ ಮೇಲೆ ಕಿಡಿಕಾರೋಕ್ಕೆ ಶುರು ಮಾಡಿದ್ರಂತೆ.

''ಥೂ! ಶುದ್ಧ ಅನಾಗರಿಕರು! ಶೇಕ್ಸಪಿಯರ್ ಎಂತಹ ಒಳ್ಳೆ ನಾಟಕಕಾರ, ಎಷ್ಟು ಒಳ್ಳೆ ನಾಟಕ! ಸ್ವಲ್ಪವಾದ್ರೂ ಅರ್ಥ ಮಾಡ್ಕೊಳ್ಳೋ ಶಕ್ತಿ ಇಲ್ಲಾಂದ್ರೆ ಇವ್ರ ಮುಂದೆ ಇದನ್ನ ಓದೋದು ಒಂದೇ ಕೋಣನ ಮುಂದೆ ಕಿನ್ನರಿ ಬಾರಿಸೋದೂ ಒಂದೇ'' ಅಂತ ತನ್ನ ಹತ್ತಿರವಿದ್ದ ಪುಸ್ತಕದ ಗಂಟನ್ನೆಲ್ಲಾ ತೆಗೆದುಕೊಂಡು ಮನೆಯಿಂದ ಕೋಪದಲ್ಲಿ ಹೊರಟು ಬಂದಿದ್ದನಂತೆ. ಹಾಗೆ ಎಲ್ಲೆಲ್ಲೋ ಅಲಮಾರಿಯಂತೆ ಅಲೀತಿದ್ದಾಗ ಶಾಂತ ವಾತಾವರಣದ ಒಂದು ಪಾರ್ಕು ಅವನ ಕಣ್ಣಿಗೆ ಬಿದ್ದಿತಂತೆ. ಅಷ್ಟೆ ಅಲ್ಲಾ! ಆ ಪಾರ್ಕು ಅವನನ್ನ ಕೈ ಬೀಸಿ ಕರೆದ ಅನುಭವ ಬೇರೆ ಆಯ್ತಂತೆ. ಆಲದ ಮರದ ಕೆಳಗೆ ತಂಪಾಗಿ ಕುಳಿತುಕೊಂಡು ಪುಸ್ತಕ ತೆಗೆದು ಓದುತ್ತಾ ಕುಳಿತುಕೊಂಡು ಬಿಟ್ಟರೆ ಮನೆ ಮಠ ಎಲ್ಲಾ ಮರೆತಂತೇನೆ. ಹೊಟ್ಟೆ ಚುರ್ ಅಂದಾಗ ಮನೆ. ನಿದ್ದೆ ಬಂದಾಗ ಮನೆ. ಮಿಕ್ಕೆಲ್ಲಾ ಸಮಯ ಆ ಪಾರ್ಕಿನಲ್ಲೇ ಬಿಡಾರ.

ಒಂದು ದಿನ ಹೀಗೆ ತನ್ಮಯತೆಯಿಂದ ಓದುತ್ತಾ ಇದ್ದನಂತೆ. ಎದುರು ಮನೆಯಿಂದ ಒಂದು ಹುಡುಗಿ ಸುಮಾರು ಹತ್ತು ಹನ್ನೆರಡು ವರ್ಷವಿರಬಹುದು ಕಂಕುಳಲ್ಲಿ ಒಬ್ಬ ಹುಡುಗ ಸುಮಾರು ನಾಲ್ಕು ವರ್ಷದವನಿರಬಹುದು - ಎತ್ತಿಕೊಂಡು ಬಂದಳಂತೆ. ಅವಳನ್ನ ನೋಡ್ತಿದ್ದ ಹಾಗೇ ಇವನಿಗೆ ನವಿಲಿನ ಕುಣಿತ, ಜಿಂಕೆಯ ಜಿಗಿತ, ದುಂಬಿಯ ಝೇಂಕಾರ, ಕೋಗಿಲೆಯ ಕುಹೂ, ಹೂ ಬಿಸಿಲಿನ ಶಾಖ, ಮಳೆಯ ತಂಪು .... ಎಲ್ಲಾ ಒಟ್ಟಿಗೆ ಆದ ಅನುಭವವಾಯ್ತಂತೆ.

ಈಗಿನ ಕಾಲದ ಭಾಷೆಯಲ್ಲಿ ಹೇಳೋದಾದ್ರೆ Love at first sight ಅಂತಾರಲ್ಲ ಹಾಗೆ!

ಅದೇ ಕ್ಷಣದಿಂದ ಆ ಗುಂಗುರ ಕೂದಲ, ಕಾಸಗಲ ಕುಂಕುಮ, ಬಟ್ಟಲು ಗಣ್ಣು, ಕಿವೀಲಿ ಚಳತುಂಬು, ಕೈತುಂಬಾ ಗಾಜಿನ ಬಳೆ, ತೆಳು ಸೊಂಟದ ಸುತ್ತ ಡಾಬು, ಕುತ್ತಾಲದ ಸೀರೆಯ ಸುಂದರಿಯ ಕನಸೇ ಕನಸು. ನಮ್ಮ ನಾಯಕ ಪ್ರೇಮ ಜಾಲದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟಿದ್ದಾನೆ.

ಊಟ ರುಚಿಸದು. ನಿದ್ರೆ ಅವನಿಂದ ದೂರ ಓಡಿ ಹೋಗಿ ಬಿಟ್ಟಿದೆ. ಅವನ ಪ್ರಿಯ ಸಂಗಾತಿಗಳಾದ ಅವನ ಪುಸ್ತಕಗಳು ಎಲ್ಲೊ ಚೆಲ್ಲಾಪಿಲ್ಲಿಯಾಗಿ ಮನೆಯೆಲ್ಲಾ ಹರಡಿ ಬಿಟ್ಟಿದೆ. ಯಾವುದರಲ್ಲೂ ಆಸಕ್ತಿಯಿಲ್ಲವಾಗಿದೆ ಆ ಪ್ರೇಮ ರೋಗಿಗೆ.

ಯಾರ ಹತ್ರ ಹೇಳಬೇಕು ತನ್ನ ಅನಿಸಿಕೆಯನ್ನ. ತನಗೆ ಹತ್ತಿರದವರಾರೂ ಇಲ್ಲ! ಎಲ್ಲಾ ಸಂಬಂಧಿಗಳೇ. ತನ್ನ ತಮ್ಮ! - ಉಹೂ ಪ್ರಯೋಜನವಿಲ್ಲ. ಅಜ್ಜಿ - ಹೂ! ಹೇಳ್ಕೊಂಡೇನೋ ಅವಳ ಹತ್ರ ಹೇಳ್ಕೊಬಹುದು. ಅವಳೂ ಏನೋ ತನ್ನ ಮದ್ವೆ ನೋಡಿ ಸಾಯ್ತೀನೀಂತ ಮನಸ್ಸು ಮಾಡಿದ್ದಾಳೆ. ಆದ್ರೆ ತನ್ನ ಮದ್ವೆ ಆದ್ಮೇಲೂ ಇನ್ನಿಪ್ಪತ್ತು ವರ್ಷ ಬದ್ಕಿರ್ತಾಳೆ ಅನ್ನೋದ್ರಲ್ಲಿ ಸಂಶಯವಿಲ್ಲ. ಈಗ್ಲೂ ಸಹ ಸುಲಭವಾಗಿ ಭಾವಿಯಿಂದ ಹತ್ತಿಪ್ಪತ್ತು ಬಿಂದಿಗೆ ನೀರು ಸೇದಿ ಹಾಕ್ಬಿಟ್ತಾಳೆ. ಆದ್ರೆ ತಾನು ಒಂದ್ಐದು ಬಿಂದಿಗೆ ನೀರು ಎಳಿಯೋದ್ರಲ್ಲಿ ಸುಸ್ತೋ ಸುಸ್ತು! ಅಜ್ಜಿ ಒಪ್ಪಿದರೇನು ಭಾಗ್ಯ ಬಂತು ಅಮ್ಮ ಒಪ್ಪಬೇಕಲ್ಲಾ!

''ತುಂಬಾ ಓದಿ ದೊಡ್ಡ ಪರೀಕ್ಷೆ ಪಾಸು ಮಾಡಿ ದೊಡ್ಡ ಹುದ್ದೆ ಹಿಡಿದು ಕೈತುಂಬಾ ಸಂಬಳ ತಂದ್ಮೇಲೇನೇ ಮದುವೇಂತ ಯಾವಾಗ್ಲೂ ಹೇಳ್ತಾನೇ ಇರ್ತಾಳೆ. ಆಗಾಗ್ಗೆ ಓದೂಂತ ಬೈತಾನೂ ಇರ್ತಾಳೆ. ಅವಳು ಖಂಡಿತ ಒಪ್ಪೊಲ್ಲ. ಅಷ್ಟಲ್ಲದೆ ಅವಳ ಹತ್ತಿರ ಮಾತನಾಡೋದಕ್ಕೆ ತಾನೇ ಯಾರಿಗೆ ಧೈರ್ಯ? ಅಮ್ಮಾಂದ್ರೆ ಅವನಿಗೆ ಜ್ಞಾಪಕಕ್ಕೆ ಬರ್ತಾಯಿದ್ದಿದ್ದು ಅವಳ ಒಂದೇ ಮುಖಾಂತೆ.

ಆವಾಗ ಅವನಿನ್ನೂ ತುಂಬಾ ಚಿಕ್ಕವನು. ಸುಮಾರು ಏಳೆಂಟು ವರ್ಷಯಿರಬಹುದು. ಅಮ್ಮ ಆದಿನ ಅವನ ತಲೆಗೆ ಮೈಗೆ ಎಣ್ಣೆ ಚಟ್ಟಿ, '' ಇಲ್ಲೇ ಆಡ್ಕೋತಿರು ಮಗು! ನೀರ ಮನೇಲಿ ನೀರು ಕಾಸಿ ನಿನ್ನ ಕರೀತೀನಿ. ತಕ್ಷಣ ಬಂದ್ಬಿಡು'' ಅಂತ ಹೇಳಿ ಒಳಗೆ ಹೋದ್ಲಂತೆ. ಅವಳು ಹಾಗೆ ಒಳಗೆ ಹೋದ ತಕ್ಷಣ ಇವನು ಹೀಗೆ ಕೈಲಿ ನಾಲ್ಕು ಗೋಲಿ ಹಿಡಿದು ರಸ್ತೆಗೆ ಓಡಿದ್ನಂತೆ. ಆಡ್ತಾ ಆಡ್ತಾ ಎಲ್ಲಿ ಹೋದೇ ಅನ್ನೋದೂ ಜ್ಞಾನದಲ್ಲಿಲ್ಲವಂತೆ. ಮನೆಯಿಂದ ಬಲು ದೂರ ಬೇರೆ ಬಂದುಬಿಟ್ಟಿದ್ನಂತೆ. ಯಾವಾಗ ಹೊಟ್ಟೆ ಚುರ್ ಅನ್ನೋಕೆ ಶುರುವಾಯ್ತು - ಅಷ್ಟು ಹೊತ್ತಿಗೆ ಸೂರ್ಯ ನೆತ್ತಿ ಮೇಲೆ ಬಂದಿದ್ನಂತೆ. ಬರೀ ಕೋಪೀನ ಧಾರಿಯಾಗಿ ಬಂದ್ಬಿಟ್ಟಿದ್ದ ಬೇರೆ ಮೈಯಲ್ಲಾ ಸುಟ್ಟು ಬದನೆಕಾಯಿ ಆಗಿತ್ತಂತೆ. ಊಟದ ಕನಸು ಕಾಣ್ತಾ ಮನೆ ಕಡೆ ಓಡಿದ್ನಂತೆ. ಮನೆ ತಲಪ್ತಿದ್ದ ಹಾಗೇ ತಟ್ಟೆ ತುಂಬಾ ಅನ್ನ - ''ತಿನ್ನು ಮಗೂ!'' ಅಂತ ಪ್ರೀತಿ ಮಾಡೊ ಅಮ್ಮನ ಮುಖವಲ್ಲ ಕಂಡಿದ್ದು. ಕೋಪದಿಂದ ಕೆಂಪಾದ ಕಾಳಿಕಾಮ್ಮನ್ನೋರನ್ನ ಜ್ಞಾಪಕ ತರಿಸುವಂತಹ ಅವರಮ್ಮನ ಮುಖ. ಬಚ್ಚಲ ಮನೆಗೆ ಎಳೆದುಕೊಂಡು ಹೋಗಿ ಬಚ್ಚಲಲ್ಲಿ ನೂಕಿ ಒಂದು ಕೊಡ ಬಿಸಿ ನೀರು ತಲೆಮೇಲೆ ಸುರಿದಳಂತೆ. ಆಮೇಲೆ ಆ ಬಿಂದಿಗೆಯಿಂದಾನೇ ತಲೆ ಮೇಲೆ ಕುಟ್ಟಿದಳಂತೆ. ಸಾಲದೂಂತ ಮತ್ತೊಮ್ಮೆ ತಣ್ಣೀರು ಸುರದ್ಲಂತೆ. ಇನ್ನೊಮ್ಮೆ ಕುಟ್ಟಿದಳಂತೆ. ಹೀಗೆ ತೃಪ್ತಿಯಾಗೋ ತನಕ ನೀರ್ಹಾಕ್ತ, ಬಿಂದಿಗೆಯಿಂದ

ಕುಟ್ಟಿ ಮೇಲೆ ಇನ್ನೊಂದು ಕೈಯಿಂದ ಬೆನ್ನಿಗೆ ಬಿಗಿದು ಹೊರಗೆ ಹೋಗಿದ್ದಳಂತೆ. ಒಂದು ಮಾತಿಲ್ಲ ಒಂದು ಕಥೆಯಿಲ್ಲ. ದಿನವಿಡಿ ಉಪವಾಸ ಬೇರೆ ಕೆಡವಿದ್ಲಂತೆ. ಯಾವಾಗ್ಲೊ ಪಾಪ ಅಜ್ಜಿ ಅಮ್ಮನ ಕಣ್ಣು ತಪ್ಪಿಸಿ ತಟ್ಟೇಲಿ ಅನ್ನ ಹಾಕ್ಕೊಂಡು ಬಂದು ತಿನಿಸಿದ್ದಕ್ಕೆ ಅವನ ಜೀವ ಉಳಿದಿತ್ತಂತೆ. ಅಪ್ಪ.... ಪ್ರಯೋಜನವೇ ಇಲ್ಲ. ಅಮ್ಮನ ಕೈಲಿ ಮೂಗಿನ ದಾರ ಹಾಕಿಸಿಕೊಂಡ ಪ್ರಾಣಿ. ಅಮ್ಮ 'ಹೂ' ಅಂದ್ರೆ ಹೂ. ' ಇಲ್ಲಾಂದ್ರೆ' ಇಲ್ಲ ಅಷ್ಟೆ

ಯುವಕ ಮಂಕಾದ. ಮಿಂಚುತ್ತಿದ್ದ ಕಣ್ಣುಗಳು ಕಾಂತಿಹೀನವಾದವು. ದಿನವಿಡಿ ಹಾಸಿಗೆ ಮೇಲೆ ಹೊರಳಾಡಿ ಕಾಲ ಕಳೆಯುವ. ಊಟ ನಿದ್ರೆ ಒಂದರಲ್ಲೂ ರುಚಿ ಇರಲಿಲ್ಲಾಂತ ಆಗಲೇ ಹೇಳಿಯಾಯ್ತಲ್ಲಾ! ಪಾಪ! ಅಪ್ಪ ಅಮ್ಮ ಅಜ್ಜಿಯರಿಗೆಲ್ಲಾ ಕಳವಳವೋ ಕಳವಳ. ತಿಳಿದ ಮನೆ ವೈದ್ಯವೆಲ್ಲಾ ಮಾಡಿಯಾಯ್ತು. ಏನೂ ಪ್ರಯೋಜನವಾಗಲಿಲ್ಲ. ಕಂಡ ಕಂಡ ದೇವ್ರಿಗೆಲ್ಲಾ ಮೊರೆ ಹೊಕ್ಕರಂತೆ. ಕೊನೆದಾಗಿ ಕುಲ ಪುರೋಹಿತರನ್ನ (ಅವರು ನಾಟಿ ವೈದ್ಯರೂ ಹೌದು!) ಬರಮಾಡಿಕೊಂಡರಂತೆ. ವೈದ್ಯರು ಹುಡುಗನ ನಾಡಿ ಹಿಡಿದು ನೋಡಿದರು, ಕಣ್ಣು ಬಿಡಿಸಿ ನೋಡಿದರು, ನಾಲಿಗೆ ಚಾಚಿಸಿ ನೋಡಿದರು ''ತ್ಸು ತ್ಸು'' ಎಂದು ಅಂದರಂತೆ. ಅಜ್ಜಿ ಅಮ್ಮ ಒಬ್ಬರೊನೊಬ್ಬರು ನೋಡಿಕೊಂಡು ಕಣ್ಣೊರಿಸಿಕೊಂಡರಂತೆ. ಅಪ್ಪ ತಮ್ಮ ಕಣ್ಣೀರು ಯಾರಿಗೂ ಕಾಣಬಾರದೆಂದು ಅಲ್ಲಿಂದ ಎದ್ದು ಹೊರಗೆ ಹೋದರಂತೆ.

''ಅಮ್ಮಾ!'' ಕುಲ ಪುರೋಹಿತರು ಗಂಟಲು ಸರಿ ಪಡಿಸಿಕೊಂಡರಂತೆ. ಅಮ್ಮ ಅಜ್ಜಿ ಜಾತಕ ಪಕ್ಷಿಗಳಂತೆ ಕಾದು ಕುಳಿತರಂತೆ. ''ನಿಮ್ಮ ಮಗುವಿಗೆ ಹೆದರುವಂತಹುದು ಏನೂ ಆಗಿಲ್ಲ. ಆದರೆ ಅವನ ಗ್ರಹಗತಿಗಳಲ್ಲಿ ಏನೋ ಬದಲಾವಣೆಯಾಗಿದೆ. ನಾನು ಕೊಡೋ ಔಷಧಿ ಏನೂ ಕೆಲಸ ಮಾಡಲಾರದು. ಆದರೆ''

ಮತ್ತೊಮ್ಮೆ ಕುಂಡಲಿ ಓದಿದರಂತೆ. ಕವಡೆ ಎಸೆದರಂತೆ. ಗುಣಾಕಾರ ಮಾಡಿದರಂತೆ. ಭಾಗಿಸಿದರಂತೆ. ಅರೆಕ್ಷಣ ಇವರಮ್ಮನನ್ನು ದಿಟ್ಟಿಸಿ ನೋಡಿದರಂತೆ. ''ನೋಡೀಮ್ಮ!'' ನಿಮ್ಮ ಹುಡುಗನಿಗೆ ಮದುವೆ ಮಾಡಿ ಬಿಡಿ. ಇಲ್ಲ ಅನ್ನಬೇಡಿ. ಅವನನ್ನ ಉಳಿಸಿಕೊಳ್ಳ ಬೇಕಾದರೆ ಇರುವುದು ಅದೊಂದೇ ಮಾರ್ಗ. ಇಲ್ಲವೆ ......! ಆದರೆ ಜ್ಞಾಪಕವಿರಲಿ. ಅವನ ಹೆಸರಿನಿಂದ ಶುರುವಾಗುವ ಹೆಸರಿನ ಹುಡುಗಿಯೇ ಆಗಬೇಕು. ನೀವೇನಾದರೂ ಬೇರೆ ಹೆಸರಿನ ಹುಡುಗಿಯನ್ನು ಮನೆ ತುಂಬಿಸಿಕೊಂಡಿರೋ ....'' ಎಂದು ತಮ್ಮ ತೋರ ಬೆರಳನ್ನು ತಾಯಿಯ ಮುಖದ ಮುಂದೆ ಆಡಿಸಿ ನಸ್ಯವನ್ನು ಮೂಗಿಗೆ ಏರಿಸಿ ಎಚ್ಚರಿಸಿದರಂತೆ. ಅದೇ ಕ್ಷಣದಲ್ಲಿ ಯಾರ ಗಮನಕ್ಕೂ ಬಾರದಂತೆ ಯುವಕನ ಅಂಗೈಯಿಂದ ನಾಲ್ಕು ಅಪ್ಪಟ ಬೆಳ್ಳಿಯ ನಾಣ್ಯಗಳು ಕುಲ ಪುರೋಹಿತರ ಅಂಗೈಗೆ ಬದಲಾಯಿತಂತೆ.

''ನೋಡೀಮ್ಮಾ! ನನ್ನ ಗಮನದಲ್ಲಿ ಅಂತಹ ಹೆಣ್ಣೊಂದಿದೆ. ಒಳ್ಳೆ ಮನೆತನದ ಹುಡುಗಿ - ಕೆಲಸ ಕಾರ್ಯದಲ್ಲೂ ನಿಪುಣೆ. ಒಳ್ಳೆ ಸೊಸೆಯಾಗಿ ಮನೆಗೆ ಒಳ್ಳೆ ಹೆಸರು ತರುತ್ತಾಳೆ. ನಾಳೆ ಜಾತಕದ ಸಮೇತ ಬರತ್ತೇನೆ'' ಎಂದು ಉತ್ತರಕ್ಕೂ ಕಾಯದೆ ಹಣ್ಣು ಕಾಯಿ ಗಂಟು ಕಟ್ಟಿ ಹೊರಟರಂತೆ.

ಹೀಗೆ ನಮ್ಮ ತಾತ ವೆಂಕಟನಾರಣಪ್ಪನವರ ಮದುವೆ ನಮ್ಮಜ್ಜಿ ವೆಂಕಟಲಕ್ಷಮ್ಮನವರೊಂದಿಗೆ ಆದದ್ದು.

''ಥೂ! ಕಳ್ಳ ಪುರೋಹಿತ ಅವನು! ಮನೆಗೆ ಬಂದು ನಾನು ಹೇಳಿದ್ದನ್ನ ಗಿಣಿ ಪಾಠ ಮಾಡಿ ಅಪ್ಪ ಅಮ್ಮನ ಮುಂದೆ ಒಪ್ಪಿಸಿದಕ್ಕೆ ನಾಲ್ಕು ಅಪ್ಪಟ ಬೆಳ್ಳಿ ನಾಣ್ಯ ಹೊಡೆದು ಬಿಟ್ಟ. ಕಮ್ಮಿ ಮಾಡ್ಕೊ ಅಂದಿದ್ದಕ್ಕೆ ಜಪ್ಪಯ್ಯಾ ಅಂದ್ರು ಒಪ್ಪಲಿಲ್ಲ ನೋಡು. ಕಳ್ಳ!'' ಅಂತ ಅವತ್ತೇ ಹಣ ಕೊಟ್ಟೋರ ಹಾಗೆ ಪೇಚಾಡೋರು. ''ಅಂದ್ರೆ ಏನೇ ಅನ್ನು ನಾಟ್ಕ ಮಾತ್ರ ತುಂಬಾ ಚೆನ್ನಾಗಿ ಆಡ್ದ''.

''ಏನು ತಾತ! ಅಜ್ಜಿ ಹೆಸರು, ಕುಲ ಗೋತ್ರ ಎಲ್ಲಾ ಹೇಗೆ ತಿಳಿದುಕೊಂಡೆ ನೀನು ಅವರನ್ನೇ ಕೇಳ್ತಿದ್ದೇವು.

''ಛೆ! ಛೆ!'' ಹಾಗೆಲ್ಲಾ ಅವಳನ್ನ ಮಾತಾಡ್ಸೋಕೆ ಆಗುತ್ಯೆ? ಅದೇನು ಈಗಿನ ಕಾಲ ಕೆಟ್ಹೋಯ್ತೆ? ಅವಳ ಕುಲ ಗೋತ್ರಾ ಎಲ್ಲಾ ಆ ಪುರೋಹಿತ ತಿಳಿದುಕೊಂಡ. ಆದ್ರೆ ಹೆಸರು ಮಾತ್ರ ಅವಳು ತನ್ನ ತಮ್ಮನ್ನ ಒಬ್ಬನೇ ಆಡೋದಕ್ಕೆ ಬಿಟ್ಟು ಸ್ನೇಹಿತೆಯರ ಸಂಗಡ ಕುಂಟೆ ಬಿಲ್ಲೆ ಆಡ್ತಾ ಇರೋಳಲ್ಲಾ ಆಗ ಆ ಮಗು ಕೈಗೆ ಕಲ್ಲು ಸಕ್ಕರೆ ತುಂಡು ಕೊಟ್ಟು ತಿಳಿದುಕೊಂಡಿದ್ದೆ. ಅಬ್ಬಾ! ಅವನಿಗೆ ಪುಸಲಾಯಿಸಿ - ಬೆಣ್ಣೆ ಹಚ್ಕೊದ್ರಲ್ಲಿ ನನ್ನ ಜೇಬೆಲ್ಲಾ ಖಾಲಿಯಾಗಿತ್ತು''

ಅದೇ ತಾನೇ Mills & Boon ಓದಲು ಶುರು ಮಾಡಿದ್ದ ನಮಗೆಲ್ಲಾ ಅದರಲ್ಲಿನ tall, dark and handsome ಹೀರೋಗಳು ಇವರ ಮುಂದೆ ಸಪ್ಪೆ ಅನ್ನಿಸೋರು.

ಆತ ಅಕ್ಕನ್ನ ಕಾಡ್ತಾಯಿದ್ದ ತಮ್ಮ ಭಾವ ಮೈದುನನ್ನ ಹೇಗೆ ಪಳಗಿಸಿದರು ಅನ್ನೋದು ಇನ್ನೊಮ್ಮೆ! ಕಾದು ನೋಡಿ!

★★★



''ಸ್ಟಾರ್ ಟಿ.ವಿ. ಅಂದ್ರೆ ಏನು ಅಂತೀಯಲ್ಲಾ ತಾತ!''


"ಬ್ರುತೋಸ್ ಬ್ರುತೋಸ್ ಘಾಲಿ ಅನ್ನೋಬದ್ಲು ಬ್ರುತೋಸ್ ಬ್ರುತೋಸ್
ಬ್ರುತೋಸ್ ಘಾಲಿ ಅಂದುಬಿಟ್ಟೆ...
ಅದಕ್ಕ್ಯಾಕ್ರಿ ಇಷ್ಟು ನಗು?"

ವರನಿಗೆ ಕಿವಿ ಮಾತು

ನಾಗೂಶ್ರೀ ಸೂರಿ

ಅವತ್ತು ಸಾಯಂಕಾಲ ಹೆಚ್ಚೂ ಕಡಿಮೆ ಹೇಳಿದ ಟೈಮಿಗೇನೆ ಬಂದ ಭೀಮಣ್ಣ ಮತ್ತು ಅವನ would-beಮಾಧವೀನ ನೋಡಿ ನನಗೆ ತುಂಬಾನೆ ಸಮಾಧಾನ ಆಯ್ತು. ಪರವಾಗಿಲ್ಲ, ಎರಡು ವರ್ಷ ಹುಡುಕಿದ್ದೂ ಸಾರ್ಥಕ, ಈಡೂ ಜೋಡು ಸರಿಯಾಗಿ ಇರೋಳನ್ನೆ Select ಮಾಡಿದ್ದಾನೆ - ಇಂಗ್ಲಿಷ್‌ನಲ್ಲಿ ಅದೇನೋ ಹೇಳತಾರಲ್ಲ, made for each other ಅಂತ, ಹಾಗೆ.

ಆದ್ರೆ ಒಂದು ವಿಷಯಾ ಮಾತ್ರ ಯಾಕೋ ನನಗೆ ವಿಚಿತ್ರ ಅನ್ನಿಸ್ತು. ಅಲ್ಲ, ಈಗಿನ ಕಾಲದಲ್ಲಿ ninety percent ಹುಡುಗೀರು, ಯಾಕೆ ಅವರ ಅಮ್ಮಂದೀರೂ ಸಹ ತಿಂಗಳಿಗೊಂದು ಸಲಾನೋ ಇಲ್ಲ ಅದಕ್ಕೂ ಮುಂಚಿತವಾಗೀನೋ, ಕ್ಷೌರದಂಗಡೀಗಳಿಗೆ ಹೋಗಿ ಜುಟ್ಟು ಬಿಡಿಸಿಕೊಂಡು ಬರತಾ ಇರತಾರೆ. ಹಾಗೆಂದ ಮಾತ್ರಕ್ಕೆ ಅವರೇನೂ ಬ್ರಹ್ಮ ಮಾಡಿದ್ದಕ್ಕಿಂತ ಸುಂದರಿಯರು ಆಗತಾರೆ ಅನ್ನೋದಕ್ಕೆ ಆಗೊಲ್ಲ. ಆದ್ರೆ ಒಂದು ಅನುಕೂಲಾನೋ? - ಎಲ್ಲಾದರೂ ಹೋಗಬೇಕೂ ಅರ್ಜಂಟಾಗಿ ಅಂದಾಗ, ನಮ್ಮ ಕಾಲದವರ ಥರಾ ಮಾರುದ್ದ ಜಡೇನ ಹೆಣಕೊಂಡು ಕೂತ್ಕೊಳ್ಳೊ ತಾಪತ್ರಯ ಇರೋಲ್ಲವಲ್ಲ!

ಆದ್ರೆ ಈ ಮಾಧವಿ? ಈಗಿನ ಕಾಲದಲ್ಲೂ ಕೂಡ ಅಷ್ಟೊಂದು ಉದ್ದದ ಜಡೆ ಬಿಟ್ಟಿದ್ದಾಳಲ್ಲ - ಹೆಚ್ಚೂ ಕಡಿಮೆ ಮಂಡಿ ತನಕಾ ಬರುತ್ತೆ. ಅವಳ ಮುಖಕ್ಕೇನೋ ಒಪ್ಪತ್ತೆ, ಆದರೆ .....?

''ಅದೇನು ಈವತ್ತು ಅಷ್ಟು ಸೈಲಂಟಾಗಿ ಕೂತು ಬಿಟ್ಟಿದ್ದೀರಿ, ಅಂಕಲ್? ಯಾವಾಗ ನಾನು ಬಂದ್ರೂನೂ, ಹೊಸಾದೋ, ಹಳೇದೋ ಇಲ್ಲ ಕದ್ದದ್ದೋ ಅಂತ ಜೋಕುಗಳನ್ನ ಹೊಡೀತಾ ಇರೋರು, ಈವತ್ತು ಯಾಕೆ ಹೀಗೆ?'' - ಇನ್ನೊಂದು ಪಕೋಡಾನ ಬಾಯಿಗೆ ಹಾಕಿಕೋತಾ ಭೀಮಣ್ಣನ ಪ್ರಶ್ನೆ.

''ಹ್ಹೆ, ಹ್ಹೆ...... ಏನೂ ಇಲ್ಲ, ನಿನ್ನನ್ನ ಅಂದ್ರೆ, ಹುಡುಗನಿಂದ ನೋಡಿದೋನು, ಒಂದು ಮಾತು ಹೆಚ್ಚೂ ಕಡಿಮೆ ಅಂತ ಆದ್ರೂನೂವೆ ನಡಿಯುತ್ತೆ. ಆದ್ರೆ ಈ ನಿನ್ನ would-be, ಅವಳನ್ನ ಇದೇ first time ನೋಡತಾ ಇರೋದು. ಬಾಯಿ ತಪ್ಪಿ ನಾನು ಏನಾದ್ರೂ ಒಂದು ಮಾತು ಹೇಳಿ ಬಿಡೋದು, ಅದನ್ನ ಅವಳು ತಪ್ಪಾಗಿ ತಿಳಕೊಂಡು ಬಿಡೋದು .... ಆಮೇಲೆ ನಾಳೆ ದಿನ ಹುಡುಗನ ಚಿಕ್ಕಪ್ಪನಿಗೆ ಸ್ವಲ್ಪ looseಉ ಅಂತ ಪುಕಾರು ಹುಟ್ಟಿಕೊಳ್ಳೋದು, ಯಾಕಪ್ಪ ಸುಮ್ನೆ ಅಂತ .....

''ಹಯ್ಯೋ, ಪಾಪ ... ಬಾಯಿ ಮುಚ್ಚಿಕೊಂಡ ಮಾತ್ರಕ್ಕೆ ಇರೋ ವಿಷಯಾನ ಮುಚ್ಚಿಟ್ಟ ಹಾಗೆ ಅಂತ ಅಂದು ಕೊಂಡಿದಾರೇನೊ, ಇವರು!'' ಮಾಧವೀ ಜಡೇನ ಮೆಚ್ತಾ ಇದ್ದ ನಮ್ಮವಳ unwarranted interference.

''ನೋಡಿದ್ಯಾ ಭೀಮಣ್ಣ, ಇವಳ ಮಾತನ್ನ? ಈ ಗಂಡ ಅಂತ ಆಗಿರೋ ಕಸಬಿನಲ್ಲಿ ಇದೊಂದು Professional hazard. ಏನಾದ್ರೂ ಒಂದು ಕೊಂಚ ಸದರ ಕೊಟ್ರೆ ಸಾರು,

ತಲೇ ಮೇಲೇ ಏರಿ ಕೂತ ಬಿಡತಾರೆ, ಈ ಹೆಂಡತೀರುಗಳು. ಅದಕ್ಕೇ ನಾನು ಹೇಳೋದು, ಪ್ರೀತಿ, ಪ್ರೇಮ ಅಂತ ಅನ್ನೋದನ್ನ ಎಲ್ಲಿ ತೋರಿಸಬೇಕೋ, ಅಲ್ಲಿ ಧಾರಾಳವಾಗಿ ತೋರಿಸು, ಬೇಡಾ ಅನ್ನೊಲ್ಲ. ಆದ್ರೆ ಮಿಕ್ಕ ಟೈಂನಲ್ಲಿ ನಿನ್ನ ಬುದ್ಧಿ, ಅವಳ ಜುಟ್ಟು ಎರಡೂ ನಿನ್ನ ಕೈಯಲ್ಲೇ ಇರಬೇಕು. ಇಲ್ಲದೇ ಹೋಯ್ತೋ, ಅಷ್ಟೆ''.

''ಭೀಮಣ್ಣ, ಅವರ ಮಾತು ಕೇಳಿ ನೀನು ಹುಚ್ಚ ಮುಂಡೆ ಆಗಬೇಡ. ಅವರೋ, ಹೇಳಿ ಕೇಳಿ consultant ತಮ್ಮ ಕೈಯಲ್ಲಿ ಆಗದ್ದನ್ನು ಬೇರೆಯವರಿಗೆ ಹ್ಯಾಗೆ ಮಾಡಬೇಕೂ ಅಂತ ಬೋಧನೆ ಮಾಡಿ ಅಭ್ಯಾಸ. ಈಗ ನಮ್ಮನೇಲೇನೆ ನೋಡು, ಅವರ ಬೋಳ ತಲೆ ನೋಡಿದ್ರೇ ಗೊತ್ತಾಗೊಲ್ವೆ, ಯಾರ ಜುಟ್ಟು ಯಾರ ಕೈಯಲ್ಲಿ ಇತ್ತೂ ಅನ್ನೋದು?''

ಆಮೇಲೆ ಅವರನ್ನ ಬಹಳಾ ದಿನಾನೆ ನೋಡೊಕ್ಕೆ ಆಗಲಿಲ್ಲ. ಮದುವೆಗೇನೋ ಹೋಗಿದ್ವಿ, ನಿಜ. ಆದ್ರೆ ಅಲ್ಲಿ ಏನು ದೊಂಬಿ ಅಂತೀರ? ನೂಕಿಕೊಂಡು ನುಗ್ಗಿಕೊಂಡು ಮೂರನೆ ಪಂಕ್ತೀಲಿ ಊಟ ಮಾಡಿ ಬರೋ ಹೊತ್ತಿಗೆ ಸಾಕು ಸಾಕಾಗಿ ಹೋಗಿತ್ತು. ಆಮೇಲೆ honeymoon, ಅದಾದ ಮೇಲೆ ಮನೆ set-up ಮಾಡೋದು ಅಂತ ಅವರೂ busy; ನನಗೂ ಆಫೀಸಲ್ಲಿ ತುಂಬಾನೆ ಕೆಲಸ ಅಂತ ಆಗಿ ಮನೇಗೆ ಬರೋ ಹೊತ್ತಿಗೆ ರಾತ್ರೀನೆ ಆಗಿ ಬಿಡುತಿತ್ತು.

ಕೊನೆಗೆ ಅವನು ಸಿಕ್ಕಿದ್ದೂ ಅಂದ್ರೆ ಅವತ್ತು ಭಾನುವಾರ ಬೆಳಿಗ್ಗೆ. ಕಾಂಪ್ಲೆಕ್ಸ್‌ನಲ್ಲಿ ಕೊತ್ತಂಬರಿ ಸೊಪ್ಪಿಗೆ ಚೌಕಾಸಿ ಮಾಡತಾ ನಿಂತಿದ್ದಾಗ ಅವನು ಆ ಕಡೆಯಿಂದ ಬರ್ತಾ ಇದ್ದದ್ದು ನೋಡಿದೆ. ಕೈನಲ್ಲಿ ಒಂದು ಚೀಲ. ಅದರಲ್ಲಿ ಸೌತೇಕಾಯಿನೋ ಬದನೇ ಕಾಯಿನೋ ಏನೋ ಇದ್ದ ಹಾಗಿತ್ತು. ಬೆಳಗಾಗ ಎದ್ದು ಸುಮ್ನೆ ಪೇಪರ್ ಓದ್ತಾ ಬಿದ್ದು ಕೊಂಡಿರಬೇಡಿ, ಒಂದಿಷ್ಟು ತರಕಾರಿ ಆದ್ರೂ ಹೊತ್ಕೊಂಡು ಬನ್ನಿ ಅಂತ ಮಾಧವಿ ಅವನ್ನ ಓಡಿಸಿದ್ದಿರಬೇಕು.

ಒಪ್ಪಿಕೊಂಡೆ, ಈ ತರಕಾರಿ ತರೋದೋ, ಇಲ್ಲ ಮತ್ತೊಂದೋ ಕೆಲಸಾನ once in a while ಎಂಥಾ ಬಹದ್ದೂರ್ ಗಂಡಾ ಅನ್ನೋನೂ ಮಾಡಬೇಕಾಗಿ ಬರತ್ತೆ, ಬಿಡಿ. ಆದ್ರೆ ಚೀಲ ಹಿಡಕೊಂಡು ಅವನು ನೆಟ್ಟಗೆ ಎಲ್ಲಿ ನುಗ್ಗತಾ ಇದ್ದಾನೆ? ಆ ಕೊನೇ ಅಂಗಡಿ, ಅದೇ ಆ ''ಬಹೂರಾಣಿ ಬುಟಿಕ್'' ಅಂತ ಇದ್ಯಲ್ಲ, ಅದರೊಳಗಡೇಗೆ!

ಬಹೂರಾಣಿ ಬುಟಿಕ್!

ಅಲ್ಲಿ ಗಂಡಸೂ ಅನ್ನೋನು ಕಾಲಿಡೋದೂ ಅಂದ್ರೆ - ಎಂಥಾ ನಾಚಿಕ್ಕೇಡು! ಅಲ್ಲ, ಹೇಳಿ ಕೇಳಿ ಅದೊಂದು eves exclusive emporium. ಹೆಂಗಸರಿಗೆ ಏನೇನು ಬೇಕು, ಬಳೆ, ಬಿಂದಿಯಾ ಇಂದ ಹಿಡಕೊಂಡು, ಪುನುಗು, ಪೆಟ್ಟಿಕೋಟ್ ಅಂತ ಸಕಲವೂ ಸಿಗತ್ತೆ. ಅದಕ್ಕೇನೆ ಯಾವಾಗ ನೋಡ್ಲಿ ಅಲ್ಲಿ ಹುಡುಗಿಯರ ಹಿಂಡೇ ಜಮಾಯಿಸಿರತ್ತೆ. ಯಾರು ಯಾರು ಏನನ್ನ ತಗೋತಾ ಇರತಾರೋ ಏನೋ, ಅದನ್ನ ನೋಡತಾ ಇರೋದು ಸರಿ ಇರೊಲ್ಲ ಅಂದುಕೊಂಡು ಯಾವ ಗಂಡಸರೂ ಒಳಕ್ಕೆ ಹೋಗೋಲ್ಲ. ಅಕಸ್ಮಾತ್ ಹೆಂಡತೀರ ಜತೆ ಬಂದಿದ್ರೂ, ಅನ್ನಿ ಆವಾಗ ಅವರುಗಳನ್ನ ಒಳಗೆ ಕಳಿಸಿ ಇವರು ಆಚೆ ನಿಂತಿರತಾರೆ. ಒಳ್ಳೆ ಸೋಡ ಚೀಟಿ ಕೊಟ್ಟೋರ ಥರಾ.

''ಏ ಭೀಮಣ್ಣ, ಬಾರೋ ಈಚೆಗೆ'' - ರೇಗಿಸೋ ಥರದಲ್ಲಿ ಅವನನ್ನ ಕೂಗಿದೆ.

ಹ್ಯಾಗಿದ್ರೂ, ಬೆಳಿಗ್ಗೆ ಬೆಳಿಗ್ಗೇನೆ ತಾನೆ ಪರವಾಗಿಲ್ಲ, ಯಾರೂ ಗುರುತೂ ಪರಿಚಯದವರು ಸಿಗೋದಿಲ್ಲ ಅಂತ ಅಂದುಕೊಂಡ ಬಂದಿದ್ದನೇನೋ, ಪಾಪ. ನನ್ನ ಕೈಯಿಗೆ ಸಿಕ್ಕಿ ಬಿದ್ದಿದ್ದಾನೆ. ಇನ್ನು ಮುಗೀತು, ಪೇಪರ್‌ನಲ್ಲಿ ಹಾಕಿಸೋದು ಬೇಡ ಅಂತ ಭಯವಾಗಿರಬೇಕು ಅಂತ ಕಾಣತ್ತೆ

''ಹ್ಹಿ, ಹ್ಹಿ ಅಂಕಲ್ ನೀವು? ಇಲ್ಲಿ? ಏನ್ ಸಮಾಚಾರ? ......''

''ನನ್ನ ಸಮಾಚಾರ ಹಾಗಿರಲಿ, ಇಲ್ಲಿ ಈ ಅಂಗಡೀಲಿ ನಿನಗೇನು ಕೆಲಸ? ....''

''ಮತ್ತೇ ..... ಇಬ್ಬರೂ ಅರ್ಜೆಂಟಾಗಿ ಎಲ್ಲೋ ಹೋಗೋದಿತ್ತು. ಡ್ರೆಸ್ ಮಾಡ್ಕೊಳ್ಳೋಕ್ಕೆ ಅಂತ ಕೂತಾಗ ಅವಳಿಗೆ ಏನೋ ಬೇಕಾಗಿ ಬಂತಂತೆ. ಅದಕ್ಕೇ ನನ್ನನ್ನ ತಗೊಂಡು ಬನ್ನಿ ಅಂತ ಕಳಿಸಿದ್ದಾಳೆ''

''ನೋಡು, ಅವಳಿಗೆ ಹೇಳು, ಈ ಅಂಗಡೀನಿಂದ ಏನಾದ್ರೂ ಬೇಕಾಗಿದ್ರೆ ಅವಳೇ ಬಂದು ತಗೊಂಡು ಹೋಗಲೀ ಅಂತ ... ಬ್ಯಾಗ್‌ನಲ್ಲಿ ತರಕಾರಿ ತಗೊಂಡಿದ್ದೀ ಅಂತ ಕಾಣತ್ತೆ. ಸಾಕು, ಅದನ್ನ ಹಿಡಕ್ಕೊಂಡು ಸೀದಾ ಮನೇಗೆ ಹೋಗು''

''ಅದು ತರಕಾರಿ ಅಲ್ಲ, ಅಂಕಲ್ ಅದೂ ..... ಅದೂ ...... ಯಾವ ಸ್ಟೈಲು, ಯಾವ ಸೈಜ್ ಅನ್ನೋದು ನನಗೆ ಗೊತ್ತಾಗೊಲ್ಲ ಅಂತ ಹೇಳಿ, ಹಳೇದರದ್ದು sample ಕೊಟ್ಟು ಕಳಿಸಿದ್ದಾಳೆ ....''

''ನೆಗೆದು ಬಿದ್ದು ಹೋಯ್ತು ಬಿಡು. ಸೈಜು, ಸ್ಟೈಲಿಗೆ ಅಂತ ಅವಳು ಏನೋ ಕೊಟ್ಟಳಂತೆ, ಈ ಬೇಕೂಫ ನಾಚಿಕೆ ಇಲ್ಲದೋನ ಥರ ಅದನ್ನ ಹೊತ್ಕೊಂಡು ಬಂದು ನಾಕು ಜನರ ಎದುರು ತೆಗೆದು ತೋರಿಸತಾನಂತೆ. ನಿನ್ನ ಗಂಡಸುತನಕ್ಕೆ ಇಷ್ಟು! ಅಲ್ವೋ, ಇಷ್ಟು ಬೇಗ ಏನೋ ಮರೆತು ಬಿಡೋದು. ನಾನು ಆವತ್ತು ನಿನಗೆ ಹೇಳಿದ್ದನ್ನೆಲ್ಲ?''

''ಏನು ಹೇಳಿದ್ರಿ?''

''ಗಿಣೀಗೆ ಹೇಳಿದ ಹಾಗೆ ಹೇಳಿದ್ದೆ ಯಾವತ್ತಿದ್ರೂ, ಅವಳ ಜುಟ್ಟು ನಿನ್ನ ಕೈಯಲ್ಲಿಟ್ಟುಕೋ, ಅಂತ. ಆದ್ರೆ, ನೀನು .....''

''ಅದೇ ತಾನೆ, ನಾನು ಈಗ ಮಾಡತಾ ಇರೋದು?''

- ಅಂತ ಹೇಳಿ ಚೀಲದೊಳಗೆ ಕೈ ಹಾಕಿ ತೆಗೆದ.

ಆವಾಗ ಗೊತ್ತಾಯಿತು ಮಾಧವೀ ಜಡೆ ಯಾಕೆ ಅಷ್ಟು ಉದ್ದ ಅಂತ.

★★★

ಕಿಡ್ನಿ ಕಿಡ್ನಾಪ್

ಎಂ. ಎಸ್. ಕೆ

ಭಾನುವಾರ ಬೆಳಿಗ್ಗೆ ಕಾಫೀ ಹೀರ್ತಾ ಪೇಪರ್ ಓದ್ತಾ ಇದ್ದೀನಿ. ಒಳ್ಳೇ ಗೂಳೀ ಬಿಟ್ಹಾಗೆ ನುಗ್ಗಿದ ಹಳೇ ದೋಸ್ತ್ ರಂಗಣ್ಣ. ಮುಖ ಧುಮ ಧುಮಾಂತಿತ್ತು. ಏನೋ ಭಾರೀ ಕಿರಿಕ್‌ನಲ್ಲಿದ್ದಾನೇಂದ್ಕೊಂಡು, ''ಓಹಾ ಬಾರಯ್ಯ ಕೂತ್ಕೋ. ಏನೂ ಬಹಳ ಅಪರೂಪವಾಯ್ತಲ್ಲ ಈಗೀಗ'' ಅಂತ ದೇಶಾವರದ ನಗು ಬೀರಿದೆ. ಹಾಗೇ ''ನೋಡೇ ಯಾರ್ಬಂದಿದ್ದಾರೆ. ಕಾಫಿ ತಗೊಂಬಾ. ಜೊತೆಗೆ ನಿನ್ನೆ ಮಾಡಿದ ಖಾರ ಶಂಕರಪೋಳೀನೂ ಒಂದ್ಪ್ಲೇಟ್ ಬರಲೀ'' ಅಂದೆ. (ಈ ತಿಂಡಿ ಡಬ್ಬಿ ಬೆಳಗಿನಿಂದ ಹುಡುಕಿದ್ರೂ ಸಿಕ್ಕಿರಲಿಲ್ಲ. ಈ ನೆವದಲ್ಲಾದ್ರೂ ಎರಡು ಬಾಯಿಗೆ ಹಾಕ್ಕೋಳೋ ಚಪಲ). ರಂಗ ಕುರ್ಚೀಲಿ ಧೊಪ್ಪನೆ ಬೀಳ್ತಾನೆ ಕೇಳ್ದ ''ನೋಡ್ದ್ಯೋ ಇಲ್ಲವೊ ಈ ಪೇಪರ್ ನ್ಯೂಸ್'' ಅಂತ. '' ಇದ್ದಿದ್ದೇ ಅಲ್ವೇನೋ ಈ ಸಿಂಹಾರ್ಜುನ ಯುದ್ಧ. ಜೊತೆಗೆ ಡಬಲ್ ಡಿಜಿಟ್ ಇನ್ಫ್ಲೇಶನ್ ಬೇರೆ. ಶಾಂತವಾಗು. ಎಲ್ಲಾ ಸರೀ ಹೋಗುತ್ತೇ'' ಅನ್ನೋಷ್ಟರಲ್ಲಿ ನನ್ನವಳು ಕಾಫೀ, ಶಂಕರಪೋಳೀ ತಟ್ಟೆ ಕುಕ್ಕಿ ಹೊರಟಳು. ರಂಗ ಥ್ಯಾಂಕ್ಸ್ ಕೂಡಾ ಹೇಳದೆ ಕಾಫೀ ಹೀರುತ್ತ ತಿಂಡಿ ತಟ್ಟೆ ಅನಾಮತ್ ತನ್ನ ಹತ್ತಿರ ಎಳ್ಕೊಂಡ. ''ಬರೀ ಕಾಮಿಕ್ಸ್ ಮತ್ತು ದಿನ ಭವಿಷ್ಯ ಓದೋ ನಿನ್ನಂತೋರಹತ್ರ ಯಾವ ಸೀರಿಯಸ್ ಡಿಸ್ಕಶನ್ ಸಾಧ್ಯ. ಈ ಕಾಂಗ್ರೆಸ್ ಜಗಳ ಯಾವಾಗಿರಲಿಲ್ಲ. ಆ ವ್ಹಿಪೀ ಕಾಲದ ಟ್ರಿಬಲ್ ಡಿಜಿಟ್‌ಗೇ ಹೆದರಲಿಲ್ಲ ನಾನು. ಈ ರಾಯರ ಡಬಲ್ ಡಿಜಿಟ್‌ಗೆ ಹೆದರ್ತೀನಾ? ಅದೆಲ್ಲಾ ಬಿಡು. ಓದ್ಯೋ ಇಲ್ವೋ ಈ ಕಿಡ್ನಿ ರಾದ್ಧಾಂತ'' ಅಂದ. ''ಅದಾ ಸರಿಬಿಡು. ಎಲ್ಲಾರೂ ಶರ್ಟು ಬಿಚ್ಚಿ, ಕಂಕುಳೆತ್ತಿ ಪೋಸ್ ಕೊಟ್ಟ ಫೋಟೋ ತಾನೇ? ಈ ಪೇಪರ್‌ನೋರು ಹೆದರ್ಸಕ್ಕೂ, ನೀ ಹೆದರೊಕ್ಕೂ ಸರೀಹೋಯ್ತು. ತಾಳಕ್ಕೆ ತಕ್ಕ ಮೇಳ. ಬಿಡು ಬಿಡು. ಎರಡು ಶಂಕರಪೋಳಿ ಬಾಯಿಗೆ ಹಾಕ್ಕೋ. ಮತ್ತೇನು ವಿಶೇಷ?'' ಅಂತ ಲೋಕಾಭಿರಾಮಕ್ಕೆ ಬಂದೆ. ಅವನು ಬರಬೇಕಲ್ಲಾ? ''ನಿನ್ಹತ್ತ ಯಾವುದಾದ್ರೂ ಬಯಲಾಜಿ ಬುಕ್ ಇದ್ಯಾ'' ಅಂದ. ''ಅಯ್ಯೋ, ನನ್ನ ಮಕ್ಕೆಲ್ಲಾ ಕೆಲಸದಲ್ಲಿದ್ದಾರೆ. ಮೊಮ್ಮಕ್ಕಳು ಸ್ಕೂಲು ಸೇರಿದ ಮೇಲೆ ಕೊಡ್ತೀನಿ. ಅದ್ಸರೀ, ಈಗ್ಯಾಕೆ ಈ ಬಯಾಲಜಿ ಬಯಕೆ?'' ಅಂದೆ. ಅವನು ಸೀರಿಯಸ್ಸಾಗಿ ''ಕಿಡ್ನೀ ಪೊಸಿಶನ್ ನೋಡಕ್ಕೆ'' ಅಂದ. ನನಗೆ ನಗು ತಡೆಯಲಾಗದೆ ''ಅಲ್ವೋ ಒಬ್ಬ ಡಾಕ್ಟರ್ ಬಿಹಾರಿನಿಂದ ಇಂಗ್ಲೆಂಡಿಗೆ ಹೊದ್ನಂತೆ ಕೆಲಸಕ್ಕೆ. ಅಲ್ಲಿ ಪೇಷೆಂಟ್ ಕಿಡ್ನಿ ಎಲ್ಲಿದೇಂತಾ ಮೈಯ್ಯೆಲ್ಲಾ ಹುಡುಕಿದ್ನಂತೆ. ಪಾಪ ಡೊನೇಶನ್ ಸೀಟ್, ಡೊನೇಶನ್‌ಪಾಸ್ ಕೇಸಿರಬೇಕು. ಈ ಕಿಡ್ನಿ ಹೊಟ್ಟೇಲಿದ್ಯೋ ತಲೇಲಿದ್ಯೋ ನಿಂಗೂ ನಂಗೂ ಯಾಕೋ? ನಾವೇನು ಯಾವ ಆಪರೇಶನ್ ಮಾಡ್ಬೇಕಾ? ಸುಮ್ನೆ ಈ ಉಸಾಬರೀ ಬಿಟ್ಟು ಇನ್ನೆರಡು ಶಂಕರಪೋಳಿ ತಿನ್ನು. ನಂಗೂ ಯೆರಡು ಕೊಡು ಅಂತ ಕೈಚಾಚಿದೆ. ಅವನು ಆಕಡೆ ಈ ಕಡೆ ಕಣ್ಣು ಹಾಯಿಸಿ ನನ್ನ ಹೆಂಡತಿ ಇಲ್ಲದಿರೋದನ್ನು ನೋಡಿ ನನ್ನ ಕಿವೀಲಿ ಉಸುರಿದ '' ಆರ್ತಿಂಗಳ ಕೆಳಗೆ ನಂಗೆ ಬೈಪಾಸಾಗಿ ಒಂದೂವರೆ ಲಕ್ಷ ಕೈ ಬಿಡ್ತು. ಮಾರುತಿ ಮಾರಿ ಆ ನರ್ಸಿಂಗ್ ಹೊಂ ಗೆ ಕೊಟ್ಟೆ ಅಲ್ವಾ?'' ಅಂದ. ನಾನು ''ಅದೇನೋ ನಿಜ, ಆದರೆ ನೀನೀಗ ಪೂರ್ತಿ 100% ನಾರ್ಮಲ್. ದಿನಾ ನಾಲ್ಕು ಲಾರ್ಜ್ ನಾಲ್ಕು ಸ್ಮಾಲ್ ವಿಸ್ಕೀ ಮತ್ತೆ ಮೂರು ಪ್ಲೇಟ್ ಬೋಂಡ

ಲೆವೆಲ್‌ಗೆ ಬಂದು ಬಹಳ ದಿನವಾಯ್ತಲ್ಲ. ಈಗೇಕೆ ಈ ವರೀ'' ಅಂದೆ.

ಅವನ ಸಹನೆ ಮೀರಿತು. ''ಸ್ವಲ್ಪ ಕೇಳೋ. ಆಪರೇಶನ್ ಆದ್ಹಾಂಗಿಂದ ನನ್ನ ಹೊಟ್ಟೇಲೇನೋ ಹಗೂರಾಗಿದೆ. ಏನೋ ಮಿಸ್ಸಾದಂತಿದೆ. ಸುಮ್ನೆ ಯಾಕೇಂತ ನಿಂಗೆ ಮೊದ್ಲೇ ಹೇಳಲಿಲ್ಲ. ಆ ಡಾಕ್ಟ್ರು ಆವಾಗೇನಾದ್ರೂ ನನ್ನ ಕಿಡ್ನೀನೂ ಬಿಚ್ಚಿಕೊಂಡಿರಬಹುದಾಂತ ಅನುಮಾನ'' ಅಂದ ಸೀರಿಯಸ್ಸಾಗಿ. ನಾನು ಸಾಕಷ್ಟು ನಗು ತಡೆದು ''ಅಯ್ಯೋ ಮಿತ್ರ ಸಾವಧಾನದಿಂದಾಲಿಸುವಂಥವನಾಗು. ನಿನ್ನ ಕಿಡ್ನಿಗಳು ಸುಮಾರು ನಲವತ್ತೋ ಚಿಲ್ರೆ ವರುಷಗಳಿಂದ ನೀನು ಬಸಿದ ನೂರಾರು ಗ್ಯಾಲನ್ ಕಂಟ್ರಿ ಮತ್ತು ಫೊರೆನ್ ವಿಸ್ಕಿ ಮತ್ತು ಬೀರ್‌ಗಳನ್ನು ಕ್ಲೀನಿಸೀ, ಕ್ಲೀನಿಸೀ ಸುಸ್ತಾಗಿವೆ. ಅವು ಇನ್ನೂ ಚಾಲೂಲಿರೋದೆ ಒಂದು ಪವಾಡ. ಇಂಥವನ್ನು ಯಾವ ಮೂರ್ಖ ಡಾಕ್ಟರ್ ಕದೀತಾನೇ, ಯಾವ ನತದೃಷ್ಟ ರೋಗಿ ಕೊಳ್ಳುತ್ತಾನೆ ಹೇಳು. ಭ್ರಾಂತಿಯನ್ನು ಬಿಟ್ಟು ಪೋಲೀಸ್‌ಭಯಭೀತಿಯಿಂದ ಇರುವಂಥವನಾಗು'' ಎಂದು ಗುರು ಸ್ಟೈಲ್ ಉಪದೇಶವಿತ್ತೆ. ಇದರಿಂದ ಅವನು ಮತ್ತೂ ಕೆರಳಿದ. ''ನಿನ್ನಂಥಾ ಅನ್‌ಗ್ರೇಟ್‌ಫುಲ್ ಫ್ರೆಂಡ್ ಹತ್ರ ಸಹಾಯಕ್ಕೆ ಬಂದ್ನೆಲ್ಲಾ ನಾನೇ ಮೂರ್ಖ. ನಿಂಗೊತ್ತಿರೋದು ನನ್ನ ತಲೇ ಮೇಲೆ ಕೈಯಿಟ್ಟು ಕ್ಲಬ್ಬಿನಲ್ಲಿ ನನ್ನ ಖರ್ಚಲ್ಲಿ ಕುಡಿಯೋದೊಂದೇ. ಏನೋ ಸಹಾಯ ಮಾಡ್ತಾನೇಂತ ಬಂದ್ರೆ ಉಪದೇಶ ಕೊಡ್ತಾನೆ. ನಮ್ಮ ಹೊಸ ಜ.ದ.ಸರ್ಕಾರ ಎಲ್ಲರಿಗೂ ಎರಡೆರಡು ಲಕ್ಷ ಪರಿಹಾರ ಕೊಡ್ತಾರಂತೆ. ಎರಡು ಲಕ್ಷ. ನಾನೂ ಒಂದು ಕ್ಲೈಮ್ ಹಾಕಿ, ಬಂದ ದುಡ್ನಲ್ಲಿ ಇನ್ನೊಂದು ಕಾರುಕೊಂಡು ಕ್ಲಬ್ಬಿನ ಸಾಲಾನಾದ್ರೂ ತೀರ್ಸೋಣಾಂತಿದ್ದೆ'' ಅಂದ.

ನಾನು ''ಲೇ ಇವಳೇ ಆ ಹಳೇ ಟಿಫಿನ್ ಕ್ಯಾರಿಯರ್ ಚೆನ್ನಾಗಿ ತೊಳಿಸಿಡು. ಹಾಗೇ ಆ ತಿಮ್ಮನಿಗೆ ಹೇಳಿ ಆ ಸೈಕಲ್ ಪಂಕ್ಚರ್ ಹಾಕ್ಸಿ ಗಾಳಿ ಹೊಡ್ಸುಂತ ಹೇಳು'' ಅಂದೆ. ಇವಳು ''ನಿಮ್ಗ್ಯಾಕ್ರೀ ಇದೆಲ್ಲಾ ಸುಮ್ನೆ ಕೂತ್ಕೋಳ್ರೀ. ಈ ಸೈಕಲ್ ಬಿಟ್ರು ಕೆಳಗೆ ಬಿದ್ರೆ ಏನ್ರೀ ಗತಿ'' ಅಂದಳು. ನಾನು ಶಾಂತ ರೀತೀಲಿ, ''ಅಲ್ವೆ, ಈ ರಂಗ ಕಿಡ್ನೀ ಕಿಡ್ನಾಪ್ ಅಂತ ಕಂಪ್ಲೇಂಟ್ ಕೊಡೋದು. ಪೋಲೀಸ್ನೋರು ಎಕ್ಸರೆ ಮಾಡ್ಸಿ ಇವನ ಕೊಳೆತ ಪಿಂಡಗಳು ಅಲ್ಲೇ ಇವೇಂತ ಫ್ರೂವ್ ಮಾಡಿ ಒಳಗೆ ಹಾಕ್ಕೊಂಡ್ರೆ ಇವನ್ನ, ದಿನಾ ಬೆಳಿಗೆ ನಾಷ್ಟಾಸಪ್ಲೈ ನಂದೇ ಅಲ್ವೇನೇ'' ಅಂದೆ ಇವಳು ''ಸಾಕ್ರೀ ನಿಮ್ಮ ತಮಾಷೀ. ಬೆಳಗೆದ್ದೂ ಏನೂ ಬೇರೆ ಕೆಲ್ಸ ಇಲ್ಲ ನಿಮ್ಗೆ ಅಂದ್ಲು. ಈ Insult ರಂಗನಿಂದ ತಡೆಯಲಾಗಲಿಲ್ಲ. ''ಸುಮ್ನೇ ಬಾಯ್ಮುಚ್ಕೋ. ಏನೋ ದೊಡ್ಡ ಮನುಶ್ಯಾಂತ ಬಂದರೆ ತಮಾಶೆ ಮಾಡ್ತಾನೆ. ಆ ಸೂರೀ ಮನೇಗಾದ್ರೂ ಹೋಗ್ತೀನಿ. ಅವನು ನಿನಗಿಂತಾ ತುಂಬಾ ಮೇಲು. More resoureful" ಎಂದು ಹೇಳಿ ದಾಪುಗಾಲುಹಾಕ್ತಾ ಹೊರಟೇ ಬಿಟ್ಟ. ನಾನು ಅವನ ಹಿಂದೆ ಓಡುತ್ತಾ ''ನೀನೂ ಸೂರೀ ಏನ್ಬೇಕಾದ್ರು ಮಾಡ್ಕೋಳಿ. ಬೇಡಾನ್ನಿಲ್ಲಾ. ಆದರೆ ಆ ಪೋಲೀಸ್ನೋರು ತದಕಿದಾಗ ಈ ಪ್ಲಾಟ್ ಮೊದಲು ಹ್ಯಾಚ್ ಆಗಿದ್ದು ನನ್ನ ಮನೇಲೀಂತ ಮಾತ್ರ ಹೇಳ್ಬೇಡ. ಆಮೇಲೆನಾದ್ರೂ ಅವರು ನನ್ನನ್ನೂ ಎಳೆದು ಒಳಗೆ ಹಾಕಿದ್ರೆ ನಮಗೆ ನಾಷ್ಟಾ ಕೊಡೋರ್ಯಾರು?'' ಅಂತ ಕೂಗಿದೆ. ಅವನು ಕೇಳಿಸಿಕೊಳ್ದೇ ಹೊರಟು ಹೋದ.

ಒಳಗ್ನಿಂದ ನನ್ನ ಅರ್ಧಾಂಗಿ '' ಇವರೋ, ಇವರ ಫ್ರೆಂಡ್ಸೋ, ದೇವರೇ ಕಾಪಾಡ್ಬೇಕು. ಎಲ್ಲಾ ನನ್ನ ಕರ್ಮ. ನಾನು ಎರಡ್ದಿನ ನಮ್ಮಣ್ಣನ ಮನೆಗೆ ಹೊರಟುಹೋಗ್ತೀನಿ. ಇವರೇನಾದ್ರೂ ಮಾಡ್ಕೊಳ್ಳೀಂತ'' ಪಾತ್ರೆ ಕುಕ್ಕಿದ್ದು ಸ್ಪಷ್ಟವಾಗಿ ಕೇಳಿಸ್ತು.

ಸರ್ಕಾರಿ ಸಾಲ

ಕಂಭಂ ಕೃಷ್ಣಮೂರ್ತಿ

ಮುಳ್ಳೂರಿನ ಪ್ರೈಮರಿ ಶಾಲೆಯ ಹೆಡ್‌ಮಾಸ್ಟರ್ ನಾರಾಯಣ ಶಾಸ್ತ್ರಿಗಳು ತಲೆಯ ಮೇಲಿದ್ದ ಪೇಟವನ್ನು ಮುಂದಿದ್ದ ಮೇಜಿನ ಮೇಲಿಟ್ಟು, ಬಿಸಿಲಿನ ಬೇಗೆಗೆ ಬೆವರುತ್ತಿದ್ದ ನುಣ್ಣನೆಯ ತಲೆಯನ್ನು ಸವರಿಕೊಳ್ಳುತ್ತಿದ್ದರು. ಸೀಗೆ ಬೈಲಿನಿಂದ, ಉಗಾದಿಗೆ ಭಾವನನ್ನು ಕರೆಯಲು ಬಂದಿದ್ದ ಗುಂಡಪ್ಪ ಪಿಳಿ ಪಿಳಿ ಕಣ್ಣು ಬಿಡುತ್ತಾ ಅವರ ಮುಂದೆ ಕೂತಿದ್ದ. ಭಾವ ಮೈದುನನ ಯೋಗಕ್ಷೇಮವನ್ನು ಶಾಸ್ತ್ರಿಗಳು ವಿಚಾರಿಸುವಷ್ಟರಲ್ಲಿಯೇ ಬಿರುಗಾಳಿಯಂತೆ ಅವರ ಕೊಠಡಿಗೆ ಮೊದಲು ನುಗ್ಗಿ ಬಂದವನು ಗೌಸ್ ಸಾಹೇಬು. ಕಸಾಯಿಖಾನೆಯ ಒಡೆಯ. ಶಾಸ್ತ್ರಿಗಳ ಮೇಲೆ ಒಂದೇ ಸವನೆ ಹರಿಹಾಯ್ದ. ''ಮೂರು ತಿಂಗಳ ಬಾಕಿ ಮಡೀಕ್ಕೊಂಡ್ರೆ, ಎಂಗೆ ಮಾರಾಜ್. ಕೊಡ್ತೀನಿ, ಕೊಡ್ತೀನೀಂತ ಇಂಗೆ ದಗಾ ಆಕಿದ್ರೆ ಎಂಗೆ. ಇನ್ನೊಂದು ಹಫ್ತಾನಾಗೆ ನಿಮ್ದೂಕೆ ಅಣ ಕೊಡದಿದ್ರೆ, ನಾ ಮಾತಾಡೋಕಿಲ್ಲ, ನನ್ನ ಮಚ್ಚು ಮಾತಾಡ್ತದೆ'' ಎಂದು ಹೆದರಿಸಿ ಹೊರಟು ಹೋದ.

ಅವನು ಹೋಗುತ್ತಿದ್ದಂತೆಯೆ, ತೂರಾಡುತ್ತಾ ಕೊಠಡಿಯ ಒಳಗೆ ಬಂದವನು ಸಾರಾಯಿ ಅಂಗಡಿಯ ಗೋವಿಂದು. ಗಬ್ಬು ವಾಸನೆ ರೂಮಿನ ತುಂಬ ಹರಡಿ ಅವನ ಕಸುಬಿನ ಬಗ್ಗೆ ಮಾಹಿತಿ ನೀಡಿತು. ತೇಲುಗಣ್ಣು ಮೇಲುಗಣ್ಣು ಬಿಡುತ್ತಾ ಅವನು ಶಾಸ್ತ್ರಿಗಳನ್ನು ಕೆಕ್ಕರಿಸಿ ನೋಡಿದ '' ಎಲ್ಡು ತಿಂಗಳಿಂದ ಒಂದು ದಮ್ಡಿ ಚುಕ್ತಾ ಮಾಡ್ಲಿಲ್ಲ. ಕೊಡೋಕೆ ನಿಮ್ಮ ಕೈನಾಗೆ ಆರೀದಿದ್ರೆ ನನ್ತಾವು ಯಾಕೆ ಬಂದ್ರಿ ಸೋಮಿ. ಇದ್ಯಾವಂತ್ರೂ ಅಂತೀರಿ, ಇಂಗೇನಾ ಯವಆರ ಮಾಡೋದು?'' ಎಂದು ಛೀಮಾರಿ ಹಾಕಿದ. ಮುಖಕ್ಕೆ ಉಗಿಯೋದೊಂದು ಉಳಿಸಿ, ಹೆಡ್‌ಮಾಸ್ತರನ್ನು ಮನಸೋ ಇಚ್ಛೆ ಬೈದು ಹೊರ ನಡೆದ.

ಗುಂಡಪ್ಪನಿಗೆ ಬಲು ಖೇದವಾಯಿತು. ''ಸೀಗೆ ಬೈಲಿನಲ್ಲಿದ್ದಾಗ ತನ್ನ ಭಾವ ಎಷ್ಟು ಶ್ರೋತ್ರೀಯನಾಗಿದ್ದ. ಬರೋ ಪಗಾರದಲ್ಲಿ ಸಾಲ ಸೋಲವಿಲ್ಲದೆ ಅಚ್ಚುಕಟ್ಟಾಗಿ ಸಂಸಾರ ಮಾಡಿಕೊಂಡಿದ್ದವನು, ಮುಳ್ಳೂರಿಗೆ ಬಂದ ಮೇಲೆ ಸಾಲ ಮಾಡಿ ಸಾರಾಯಿ ಕುಡಿದು ಹಾಳಾದನೆ?'' ಎಂದು ಚಿಂತಾಮಗ್ನನಾದ. ಹಾಲಿನ ಗಂಗಮ್ಮ, ಕಸಮುಸುರೆಯ ತಿಮ್ಮಕ್ಕ ನೆಟಿಕೆ ಮುರಿಯುತ್ತಾ ಶಾಸ್ತ್ರಿಗಳನ್ನು ಬೈಯಲು ಶುರು ಮಾಡಿದಾಗಲೆ ಅವನು ಎಚ್ಚೆತ್ತು ಕೊಂಡ.

''ಏನು ಬುದ್ಧಿ, ತಿಂಗಳಾ ತಿಂಗಳಾ ಎಣಿಸಿ ಬುಡ್ತೀನೀಂತ ಯೋಳಿ ಇಲ್ಲೀಗಂಟ ಒಂದು ಚಿಕ್ಕಾಸ್ನೂ ಕೊಡ್ಲಿಲ್ಲ. ಮೂರು ತಿಂಗಳಿಂದ ಸತಾಯಿಸ್ತಿದ್ರಿ. ಮನೇಗಂಟ ಬಂದು ಕಳಿಸಿಕೊಡೀಂತ ಬೆನ್ನಿಗೆ ಬಿದ್ರಿ. ಈಗ ಈರಣ್ಣ ನಂಗೆ ಕುಂತಿವ್ರಿ. ಇಂಗೆ ಬಡವರ ಒಟ್ಟೆ ಮ್ಯಾಕೆ ಒಡದ್ರೆ ದ್ಯಾವ್ರು ನಿಮ್ಗೆ ಒಳ್ಳೇದು ಮಾಡೋಕಿಲ್ಲ ಬುದ್ಧಿ'' ಎಂದು ಬಡಬಡಿಸಿ, ಇಬ್ಬರೂ ವಟಗುಟ್ಟುತ್ತಾ ಹೊರಟು ಹೋದರು.

ಇಷ್ಟು ಉಗಿಸಿಕೊಂಡರೂ ಶಾಸ್ತ್ರಿಗಳು ತುಟಿಯೆರಡು ಮಾಡದೆ ಸ್ಥಿತ ಪ್ರಜ್ಞರಂತೆ ಕೂತಿದ್ದನ್ನು ನೋಡಿ ಗುಂಡಪ್ಪನಿಗೆ ಅಚ್ಚರಿಯಾಯ್ತು. ''ಶುದ್ಧ ಪುಳಿಚಾರಿಯಾಗಿದ್ದ ತನ್ನ ಭಾವ ಮಾಂಸ ಮಡ್ಡಿ ತಿಂದು, ಸಾರಾಯಿ ಕುಡಿದು, ಸಾಲ ಹೇಳುವ ಮಟ್ಟಿಗಾದನಲ್ಲಾ'' ಎಂದು ಗುಂಡಪ್ಪ ವ್ಯಥೆ ಪಟ್ಟ.

ಭಾವನನ್ನು ಈಗಲೇ ರಿಪೇರಿ ಮಾಡದಿದ್ರೆ ಅವನು ಅಡ್ಡ ಹಾದಿ ತುಳಿದು ಹಾಳಾಗಿ ಹೋಗುತ್ತಾನೆಂದು ಗುಂಡಪ್ಪನಿಗೆ ತೋರಿತು. ಸೀಗೆ ಬೈಲಿನಲ್ಲಿದ್ದ ತನ್ನ ಅಕ್ಕ ಎಂದರೆ ಶಾಸ್ತ್ರಿಗಳ ಹೆಂಡತಿ ಸುಬ್ಬಮ್ಮನಿಗೆ ಇಲ್ಲಿಯ ಸ್ಥಿತಿಯನ್ನು ತಿಳಿಸಿ, ಆಕೆಯನ್ನು ತಕ್ಷಣವೇ ಮುಳ್ಳೂರಿಗೆ ಕರತಂದು, ಭಾವನನ್ನು ಒಂದು ಹದಕ್ಕೆ ತರಬೇಕೆಂದು ನಿಶ್ಚಯಿಸಿದ. ''ಯಾಕೆ ಬಂದೆ, ಏನೂ ವಿಷಯ'' ಎಂದು ಶಾಸ್ತ್ರಿಗಳು ಕೇಳುತ್ತಿದ್ದರೂ, ದೂಸ್ರಾ ಮಾತನಾಡದೆ, ದುರ್ದಾನವನ್ನು ತೆಗೆದುಕೊಂಡವನಂತೆ, ದುಡುದುಡು ಅಲ್ಲಿಂದ ಹೊರಟು, ಬಸ್‌ಸ್ಟಾಂಡಿಗೆ ಬಂದು, ಸೀಗೆಬೈಲಿನ ಬಸ್ಸನ್ನೂ ಹತ್ತಿ ಕುಳಿತ ಗುಂಡಪ್ಪ. ಶಾಸ್ತ್ರಿಗಳಿಗೆ ಯಾವುದೂ ಅರ್ಥವಾಗಲಿಲ್ಲ. ''ತನ್ನ ಭಾವ ಮೈದ ಬಂದಿದ್ಯಾಕೆ. ಬಂದವನು ಹೀಗೆ ಏನೂ ಹೇಳದೆ ಓಡಿ ಹೋಗಿದ್ಯಾಕೆ?'' ಎನ್ನುವುದು ತಿಳಿಯದೆ ಶಾಸ್ತ್ರಿಗಳು ಪೇಚಾಡಿಕೊಂಡರು.

ಆದಿತ್ಯವಾರ ಶಾಸ್ತ್ರಿಗಳು ಸ್ನಾನ ಸಂಧ್ಯಾವಂದನೆ ಮುಗಿಸಿ, ಸ್ವಯಂಪಾಕಕ್ಕೆ ತಯಾರಿ ನಡೆಸಿದ್ದರು. ಮನೆ ಮುಂದೆ ಆಟೋಯಿಂದಿಳಿದ ಪತ್ನಿ ಸುಬ್ಬಮ್ಮ ಹಾಗೂ ಅವರ ಹಿಂದೆ ಗಂಟು ಮೂಟೆ ಹೊತ್ತು ಇಳಿದ ಗುಂಡಪ್ಪನನ್ನು ನೋಡಿ ಅವರಿಗೆ ಅಚ್ಚರಿಯಾಯ್ತು. ದುಸುಮುಸು ಮಾಡಿಕೊಂಡು, ಗೋಳೋ ಎಂದಳುತ್ತಾ ಸುಬ್ಬಮ್ಮ ಬಿರುಗಾಳಿಯಂತೆ ಮನೆಯೊಳಗೆ ನುಗ್ಗಿದಾಗ ಶಾಸ್ತ್ರಿಗಳಿಗೆ ಗಾಬರಿಯಾಯ್ತು. ''ಸಕ್ಕರೆ ಖಾಯಿಲೆಯಿದ್ದರೂ ಲೆಕ್ಕಿಸದೆ, ಸಿಹಿ ಖಾರದ ತಿಂಡಿಗಳನ್ನು ಮುಲಾಜಿಲ್ಲದೆ ಮೇಯುತ್ತಿದ್ದ ತನ್ನ ಮಾವ ಅರ್ಥಾತ್ ಸುಬ್ಬಮ್ಮನ ತಂದೆಯೇನಾದರೂ ಗೋತಾ ಹೊಡೆದರೆ'' ಎಂದು ಶಾಸ್ತ್ರಿಗಳು ಅನುಮಾನಿಸಿದರು. ''ಏನಾಯ್ತೆ, ಏನಾಯ್ತು ಯಾಕೆ ಅಳ್ತಿದ್ದೀಯಾ?'' ಅಂತ ಪತ್ನಿಯನ್ನು ಕೇಳಿದರು. ಸುಬ್ಬಮ್ಮನ ಅಳು ಹೆಚ್ಚಾಯ್ತೆ ವಿನಃ ಅವಳು ಏನೂ ಹೇಳಲಿಲ್ಲ. ಶಾಸ್ತ್ರಿಗಳು ಏನೂ ಅರ್ಥವಾಗದೆ ಕಂಗಾಲಾದರು. ''ನೀನಾದ್ರೂ ಏನಾಯ್ತೂಂತ ಹೇಳಯ್ಯ'' ಎಂದು ಗುಂಡಪ್ಪನನ್ನು ಪೀಡಿಸಿದರು.

''ಏನು ಹೇಳೋದು ಭಾವಯ್ಯ. ನಿಂದೇ ಎಲ್ಲಾರ್ಗೂನೂವೆ ದೊಡ್ಡ ಯೋಚನೆಯಾಗಿ ಹೋಗಿದೆ'' ಎಂದು ಗುಂಡಪ್ಪ ಹೇಳಿದಾಗ, ಶಾಸ್ತ್ರಿಗಳಿಗೆ ಸಮಸ್ಯೆ ಏನೆಂಬುದೇ ತಿಳಿಯಲಿಲ್ಲ. ''ನಂಗೇನಾಗಿದೆ ಧಾಡಿ. ನಾನು ಇಲ್ಲಿ ಹಾಯಾಗೇ ಇದ್ದೀನಲ್ಲಾ'' ಎಂದು ಶಾಸ್ತ್ರಿಗಳು ನಿಸೂರಾಗಿ ಹೇಳಿದಾಗ ಸುಬ್ಬಮ್ಮನಿಗೆ ರೇಗಿತು. ''ಹಾಯಾಗಿಲ್ದೆ ಇನ್ನೇನಾಗಿರುತ್ತೆ. ಸಾರಾಯಿ ಕುಡ್ಕೊಂಡು, ಮಾಂಸ ಮಡ್ಡಿ ತಿನ್ಕೊಂಡು ಲೋಲಾಪ್ತಿ ಮಾಡ್ತಿದ್ರೆ ಹಾಯಾಗಿಲ್ದೆಯಿರುತ್ಯೆ? ಇನ್ನೇನು ಸಹವಾಸಗಳನ್ನ ಇಟ್ಕೊಂಡಿದೀರೋ ಯಾರಿಗ್ಗೊತ್ತು. ಎಲ್ಲಾ ನನ್ನ ಕರ್ಮ'' ಎಂದು ಸುಬ್ಬಮ್ಮ ಗೋಳೋಂತ ಅತ್ತಳು.'' ''ಏನು ನಾನು ಸಾರಾಯಿ ಕುಡೀತೀನ್ಯೆ. ಯಾಕೆ ಇದ್ನೆಲ್ಲಾ ನಿಂಗೆ ಹೇಳಿದ್ದು?'' ಎಂದು ಶಾಸ್ತ್ರಿಗಳು ಕನಲಿದಾಗ, ''ಯಾರೇನು ನಿಮ್ಮ ಭಾಮೈದ ಈ ಗುಂಡಪ್ಪನೇ ಹೇಳ್ದ. ನಿಮ್ಮನ್ನ ಸರಿಯಾದ ದಾರಿಗೆ ಹಚ್ಚೋಕೆ ಅವನೇ ನನ್ನ ಅರ್ಜಂಟಾಗಿ ಇಲ್ಲಿಗೆ ಕರ್ಕೊಂಡೂ ಬಂದ'' ಎಂದ ಸುಬ್ಬಮ್ಮ ಗುಡುಗಿದರು.

''ಏನಯ್ಯಾ ನಿನ್ನ ಕಿತಾಪತಿ'' ಅಂತ ಶಾಸ್ತ್ರಿಗಳು ಗುಂಡಪ್ಪನ ಮೇಲೆ ರೇಗಿದರು.

''ಕಿತಾಪತಿಯೇನಿದೆ ಭಾವ. ಆವತ್ತು ಮಾಂಸದ ಅಂಗಡಿಯೋನು, ಸಾರಾಯಿ ಅಂಗಡಿಯೋನು ಬಂದು, ನನ್ನ ಕಣ್ಣೆದುರ್ಗೆ ನಿನ್ನ ಪೀಡಿಸುತ್ತಿರಲಿಲ್ಲವೆ?'' ಸಾಲಕ್ಕಾಗಿ ತಗಾದೆ

ಮಾಡ್ತಿರಲಿಲ್ವೆ?'' ಎಂದು ದಬಾಯಿಸಿದ ಗುಂಡಪ.

ಶಾಸ್ತ್ರಿಗಳು ಪಕ್ಕೆ ಹಿಡಿದುಕೊಂಡು ನಕ್ಕರು. ''ಅಯ್ಯೋ ಹುಚ್ಚಾ, ಇದು ನಾನು ಮಾಡಿರೋ ಸಾಲ ಅಲ್ವೋ, ಸರ್ಕಾರಿ ಸಾಲ'' ಅಂತ ಸಮಜಾಯಿಸಿ ಹೇಳಿದರು.

''ಸರ್ಕಾರಿ ಸಾಲ? ಹಾಗೇಂದ್ರೇನು ಭಾವಯ್ಯ'' ಗುಂಡಪ್ಪ ಅರ್ಥವಾಗದೆ ಕೇಳಿದ.

''ಪ್ರೈಮರಿ ಶಾಲೇಲಿ ಓದೋ ಹುಡುಗರಿಗೆಲ್ಲಾ ದಿನಕ್ಕೆ ಒಂದು ರೂಪಾಯಿ ಕೊಡೋದಾಗಿ ಸರ್ಕಾರ ಪ್ರಕಟಣೆ ಹೊರಡಿಸಿರಲಿಲ್ವೆ, ನಿಂಗೂ ಗೊತ್ತಿರಬೇಕಲ್ಲಾ''

''ಹೌದು ಅದಕ್ಕೂ ಇದಕ್ಕೂ ಸಂಬಂಧ ಏನಿದೆ ಭಾವಯ್ಯ?''

''ಹೇಳ್ತೀನಿ ಕೇಳು. ಗೌಸ್ ಸಾಹೇಬು, ಸಾರಾಯಿ ಗೋವಿಂದು, ಹಾಲಿನ ಗಂಗಮ್ಮ, ಇವರಿಗೆಲ್ಲಾ ಈ ಸುದ್ದಿ ಹೇಳಿ, ಅವರ ಮಕ್ಕಳ್ನ ಶಾಲೆಗೆ ಕಳಿಸ್ಕೊಡೀಂತ ನಾನು ಕೇಳ್ಕೊಂಡೆ. ಅವರು ಸುತರಾಂ ಇದಕ್ಕೆ ಒಪ್ಪಲಿಲ್ಲ. ದುಡಿದು ಚೂರು ಪಾರು ಸಂಪಾದಿಸುತ್ತಿದ್ದ ಮಕ್ಕಳ್ನ ಶಾಲೆಗೆ ಕಳಿಸೋಕೆ ಅವರೇನು ದಡ್ಡರೆ? ತಿಂಗಳಿಗೆ ತಲೆ ಒಂದಕ್ಕೆ ಮೂವತ್ತು ರೂಪಾಯಿಗಳ್ನ ತಪ್ಪದೆ ಕೊಡ್ತೀನೀಂತ ದೇವರ ಮೇಲೆ ಆಣೆ ಮಾಡಿ ಹೇಳಿದ್ರಿಂದ ಅವರು ಮಕ್ಕಳ್ನ ಸ್ಕೂಲಿಗೆ ಕಳಿಸ್ತಿದ್ದಾರೆ''. ಅಂತ ಹೇಳಿ ಶಾಸ್ತ್ರಿಗಳು ಸುಬ್ಬಮ್ಮನ ಕಡೆ ನೋಡಿದರು. ಆಕೆಯು ಇವರುಗಳ ಮಾತನ್ನೇ ಕೇಳುತ್ತಾ ಕೂತಿದ್ದರು. ದುಃಖ ದುಮ್ಮಾನ ಕೊಂಚ ಕಡಿಮೆ ಆದಂತಿತ್ತು.

''ಮತ್ಯಾಕೆ ಈ ತಕರಾರು?'' ಎಂದು ಕೇಳಿದ ಗುಂಡಪ್ಪ.

''ನಾಕು ತಿಂಗಳಿಂದ ನಾನೂ ಬಿಲ್ ಮಾಡಿ ಸರ್ಕಾರಿ ಖಜಾನೆಗೆ ಕಳಿಸ್ತಾನೇ ಇದೀನಿ. ಅವರೂ ಯಾವ್ದೋ ಆಬ್ಜಕ್ಷನ್ ಹಾಕಿ ಅದನ್ನ ವಾಪಸು ಕಳಿಸ್ತಾನೇ ಇದಾರೆ. ಈ ವಾಲೀಬಾಲ್ ಆಟದಿಂದ, ಇನ್ನೂ ಹಣ ಕೈಗೆ ಬಂದಿಲ್ಲ. ದುಡ್ಡಿಲ್ಲದೆ ಇವರಿಗೆಲ್ಲಾ ಎಲ್ಲಿಂದ ಹಣ ಕೊಡೋದು ನೀನೇ ಹೇಳು. ನೆಪ ಹೇಳಿ ನನಗೂ ಸಾಕಾಗಿ ಹೋಗಿದೆ. ಮಕ್ಕಳ್ನ ಸ್ಕೂಲು ಬಿಡಿಸಿ, ಕರ್ಕೊಂಡು ಹೋಗಿ ಮತ್ತೆ ಕೂಲಿ ನಾಲಿಗೆ ಹಾಕ್ತಾರೋ ಅಂಬೋ ಹೆದರಿಕೆಯಿಂದ್ಲೇ ನಾನು, ಅವರುಗಳು ಉಗಿದು ಉಪ್ಪು ಹಾಕಿದ್ರೂ, ಬಾಯ್ಮುಚ್ಕೊಂಡು ಕಾಲ ಹಾಕ್ತಿದ್ದೇನೆ'' ಅಂತ ಕಾರಣ ಕೊಟ್ಟು ಟವಲಿನಿಂದ ತಮ್ಮ ಬೋಡು ತಲೆಯ ಮೇಲಿಂದ ಹರಿಯುತ್ತಿದ್ದ ಬೆವರನ್ನು ಒರಸಿಕೊಂಡರು.


ಭಾವ, ಭಾವ ಮೈದುನರ ಸಂಭಾಷಣೆಯನ್ನು ಕೇಳುತ್ತಾ ಕೂತಿದ್ದ ಸುಬ್ಬಮ್ಮನ ಮನಸ್ಸು ನಿರಾಳವಾಯಿತು. ಗಂಡ ತನ್ನ ಹಿಡಿತದಿಂದ ಇನ್ನೂ ತಪ್ಪಿಸಿಕೊಂಡಿಲ್ಲವೆಂಬ ಸಮಾಧಾನ ಅವರಿಗೆ. ತಮ್ಮ ಗುಂಡಪ್ಪನ ಅವಿವೇಕಕ್ಕೆ ಹಿಡಿಶಾಪ ಹಾಕಿ, ಶಾಸ್ತ್ರಿಗಳು ಸಿದ್ಧಪಡಿಸಿದ್ದ ಸ್ವಯಂಪಾಕಕ್ಕೆ ಒಗ್ಗರಣೆ ಹಾಕಲು ಅವರು ಅಡುಗೆ ಕೋಣೆಗೆ ಹೋದರು. ''ಬಿಡಿ ಭಾವ ಏನೋ ಆಗಿದ್ದು ಆಗೋಯ್ತು. ಎರಡು ದಿನ ರಜಾ ಹಾಕಿ ಸೀಗೆ ಬೈಲಿಗೆ ನೀವೂ ಬಂದ್ಬಿಡಿ. ಉಗಾದಿ ಹಬ್ಬಾನ ಬೊಂಬಾಟಾಗಿ ಅಲ್ಲೇ ಮಾಡೋಣ ಎಂದು ಮುನಿಸಿಕೊಂಡಿದ್ದ ನಾರಾಯಣ ಶಾಸ್ತ್ರಿಗಳ ಮೂಗಿಗೆ ತುಪ್ಪ ಸವರುವ ಮಾತನಾಡುತ್ತಿದ್ದ ಗುಂಡಪ್ಪ.

With Best Compliments From

SRI BHASKAR INDUSTRIES

B. 78 INDUSTRIAL ESTATE
RAJAJINAGAR
BANGALORE - 560 044

With Best Compliments From.



Printed by V.R. NATH for the Publisher M. SHIVAKUMAR, Published and owned by M. SHIVA KUMAR, 36. 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.